₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | **ಬೆಳಗಾವಿ** ಬುಧವಾರ 16.07.2025 ಸಂಪುಟ: 68 ಸಂಚಿಕೆ: 72 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಐಸಿಸಿ ರ‍್ಯಾಂಕಿಂಗ್ ಅಗ್ರ ಹತ್ತರಲ್ಲಿ ಶಫಾಲಿ ವರ್ಮಾ

ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಅವರು ಐಸಿಸಿ ಮಹಿಳೆಯರ ಟಿ20 ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರ 10ರಲ್ಲಿ ಮರಳಿ ಸ್ಥಾನ ಪಡೆದಿದ್ದಾರೆ. ಮಂಗಳ ವಾರ ಬಿಡುಗಡೆಯಾಗಿರುವ ರ‍್ಯಾಂಕಿಂಗ್ ಪಟ್ಟಿ ಯಲ್ಲಿ ಉಪನಾಯಕಿ ಸ್ಮೃತಿ ಮಂದಾನ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಇಂಗ್ಲೆಂಡ್ ವಿರುದ್ಧ ಇತ್ತೀಚೆಗೆ ನಡೆದ ಐದು ಪಂದ್ಯ ಗಳ ಟಿ20 ಸರಣಿಯಲ್ಲಿ ಆಕರ್ಷಕ ಆಟವಾಡಿದ್ದ (176 ರನ್) ಶಫಾಲಿ ಅವರು, ನಾಲ್ಕು ಸ್ಥಾನ ಬಡ್ತಿ ಪಡೆದು ಒಂಬತ್ತನೇ ರ‍್ಯಾಂಕ್‌ಗೇರಿದ್ದಾರೆ.

ಸೊಂಪಾದ ಪುಟಗಳು



ಬಿಳಿಚರ್ಮವೇ ಶ್ರೇಷ್ಠ ಎಂಬ ವ್ಯಸನವನ್ನು ಕಳೆದ ಅಧ್ಯಯನ

ಹಿಂದಿರುಗಿ ನೋಡಿದಾಗ ಡಾ. ನಾ.ಸೋಮೇಶ್ವರ 6

ಬೇಕಿರುವುದು ವ್ಯಾಧಿ ಮೂಲಕ್ಕೆ ಮದ್ದು !

ಲೋಕಮತ ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನಿನ್ನೆಯನ್ನು ನಿನ್ನೆಗೇ ಬಿಡುವುದು ಲೇಸು. ಅದನ್ನು ಇಂದು, ನಾಳೆ ಮತ್ತು ನಾಡಿದ್ದಿನ ತನಕ ಹೊತ್ತುಕೊಂಡು ಬಂದರೆ ಅನಗತ್ಯ ಕಿರಿಕಿರಿ, ಭಾರ. ಅದು ಯಾವತ್ತೂ ಹೊರೆಯಾಗಿ ಕಾಡುತ್ತದೆ ಮತ್ತು ಯಾವತ್ತೂ ಸಮಾಧಾನದಿಂದ ಇರಲು ಬಿಡುವುದಿಲ್ಲ.

ವಕ್ರತುಂಡೋಕ್ತಿ

ಕೆಲವರು ದೆವ್ವವನ್ನು ನಂಬುವುದಿಲ್ಲ. ಅದರಲ್ಲೂ ಮಟಮಟ ಮಧ್ಯಾಹ್ನ ನಂಬುವುದೇ ಇಲ್ಲ.

ಕ್ಯಾಲಿಫೋರ್ನಿಯಾ ಕಡಲ ತೀರದಲ್ಲಿ ಸುರಕ್ಷಿತವಾಗಿ ಇಳಿದ ಡ್ರ್ಯಾಗನ್ ಕ್ಯಾಪ್ಸುಲ್

ಶುಕ್ಲಾ ಶುಭಾಗಮನ

ವಾಷಿಂಗ್ಟನ್: ಆಕ್ಸಿಯಂ-4 ಮಿಷನ್ ಭಾಗವಾಗಿ ಗಗನಯಾನ ಕೈಗೊಂಡಿದ್ದ ಗಗನಯಾನಿಗಳಾದ ಶುಭಾಂಶು ಶುಕ್ಲಾ ಮತ್ತು ಇತರ ಮೂವರು 18 ದಿನ ಗಳ ವಾಸ್ತವ್ಯದ ನಂತರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ 22.5 ಗಂಟೆಗಳ ಪ್ರಯಾಣ ಮಾಡಿ ಮಂಗಳವಾರ ಮಧ್ಯಾಹ್ನ 3.01ರ ಸುಮಾರಿಗೆ ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೊದಲ್ಲಿ ಬಂದು ಇಳಿದರು.

ಶುಭಾಂಶು ಶುಕ್ಲಾ, ಕಮಾಂಡರ್ ಪೆಗ್ಗಿ ವಿಟ್ಸನ್ ಮತ್ತು ಮಿಷನ್ ತಜ್ಞರಾದ ಪೋಲೆಂಡ್‌ನ ಸ್ಲಾವೋಸ್ಜ್ ಉಜ್ನಾನ್‌ಸ್ಕಿ ಮತ್ತು ಹಂಗೇರಿಯ ಟಿಬೋರ್ ಕಾಪು ಅವರನ್ನು ಹೊತ್ತ ಡ್ರ್ಯಾಗನ್ 'ಗ್ರೇಸ್' ಬಾಹ್ಯಾಕಾಶ ನೌಕೆ ಸೋಮವಾರ ಸಂಜೆ 4:45ಕ್ಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಹೊರಟಿತ್ತು. ಡ್ರ್ಯಾಗನ್ ಮತ್ತು ಆ್ಯಕ್ಸಿಯಂ ಸ್ಪೇಸ್ ಎಕ್ಸ್-4 ಸಿಬ್ಬಂದಿ ಸ್ಥಳೀಯ ಕಾಲಮಾನ ಬೆಳಗಿನ ಜಾವ 2:31ಕ್ಕೆ (ಭಾರತೀಯ ಕಾಲಮಾನ ಮಧ್ಯಾಹ್ನ 3.01) ಸ್ಯಾನ್ ಡಿಯಾಗೊ ಕರಾವಳಿಯಲ್ಲಿ ಇಳಿದರು ಎಂದು ಸ್ಪೇಸ್ ಎಕ್ಸ್ ತಿಳಿಸಿದೆ.

ಶುಕ್ಲಾ ಅವರ ಸಮರ್ಪಣೆ, ಧೈರ್ಯ ಮತ್ತು ಸಾಧನೆ ಶತಕೋಟಿ ಕನಸುಗಳಿಗೆ ಸ್ಫೂರ್ತಿಯಾಗಿದೆ. ಇದು ಭಾರತದ ಮಹಾತ್ವಕಾಂಕ್ಷೆಯ ಮಾನವ ಸಹಿತ ಗಗನಯಾನ ಯೋಜನೆಗೆ ಮತ್ತಷ್ಟು ಸ್ಫೂರ್ತಿ ತುಂಬಿದೆ.

-ನರೇಂದ್ರ ಮೋದಿ, ಪ್ರಧಾನಿ

ಹೇಗಿತ್ತು ಕಾರ್ಯಾಚರಣೆ?

ಗಗನಯಾನಿಗಳು ಇಳಿಯಲು ಪ್ಯಾರಾಚೂಟ್‌ಗಳನ್ನು ಎರಡು ಹಂತಗಳಲ್ಲಿ ನಿಯೋಜಿಸಲಾಗಿತ್ತು. ಮೊದಲ ನೇಯದ್ದನ್ನು ಸುಮಾರು 5.7 ಕಿ.ಮೀ ಎತ್ತರದಲ್ಲಿ ಸ್ಥಿರಗೊಳಿಸಲಾಯಿತು. ನಂತರ ಮುಖ್ಯ ಪ್ಯಾರಾ ಚೂಟ್ ಅನ್ನು ಸುಮಾರು ಎರಡು ಕಿ.ಮೀ ದೂರದಲ್ಲಿ ತೆರೆಯುವಂತೆ ವ್ಯವಸ್ಥೆ ಮಾಡಲಾಗಿತ್ತು. ಸ್ಪ್ಲಾಶ್ ಡೌನ್ ಮಾಡುವ ಮೊದಲು ಬಾಹ್ಯಾಕಾಶ ನೌಕೆಯ ಅಂತಿಮ ವೇಗವನ್ನು ಗಂಟೆಗೆ 350 ಮೈಲುಗಳಿಂದ ಗಂಟೆಗೆ 15 ಮೈಲುಗಳಿಗೆ ಇಳಿಸಲಾಯಿತು. → 4

ನಗುಮೊಗದಿಂದ ಹೊರಬಂದ ಶುಕ್ಲಾ

20 ದಿನಗಳ ಬಾಹ್ಯಾಕಾಶ ಯಾನ ಪೂರ್ಣಗೊಳಿಸಿದ ಸಾಧನೆಯ ಆತ್ಮವಿಶ್ವಾಸ ದಿಂದ ತುಂಬಿದ ನಗುಮೊಗದೊಂದಿಗೆ ಶುಭಾಂಶು ಶುಕ್ಲ ಅವರು ಆಕ್ಸಿಯಂ-4 ಮಿಷನ್‌ನ ಡ್ರ್ಯಾಗನ್ ಗ್ರೇಸ್ ನೌಕೆಯಿಂದ ಹೊರಬಂದು ಕೈಬೀಸಿದರು.

ವೆಚ್ಚವೆಷ್ಟು?

150 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ಬಾಹ್ಯಾಕಾಶ ಪ್ರಯೋಗಾಲಯಕ್ಕೆ ಭೇಟಿ ನೀಡಿದ್ದ ಶುಭಾಂಶು ಶುಕ್ಲಾ, ಐಎಸ್ ಎಸ್‌ನಲ್ಲಿ ಹಲವು ವೈಜ್ಞಾನಿಕ ಸಂಶೋಧನೆಗಳನ್ನು ಕೈಗೊಂಡಿದ್ದರು. ಭಾರತವು ಶುಭಾಂಶು ಶುಕ್ಲಾ ಅವರ ಬಾಹ್ಯಾಕಾಶ ಪ್ರಯಾಣಕ್ಕೆ 70 ಮಿಲಿಯನ್ ಅಮೆರಿಕನ್ ಡಾಲರ್ ವೆಚ್ಚ ಮಾಡಿದೆ.

ಮೊದಲ ಭಾರತೀಯ

43 ವರ್ಷಗಳ ಬಳಿಕ ಭಾರತೀಯ ಗಗನಯಾತ್ರಿಯೊಬ್ಬರು ಬಾಹ್ಯಾಕಾಶ ತಲುಪಿದ್ದಲ್ಲದೇ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿದ ಮೊದಲ ಭಾರತೀಯ ಎಂಬ ಸಾಧನೆಯನ್ನು ಶುಭಾಂಶು ಶುಕ್ಲಾ ಮಾಡಿದ್ದಾರೆ. ಅವರ ಈ ಸಾಧನೆ ಭಾರತದ ಬಾಹ್ಯಾ ಕಾಶ ಕ್ಷೇತ್ರದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದೆ.

7 ದಿನ ಕ್ವಾರೆಂಟೈನ್

ಹಡಗಿನಿಂದ ಹೆಲಿಕಾಪ್ಟರ್ ಮೂಲಕ ಇವರನ್ನು ಕಳುಹಿಸುವ ಮೊದಲು ವೈದ್ಯರು ಗಗನಯಾನಿಗಳ ಆರೋಗ್ಯ ತಪಾಸಣೆ ನಡೆಸಿದರು. 'ಗಗನಯಾನಿಗಳು 7 ದಿನ ಪುನಶ್ಚೇತನ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಕ್ಷೆಯಲ್ಲಿ ತೂಕರಹಿತವಾಗಿದ್ದ ಇವರು, ಭೂಮಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಇದು ನೆರವಾಗಲಿದೆ.

ವರಿಷ್ಠರನ್ನು ಇಕ್ಕಟ್ಟಿಗೆ ಸಿಲುಕಿಸಿದ ಪಕ್ಷದಲ್ಲಿನ ಆಂತರಿಕ ಕಚ್ಚಾಟ

ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಜಟಿಲ

ವಿಶ್ವವಾಣಿ ವಿಶೇಷ ಬೆಂಗಳೂರು

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಯ್ಕೆ ಗೊಂದಲ ಜಟಿಲವಾಗುತ್ತಿದ್ದು, ಪಕ್ಷದ ಮುಖಂಡರ ನಿರೀಕ್ಷೆಗೆ ಕಾಲ ಕೂಡಿ ಬರುತ್ತಿಲ್ಲ. ಇತರ ರಾಜ್ಯಗಳ ಅಧ್ಯಕ್ಷರನ್ನು ವರಿಷ್ಠರು ಘೋಷಣೆ ಮಾಡುತ್ತಿದ್ದರೂ ಕರ್ನಾಟಕದಲ್ಲಿ ಯಾರಿಗೆ ಪಟ್ಟ ಎಂಬ ಕುರಿತಾಗಿ ಗಟ್ಟಿ ನಿರ್ಧಾರ ಕೈಗೊಳ್ಳಲು ಈ ಕ್ಷಣದ ವರೆಗೂ ವರಿಷ್ಠರಿಗೆ ಸಾಧ್ಯವಾಗದಿರುವುದು ಕೂಡ ಅನುಮಾನ ಹುಟ್ಟುಹಾಕಿದೆ.

ಶಿಸ್ತಿನ ಪಕ್ಷ ಎಂದೇ ತನ್ನನ್ನು ಗುರುತಿಸಿಕೊಂಡ ಬಿಜೆಪಿಯಲ್ಲಿ ಶಿಸ್ತು ಪದೇ ಪದೆ ಶಿಸ್ತು ಉಲ್ಲಂಘನೆಯಾಗುತ್ತಿದೆ ಎಂಬುದು ನೊಂದ ಕಾರ್ಯಕರ್ತರ ಅಳಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿ ಹೈಕಮಾಂಡ್ ಅಷ್ಟೊಂದು ಪ್ರಬಲವಾಗಿದ್ದರೂ ನಾಯಕರು ಕರ್ನಾಟಕದ ಕುರಿತಾಗಿ ನಿರ್ಧಾರ ಕೈಗೊಳ್ಳಲು ಯಾಕೆ ಹಿಂದೇಟು ಹಾಕುತ್ತಿದ್ದಾರೆ ಎಂಬುದು ಕೂಡ ಕಗ್ಗಂಟಾಗಿ ಉಳಿದಿದೆ. ಬಿ.ವೈ.ವಿಜಯೇಂದ್ರ ಅವರನ್ನು ಮುಂದುವರಿಸಬೇಕೋ, ಬೇಡವೋ ಎಂಬುದು ಕೂಡ ಹೈಕಮಾಂಡ್ ನಾಯಕರಿಗೆ ಕಾಡುತ್ತಿದೆ ಎಂಬುದು ಕಾರ್ಯಕರ್ತರ ಅನಿಸಿಕೆಯಾಗಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಭದ್ರ ನೆಲೆ ಇರುವುದು ಕರ್ನಾಟಕದಲ್ಲಿ ಮಾತ್ರ. ಇದು ದಕ್ಷಿಣ ಭಾರತದ ಬಿಜೆಪಿಯ ಹೆಬ್ಬಾಗಿಲು. ಬೇರೆ ಯಾವ ರಾಜ್ಯದಲ್ಲೂ ಬಿಜೆಪಿ ಅಧಿಕಾರ ಗಳಿಸಿಲ್ಲ. ಆದರೆ ಕರ್ನಾಟಕದಲ್ಲಿ ಬಿ.ಎಸ್.ಯಡಿಯೂರಪ್ಪ ಪ್ರಯತ್ನದಿಂದ ಬಿಜೆಪಿ ಆಡಳಿತ ನಡೆಸಿದೆ. ಆದರೆ ಅದೇ ಯಡಿಯೂರಪ್ಪ ಅವರನ್ನು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮೂಲೆ ಗುಂಪಾಗಿ ಮಾಡಲಾಗಿತು. ಇದರ ಪರಿಣಾಮ ಪಕ್ಷ ಎದುರಿಸಬೇಕಾಗಿ ಬಂದಿತ್ತು. ಮತ್ತೆ ಬಿಎಸ್‌ವೈ ಕುಟುಂಬಕ್ಕೆ ಮಣೆ ಹಾಕಿರುವುದಕ್ಕೆ ಭುಗಿಲೆದ್ದಿರುವ ಅಸಮಾಧಾನ ಹೈಕಮಾಂಡ್ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ ಎನ್ನಲಾಗಿದೆ.

ಈ ನಡುವೆ ರಾಜ್ಯ ಬಿಜೆಪಿಯಲ್ಲಿನ ಭಿನ್ನಮತ ಶಮನ ಮಾಡಲು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ನೇತೃತ್ವದಲ್ಲಿ ಸಭೆಗಳು ನಡೆದಿದ್ದವು. ಮಾಜಿ ಡಿಸಿಎಂ ಅಶ್ವತ್ಥ ನಾರಾಯಣ ಅವರ ನಿವಾಸದಲ್ಲಿ ನಡೆದ ಸಂಧಾನ ಮಾತುಕತೆಗಳು ಫಲ ಕೊಡಲಿಲ್ಲ. ಎರಡು ಸಭೆ ನಡೆಸಿದರೂ ಅದರಿಂದ ಅನುಕೂಲ ಆಗಿಲ್ಲ. → 4

- ಬಿವೈವಿ ಮುಂದುವರಿಸಬೇಕೋ, ಬೇಡವೋ ಎಂಬುದು ಹೈಕಮಾಂಡ್ ಗೊಂದಲ
- ಭಿನ್ನಮತ ಶಮನ ಮಾಡಲು ನಡೆದಿದ್ದ ಎರಡು ಸಭೆಗಳಿಂದಲೂ ಪ್ರಯೋಜನವಿಲ್ಲ
- ಪ್ರತಿಪಕ್ಷವಾಗಿ ಬಿಜೆಪಿ ವಿಫಲವಾಗಿದೆ ಎಂಬುದು ಕಾರ್ಯಕರ್ತರ ಅಳಲು

ದೇವನಹಳ್ಳಿ ಭೂಸ್ವಾಧೀನ ಅಧಿಸೂಚನೆ ರದ್ದು

ಭೂಸ್ವಾಧೀನ ಕೈ ಬಿಟ್ಟ ಸರಕಾರ

ಬೆಂಗಳೂರು: ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಅಧಿ ಸೂಚನೆ ಕೈಬಿಡಲು ಸರಕಾರ ತೀರ್ಮಾನಿ ಸಲಾಗಿದೆ. ಆದರೆ, ಜಮೀನು ನೀಡಲು ಒಪ್ಪುವ ರೈತರಿಗೆ ಹೆಚ್ಚಿನ ದರ ಹಾಗೂ ಹೆಚ್ಚಿನ ಅಭಿವೃದ್ಧಿಪಡಿಸಿದ ಜಮೀನು ನೀಡಲಾಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ದೇವನಹಳ್ಳಿ ಚನ್ನರಾಯಪಟ್ಟಣ ರೈತರ ಜತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚನ್ನರಾಯಪಟ್ಟಣದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಜಮೀನು ಸ್ವಾಧೀನಪಡಿಸಲು ಅಧಿ ಸೂಚನೆ ಹೊರಡಿಸಲಾಗಿತ್ತು. ರೈತರು ಮತ್ತು ಸಂಘಟನೆಗಳು ಜಮೀನು ಕೊಡಲು ಆಗುವುದಿಲ್ಲ. ಜಮೀನಿನಲ್ಲಿ ವ್ಯವಸಾಯ ಮಾಡಲಾಗುತ್ತಿದೆ. ಅದೇ ನಮ್ಮ ಮುಖ್ಯ ಕಸುಬು. ಅದೇ ಜೀವನಾ ಧಾರ ಎಂದು ಹೇಳಿದ್ದಾರೆ. ವಿಮಾನ ನಿಲ್ದಾಣಕ್ಕೆ ಸಮೀಪ ಇರುವುದರಿಂದ ಹಾಗೂ ಗ್ರೀನ್ ಬೆಲ್ಟ್ ಆಗಿರುವುದರಿಂದ ಸ್ವಾಧೀನ ಬೇಡ ಎಂದಿದ್ದಾರೆ.

ರೈತರ, ಹೋರಾಟಗಾರರ ಅಹವಾಲು ಕೇಳಿ ದ್ದೇವೆ. ಜನಪ್ರತಿನಿಧಿಗಳ ಅಭಿಪ್ರಾಯ ಕೇಳಿದ್ದೇವೆ. ಇದು ವಿಶಿಷ್ಟವಾದ ಹೋರಾಟವಾಗಿದೆ. ಸರಕಾರ ಸಾಧಕ, ಬಾಧಕ ಚರ್ಚೆ ಮಾಡಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಡಲು ನಿರ್ಧರಿಸಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಭೂಸ್ವಾಧೀನ ಕೈಬಿಟ್ಟ ಸುದ್ದಿ ಕೇಳಿ ಕುಣಿದು ಕುಪ್ಪಳಿಸಿದ ಹೋರಾಟಗಾರರು.

ಕೆಲವು ರೈತರು ಜಮೀನು ನೀಡಲು ಸಿದ್ಧರಿರುವುದಾಗಿ ಮುಂದೆ ಬಂದಿದ್ದಾರೆ. ಜಮೀನು ನೀಡಲು ಇಚ್ಛಿಸುವವರ ಜಮೀನನ್ನು ಸರಕಾರ ಸ್ವಾಧೀನಪಡಿಸಿಕೊಳ್ಳಲಿದೆ.

-ಸಿದ್ದರಾಮಯ್ಯ, ಸಿಎಂ

ಬೆಂಗಳೂರಿನಲ್ಲಿ 5 ಪಾಲಿಕೆ ರಚನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಐದು ಪಾಲಿಕೆ ರಚನೆ ಮಾಡಿ, ಶೀಘ್ರ ಚುನಾವಣೆ ನಡೆಸುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ಕೆಪಿಸಿಸಿ ಕಚೇರಿ ಭಾರತ್ ಜೋಡೋ ಭವನದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ, ಜಿಲ್ಲೆ, ತಾಲೂಕು ಮಟ್ಟದ ಪದಾಧಿಕಾರಿಗಳ ಸಮಾವೇಶದಲ್ಲಿ ಮಾತನಾಡಿ, ಜಿಬಿಎ ರಚನೆ ಮಾಡಲಾಗಿದೆ ಈ ಮೂಲಕ ಐದು ಪಾಲಿಕೆಗಳನ್ನು ನಾವು ಮಾಡಿಯೇ ತೀರುತ್ತೇವೆ ಎಂದರು.

ನಿಮಿಷಾ ಪ್ರಿಯಾ ಗಲ್ಲು ಶಿಕ್ಷೆಗೆ ತಡೆ

ದೆಹಲಿ: ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರ ಮರಣದಂಡನೆಯನ್ನು ಯೆಮೆನ್ ಅಧಿಕಾರಿಗಳು ಮುಂದೂಡಿದ್ದಾರೆ. ಕೇರಳದ ಪಾಲಕ್ಕಾಡ್ ಜಿಲ್ಲೆಯ ನಿಮಿಷಾ ಪ್ರಿಯಾ ಅವರು ತನ್ನ ಕ್ಲಿನಿಕ್ ಪಾಲುದಾರನಾಗಿದ್ದ ಯೆಮೆನ್ ಪ್ರಜೆ ತಲಾಲ್ ಅಬ್ದು ಮಹ್ದಿ ಎಂಬುವವರನ್ನು 2017ರಲ್ಲಿ ಹತ್ಯೆ ಮಾಡಿದ್ದರು. ಈ ಪ್ರಕರಣದಲ್ಲಿ ಯೆಮೆನ್‌ನ ವಿಚಾರಣಾ ನ್ಯಾಯಾಲಯ 2020ರಲ್ಲಿ ನಿಮಿಷಾ ಅವರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶಿಸಿತ್ತು. ಯೆಮೆನ್‌ನ ಸುಪ್ರೀಂ ಜುಡಿಷಿಯಲ್ ಕೌನ್ಸಿಲ್ 2023ರ ನವೆಂಬರ್‌ನಲ್ಲಿ ಈ ಶಿಕ್ಷೆ ಎತ್ತಿ ಹಿಡಿದಿತ್ತು. ಸದ್ಯ ಯೆಮೆನ್‌ನ ಸ್ಥಳೀಯ ಅಧಿಕಾರಿಗಳು ಜುಲೈ 16ರಂದು ನಿಗದಿಯಾಗಿದ್ದ ಮರಣ ದಂಡನೆಯನ್ನು ಮುಂದೂಡಿದ್ದಾರೆ.

ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿ.ಸರೋಜಾದೇವಿ ಅವರ ಪಾರ್ಥಿವ ಶರೀರದ ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿದರು.

ಸರೋಜಾದೇವಿಗೆ ಅಂತಿಮ ವಿದಾಯ

ಬೆಂಗಳೂರು/ರಾಮನಗರ

ಅಭಿನಯ ಸರಸ್ವತಿ ಖ್ಯಾತಿಯ ಬಿ.ಸರೋಜಾ ದೇವಿ ಅವರ ಅಂತ್ಯಸಂಸ್ಕಾರ ಅವರ ಹುಟ್ಟೂರಾದ ಚನ್ನಪಟ್ಟಣದ ದಶವಾರ ಗ್ರಾಮದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ಮಂಗಳವಾರ ನೆರವೇರಿತು. ತಾಯಿ ರುದ್ರಮ್ಮ ಸಮಾಧಿ ಪಕ್ಕವೇ ಒಕ್ಕಲಿಗ ಸಮುದಾಯ ಸಂಪ್ರದಾಯದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ವಯೋಸಹಜ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಬಿ.ಸರೋಜಾ ದೇವಿ ಅವರು ಜುಲೈ 14ರ ಸೋಮವಾರ ಬೆಳಗ್ಗೆ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ತಮ್ಮ ಸ್ವಗೃಹದಲ್ಲಿ ಕೊನೆಯುಸಿರೆಳೆದಿದ್ದರು. ಅವರ ಪಾರ್ಥಿವ ಶರೀರವನ್ನು ಮಂಗಳವಾರ ಬೆಳಗಿನವರೆಗೂ ಬೆಂಗಳೂರಿನ ಮಲ್ಲೇಶ್ವರಂ ನಿವಾಸದಲ್ಲೇ ಸಾರ್ವಜನಿಕ ದರ್ಶನಕ್ಕಿಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಗಣ್ಯರು ಅಂತಿಮ ದರ್ಶನ ಪಡೆದರು.

ಪಾರ್ಥಿವ ಶರೀರದ ಅಂತಿಮಯಾತ್ರೆ: ಪಾರ್ಥಿವ ಶರೀರವನ್ನು ಬೆಂಗಳೂರಿನಿಂದ ಪುಷ್ಪಾಲಂಕೃತ ವಾಹನದಲ್ಲಿ ಚನ್ನಪಟ್ಟಣದ ದಶವಾರ ಗ್ರಾಮಕ್ಕೆ ತರಲಾಯಿತು. → 4

ಪೊಲೀಸ್ ಇಲಾಖೆಗೆ ಸರ್ಜರಿ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ ಮಾಡಲಾಗಿದ್ದು, 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಆದೇಶ ಹೊರಡಿಸಲಾಗಿದೆ. ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಡಿಐಜಿ ಎಂ.ಎನ್.ಅನುಚೇತ್, ದಕ್ಷಿಣ ಕನ್ನಡದ ಕಾನೂನು ಸುವ್ಯವಸ್ಥೆ ಡಿಸಿಪಿ ಜಿತೇಂದ್ರ ಕುಮಾರ್ ಸೇರಿದಂತೆ 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿ ಪಾಲನೆ ಆಗುತ್ತಿಲ್ಲ. ಮತ್ತೊಂದೆಡೆ ಜೈಲುಗಳಲ್ಲಿ ವಿಪರೀತ ಅಕ್ರಮಗಳ ಬಗ್ಗೆ ವರದಿಗಳಾಗುತ್ತಿವೆ ಎಂಬ ಪ್ರತಿಪಕ್ಷಗಳ ಆರೋಪದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಜಿನ್‌ಪಿಂಗ್ ಜತೆ ಜೈಶಂಕರ್ ಚರ್ಚೆ

ಬೀಜಿಂಗ್: ಚೀನಾದ ತಿಯಾನ್‌ಜಿನ್‌ನಲ್ಲಿ ಮಂಗಳವಾರ ಆರಂಭವಾದ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಚೀನಾಗೆ ಭೇಟಿ ನೀಡಿರುವ ಜೈಶಂಕರ್, ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಿದರು. ಈ ಸಂದರ್ಭ, ಭಾರತ-ಚೀನಾ ನಡುವಿನ 5 ವರ್ಷಗಳ ಕಾಲದ ಉದ್ವಿಗ್ನತೆ ನಿಧಾನವಾಗಿ ಕರಗುತ್ತಾ ಸಾಗಿರುವುದನ್ನು ನಾಯಕರಿಬ್ಬರೂ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕಾಂಗ್ರೆಸ್‌ಗೆ ಕೆಎಂಎಫ್ ಇಕ್ಕಟ್ಟು, ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ

ಸುದ್ದಿ

ನಾವೆಲ್ಲಾ ಹಸುವಿನ ಕೆಚ್ಚಲಿನಿಂದ ಹಾಲು ಕರೆದರೆ ಅವ್ರೆಲ್ಲಾ ಹಣದ ಹೊಳೆ ಹರಿಸ್ತಾರೆ.. ಅದಕ್ಕೇ ಈ ಪೈಪೋಟಿ ಕಣೇ...!!

ಕರಾವಳಿ, ಒಳನಾಡು ಸೇರಿ ಏಳು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ

ರಾಜ್ಯದಲ್ಲಿ 3 ದಿನ ಭಾರೀ ಮಳೆ

ಬೆಂಗಳೂರು: ಭೂಮಿ ಮೇಲ್ಮೈ ಹಾಗೂ ಸಮುದ್ರ ಮೇಲ್ಮೈನಲ್ಲಿ ತೀವ್ರರೂಪದ ಹವಾಮಾನ ವೈಪರೀತ್ಯಗಳು ಉಂಟಾಗಿದ್ದರಿಂದ ರಾಜ್ಯದಲ್ಲಿ ಮುಂದಿನ ಮೂರು ದಿನ ಧಾರಾಕಾರ ಮಳೆ ಆಗುವ ಸಾಧ್ಯತೆ ಇದ್ದು, ಕರಾವಳಿ ಹಾಗೂ ಒಳನಾಡು ಸೇರಿ 7 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ನೀಡಲಾಗಿದೆ.

ಜಾರ್ಖಂಡ್, ಪಶ್ಚಿಮ ಬಂಗಾಳ ರಾಜ್ಯದ ಎರಡು ಕಡೆಗಳಲ್ಲಿ ಭೂಮಿಯ ಮೇಲ್ಮೈನಲ್ಲಿ ಚಂಡಮಾರುತ ಪ್ರಸರಣ ಉಂಟಾಗಿತ್ತು. ಇದೀಗ ಬಂಗಾಳಕೊಲ್ಲಿ ಹಾಗೂ ಅರಬ್ಬಿ ಸಮುದ್ರ ಭಾಗದಲ್ಲಿ ಮತ್ತೆ ವಾಯುಭಾರ ಕುಸಿತ ಉಂಟಾಗಿರುವ ಕಾರಣ ಮುಂದಿನ ಮೂರು ದಿನಗಳಲ್ಲಿ ಒಳನಾಡು ಜಿಲ್ಲೆಗಳು ಸೇರಿದಂತೆ ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಆಗಲಿದೆ. ಕೆಲವೆಡೆ 150 ಮಿಲಿ ಮೀಟರ್‌ಗಿಂತಲೂ ಹೆಚ್ಚಿನ ಮಳೆ ನಿರೀಕ್ಷೆ ಇದೆ.

ಜುಲೈ 16 ಮತ್ತು 17 ರಂದು ಕರಾವಳಿಯ ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ ಬರಲಿದ್ದು, ಎರಡು ದಿನ 'ಆರೆಂಜ್ ಅಲರ್ಟ್' ನೀಡಲಾಗಿದೆ. → 4

- ಜಾರ್ಖಂಡ್, ಪಶ್ಚಿಮ ಬಂಗಾಳದಲ್ಲಿ ಚಂಡಮಾರುತ ಪ್ರಸರಣ
- ಬಂಗಾಳಕೊಲ್ಲಿ, ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ
- ಕೆಲವೆಡೆ 150 ಮಿಲಿ ಮೀಟರ್ ಗಿಂತಲೂ ಹೆಚ್ಚಿನ ಮಳೆ ನಿರೀಕ್ಷೆ

ಬೆಂಗಳೂರಿಗೆ ಭಾರೀ ಮಳೆ

ರಾಜಧಾನಿ ಬೆಂಗಳೂರಿಗೆ ಜುಲೈ 18 ಮತ್ತು 19 ರಂದು ಸಾಧಾರಣದಿಂದ ಭಾರೀ ಮಳೆ ಬರಲಿದೆ. ಇದರೊಂದಿಗೆ ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಮಂಡ್ಯ, ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸಹ ಭಾರೀ ಮಳೆ ನಿರೀಕ್ಷೆ ಹಿನ್ನೆಲೆ ಎರಡು ದಿನ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಸಮಾಚಾರ ಸಣ್ಣದಲ್ಲ

ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ

ಬೈಲಹೊಂಗಲ: ರಾಜ್ಯ ಸರಕಾರಿ ನೌಕರರ ಸಂಘದ ಬೆಂಗಳೂರು ಇವರ ಆಶ್ರಯದಲ್ಲಿ ರಾಜ್ಯ ಸರಕಾರಿ ನೌಕರರ ಪ್ರತಿಭಾವಂತ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಬೆಳಗಾವಿ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಬೆಳಗಾವಿಯ ಕುಮಾರ ಗಂಧರ್ವ ಕಲಾಭವನದಲ್ಲಿ ರವಿವಾರ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಬೈಲಹೊಂಗಲ ಪಟ್ಟಣದ ದೇವಲಾಪೂರ ರಸ್ತೆಯ ಕಾರ್ಮೆಲ್ ವಿದ್ಯಾ ವಿಕಾಸ ಶಾಲೆಯ ವಿದ್ಯಾರ್ಥಿನಿ ಶ್ರದ್ಧಾ ಶಿವಾನಂದ ರಜಪೂತ ಇವಳು ಕಳೆದ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 98.00 ಅಂಕ ಗಳಿಸಿದ್ದಕ್ಕೆ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಬೈಲೂರು ನಿಷ್ಕಲ ಮಂಟಪದ ತೋಂಟದಾರ್ಯ ಮಠದ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮೀಜಿ, ಶಾಸಕರು ಹಾಗೂ ಗಣ್ಯರು ಸನ್ಮಾನಿಸಿದರು. ಇವಳ ಸಾಧನೆಗೆ ಕುಟುಂಬಸ್ಥರು, ಶಾಲಾ ಮುಖ್ಯಸ್ಥರು ಹರ್ಷ ವ್ಯಕ್ತ ಪಡಿಸಿದ್ದಾರೆ.

ಆರೋಗ್ಯಕ್ಕೆ ಒಳ್ಳೆಯ ಆಹಾರ ರೂಢಿಸಿಕೊಳ್ಳಿ

ಅಥಣಿ: ಪ್ರತಿಯೊಬ್ಬರ ಜೀವನದಲ್ಲಿ ದೈಹಿಕ ಮತ್ತು ಮಾನಸಿಕ ಸದೃಢತೆ ಬಹಳ ಮುಖ್ಯ. ಸದೃಢವಾದ ಆರೋಗ್ಯವನ್ನು ರೂಡಿಸಿಕೊಳ್ಳಲು ಒಳ್ಳೆಯ ಆಹಾರ ಪದ್ಧತಿಯನ್ನು ರೂಡಿಸಿಕೊಳ್ಳಬೇಕು ಎಂದು ಶಿಕ್ಷಣ ಪ್ರೇಮಿ ಸುರೇಶ ಚಿಕ್ಕಟ್ಟಿ ಹೇಳಿದರು. ಅವರು ಶನಿವಾರ ಇಲ್ಲಿನ ಚಿಕ್ಕಟ್ಟಿ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ನಡೆದ ಶಾಲೆಯಲ್ಲಿ ಮಕ್ಕಳ ಸಂತೆ ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇಂದಿನ ಆಧುನಿಕ ಯುಗದಲ್ಲಿ ಜಂಕ್‌ಫುಡ್ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಂಡು ಜೀವನ ಪದ್ಧತಿಯನ್ನು ಸುಧಾರಣೆ ಮಾಡಿಕೊಳ್ಳುವುದು ಅತಿ ಅವಶ್ಯಕವಾಗಿದೆ. ಉತ್ತಮ ಆರೋಗ್ಯ ಹೊಂದಿದಾಗ ಮಾತ್ರ ಮಾನಸಿಕವಾಗಿ ನಾವು ಸದೃಢವಾಗಿರಲು ಸಾಧ್ಯ ಎಂದರು. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸದಾಶಿವ ಚಿಕ್ಕಟ್ಟಿ, ಮುಖ್ಯೋಪಾಧ್ಯಾಯರಾದ ಟಿ.ಎ.ಮೋಗೇರ, ವಿಶ್ವನಾಥ ಸೌದಾಗರ, ಶಾಲೆಯ ಶಿಕ್ಷಕರು, ಪಾಲಕರು ಹಾಗೂ ಸ್ಥಳೀಯರು ಈ ಸಂತೆಯಲ್ಲಿ ಭಾಗವಹಿಸಿದರು. ಶಾಲೆಯ ಮಕ್ಕಳು ವಿವಿಧ ಬಗೆಯ ತರಕಾರಿ ಮತ್ತು ಹಣ್ಣುಗಳನ್ನು ಮಾರಾಟ ಮಾಡಿದರು, ಪಾಲಕರು, ಸ್ಥಳೀಯರು ಮಕ್ಕಳಿಂದ ಖರೀದಿಸಿ ಸಂತಸ ವ್ಯಕ್ತಪಡಿಸಿದರು.

ರೋಟರಿ ಪದಗ್ರಹಣ ಸಮಾರಂಭ ನಾಳೆ

ಅಥಣಿ: ಪಟ್ಟಣದ ಸಾಯಿ ನಗರದಲ್ಲಿರುವ ರಾಯಲ್ ಹಾಲ್ ದಲ್ಲಿ ಜುಲೈ 17 ರಂದು ಸಾಯಂಕಾಲ 5 ಗಂಟೆಗೆ ಅಥಣಿ ರೋಟರಿ ಕ್ಲಬ್, ಹಾಗೂ ಅಥಣಿ ಇನ್ನರ್‌ವ್ಹೀಲ್ ಕ್ಲಬ್‌ಗಳ 2025-26ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಈ ಪದಗ್ರಹಣ ಸಮಾರಂಭದಲ್ಲಿ ನೂತನ ಅಧ್ಯಕ್ಷ ಸಚಿನ ದೇಸಾಯಿ, ಕಾರ್ಯದರ್ಶಿ ಶೇಖರ ಕೋಲಾರ, ಖಜಾಂಚಿ ಸಂತೋಷ ಬೊಮ್ಮಣ್ಣವರ ಅಧಿಕಾರ ಸ್ವೀಕರಿಸಲಿದ್ದಾರೆ. ಅದೇ ರೀತಿ ಅಥಣಿ ಇನ್ನರ್ ವಿಲ್ ಕ್ಲಬ್ ನ ಅಧ್ಯಕ್ಷ ಸುನೀತಾ ದೇಸಾಯಿ, ಕಾರ್ಯದರ್ಶಿ ಶೋಭಾ ಕೋಲಾರ, ಖಜಾಂಚಿ ರಶ್ಮಿ ಬೊಮ್ಮಣ್ಣವರ ಪದಗ್ರಹಣ ಸ್ವೀಕರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ 3170 ರ ಜಿಲ್ಲಾ ಪ್ರಾಂತಪಾಲ ರೋ. ಡಾ. ಗಿರೀಶ್ ಮಸಲೂರಕರ, ಸಾಂಗ್ಲಿ ಇನ್ನರ್‌ವಿಲ್ ಕ್ಲಬ್ ನ ಡಾ. ಮೋನಿಕಾ ಕುಳ್ಳೊಳ್ಳಿ, ಅಥಣಿ ರೋಟರಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಗಜಾನನ ಮಂಗಸುಳಿ, ಸಹಾಯಕ ಪ್ರಾಂತಪಾಲ ಮೇಘರಾಜ ಪರಮಾರ, ಅನಂತ ನಾಡಗೌಡ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಅಥಣಿ ರೋಟರಿ ಸಂಸ್ಥೆಯ ನಿಯೋಜಿತ ಅಧ್ಯಕ್ಷ ಸಚಿನ ದೇಸಾಯಿ ಪ್ರಕಟಣೆಗೆ ತಿಳಿಸಿದ್ದಾರೆ.

ಅಗಲಿದ ಜೀವ

ಪ್ರೇಮಾ ಹರವಿ

ರಾಮದುರ್ಗ: ಪಟ್ಟಣದ ಮಹಾಂತೇಶ ನಗರದ ನಿವಾಸಿ ಪ್ರೇಮಾ ಎಂ. ಹರವಿ (78) ಮಂಗಳವಾರ ನಿಧನರಾದರು. ಮೃತರು, ಇಬ್ಬರು ಸುಪುತ್ರರು. ಒಬ್ಬ ಪುತ್ರಿ, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಕೊನೆ ಆಶೆಯಂತೆ ಅವರ ನೇತ್ರಗಳನ್ನು ಹುಬ್ಬಳ್ಳಿಯ ಎಂ.ಎಂ. ಜೋಶಿ ಆಸ್ಪತ್ರೆಗೆ ಕುಟುಂಬ ಸದಸ್ಯರು ದಾನ ಮಾಡಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಡಿ.ಕೆ.ಶಿವಕುಮಾರ್} ಉಪಮುಖ್ಯಮಂತ್ರಿ
ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಐದು ಪಾಲಿಕೆ ರಚನೆ ಮಾಡಿ, ಶೀಘ್ರವೇ ಚುನಾವಣೆ ನಡೆಸುತ್ತೇವೆ. ಪಾಲಿಕೆಗಳು ರಚನೆಯಾದರೆ ನಮ್ಮ ಪಕ್ಷದ ಕಾರ್ಯಕರ್ತರಿಗೆ ಹೆಚ್ಚಿನ ಸ್ಥಾನಮಾನ ನೀಡಲೇಬೇಕು ಎಂದು ನಾವು ತೀರ್ಮಾನಿಸಿದ್ದೇವೆ. ಇದಕ್ಕೆ ಶೀಘ್ರದಲ್ಲೇ ಅಡಿಪಾಯ ಹಾಕುತ್ತೇವೆ.

ಹಳೇ ಬಸ್ ನಿಲ್ದಾಣದಲ್ಲಿ ಬಸ್‌ಗೆ ಪೂಜೆ ಸಲ್ಲಿಸಿದ ಶಾಸಕ ಅಶೋಕ ಪಟ್ಟಣ

ಸರಕಾರದ ಶಕ್ತಿ ಯೋಜನೆಗೆ 2 ವರ್ಷ: ಸಂಭ್ರಮಾಚರಣೆ

ರಾಮದುರ್ಗ: ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಜಾರಿಯಾಗಿ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ವಿಧಾನಸಭೆ ಮುಖ್ಯ ಸಚೇತಕ, ಶಾಸಕ ಅಶೋಕ ಪಟ್ಟಣ ಬಸ್‌ಗೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಘಟಕ ವ್ಯವಸ್ಥಾಪಕ ಕೆ.ಬಿ. ಅಮ್ಮಣಗಿ, ರಾಜ್ಯ ಸರಕಾರ ಜಾರಿಗೆ ತಂದಿರುವ ಮೊದಲ ಗ್ಯಾರಂಟಿ ಯೋಜನೆ ಶಕ್ತಿ ಯೋಜನೆ ಇಂದು ಎರಡು ವರ್ಷ ಪೂರ್ಣಗೊಳಿಸಿದೆ. ರಾಮದುರ್ಗ ಘಟಕದಿಂದ ಈ ವರೆಗೆ 20 ಕೋಟಿ ಪ್ರಯಾಣಿಕರು ಯೋಜನೆಯ ಲಾಭ ಪಡೆದಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ.ಬಿ. ರಂಗನಗೌಡ್ರ ಅವರ ನೇತ್ರತ್ವದಲ್ಲಿ ಸರ್ವ ಪದಾಧಿಕಾರಿಗಳು ಹಾಜರಿದ್ದು, ಸಂಭ್ರಮಾಚರಣೆ ಮಾಡಿದರು. ಈ ವೇಳೆ ಶಾಸಕ ಅಶೋಕ ಪಟ್ಟಣ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ, ಮುಖಂಡರಾದ ಸೋಮಶೇಖರ ಸಿದ್ಲಿಂಗಪ್ಪನವರ, ಪ್ರದೀಪ ಪಟ್ಟಣ ಸೇರಿದಂತೆ ಪುರಸಭೆ ಸದಸ್ಯರು, ಕಾರ್ಯಕರ್ತರು ಉಪಸ್ಥಿತರಿದ್ದರು.

> ರಾಜ್ಯ ಸರಕಾರ ಜಾರಿಗೆ ತಂದಿರುವ ಮೊದಲ ಗ್ಯಾರಂಟಿ ಯೋಜನೆ ಶಕ್ತಿ ಯೋಜನೆ ಇಂದು ಎರಡು ವರ್ಷ ಪೂರ್ಣಗೊಳಿಸಿದೆ. ರಾಮದುರ್ಗ ಘಟಕದಿಂದ ಈ ವರೆಗೆ 20 ಕೋಟಿ ಪ್ರಯಾಣಿಕರು ಯೋಜನೆಯ ಲಾಭ ಪಡೆದಿದ್ದಾರೆ.
> -ಕೆ.ಬಿ. ಅಮ್ಮಣಗಿ, ಘಟಕ ವ್ಯವಸ್ಥಾಪಕ

ರಾಮದುರ್ಗದ ಹಳೇ ಬಸ್ ನಿಲ್ದಾಣದಲ್ಲಿ ಶಾಸಕ ಅಶೋಕ ಪಟ್ಟಣ ಸರಕಾರಿ ಬಸ್‌ಗೆ ಪೂಜೆ ಸಲ್ಲಿಸಿದರು.

ಶಾಂತಿಯುತ ಜಾತ್ರೆ ಸಂಪನ್ನ

ಶಾಸಕ ಹಾಗೂ ಜಾತ್ರಾ ಕಮೀಟಿಯ ಅಧ್ಯಕ್ಷ ರಮೇಶ ಜಾರಕಿಹೊಳಿ ಅವರನ್ನು ನಗರಸಭೆಯಿಂದ ಸತ್ಕರಿಸುತ್ತಿರುವದು.

ಗೋಕಾಕ: ಗ್ರಾಮ ದೇವತೆಯರ ಜಾತ್ರಾ ಮಹೋತ್ಸವವು ಅತ್ಯಂತ ವಿಜೃಂಭಣೆ ಹಾಗೂ ಶಾಂತಿಯುತವಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು ಎಂದು ಶಾಸಕ ಹಾಗೂ ಜಾತ್ರಾ ಕಮೀಟಿಯ ಅಧ್ಯಕ್ಷ ರಮೇಶ ಜಾರಕಿಹೊಳಿ ಹೇಳಿದರು.

ಅವರು, ಮಂಗಳವಾರದಂದು ತಮ್ಮ ಕಾರ್ಯಾಲಯದಲ್ಲಿ ನಗರಸಭೆ ಸದಸ್ಯರು ಮತ್ತು ಅಧಿಕಾರಿಗಳಿಂದ ಜಾತ್ರೆ ಮಹೋತ್ಸವವು ಯಶಸ್ವಿಯಾದ ಹಿನ್ನಲೆ ಸತ್ಕಾರವನ್ನು ಸ್ವೀಕರಿಸಿ ಮಾತನಾಡುತ್ತಿದ್ದರು.

ಜಾತ್ರೆಯ ಯಶಸ್ಸಿನ ಹಿಂದೆ ಜಾತ್ರಾ ಕಮೀಟಿ ನಗರಸಭೆ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂಧಿ ವರ್ಗದವರ ಸಹಕಾರ ಮಹತ್ವದ ಪಾತ್ರ ವಹಿಸಿದೆ. ಜನತೆಯು ಅತ್ಯಂತ ಭಕ್ತಿಯಿಂದ ಜಾತ್ರೆಯಲ್ಲಿ ಪಾಲ್ಗೊಂಡು ಭಕ್ತಿಯ ಪರಾಕಾಷ್ಠೇಯನ್ನು ತೋರಿದರು. ಈ ಬಾರಿಯ ಜಾತ್ರೆಯಲ್ಲಿ ಹಿಂದೆಂದಿಗೂ ಸೇರದಂತಹ ಲಕ್ಷಾಂತರ ಸಂಖ್ಯೆಯಲ್ಲಿ ಪಾಲ್ಗೊಂಡು ಅತ್ಯಂತ ಶಾಂತಿ, ಸಮ್ಯಮದಿಂದ ತಮ್ಮ ಭಕ್ತಿಯನ್ನು ತೋರಿದರು. ಇವರೆಲ್ಲರಿಗೂ ಧನ್ಯವಾದಗಳು. ಇದೆ ರೀತಿ ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಂಡು ದೇವರ ಅನುಗ್ರಹಕ್ಕೆ ಪಾತ್ರರಾಗುವಂತೆ ತಿಳಿಸಿದರು.

ಜಾತ್ರಾ ಮಹೋತ್ಸವದಲ್ಲಿ ಜನದಟ್ಟನೆ ಹಾಗೂ ಟ್ರಾಫೀಕ್ ನಿಯಂತ್ರಣದಲ್ಲಿ ಪೋಲಿಸ್ ಇಲಾಖೆಯ ಪಾತ್ರ ಹಿರಿದಾಗಿದೆ. ಜಾತ್ರೆಯಲ್ಲಿ ಶಾಂತಿ ಸುವ್ಯಸ್ಥೆ ಕಲ್ಪಿಸುವಲ್ಲಿ ಪೋಲಿಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂಧಿಗಳು ರಾತ್ರಿ, ಹಗಲೇನ್ನದೆ ಕಾರ್ಯನಿರ್ವಹಿಸಿದ್ದಾರೆ. ಹಿರಿಯ ಪೋಲಿಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂಧಿಗಳಿಗೆ ಜಾತ್ರಾ ಕಮೀಟಿಯ ಪರವಾಗಿ ವಿಶೇಷ ಕೃತಜ್ಞತೆಗಳು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಉಪಾಧ್ಯಕ್ಷೆ ಬಿಬಿಬತುಲ ಜಮಾದಾರ, ಸ್ಥಾಯಿ ಸಮೀತಿ ಚೇರಮನ್ ಶ್ರೀಶೈಲ ಯಕ್ಕುಂಡಿ, ಪೌರಾಯುಕ್ತ ರವಿ ರಂಗಸುಭೆ, ಹಿರಿಯ ಸದಸ್ಯರುಗಳಾದ ಕುತ್ಬುದ್ದಿನ ಗೋಕಾಕ, ಅಬ್ಬಾಸ ದೇಸಾಯಿ, ದುರ್ಗಪ್ಪ ಶಾಸ್ತ್ರಿಗೊಲ್ಲರ, ಬಸವರಾಜ ಆರೇನ್ನವರ ಸೇರಿದಂತೆ ನಗರಸಭೆ ಸದಸ್ಯರು ಇದ್ದರು.

ಹಲಕರ್ಣಿ ರಸ್ತೆ ಸೇತುವೆ ತೆರವು

ಯಮಕನಮರಡಿ: ಯಮಕನಮರಡಿ-2 ಕರ್ನಾಟಕದ ಗಡಿ ಗ್ರಾಮವಾದ ಉಳ್ಳಾಗಡ್ಡಿ-ಖಾನಾಪೂರ ಹಾಗೂ ಮಹಾರಾಷ್ಟ್ರ ಗಡಿ ಗ್ರಾಮ ಹಲಕರ್ಣಿ ಗ್ರಾಮವನ್ನು ಸಂಪರ್ಕಿಸುವ ರಸ್ತೆಯ ಕಾಮಗಾರಿ ಪ್ರಾರಂಭವಾಗಿದ್ದು ಉಳ್ಳಾಗಡ್ಡಿ-ಖಾನಾಪೂರ ಗ್ರಾಮದ ಈಶ್ವರಲಿಂಗ ದೇವಸ್ಥಾನದ ಬಳಿಯಿರುವ ಹಳೆಯ ಸೇತುವೆಯನ್ನು ತೆರವು ಗೊಳಿಸಿ ಹೊಸ ಸೇತುವೆಯ ಕಾಮಗಾರಿಯನ್ನು ಪ್ರಾರಂಭಿಸುವ ಕಾರ್ಯಕ್ಕೆ ಚಾಲನೆ ದೊರೆತಿದ್ದು ಸೇತುವೆಯನ್ನು ತೆರವುಗೊಳಿಸುತ್ತಿರುವ ಜೆ,ಸಿ,ಪಿ ಯಂತ್ರದ ದೃಶ್ಯ

ಆರ್ಥಿಕ ಬೆಳವಣಿಗೆಗೆ ಪ್ರವಾಸೋದ್ಯಮ ಸಹಕಾರ ಮುಖ್ಯ

ಚನ್ನಮ್ಮನ ಕಿತ್ತೂರು: ಕಿತ್ತೂರು ಪಟ್ಟಣವನ್ನು ಆರ್ಥಿಕವಾಗಿ ಬೆಳೆಸಲು ಪ್ರವಾಸೋದ್ಯಮ ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ. ಕಿತ್ತೂರು ನಾಡಿನ ನಿರ್ಲಕ್ಷಕ್ಕೆ ಒಳಪಟ್ಟ ಎಲ್ಲ ಸ್ಮಾರಕಗಳ ಸಂರಕ್ಷಣೆ, ಜೀರ್ಣೋದ್ದಾರಕ್ಕೆ ಆದ್ಯತೆ ನೀಡಿ ಮುಂದಿನ ಪೀಳಿಗೆಗೆ ಉಳಿಸುವ ಕೆಲಸ ಮಾಡಬೇಕೆಂದು ನೂತನ ಆಯುಕ್ತರಿಗೆ ಶಾಸಕ ಬಾಬಾಸಾಹೇಬ ಪಾಟೀಲ ಸೂಚನೆ ನೀಡಿದರು.

ಪಟ್ಟಣದ ತಾಲೂಕು ಆಡಳಿತಸೌಧದಲ್ಲಿ ಮಂಗಳವಾರ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಕಿತ್ತೂರು ಪಟ್ಟಣದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಸ್ಮಾರಕಗಳ ಸಂರಕ್ಷಣೆ, ಪ್ರವಾಸಿಗರನ್ನು ಆಕರ್ಷಿಸಲು ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಪ್ರವಾಸಿ ಕೇಂದ್ರ ಮಾಡಲು ಕ್ರಮವಹಿಸಲಾಗಿದೆ ಎಂದರು.

ಪ್ರಾಧಿಕಾರಕ್ಕೆ ಕಚೇರಿ ಆಯುಕ್ತರ ನೇಮಕದಿಂದ ಕಳೆ ತಂದಿದೆ. ಕಿತೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಎಲ್ಲ ಸ್ಮಾರಕಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಗಮನ ಹರಿಸಲಾಗಿದೆ. ಈ ನಿಟ್ಟಿನಲ್ಲಿ ಸರಕಾರದ ಗಮನ ಸೆಳೆಯಲಾಗಿದೆ. ಮುಖ್ಯಮಂತ್ರಿಗಳನ್ನು ಬೇಟಿ ಮಾಡಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಡಲಾಗಿದೆ. ಕಿತ್ತೂರು ಕೋಟಿ ಆವರಣದಲ್ಲಿ ರು. 30 ಕೋಟಿ ಅನುಧಾನದಲ್ಲಿ ಆಧುನೀಕ ಯುಗಕ್ಕೆ ಅನುಗುಣವಾಗಿ ಜನರ ಆಕರ್ಷಣೆಯ ದೀಮ ಪಾರ್ಕ ನಿರ್ಮಾಣಕ್ಕೆ ಸಂಪುಟದ ಅನುಮೋದನೆಗಾಗಿ ಕಳುಹಿಸಲಾಗಿದೆ. ಅದಷ್ಟು ಬೇಗ ಟೆಂಡರ ಪ್ರಕ್ರಿಯೇ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಪ್ರಾಧಿಕಾರದ ನೂತನ ಆಯುಕ್ತ ಪ್ರಭಾವತಿ ಪಕ್ಕೀರಪೂರ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದಿಂದ ಆಗಬೇಕಿರುವ ಕೆಲಸಗಳನ್ನು ಬಹಳ ಆಸಕ್ತಿಯಿಂದ ಮಾಡಲಾಗುವದು. ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಹಲವಾರು ಯೋಜನೆ ಗುರಿಗಳನ್ನು ಇಟ್ಟುಕೊಳ್ಳಲಾಗಿದೆ. ಶಾಸಕರು ಬಹಳ ಉತ್ಸುಕತೆಯಿಂದ ಚನ್ನಮ್ಮಾಜಿಯ ನಾಡು ಅಭಿವೃದ್ಧಿಯಿಂದ ಕುಂಠಿತವಾಗಬಾರದೆಂದು ಪ್ರಾಧಿಕಾರದ ಮೂಲಕ ಅಭಿವೃದ್ಧಿಯ ಗುರಿ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಅವರ ಕಾರ್ಯನಿರ್ವಹಿಸಲಾಗುವದೆಂದು ಹೇಳಿದರು. ಕಿತ್ತೂರು ತಹಸೀಲ್ದಾರ ಕಲ್ಲನಗೌಡ ಪಾಟೀಲ, ಪಟ್ಟಣ ಪಂಚಾಯತಿ ಅಧ್ಯಕ್ಷ ಜಯಸಿದ್ದರಾಮ ಮಾರಿಹಾಳ ಇತರರು ಉಪಸ್ಥಿತರಿದ್ದರು.



ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿ ಉದ್ಘಾಟಿಸಿ ಶಾಸಕ ಬಾಬಾಸಾಹೇಬ ಪಾಟೀಲ ಅವರು ಮಾತನಾಡಿದರು.

ಸಾಂಸ್ಕೃತಿಕ ನೆಲೆಗಟ್ಟು ಅತ್ಯಗತ್ಯ

ಮೂಡಲಗಿ: ಬಸವಜ್ಯೋತಿ ವಿದ್ಯಾ ವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ಎಲ್ಲ ವಿದ್ಯಾರ್ಥಿಗಳು ಜ್ಞಾನದ ಜ್ಯೋತಿಗಳಾಗಿ ಜಗತ್ತು ಬೆಳಗುವಂತಾಗಬೇಕು ವಿದ್ಯಾರ್ಥಿಗಳಿಗೆ ಕಲಿಕೆಯೊಂದಿದ್ದರೆ ಸಾಲದು ಅದರೊಂದಿಗೆ ಒಳ್ಳೆಯ ಸಂಸ್ಕೃತಿ ಆಚಾರ ವಿಚಾರ ಸಮಯಪ್ರಜ್ಞೆ ಸತತ ಪ್ರಯತ್ನ ಏಕಾಗ್ರತೆ ಹೊಂದಿರಬೇಕು ಎಂದು ಹಾರೂಗೇರಿಯ ಶ್ರೀ ಸಿದ್ದೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಹಾಗೂ ಸಾಹಿತಿ ಟಿ.ಎಸ್.ವಂಟಗೂಡಿ ಹೇಳಿದರು.

ಅವರು ತಾಲೂಕಿನ ಹುಣಶ್ಯಾಳ ಪಿ.ವಾಯ್ ಗ್ರಾಮದ ಶ್ರೀ ಬಸವ ಜ್ಯೋತಿ ವಿದ್ಯಾ ವರ್ಧಕ ಶಿಕ್ಷಣ ಸಂಸ್ಥೆಯ ಮಾತೃಭೂಮಿ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದ ಪಿ.ಯು.ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ,

ವಿದ್ಯಾರ್ಥಿಗಳು ಹೆತ್ತ ತಂದೆ ತಾಯಿಯರ ಕಲಿತ ಮಹಾವಿದ್ಯಾಲಯದ ಕಲಿಸಿದ ಪ್ರಾಧ್ಯಾಪಕರ ಕೀರ್ತಿ ಹೆಚ್ಚಿಸುವಂತಹವರಾಗಬೇಕು ವಿದ್ಯಾರ್ಥಿಗಳಿಗೆ ಹಿಂದೆ ಗುರು ಮುಂದೆ ಗುರಿ ಇರಬೇಕು ಗುರಿ ಇಲ್ಲದವನ ಜೀವನ ಚುಕ್ಕಾಣಿ ಇಲ್ಲದ ಹಡಗಿನಂತಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎ.ಡಿ.ಗೌಡನ್ನವರ ಮಾತನಾಡಿ, ವಿದ್ಯಾರ್ಥಿಗಳು ವಿದ್ಯೆಯೊಂದಿಗೆ ವಿನಯ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು

ವೇದಿಕೆಯಯಲ್ಲಿ ಅರಳಿಮಟ್ಟಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಈರಣ್ಣ ಕಾಗವಾಡ, ಮಲ್ಲು ಕಾಂಬಳೆ ಹುಣಶ್ಯಾಳ ಪಿ ವೈ ಸರಕಾರಿ ಪ್ರೌಢಶಾಲೆಯ ಕನ್ನಡ ಶಿಕ್ಷಕ ಡಿ ಪಿ ದಾಸಣ್ಣವರ ಶ್ರೀಮತಿ ಗೌರಮ್ಮ ಗೌಡನವರ ಸಂಸ್ಥೆ ಸದಸ್ಯ ಹಣಮಂತ ಗೌಡನ್ನವರ ಕಾರ್ಯದರ್ಶಿ ಬೋರಮ್ಮ ಗೌಡನ್ನವರ ಉಪಸ್ಥಿತರಿದ್ದರು. ಮಹಾವಿದ್ಯಾಲಯದ ಪ್ರಾಚಾರ್ಯ ವಿ.ಆರ್ .ಬಾಗಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಲಾವತಿ ಕಿಲಾರಿ ಸ್ವಾಗತಿಸಿದರು ಭಾಗ್ಯಶ್ರೀ ಮಾನೆ ನಿರೂಪಿಸಿದರು ಕುಸುಮಾ ದೇಸಾಯಿ ವಂದಿಸಿದರು.

ಗಿಡಗಳನ್ನು ಉಳಿಸಿ ಬೆಳೆಸಲು ಸಲಹೆ

ಬೆಳಗಾವಿ: ವನಮಹೋತ್ಸವ ಮಾಡಿ ಗಿಡ ನೆಟ್ಟರೆ ಸಾಲದು, ಅವುಗಳನ್ನು ರಕ್ಷಿಸಿ ಬೆಳೆಸುವುದು ಸಹ ಅಷ್ಟೇ ಮುಖ್ಯ ಎಂದು ಸಿಜಿಕೆ ಕನಸ್ಟ್ರಕ್ಷನ್ ಮತ್ತು ರಿಯಲ್ ಎಸ್ಟೇಟ್ ಕಂಪನಿಯ ಚೇರಮನ್, ಕ್ರೆಡೈ ಮಾಜಿ ರಾಜ್ಯಾಧ್ಯಕ್ಷ ಚೈತನ್ಯ ಕುಲಕರ್ಣಿ ಹೇಳಿದ್ದಾರೆ.

ಮಂಗಳವಾರ ಬೆಳಗಾವಿಯ ರಾಣಿ ಚನ್ನಮ್ಮ ನಗರದ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಪ್ರಯತ್ನ ಸಂಘಟನೆ ಆಯೋಜಿಸಿದ್ದ ವನಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಎಲ್ಲೆಡೆ ಹವಾಮಾನ ವೈಪರೀತ್ಯ ನೋಡುತ್ತಿದ್ದೇವೆ. ಹಾಗಾಗಿ ಹೆಚ್ಚಿನ ಪ್ರಮಾಣದಲ್ಲಿ ಗಿಡಗಳನ್ನು ನೆಡುವ ಅಗತ್ಯವಿದೆ. ಹಾಗೆ ನೆಟ್ಟ ಗಿಡಗಳ ರಕ್ಷಣೆ ಸಹ ಅಷ್ಟೇ ಮುಖ್ಯ. ಶಾಲೆಗಳ ಆವರಣದಲ್ಲಿ ಗಿಡಗಳನ್ನು ನೆಟ್ಟಾಗ ಒಬ್ಬೊಬ್ಬ ವಿದ್ಯಾರ್ಥಿಗೆ ಒಂದೊಂದು ಗಿಡದ ಜವಾಬ್ದಾರಿ ವಹಿಸುವುದರಿಂದ ಗಿಡಗಳ ರಕ್ಷಣೆ ಜೊತೆಗೆ, ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸಿದಂತಾಗುತ್ತದೆ ಎಂದು ಅವರು ಹೇಳಿದರು.

ಗಿಡಗಳ ರಕ್ಷಣೆಗೆ ತಮ್ಮದೇ ಫ್ಯಾಕ್ಟರಿಯಲ್ಲಿ ತಯಾರಿಸಿದ ಉತ್ತಮ ಗುಣಮಟ್ಟದ ಟ್ರೀ ಗಾರ್ಡ್ ಗಳನ್ನು ಚೈತನ್ಯ ಕುಲಕರ್ಣಿ ದೇಣಿಗೆಯಾಗಿ ನೀಡಿದರು.

ಪ್ರಯತ್ನ ಸಂಘಟನೆ ಅಧ್ಯಕ್ಷೆ ಶಾಂತಾ ಆಚಾರ್ಯ, ಸಮಾಜ ಸೇವಕರಾದ ಶೀಲಾ ದೇಶಪಾಂಡೆ, ರಾಧಿಕಾ ಮಿರ್ಜಿ, ಹಿರಿಯ ಪತ್ರಕರ್ತ ಎಂ.ಕೆ.ಹೆಗಡೆ, ಶಾಲಾಭಿವೃದ್ಧಿ ಸಮಿತಿ ಸದಸ್ಯ ಜಗದೀಶ ಬಡಿಗೇರ, ಪ್ರಯತ್ನ ಸಂಘಟನೆಯ ಕಾರ್ಯದರ್ಶಿ ಗೌರಿ ಸರ್ನೋಬತ್, ಸದಸ್ಯರಾದ ವೆಂಕಟೇಶ ಸರ್ನೋಬತ್, ಶ್ವೇತಾ ಬಿಜಾಪುರೆ, ಸುನೀತಾ ಭಟ್, ವರದಾ ಭಟ್, ಪದ್ಮಾ ವೇರ್ಣೇಕರ್, ಬೀನಾ ರಾವ್, ಶುಭಾ ಹೆಗಡೆ, ರೇವತಿ ಶರ್ಮಾ, ಹೇಮಾ ಮುತಾಲಿಕ, ಲತಾ ಕಟ್ಟಿ, ವೀಣಾ ಕುಲಕರ್ಣಿ, ಅಪರ್ಣಾ ಪವಾರ್, ಶುಭಾ ಕಡಗದಕೈ, ಎಂ.ಜಿ.ಭಟ್, ಶಿಕ್ಷಕರಾದ ಎ.ಕೆ. ಜೋಶಿ, ಎಲ್.ಬಿ.ಹೊಸಮನಿ, ಸೌಮ್ಯ ಮಾನೆ, ಶಿಲ್ಪಾ ಡಿ, ಯಶ್ ಬಡಾಲೆ ಮೊದಲಾದವರು ಇದ್ದರು.

ಶಾಸಕರ ಕಚೇರಿಗೆ ಮುತ್ತಿಗೆ

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಅವರು ಮಾತನಾಡಿದರು.

ಚನ್ನಮ್ಮನ ಕಿತ್ತೂರು: ಶಾಸಕ ಬಾಬಾಸಾಹೇಬ ಪಾಟೀಲ ಅವರು ಬಿಜೆಪಿ ಪಕ್ಷದ ಕಾರ್ಯಕರ್ತರಿಗೆ ಬಿಜೆಪಿ ಮಕ್ಕಳು ಎಂದು ಬೈಯ್ದು ಸ್ವಾಭಿಮಾನಕ್ಕೆ ದಕ್ಕೆ ಉಂಟು ಮಾಡಿದ್ದಾರೆ ಎಂದು ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಆರೋಪಿಸಿದ್ದಾರೆ.

ಇಲ್ಲಿಯ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಗಿನಹಾಳದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುವಾಗ, ಉದ್ದೇಶಪೂರ್ವಕವಾಗಿ ಬಿಜೆಪಿ ಪಕ್ಷದ ಕಾರ್ಯಕರ್ತರಿಗೆ ಅವಮಾನ ಹಾಗೂ ಅಪಮಾನ ಮಾಡುವ ಉದ್ದೇಶದಿಂದ ಮತ್ತು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರ ಸ್ವಾಭಿಮಾನಕ್ಕೆ ಧಕ್ಕೆ ಉಂಡು ಮಾಡಿದ್ದಾರೆ.

ಹೀಗಾಗಿ ದಿ. 15 ರಂದು (ನಾಳೆ) ಮುಂಜಾನೆ 11 ಗಂಟೆಗೆ ಕುರುಗುಂದ ಗ್ರಾಮದಿಂದ ಪಾದಯಾತ್ರೆಯ ಮೂಲಕ ತೆರಳಿ ನೇಗಿನಹಾಳ ಗ್ರಾಮದಲ್ಲಿರುವ ಶಾಸಕ ಬಾಬಾಸಾಹೇಬ ಪಾಟೀಲ ಅವರ ಕಚೇರಿಗೆ ಬಿಜೆಪಿ ಕಾರ್ಯಕರ್ತರು ಮುತ್ತಿಗೆ ಹಾಕಲಾಗುತ್ತದೆ ಎಂದರು.

ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ನಾಯಕರು ಸೇರಿದಂತೆ ಬೈಲಹೊಂಗಲ ಮತ್ತು ಕಿತ್ತೂರು ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಮುತ್ತಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಮಂಡಳ ಅಧ್ಯಕ್ಷ ಶ್ರೀಕರ ಕುಲಕರ್ಣಿ, ಜಿಲ್ಲಾ ಬಿಜೆಪಿ ಗ್ರಾಮೀಣ ಘಟಕದ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ, ಮುಖಂಡರಾದ ಬಸವರಾಜ ಪರವಣ್ಣವರ, ಲಕ್ಷ್ಮಿ ಇನಾಮದಾರ ಇದ್ದರು.

ನಿರಂತರ ಓದಿನಿಂದ ಸಾಧನೆ ಸಾಧ್ಯ: ಸದಾಶಿವ ಬೆಳಗಲಿ

ಮೂಡಲಗಿ: ವಿದ್ಯಾರ್ಥಿಗಳು ಜ್ಞಾನ ಮತ್ತು ಬುದ್ಧಿಯನ್ನು ಬೆಳಸಿಕೊಳ್ಳಬೇಕು ಇಂದು ಸಾಮಾಜಿಕ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳು ಪ್ರೀತಿ ಪ್ರೇಮ ಎಂಬ ಭಾವನೆಗಳನ್ನು ಹೊಂದಿ ನಿಜವಾದ ಬದುಕನ್ನು ನಾಶ ಮಾಡಿಕೊಳ್ಳುತ್ತಿದ್ದು ಬದುಕಿನ ಸ್ವಾರಸ್ಯವನ್ನು ಕಳೆದುಕೊಳ್ಳುವ ಬದಲು ತಂದೆ-ತಾಯಿಗಳ ಆಸೆ ಆಕಾಂಕ್ಷೆಗಳಂತೆ ಸಾಧಕರಾಗಲು ಪ್ರಯತ್ನಿಸಬೇಕು ಎಂದು ನಾಗನೂರಿನ ಸರಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ಸದಾಶಿವ ಬೆಳಗಲಿ ಹೇಳಿದರು. ಪಟ್ಟಣದ ಆರ್.ಡಿ.ಎಸ್ ಪಿ ಯು ಕಾಲೇಜಿನಲ್ಲಿ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಎನ್‌ಎಸ್‌ಎಸ್, ಸ್ಕೌಟ್ಸ್, ರೆಡ್ ಕ್ರಾಸ್ ಘಟಕಗಳ ಉದ್ಘಾಟನಾ ಸಮಾರಂಭ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರತಿಜ್ಞಾ ವಿಧಿ ಬೋಧನೆ ಕಾರ್ಯಕ್ರಮದಲ್ಲಿ ಮಾತನಾಡಿ, ನೌಕರರಾಗುವ ಬದಲು ಮಾಲೀಕರಾಗುವ ಹಾಗೂ ಹಳೆಯ ಸಾಂಪ್ರದಾಯಕ ಸಾವಯುವ ಕೃಷಿ ಸಾಧಕರಾಗಿ ಬೆಳದು ಸ್ವಾವಲಂಬನೆ ಜೀವನಕ್ಕೆ ತೊಡುಗುವಂತೆ ಸಲಹೆ ನೀಡಿದರು. ಅತಿಥಿ ಅರಳಿಮಟ್ಟಿ ಸರಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ಮಹಾಂತೇಶ ಕುಂಬಾರ ಮಾತನಾಡಿ, ಗುರುಭಕ್ತಿ ವಿದ್ಯಾರ್ಥಿಗಳ ಬದುಕಿನಲ್ಲಿ ಆದರನೀಯವಾಗಿದ್ದು ಅದರ ಜೊತೆಗೆ ಸಮಯ ಪಾಲನೆ ಹಾಗೂ ಶೈಕ್ಷಣಿಕ ಪಠ್ಯ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವದರಿಂದ ಎಲ್ಲ ಕ್ಷೇತ್ರಗಳಲ್ಲಿ ಸಾಧನೆಯ ಅವಕಾಶಗಳಿದ್ದು ಅವುಗಳ ಸದುಪಯೋಗ ಪಡಿಸಿಕೊಳ್ಳು ಬೇಕೆಂದರು. ಸಂಸ್ಥೆಯ ಅಧ್ಯಕ್ಷ ಸಂತೋಷ ಪಾರ್ಶಿ ವಹಿಸಿಕೊಂಡು ಮಾತನಾಡಿದರು. ಕಾರ್ಯಕ್ರಮದಲ್ಲಿ ಮುನ್ಯಾಳ ಗ್ರಾ.ಪಂ ಸದಸ್ಯ ರಮೇಶ ಪಾಟೀಲ, ಕಾಲೇಜಿನ ಪ್ರಾಚಾರ್ಯ ಶಿವಾನಂದ ಸತ್ತಿಗೇರಿ, ಪದವಿ ಕಾಲೇಜಿನ ಪ್ರಾಚಾರ್ಯ ಎಸ್.ಬಿ.ಗೋಟೂರೆ ಆಯ್.ಟಿ.ಆಯ್. ಕಾಲೇಜಿನ ಪ್ರಾಚಾರ್ಯ ಚಿದಾನಂದ ಶೆಟ್ಟರ ಮತ್ತಿತರರು ಉಪಸ್ಥಿತರಿದ್ದರು.

ಸಹಕಾರಿ ಧುರೀಣ ಬಸಪ್ಪ ಕುಡಸೋಮಣ್ಣವರ ನಿಧನ

ಬೈಲಹೊಂಗಲ: ರಾಜಕೀಯವಾಗಿ, ಸಾಮಾಜಿಕವಾಗಿ ನಾಡಿಗೆ ಅನೇಕ ಕೊಡುಗೆ ನೀಡಿದ್ದ ಸಹಕಾರಿ ರಂಗದ ಧುರೀಣ, ಮಾಜಿ ಪೈಲ್ವಾನ್, ಮಾಜಿ ಪುರಸಭೆ ಅಧ್ಯಕ್ಷ ಬಸಪ್ಪ ಮಲ್ಲಪ್ಪ ಕುಡಸೋಮಣ್ಣವರ (78) ಮಂಗಳವಾರ ನಿಧನರಾದರು.

ಅವರ ನಿಧನದಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ. ಬೈಲಹೊಂಗಲ ನಾಡಿನಲ್ಲಿ ತಮ್ಮ ಅಧಿಕಾರವಧಿಯಲ್ಲಿ ಜನಪರ ಕಾರ್ಯ ಮಾಡುವ ಮೂಲಕ ಜನರ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾಗಿದ್ದ ಅವರು, ಜನತೆಯ ಸಮಸ್ಯೆಗಳಿಗೆ ಸಮರ್ಪಕವಾಗಿ ಪರಿಹಾರ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ರಾಜಕೀಯವಾಗಿ ಅತ್ಯಂತ ಪ್ರಭಾವಿ ಮುಖಂಡರಾಗಿ, ನಾಡಿನ ಅಭಿವೃದ್ಧಿಗೆ ತಮ್ಮದೆ ಆದ ಕೊಡುಗೆ ನೀಡಿದ್ದರು. ಕುಸ್ತಿ ಪ್ರೇಮಿಯಾಗಿದ್ದ ಅವರು, ಕುಸ್ತಿ ಕಲಾವಿದರನ್ನು ಪೋಷಿಸುವ ನಿಟ್ಟಿನಲ್ಲಿ ಪ್ರತಿವರ್ಷ ಶ್ರೀ ಮರಡಿ ಬಸವೇಶ್ವರ ಜಾತ್ರಾ ಮಹೋ ತ್ಸವದಲ್ಲಿ ಅಂತರಾಷ್ಟ್ರೀಯ ಕುಸ್ತಿ ಪಂದ್ಯಾವಳಿ ಏರ್ಪಡಿಸುವ ಮೂಲಕ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸುವದರೊಂದಿಗೆ ಕುಸ್ತಿ ಪ್ರೇಮ ಮೆರೆದಿದ್ದರು. ಮೃತರು ಪತ್ನಿ, ಮೂವರು ಪುತ್ರರನ್ನು ಹಾಗೂ ಅಪಾರ ಬಂಧು-ಬಳಗ ಅಗಲಿದ್ದಾರೆ.

ಬಿ.ಎಂ.ಕೆ. ಎಂದೆ ಖ್ಯಾತರಾಗಿದ್ದ ಅವರು ಬೈಲಹೊಂಗಲ ಪುರಸಭೆಯ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಎರಡು ಬಾರಿ ಸೇವೆ ಸಲ್ಲಿಸಿದ್ದಾರೆ. ಶ್ರೀ ವರ್ತಿಸಿದ್ಧಬಸವೇಶ್ವರ ಅರ್ಬನ್ ಕೋ-ಆಪ್ ಸೋಸೈಟಿ ಸ್ಥಾಪಿಸಿ, ನಾಡಿನ ಬಡ ಮತ್ತು ಮಧ್ಯಮ ವರ್ಗದ ಜನತೆಗೆ ಆರ್ಥಿಕ ನೇರವು ನೀಡುವ ಮೂಲಕ ನಾಡಿನ ಅಭಿವೃದ್ದಿಗೆ ಶ್ರಮಿಸಿದ್ದಾರೆ.

ಸೋಮೇಶ್ವರ ಸಕ್ಕರೆ ಕಾರ್ಖಾನೆ ಪ್ರವರ್ತಕರಾಗಿ, ಮಹಾಲಕ್ಷ್ಮೀ ಬ್ಯಾಂಕ್ ನಿರ್ದೇಶಕರಾಗಿ ಹಾಗೂ ಹಲವಾರು ಸಂಘ ಸಂಸ್ಥೆಗಳಲ್ಲಿ ತಮ್ಮ ಅಪಾರ ಸೇವೆ ಸಲ್ಲಿಸಿದ್ದಾರೆ. 1979 ರಿಂದ 2014 ರವರೆಗೆ ಸುಮಾರು ಮೂರು ದಶಕಗ ಳಕಾಲ ಪುರಸಭೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಬೆಳ ಗಾವಿ ಜಿಲ್ಲಾ ತೋಟಗಾರಿಕೆ ಇಲಾಖೆ ನಿರ್ದೇಶಕರಾಗಿ, ಸುಕ್ಷೇತ್ರ ಉಳವಿ ಮಹಾಮನೆ ನಿರ್ದೇಶಕರಾಗಿ, ಬೈಲವಾಡ ವರ್ತಿಸಿದ್ಧ ಬಸವೇಶ್ವರ ದೇವಸ್ಥಾನ ಟ್ರಸ್ಟ್ ಕಮೀಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಮರಡಿ ಬಸವೇಶ್ವರ ದೇವಸ್ಥಾನ ಟ್ರಸ್ಟ್ ಕಮೀಟಿ ಉಪಾಧ್ಯಕ್ಷರಾಗಿ ಸೇವೆಯಲ್ಲಿದ್ದರು. ಅವರ ಅಗಲಿಕೆಯಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ.

ಅವರ ಪುತ್ರರಾದ ರಾಮಲಿಂಗ ಕುಡಸೋಮಣ್ಣವರ ಉದ್ಯಮಿಯಾಗಿ, ಶಿವಾನಂದ ಕುಡಸೋಮಣ್ಣವರ ಶಿಕ್ಷಕರಾಗಿ, ತಾಲೂಕಾ ಸರಕಾರಿ ನೌಕರರ ಸಂಘದ ಅಧ್ಯಕ್ಷರಾಗಿ, ಬಾಬು ಕುಡಸೋಮಣ್ಣವರ ಮಾಜಿ ಪುರಸಭೆ ಅಧ್ಯಕ್ಷರು, ಹಾಲಿ ಸದಸ್ಯರಾಗಿ ತಂದೆಯ ಮಾರ್ಗದರ್ಶನದಲ್ಲಿ ನಾಡಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಕರ ಪಾತ್ರ ಮಹತ್ವದ್ದು

ಗೋಕಾಕ: ವಿದ್ಯಾರ್ಥಿಗಳ ಸಾಧನೆಯಲ್ಲಿ ಪಾಲಕರ ಹಾಗೂ ಶಿಕ್ಷಕರ ಮತ್ತು ಸಂಸ್ಥೆಯ ಪಾತ್ರ ಮಹತ್ವದಾಗಿದೆ ಎಂದು ಕೆಎಲ್‌ಇ ನಿರ್ದೇಶಕ ಜಯಾನಂದ ಮುನವಳ್ಳಿ ಹೇಳಿದರು. ಅವರು, ರವಿವಾರದಂದು ನಗರದ ಕೆಎಲ್‌ಇ ಸಂಸ್ಥೆಯ ಮಹಾದೇವಪ್ಪಣ್ಣ ಮುನವಳ್ಳಿ ಶಾಲಾ ಆವರಣದಲ್ಲಿ ಇಲ್ಲಿನ ಕೆಎಲ್‌ಇ ಸಿ.ಎಸ್.ಅಂಗಡಿ ಪಿ.ಯು ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳ ಸತ್ಕಾರ ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ಪಿ.ಯು.ಸಿ ಅತ್ಯಂತ ಮಹತ್ವದ ಘಟ್ಟವಾಗಿದ್ದು, ಗುರುಗಳ ಮಾರ್ಗದರ್ಶನದಲ್ಲಿ ಕಠಿಣ ಪರಿಶ್ರಮದಿಂದ ಅದನ್ನು ಸದುಪಯೋಗ ಪಡೆಸಿಕೊಳ್ಳಬೇಕು. ಜೀವನದಲ್ಲಿ ಸಾಧನೆ ಮಾಡಬೇಕು ಉನ್ನತ ಗುರಿಯೊಂದಿಗೆ ಪ್ರಯತ್ನ ಶೀಲರಾಗಿ ಉನ್ನತ ಹುದ್ದೆ ಅಲಂಕರಿಸಬೇಕು ಎಂದರು. ಇಂಡಿಯನ್ ರೆವ್ಹಿನ್ಯೂ ಸರ್ವಿಸ್ ಗೆ ಆಯ್ಕೆಯಾದ ನಗರದ ಎಸ್. ಎಸ್.ಕೌಜಲಗಿ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಪಿ.ಯು.ಸಿ.ಪರೀಕ್ಷೆಯಲ್ಲಿ ರಾಜ್ಯ ಮಟ್ಟದ ರ್‍ಯಾಂಕ್ ಪಡೆದ ಹಾಗೂ ಡಿಸ್ಟಿಂಕ್ಷನ್ ನಲ್ಲಿ ಪಾಸಾದ ವಿದ್ಯಾರ್ಥಿಗಳು ಹಾಗೂ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಹಾಗೂ ಸ್ವರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು. ಈ ಸಂದರ್ಭದಲ್ಲಿ ಕೆಎಲ್‌ಇ ಸ್ಥಳೀಯ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಎಂ.ಡಿ.ಚುನಮರಿ, ಸದಸ್ಯರಾದ ಓಂಪ್ರಕಾಶ್ ಅಂಗಡಿ ಪ್ರೋ.ಚಂದ್ರಶೇಖರ ಅಕ್ಕಿ, ಇತರು ಇದ್ದರು.

ಸಮಾಚಾರ ಸಣ್ಣದಲ್ಲ

ಜನಸಂಖ್ಯೆ ಸ್ಫೋಟದಿಂದ ಅಭಿವೃದ್ಧಿಗೆ ಮಾರಕ

ಸಿಂದಗಿ: ಕುಟುಂಬದಲ್ಲಿ ಜನಸಂಖ್ಯೆ ಮಿತಿಮೀರಿದರೆ ಆರ್ಥಿಕ ಅಭಿವೃದ್ಧಿಗೆ ಮಾರಕವಾಗುತ್ತದೆ. ಆದ್ದರಿಂದ ಕುಟುಂಬದ ಜನಸಂಖ್ಯೆ ಹಾಗೂ ಗ್ರಾಮ, ನಗರ ಹಾಗೂ ರಾಜ್ಯ, ದೇಶ ಜನಸಂಖ್ಯೆ ಮಿತಿಮೀರಿದರೆ ನಿರುದ್ಯೋಗ ವಸತಿ ಸೇರಿ ಅನೇಕ ಸಮಸ್ಯೆಗಳು ಹೆಚ್ಚಾಗತೊಡಗುತ್ತವೆ ಎಂದು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ನೂರಾನಿ ಮುಗಲಾಯಿ ಹೇಳಿದರು. ಸಿಂದಗಿ ಪಟ್ಟಣದ ತಾಲೂಕು ಆರೋಗ್ಯ ಕೇಂದ್ರದ ಸಭಾಭವನದಲ್ಲಿ ವಿಜಯಪುರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಪಂಚಾಯತ್ ಮತ್ತು ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ನಂತರ ತಾಲೂಕಾ ಆರೋಗ್ಯ ವೈದ್ಯಾಧಿಕಾರಿ ಡಾ.ಎ.ಎ.ಮಾಗಿ ಮಾತನಾಡಿದರು. ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಕುಲಕರ್ಣಿ ಪ್ರಾಸ್ತಾವಿಕ ಮಾತನಾಡಿದರು. ತಾಲೂಕಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ವೈ.ಚೌಡಕಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆ ಆಪ್ತ ಸಮಾಲೋಚಕಿ ಗೀತಾ ಸಾಸಾಬಾಳ, ಉಮೇಶ ಗಂಗರಗೊಂಡ, ಮಹಾಲಿಂಗ ಫಕಿರಪೂರ, ಸಿದ್ದು ಕಡಬಗಾವಿ, ಪ್ರಭುಜಂಗಿನ ಮಠ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಆರೋಗ್ಯ ನಿರ್ವಹಣಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ ಆಶಾ ಕಾರ್ಯಕರ್ತೆಯರು ಇದ್ದರು.

ಗಡೇದ ದುರ್ಗಾದೇವಿ ಭಾವಚಿತ್ರದ ಮೆರವಣಿಗೆ

ಕೆರೂರ: ಪಟ್ಟಣದ ಗೋಂಧಳಿ ಸಮಾಜದ ಆಶ್ರಯದಲ್ಲಿ ಮೂರು ವರ್ಷಗಳಿಗೆ ಒಮ್ಮೆ ಜರುಗುವ ಗಡೇದ ದುರ್ಗಾದೇವಿ ಜಾತೆಯ ನಿಮಿತ್ತ ಮಂಗಳವಾರ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು. ಬೆಳಿಗ್ಗೆ 9 ಗಂಟೆಗೆ ಗಡೇದ ದುರ್ಗಾದೇವಿ ಮಂದಿರದಿಂದ ಭಾವ ಚಿತ್ರದ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನ: ಮಂದಿರಕ್ಕೆ ಬಂದು ತಲುಪಿತು. ಮೆರವಣಿಗೆಯಲ್ಲಿ 150 ಸಮಾಜದ ಮಹಿಳೆಯರು ಕುಂಬ ಹೊತ್ತು ಶೋಭೆ ತಂದರು. ಕಳಸ ಹಾಗೂ ಆರತಿ ತಟ್ಟೆ ಹಿಡಿದ ಅನೇಕ ಮಹಿಳೆಯರು ದೇವಿಗೆ ಜೈಕಾರ ಹಾಕಿದರು. ಡೊಳ್ಳು ಕುಣಿತ.. ಗೊಂದಲಿಗ ತಂಡದ ಸಂಬಾಳ ವಾದನ... ಮೆರವಣಿಗೆಗೆ ಕಳೆ ಕಟ್ಟುವಂತೆ ಮಾಡಿತ್ತು. ಮೆರವಣಿಗೆಯಲ್ಲಿ ಸಮಾಜದ ಗುರು ಹಿರಿಯರು ಪರ ಊರುಗಳಿಂದ ಬಂದಿದ್ದ ಬಂಧು ಬಳಗ..ಯುವಕ ಮಿತ್ರರು ಹೀಗೆ ಸುಮಾರು ಸಾವಿರಕ್ಕೂ ಹೆಚ್ಚಿನ ಭಕ್ತರು ದೇವಿ ಜಾತ್ರೆಯಲ್ಲಿ ಪಾಲ್ಗೊಂಡು ಪುನಿತರಾದರು.

ಸುಳ್ಳು ಆರೋಪ: ಕ್ರಮಕ್ಕೆ ಮನವಿ

ಮುಧೋಳ: ಜಾತಗಾರ(ಬೇಪಾರಿ) ಸಮಾಜದ ಹಿರಿಯರ ಮೇಲೆ ಸುಳ್ಳು ಆರೋಪ ಹೊರಿಸಿ ಹಣ ವಸೂಲಿಗೆ ಬೇಡಿಕೆ ಇಟ್ಟು ಪೀಡಿಸುತ್ತಿರುವ ರಾಯಬಾಗ ತಾಲೂಕಿನ ಕುಡಚಿ ಗ್ರಾಮದ ನಿವಾಸಿ ಅಮೀನ ಇಮಾಮ ಜಾತಗಾರ ಈತನ ವಿರುದ್ಧ ಸೂಕ್ತ ತನಿಖೆ ಕೈಗೊಂಡು ಕಾನೂನು ಕ್ರಮ ಜರುಗಿಸಬೇಕು ಎಂದು ಮಾನವ ಹಕ್ಕುಗಳ ಆಯೋಗ ಬೆಂಗಳೂರು ಇವರಿಗೆ ಬರೆದ ಮನವಿ ಪತ್ರವನ್ನು ನಗರದ ಬೇಪಾರಿ ಸಮಾಜದ ಪ್ರಮುಖರು, ತಹಸೀಲ್ದಾರ ಮಹಾದೇವ ಸನಮುರಿಗೆ ಸಲ್ಲಿಸಿದರು. ವಕೀಲ ಯಲ್ಲಪ್ಪ ಹೆಗ್ಡೆ ಮಾತನಾಡಿ, ಈ ಸಮಾಜದವರು ಅನಕ್ಷರಸ್ಥರು, ಆರ್ಥಿಕವಾಗಿ ತೀರಾ ಹಿಂದುಳಿದವರು, ರೈತಾಪಿ ವರ್ಗದವರ ಜೊತೆ ಬೆರತು ದನಕರಗಳ ಮಾರಾಟ ಮಾಡಿಕೊಂಡು ಸಣ್ಣ ಉಳಿತಾಯದಲ್ಲೇ ಉಪಜೀವನ ನಡೆಸುತ್ತಿರುವ ಹೊರಜಗತ್ತು ಅರಿಯದೇ ತಮ್ಮಷ್ಟಕ್ಕೆ ತಾವಿರುವ ಅನಕ್ಷರಸ್ಥ, ಮುಗ್ಧರ ಮೇಲೆ ಬಾಲ್ಯ ವಿವಾಹದಂತಹ ವಿವಿಧ ಆರೋಪ ಹೊರಿಸಿ ಹಣ ವಸೂಲಿಗೆ ಇಳಿದಿರು ಇಮಾಮನ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗು ಸಮಾಜದವರ ಮೇಲಿನ ಇರುವ ದೂರನ್ನು ರದ್ದುಗೊಳಿಸಬೇಕು ಎಂದು ಅವರು ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು. ಮುಖಂಡರಾದ ಅಮೀನಸಾಬ ಇತರರಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ದೇವರಹಿಪ್ಪರಗಿ: ತಾಲೂಕಿನ ಇಂಗಳಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿ ರಾಮನಗೌಡ, ಉಪಾಧ್ಯಕ್ಷರಾಗಿ ಮಾಲಾಶ್ರೀ ಎರಡನೇ ಬಾರಿಗೆ ಅವಿರೋಧ ಆಯ್ಕೆಯಾದರು. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಗ್ರಾಮದ ಪ್ರಮುಖರು ಹಾಗೂ ಶಾಲಾ ಶಿಕ್ಷಕರು ಅಭಿನಂದಿಸಿದ್ದರು. ಗ್ರಾಮದ ಪ್ರಮುಖರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರನ್ನಾಗಿ ರಾಮನಗೌಡ ಪಾಟೀಲ ಹಾಗೂ ಉಪಾಧ್ಯಕ್ಷರಾಗಿ ಮಾಲಾಶ್ರೀ ಹರಿಜನ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಶಾಲೆಯ ಮುಖ್ಯ ಗುರುಗಳು ತಿಳಿಸಿದರು. ಇದೇ ಸಂದರ್ಭದಲ್ಲಿ ಪ್ರಮುಖ ಸದಸ್ಯರುಗಳಾದ ಮಾಳಪ್ಪ ಸೋಮಲಿಂಗಪ್ಪ ಪೂಜಾರಿ, ಯಮನವ್ವ ಮಂಜುನಾಥ ಕನ್ನೊಳ್ಳಿ, ಸುವರ್ಣ ಪೂಜಾರಿ ಉಪಸ್ಥಿತರಿದ್ದರು.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ರೈತರು ಮತ್ತು ಸಂಘಟನೆಗಳು ಜಮೀನು ಕೊಡಲು ಆಗುವುದಿಲ್ಲ. ಜಮೀನಿನಲ್ಲಿ ವ್ಯವಸಾಯ ಮಾಡಲಾಗುತ್ತಿದೆ. ಅದೇ ನಮ್ಮ ಮುಖ್ಯ ಕಸುಬು. ಅದೇ ಜೀವನಾಧಾರ. ವಿಮಾನ ನಿಲ್ದಾಣಕ್ಕೆ ಸಮೀಪ ಇರುವುದರಿಂದ ಹಾಗೂ ಗ್ರೀನ್ ಬೆಲ್ಟ್ ಆಗಿರುವುದರಿಂದ ಸ್ವಾಧೀನ ಬೇಡ.

ಸರಕಾರಿ ಕಾಲೇಜಿಗೆ ಕಂಪ್ಯೂಟರ್ ನೀಡುವ ಭರವಸೆ | ನಾರಾಯಣಸಾ ಬಾಂಡಗೆ ಹೇಳಿಕೆ

ಗುಣಮಟ್ಟದ ಶಿಕ್ಷಣ, ಉತ್ತಮ ನಾಯಕತ್ವದಿಂದ ಬೆಳವಣಿಗೆ ಸಾಧ್ಯ

ಬಾಗಲಕೋಟೆ: ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ನಾಯಕತ್ವದಿಂದ ಕಾಲೇಜು ಬೆಳವಣಿಗೆ ಸಾಧ್ಯವಾಗಿದ್ದು, ನವನಗರ ಸರಕಾರಿ ಪ್ರಥಮ ದರ್ಜೆ ಕಾಲೇಜು ರಾಜ್ಯದಲ್ಲಿಯೇ ಮಾದರಿಯಗಿದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ ಹೇಳಿದರು.

ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ, ವೀಕ್ಷಣೆ ಮಾಡಿ ಕಾಲೇಜಿನ ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರಿಂದ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಂದಾಜು 2,800 ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳಲ್ಲಿ ಓದುತ್ತಿರುವುದು ಸಂತಸ ತಂದಿದೆ. ಇಲ್ಲಿ ಪದವಿ ಓದುತ್ತಿರುವ ಎಲ್ಲ ವಿದ್ಯಾರ್ಥಿಗಳ ಶೈಕ್ಷಣಿಕ ಸೌಲಭ್ಯ ಪಡೆಯಲು ಪೂರಕವಾಗಿ ನಮ್ಮ ಅನುದಾನದಲ್ಲಿ ಸುಮಾರು 50 ಕಂಪ್ಯೂಟರ್‌ಗಳನ್ನು ನೀಡಲು ಭರವಸೆ ನೀಡಿದರು.

ನಾನು ಕಳೆದ ಒಂದೆರಡು ವಾರದಿಂದ ವಿವಿಧ ದಿನ ಪತ್ರಿಕೆಗಳಲ್ಲಿ ಮತ್ತು ಟಿ.ವಿ ಮಾಧ್ಯಮಗಳಲ್ಲಿ ನಮ್ಮ ನವನಗರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳ ಸಾಲುಗಟ್ಟಿ ನಿಂತಿರುವುದು ನೋಡಿದರೆ ಇಲ್ಲಿ ಉತ್ತಮ ಆಡಳಿತ, ಗುಣಮಟ್ಟದ ಬೋಧನೆ, ಓದಲು ಪ್ರಶಾಂತವಾಗಿರುವ ಗ್ರಂಥಾಲಯ, ಕ್ರೀಡಾ ವಿಭಾಗದ ಚಟುವಟಿಕೆಗಳು, ಎನ್.ಸಿ.ಸಿ, ಎನ್.ಎಸ್.ಎಸ್, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ಮತ್ತು ಬೋಧಕೇತರ ಸಿಬ್ಬಂದಿಯವರ ಪರಿಶ್ರಮ ಮೆಚ್ಚುವಂತದ್ದಾಗಿದೆ ಎಂದರು.

ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಮಾತನಾಡಿ, ರಾಜ್ಯಸಭಾ ಸದಸ್ಯರು ನಮ್ಮ ಕಾಲೇಜಿಗೆ ಭೇಟಿ ನೀಡಿದ್ದು ಸಂತಸವಾಗಿದೆ. ನಮ್ಮ ನವನಗರ ಸ.ಪ್ರ.ದ.ಕಾಲೇಜು ಬೆಳವಣಿಗೆಗೆ ಸಿಡಿಸಿ ಅಧ್ಯಕ್ಷರು, ಶಾಸಕ ಎಚ್.ವೈ.ಮೇಟಿ ಅವರು ಹಾಗೂ ಸದಸ್ಯರ ಸಹಾಯ, ಸಹಕಾರ ಮತ್ತು ನಮ್ಮ ಕಾಲೇಜಿನ ಎಲ್ಲಾ ಬೋಧಕರು, ಬೋಧಕೇತರ ಸಿಬ್ಬಂದಿಯವರ ನಿರಂತರ ಶ್ರಮದಿಂದ ನಮ್ಮ ಕಾಲೇಜು ಬೆಳವಣಿಗೆ ಹೊಂದಲು ಸಾಧ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ಕಾಲೇಜಿನ ಬೋಧಕರು, ಬೋಧಕೇತರರು ಉಪಸ್ಥಿತರಿದ್ದರು.

ಡಾ. ಅರುಣಕುಮಾರ ಗಾಳಿ ಅವರನ್ನು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸತ್ಕರಿಸಿದರು.

> **ಸರಕಾರಿ ಕಾಲೇಜಿನಲ್ಲಿ ಕಲಿಯುವ ಮಕ್ಕಳಿಗೆ ಉದ್ಯೋಗಾವಕಾಶ ಕಲ್ಪಿಸುವ ಕೆಲಸ ಶ್ಲಾಘನಿಯವಾಗಿದೆ. ಉತ್ತಮ ನಾಯಕತ್ವ ಹಾಗೂ ಇಚ್ಛಾಶಕ್ತಿ ಇದ್ದರೆ ಸರಕಾರಿ ಕಾಲೇಜುಗಳು ಎಷ್ಟು ಎತ್ತರಕ್ಕೆ ಬೆಳೆಬಹುದೆಂದು ಪಾಚಾರ್ಯ ಡಾ.ಅರುಣಕುಮಾರ ಗಾಳಿ ಅವರು ತೋರಿಸಿಕೊಟ್ಟಿದ್ದಾರೆ.**
> **-ನಾರಾಯಣಸಾ ಭಾಂಡಗೆ,** ರಾಜ್ಯಸಭಾ ಸದಸ್ಯ

ಗಾಯಗಳ ಕಲೆ: ಪ್ಲಾಸ್ಟಿಕ್ ಸರ್ಜರಿ ವರದಾನ

ವಿಶ್ವ ಪ್ಲಾಸ್ಟಿಕ್ ಸರ್ಜರಿ ದಿನಾಚರಣೆಯನ್ನು ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಉದ್ಘಾಟಿಸಿದರು.

ವಿಜಯಪುರ: ಗಾಯಗಳು, ದೋಷಗಳು, ಶಸ್ತ್ರ ಚಿಕಿತ್ಸೆಯಿಂದಾಗುವ ಕಲೆಗಳನ್ನು ಸರಿಪಡಿಸಲು ಮತ್ತು ವ್ಯಕ್ತಿಯ ಸೌಂದರ್ಯವನ್ನು ಹೆಚ್ಚಿಸಲು ಪ್ಲಾಸ್ಟಿಕ್ ಸರ್ಜರಿ ವರದಾನವಾಗಿದೆ ಎಂದು ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಹೇಳಿದ್ದಾರೆ.

ಇಂದು ಮಂಗಳವಾರ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ.ಬಿ.ಎಂ.ಪಾಟೀಲ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ನಡೆದ ವಿಶ್ವ ಪ್ಲಾಸ್ಟಿಕ್ ಸರ್ಜರಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಈ ಹಿಂದೆ ಮನುಷ್ಯನ ಮುಖಚರ್ಯೆ, ಅಂಗವೀಕಲತೆ ಸೇರಿದಂತೆ ನಾನಾ ವಿಕಲತೆಗಳನ್ನು ಸರಿಪಡಿಸುವುದು ಕಷ್ಟಸಾಧ್ಯವಾಗಿತ್ತು. ಆದರೆ ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಯಿಂದಾಗಿ ಪ್ಲಾಸ್ಟಿಕ್ ಸರ್ಜರಿ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಯಾಗಿದೆ. ಅಪಘಾತ, ಸುಟ್ಟಗಾಯ, ಶೀಳುತುಟಿ, ಜನ್ಮದೋಷ, ಅಂಗವೈಕಲ್ಯ, ಹೆಚ್ಚುವರಿ ಬೆರಳುಗಳನ್ನು ಸರಿಪಡಿಸುವುದು. ದೇಹ ಮತ್ತು ಮುಖದ ಆಕಾರವನ್ನು ಬದಲಿಸುವುದು, ಸುಕ್ಕುಗಳನ್ನು ಕಡಿಮೆ ಮಾಡಿ ಚರ್ಮದ ಕಾಂತಿ ಹೆಚ್ಚಿಸುವುದು ಈಗ ಸರಳವಾಗಿದೆ. ವಿಕಾರ ರೂಪವನ್ನು ಸುಂದರವಾಗಿ ಮಾರ್ಪಡಿಸಬಹುದಾಗಿದೆ. ಅಲ್ಲದೆ ಪ್ಲಾಸ್ಟಿಕ್ ಸರ್ಜರಿ ಈಗ ಅತೀ ವೇಗವಾಗಿ ಮುನ್ನುಗ್ಗುತ್ತಿದೆ ಎಂದು ಅವರು ಹೇಳಿದರು.

ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ ಮಾತನಾಡಿ ಶ್ರೀ.ಬಿ.ಎಂ.ಪಾಟೀಲ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ ಬಡವರ ಪಾಲಿಗೆ ಸಂಜೀವಿನಿಯಾಗಿದೆ. ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡುವ ಮೂಲಕ ಸಾರ್ವಜನಿಕರಿಗೆ ನೇರವಾಗುತ್ತಿದೆ. ಇಲ್ಲಿನ ತಜ್ಞವೈದ್ಯ ಡಾ. ವಿಜಯಕುಮಾರ ಹುಡೇದ ಕಳೆದ ಮೂರು ವರ್ಷಗಳಲ್ಲಿ 1555 ಕ್ಕೂ ಹೆಚ್ಚು ಪ್ಲಾಸ್ಟಿಕ್ ಸರ್ಜರಿಗಳನ್ನು ಮಾಡುವ ಮೂಲಕ ರೋಗಿಗಳ ಮುಖದಲ್ಲಿ ಮಂದಹಾಸ ಮೂಡಿಸಿದ್ದಾರೆ ಎಂದು ಹೇಳಿದರು.

ಪ್ಲಾಸ್ಟಿಕ್ ಸರ್ಜನ ಡಾ. ವಿಜಯಕುಮಾರ ಹುಡೇದ ಮಾತನಾಡಿ, ಪ್ಲಾಸ್ಟಿಕ್ ಸರ್ಜರಿ ದುಬಾರಿ ಎಂಬ ತಪ್ಪು ಗ್ರಹಿಕೆಯಿಂದ ಎಲ್ಲರೂ ಹೊರ ಬರಬೇಕಿದೆ. ಮಹಾನಗರಗಳಿಗೆ ಹೋಲಿಸಿದರೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ವೆಚ್ಚ ಕಡಿಮೆ ಇದೆ. ನಮ್ಮಲ್ಲಿ ಸರಾಸರಿ ಪ್ರತಿದಿನ ಎರಡರಂತೆ ಪ್ಲಾಸ್ಟಿಕ್ ಸರ್ಜರಿಗಳು ನಡೆಯುತ್ತಿವೆ. ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕ ಡಾ. ಮಂಜುನಾಥ ಕೋಟೆಣ್ಣವರ, ಪ್ಲಾಸ್ಟಿಕ್ ಸರ್ಜನ ಡಾ. ಅನಿಕೇತ ವಲ್ಲಭ, ಹೃದ್ರೋಗ ತಜ್ಞ ಡಾ. ಸಂಜೀವ ಸಜ್ಜನರ, ಮೂತ್ರಪಿಂಡ ವಿಭಾಗದ ಡಾ. ಸಂದೀಪ ಪಾಟೀಲ, ಆಸ್ಪತ್ರೆಯ ಸಹಆಡಳಿತಾಧಿಕಾರಿ ಶಾಂತೇಶ ಸಲಗರ ಮುಂತಾದವರು ಉಪಸ್ಥಿತರಿದ್ದರು.

ಶಿವಶರಣ ಹಡಪದ ಅಪ್ಪಣ್ಣ ಜಯಂತಿ | | ಸಚಿವ ಆರ್.ಬಿ.ತಿಮ್ಮಾಪುರ

ಶರಣರ ತತ್ವ, ಆದರ್ಶಗಳು ಇಂದು ಅತ್ಯವಶ್ಯ



ಬಾಗಲಕೋಟೆಯ ಡಾ. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಬಾಗಲಕೋಟೆ: ಶೋಷಣೆಗಳಿಗೆ ಒಳಗಾದ ಸಣ್ಣ ಸಣ್ಣ ಸಮುದಾಯಗಳನ್ನು ಒಗ್ಗೂಡಿಸಿ ಜಾತಿ, ಮತಗಳ ಬೇಧ ತೊರೆದು ಕ್ರಾಂತಿ ಮಾಡಿದ ಬಸವಾದಿ ಶರಣರ ತತ್ವ ಆದರ್ಶಗಳು ಇಂದು ಅವಶ್ಯವಾಗಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ನವನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಶಿವಶರಣ ಹಡಪದ ಅಪ್ಪಣ್ಣನವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮದಿಂದ ನಡೆಯದೇ ಧರ್ಮ ಧರ್ಮಗಳಲ್ಲಿ ಕದನ, ಮೇಲು, ಕೀಳು ಅಸ್ಪಶ್ಯತೆ ಹೋಗದೆ ಇದ್ದರೆ ಮುಂದೊಂದು ದಿನ ನಮ್ಮ ಮುಂದಿನ ಪೀಳಿಗೆ ಬೇರೆ ಬೇರ ಧರ್ಮವನ್ನು ಒಪ್ಪಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗುವುದಕ್ಕಿಂತ ಪೂರ್ವದಲ್ಲಿ ಮಠಾಧಿಪತಿಗಳು, ಬುದ್ಧಿಜೀವಿಗಳು, ಸಾಮಾಜಿಕ ಚಿಂತಕರು ಹಾಗೂ ರಾಜಕಾರಣಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂದರು.

ಶರಣರ ತತ್ವ ಆಚರಣೆಗೆ ಬದ್ಧರಾಗಬೇಕಿದ್ದು, ಅಷ್ಪಶ್ಯತೆ ಹೋಗಲಾಡಬೇಕಾಗಿದೆ. ಈ ನಿಟ್ಟಿನಲ್ಲಿ ಯುವ ಮಿತ್ರರು ತಯಾರಾಗಬೇಕು. ನಮ್ಮ ಹಕ್ಕನ್ನು ಪಡೆದುಕೊಳ್ಳಲು ಒಗ್ಗೂಡುವ ಅಗತ್ಯವಿದೆ ಎಂದರು. ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿ, ಹಡಪದ ಸಮುದಾ ಯದ ವ್ಯಕ್ತಿ ಬಿಹಾರ ರಾಜ್ಯದ ಮುಖ್ಯ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದಾರೆ. ಸಮುದಾಯದವರು ಅಭಿವೃದ್ಧಿ ಹೊಂದಬೇಕಾ ದರೆ ಮುಂದಿನ ಪೀಳಿಗೆ ಉನ್ನತ ಶಿಕ್ಷಣ ಪಡೆದುಕೊಂಡಾಗ ಮಾತ್ರ ಸಾಧ್ಯವಾಗುತ್ತದೆ. ಸಮಾಜದಲ್ಲಿ ಸಮತೋಲನ ಇಲ್ಲ. ಮಕ್ಕಳಿಗೆ ಶಿಕ್ಷಣ ನೀಡಿ ಅವರಲ್ಲಿ ಶರಣರ ಆದರ್ಶಗಳನ್ನು ತುಂಬುವ ಕೆಲಸವಾಗಬೇಕು ಎಂದರು. ಬೀಳಗಿ ಶಾಸಕ ಜೆ.ಟಿ.ಪಾಟೀಲ, ಡಾ.ಬಸವಲಿಂಗ ಸ್ವಾಮೀಜಿ ಮಾತನಾಡಿದರು.

> **ಹಡಪದ ಸಮಾಜದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ನಿತ್ಯ, ಸತ್ಯ ಕಾಯಕ ಅನುಸರಿಸಬೇಕು.**
> **-ಎಚ್.ವೈ.ಮೇಟಿ, ಬಾಗಲಕೋಟೆ ಶಾಸಕ**

ಅನುಭವ ಭಾರತಿ ಶ್ರೀಗಳು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ನಗರಸಭೆ ಅಧ್ಯಕ್ಷೆ ಸವಿತಾ ಲೆಂಕನ್ನವರ, ಜಿಲ್ಲಾಧಿಕಾರಿ ಸಂಗಪ್ಪ, ಜಿಪಂ ಸಿಇಒ ಶಶಿಧರ ಕುರೇರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಸೇರಿದಂತೆ ಸಮುದಾಯ ಮುಖಂಡರಾದ ಮಲ್ಲಣ್ಣ ಹಡಪದ, ಅಶೋಕ ನಾವಿ, ಲಕ್ಷ್ಮಣ ಹಡಪದ, ಎಚ್.ಪಿ.ವೈದ್ಯ ಸೇರಿದಂತೆ ಇತರರಿದ್ದರು. ಅದ್ದೂರಿ ಮೆರವಣಿಗೆ: ಪ್ರಾರಂಭದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆ ವಿವಿಧ ಜಾನಪದ ಕಲಾತಂಡಗೊಂದಿಗೆ ನಗರದ ನಾನಾ ಕಡೆ ಸಂಚರಿಸಿ ಡಾ.ಅಂಬೇಡ್ಕರ್ ಭವನಕ್ಕೆ ಮುಕ್ತಾಯಗೊಂಡಿತು.

ನಂದೀಶ್ವರ ಜಾತ್ರೆ: ಸಂಭ್ರಮದಿಂದ ಆಚರಣೆ



ಬಸವೇಶ್ವರ ಜಾತ್ರಾ ಉತ್ಸವ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ರವಿ ರಾಠೋಡ ಅವರನ್ನ ಊರಿನ ಗಣ್ಯರು ಸನ್ಮಾನಿಸಿದರು.

ಬಸವನಬಾಗೇವಾಡಿ: ಪ್ರತ್ಯೇಕ ಪ್ರಾಧಿಕಾರದ ಪ್ರಭಾರಿ ಆಯುಕ್ತರಾಗಿ ನಾನು ನೇಮಕವಾಗಿದ್ದು ಗ್ರಾಮದ ಪ್ರತಿಯೊಬ್ಬರು ಪ್ರಾಧಿಕಾರದೊಂದಿಗೆ ಸಹಕಾರ ನೀಡುವ ಮೂಲಕ ಪ್ರತಿವರ್ಷದಂತೆ ಈ ವರ್ಷವು ಜಾತ್ರೆಯನ್ನ ಸಡಗರ ಸಂಭ್ರಮದಿಂದ ಆಚರಿಸೋಣ ಎಂದು ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಪ್ರಭಾರಿ ಆಯುಕ್ತ ಗುರನಾಥ ದಡ್ಡೆ ಹೇಳಿದರು.

ಪಟ್ಟಣದ ಆರಾಧ್ಯ ದೈವ ಮೂಲ ನಂದೀಶ್ವರನ ದೇವಸ್ಥಾನದ ಆವರಣದಲ್ಲಿ ಶ್ರೀ ಬಸವೇಶ್ವರ ಸೇವಾ ಸಮಿತಿ ಸಹಯೋಗದಲ್ಲಿ ಬಸವೇಶ್ವರ ಜಾತ್ರಾ ಉತ್ಸವ ಸಮಿತಿ ಪದಾಧಿಕಾರಿಗಳ ಆಯ್ಕೆ ಸಮಾರಂಭದಲ್ಲಿ ಮಾತನಾಡಿದ ಅವರು ಪಟ್ಟಣದಲ್ಲಿ ಪ್ರತಿ ವರ್ಷ ನಂದೀಶ್ವರ ಜಾತ್ರೆಯೂ ವಿಶೇಷವಾಗಿ ಆಚರಣೆಯಾಗುತ್ತದೆ ಈ ಬಾರಿ ವಿಶೇಷವಾಗಿ ಬಸವನಬಾಗೇವಾಡಿ ಪ್ರತ್ಯೇಕ ಪ್ರಾಧಿಕಾರಕ್ಕೆ ನಾನು ಆಯುಕ್ತನಾಗಿ ನೇಮಕವಾಗಿದ್ದು ಬಸವೇಶ್ವರರ ಸೇವೆ ಮಾಡಲು ಉತ್ಸುಹಕನಾಗಿದ್ದೆನೆ ಎಂದರು.

ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿ ಪ್ರತಿವರ್ಷ ಜಾತ್ರೆ ವಿಜೃಂಭಣೆಯಿಂದ ಆಚರಣೆಯಾಗಬೇಕಾದರೆ ಗ್ರಾಮದ ಯುವಕರ ಹಿರಿಯರ ಸಹಕಾರ ಮುಖ್ಯವಾಗಿರುತ್ತದೆ, ಅಧ್ಯಕ್ಷ ಯಾರೇ ಆಗಲಿ ಎಲ್ಲರೂ ಒಟ್ಟಾಗಿ ಜಾತ್ರೆ ಮಾಡಬೇಕು. ಒಂದು ತಿಂಗಳ ಕಾಲ ಪ್ರವಚನ ಜರುಗಲಿದೆ. ಐದು ದಿನಗಳ ಕಾಲ ನಡೆಯುವ

ಜಾತ್ರೆಯಲ್ಲಿ ವಿವಿಧ ದಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಜಾತ್ರೆಗೆ ಭಕ್ತರು ನೀಡಿರುವ ದೇಣಿಗೆಯನ್ನ ಪಾರದರ್ಶಕವಾಗಿ ಲೆಕ್ಕ ಪತ್ರ ಮಾಡಲಾಗುತ್ತದೆ ಎಂದರು.

ಇನ್ನೂ ಇದೇ ವೇಳೆ ಬಸವೇಶ್ವರ ಜಾತ್ರಾ ಉತ್ಸವ ಸಮಿತಿಯ ಅಧ್ಯಕ್ಷರನ್ನಾಗಿ ರವಿ ಎಂ ರಾಠೋಡ, ಉಪಾಧ್ಯಕ್ಷರನ್ನಾಗಿ ರಮೇಶ ಮಸಬಿನಾಳ, ಲಾಲು ಕೊರಬು, ಸಿದ್ದರಾಮ ಪಾತರೊಟ್ಟಿ, ಮಹೇಶ ಹಿರೇಕುರಬರ, ಕಾರ್ಯದರ್ಶಿಯಾಗಿ ಮಂಜು ಜಾಲಗೇರಿ, ಖಜಾಂಚಿಯಾಗ ನಂದೀಶ ಪಾಟೀಲ ಅವರನ್ನ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ, ತಹಸೀಲ್ದಾರ ವೈ ಎಸ್ ಸೋಮನಕಟ್ಟಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಸವರಾಜ ಹಾರಿವಾಳ, ಬಸವ ಸೈನ್ಯ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ, ಪಂಚಮಸಾಲಿ ಸಮಾಜ ಅಧ್ಯಕ್ಷ ಬಸವರಾಜ ಗೊಳಸಂಗಿ, ಮುಖಂಡ ಸಂಗಮೇಶ ಓಲೇಕಾರ, ಶೇಖರ ಗೊಳಸಂಗಿ, ಉಮೇಶ ಹಾರಿವಾಳ ಸೇರಿದಂತೆ ಮುಂತಾದವರು ಇದ್ದರು.

ಒಗ್ಗಟ್ಟಿನಿಂದ ಸೌಲಭ್ಯಗಳ ಪಡೆಯಲು ಸಾಧ್ಯ



ಗುಳೇದಗುಡ್ಡ: ಪೆಂಡಾಲ್ ಕಾರ್ಮಿಕರು ಕೆಲಸದ ಸಮಯದಲ್ಲಿ ಮೃತಪಟ್ಟರೇ ಅವರಿಗೆ 1 ಲಕ್ಷ ವಿಮಾ ಸೌಲಭ್ಯವಿದೆ. ಈ ಸೌಲಭ್ಯ ಪಡೆಯಲು ಪ್ರತಿಯೊಬ್ಬರು ಸಂಘದ ಸದಸ್ಯತ್ವ ಹೊಂದಬೇಕು. ಸಂಘವು ಸಂಘಟನಾತ್ಮಕವಾದಾಗ ಮಾತ್ರ ಸರಕಾರದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುತ್ತದೆ ಎಂದು ಶಾಮಿಯಾನ ಡೆಕೋರೇಷನ್ ಧ್ವನಿ ಮತ್ತು ಬೆಳಕು ಕ್ಷೇಮಾಭೀವೃದ್ಧಿ ಸಂಘದ ರಾಷ್ಟ್ರ ಉಪಾಧ್ಯಕ್ಷ, ಹಾಗೂ ಮಾಜಿ ರಾಜ್ಯಾಧ್ಯಕ್ಷ ಶಿವಕುಮಾರ ಹಿರೇಮಠ ಹೇಳಿದರು.

ಅವರು ಇದೇ ಪ್ರಥಮ ಬಾರಿಗೆ ಪಟ್ಟಣದಲ್ಲಿ ರಾಜ್ಯ ಶಾಮಿಯಾನ ಡೆಕೋರೇಷನ್ ಧ್ವನಿ ಮತ್ತು ಬೆಳಕು ಕ್ಷೇಮಾಭೀವೃದ್ಧಿ ಸಂಘ ಹಾಗೂ ತಾಲೂಕು ಪೆಂಡಾಲ್ ಲೈಟಿಂಗ್, ಧ್ವನಿವರ್ಧಕ ಹಾಗೂ ಡೆಕೋರೇಷನ್ ಮಾಲೀಕರ ಕ್ಷೇಮಾಭೀವೃದ್ಧಿ ಸಂಘದ ಕರನಂದಿ ರಂಗಮಂದಿರದಲ್ಲಿ ತಾಲೂಕಿನ ಪೆಂಡಾಲ್ ಮಾಲೀಕರ ಸಮಾವೇಶದಲ್ಲಿ ಮಾತನಾಡಿದರು. ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಮುರುಘಾಮಠದ ಶ್ರೀಕಾಶೀನಾಥ ಸ್ವಾಮಿಗಳು ಸಾನಿಧ್ಯವಹಿಸಿದ್ದರು. ಸಂಘದ ತಾಲೂಕು ಅಧ್ಯಕ್ಷ ಶರಣಬಸು ಕರನಂದಿ ಅಧ್ಯಕ್ಷತೆ ವಹಿಸಿದ್ದರು. ಸಂಘದ ರಾಜ್ಯಾಧ್ಯಕ್ಷ ಅಬ್ದುಲ ಕರೀಮ್ ಅತ್ತಾರ, ಪ್ರಧಾನಕಾರ್ಯದರ್ಶಿ ಮೃತ್ಯುಂಜಯ ಕರನಂದಿ, ಖಜಾಂಚಿ ದಾವೂದ ಕನಸಾವಿ, ಸಂಘಟನಾ ಕಾರ್ಯದರ್ಶಿ ಜಿ.ಬಾಲಗುರುನಾದಮ್, ಜಿಲ್ಲಾಧ್ಯಕ್ಷ ಮಹಮ್ಮದ ಹಾಸಿಮ ಜಕ್ಕಲಿ, ಮಾಜಿ ಶಾಸಕ ರಾಜಶೇಖರ ಶೀಲವಂತ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಮಹಾಂತೇಶ ಮಮದಾಪೂರ, ಫಕೀರಪ್ಪ ತಳವಾರ, ಡಾ.ನಾಗರಾಜ ಕುರಿ, ಗೌರವಾಧ್ಯಕ್ಷ ಪ್ರಭು ತಟ್ಟಿಮಠ, ಜಿಲ್ಲಾ ಸಂಘದ ಸದಸ್ಯ ಶಿವಯ್ಯ ಹೊದ್ಲೂರಮಠ, ರಾಘವೇಂದ್ರ ಬಳಿಗೇರ, ಲಕ್ಷ್ಮಣ ಆರ್, ರಮೇಶ ಕಾಳಗಿ, ಮಲ್ಲು ಸಾರಂಗಿ, ಮಹಾಲಿಂಗಪ್ಪ ಕರನಂದಿ, ದೊಡಿರಪ್ಪ ಕಾಳಗಿ, ಲಕ್ಷ್ಮಣ ಗಾಡದ ಇದ್ದರು.

ಸಿದ್ಧಾರ್ಥ ಗೋಯಲ್ ನೂತನ ಎಸ್ಪಿ

ಬಾಗಲಕೋಟೆ: ಜಿಲ್ಲೆಯ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸಿದ್ಧಾರ್ಥ ಗೋಯಲ್ ಮಂಗಳವಾರ ಅಧಿಕಾರ ಸ್ವೀಕರಿಸಿದರು. ಕಳೆದ ಒಂದೂವರೆ ವರ್ಷಗಳಿಂದ ಎಸ್ಪಿ ಆಗಿದ್ದ ಅಮರನಾಥ ರೆಡ್ಡಿ ಅವರನ್ನು ಬೆಂಗಳೂರಿನ ಕರ್ನಾಟಕ ರಾಜ್ಯ ಮೀಸಲು ಪಡೆ ಬಟಾಲಿಯನ್-1ರ ಕಮಾಡೆಂಟ್ ಆಗಿ ಸರಕಾರ ವರ್ಗಾವಣೆ ಮಾಡಿದ್ದರಿಂದ ಮಂಗಳೂರಿನ ನಗರದ ಪೊಲೀಸ್ ಉಪ ಆಯುಕ್ತರಾಗಿದ್ದ ಸಿದ್ಧಾರ್ಥ ಗೋಯಲ್ ಅಧಿಕಾರ ಸ್ವೀಕರಿಸಿದ್ದಾರೆ.

ಸಮಾಜದ ಜನರಿಗೆ ದ್ರೋಹ ಮಾಡಲ್ಲ: ಬಸವಜಯ ಮೃತ್ಯುಂಜಯ ಶ್ರೀಗಳು



ಪಟ್ಟಣದ ಬಸವ ಮಂಟಪದಲ್ಲಿ ನಡೆದ ಸಭೆಯ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಹುನಗುಂದ: ಪಂಚಮಸಾಲಿ ಸಮಾಜಕ್ಕೆ ಕಳೆದ ಐದಾರು ವರ್ಷಗಳಿಂದ 2ಎ ಮೀಸಲಾತಿ ಸಲುವಾಗಿ ಮಾಡುತ್ತಿದ್ದ ಹೋರಾಟವನ್ನು ಹೊಸ ಸರಕಾರ ಬಂದ ಮೇಲೆ ಕೆಲವರು ಹೋರಾಟ ಕೈ ಬಿಡಿ. ನಾವು ಹೇಳಿದಂತೆ ಹೋರಾಟ ಮಾಡಿ ಎಂದರು. ಆದರೆ ನನ್ನದು ಪ್ರಾಮಾಣಿಕ ಹೋರಾಟ ಅವರಿಗೆ ತಕ್ಕಂತೆ ಹೋರಾಟ ಮಾಡಲು ಸಾಧ್ಯವಾಗಿಲ್ಲ. ಅವರಿಗೆ ಇರಿಸು ಮುರಿಸು ಆಗಿರಬಹುದು. ಆದರೆ ಗುರುಗಳನ್ನು ನಂಬಿ ಜನರು ಹೋರಾಟಕ್ಕೆ ಮುಂದಾಗಿದ್ದಾರೆ. ಸಮಾಜದ ಜನರಿಗೆ ದ್ರೋಹ ಮಾಡಲ್ಲ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಮಂಗಳವಾರ ತಾಲ್ಲೂಕಿನ ಕೂಡಲಸಂಗಮದ ಪಂಚಮಸಾಲಿ ಪೀಠಕ್ಕೆ ಬೀಗ ಹಾಕಿದ ವಿಷಯಕ್ಕೆ ಸಂಬಂಧಿಸಿದಂತೆ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಜಿಲ್ಲೆಗಳ ಮುಖಂಡರೊಂದಿಗೆ ಪಟ್ಟಣದ ಬಸವ ಮಂಟಪದಲ್ಲಿ ನಡೆದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು.2ಎ ಮೀಸಲಾತಿ ಹೋರಾಟ ಮುಂದುವರೆಯುತ್ತದೆ. ನಮ್ಮದು ಸುದೀರ್ಘವಾದ ಹೋರಾಟ,ಪಾದಯಾತ್ರೆ ಮೂಲಕ ಸರ್ಕಾರಗಳಿಗೆ ಒತ್ತಡ ಹಾಕಿದ್ದೇವೆ. ದಡ ಸೇರುವ (ಗುರಿ ಮುಟ್ಟುವ) ವರೆಗೂ ಹೋರಾಟ ನಿರಂತರ. ನನ್ನದು ಯಾವುದೇ ವ್ಯಕ್ತಿ ಪಕ್ಷ, ಪರವಾದ ಹೋರಾಟ ನಮ್ಮದಲ್ಲ. ಇದು ಜನರ ಪರ ಹೋರಾಟ ನಮ್ಮದು ಎಂದರು.

ಕೂಡಲಸಂಗಮದಲ್ಲಿ ಪಂಚಮಸಾಲಿ ಪೀಠ ಆರಂಭ ಆದಾಗಿನಿಂದ ಹೋರಾಟ ಆರಂಭವಾಗಿದೆ. ಮೀಸಲಾತಿ ಸಿಗುವವರೆಗೂ ಮಠಕ್ಕೆ ಹೋಗದಿರಲು ತೀರ್ಮಾನ ಮಾಡಲಾಗಿತ್ತು.ರಾಜಕೀಯವಾಗಿ ಬಸನಗೌಡ ಪಾಟೀಲ ಯತ್ನಾಳರನ್ನು ಪಕ್ಷದಿಂದ ಉಚ್ಚಾಟನೆಯಾದಾಗ ಅವರಿಗೆ ಅನ್ಯಾಯವಾದಾಗ ಅವರ ಪರವಾಗಿ ಹೋರಾಡಿದಾಗ ಕೆಲವರು ಇದಕ್ಕೆ ಒಬ್ಬ ವ್ಯಕ್ತಿ ಮತ್ತು ಪಕ್ಷ ಪರವಾಗಿ ಸ್ವಾಮಿಗಳು ಕೆಲಸ ಮಾಡುತ್ತಿದ್ದಾರೆಂದು ಅಪಸ್ವರ ಬಂದಿದೆ. ನಾನು ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಅನ್ಯಾಯವಾದಾಗ ಅವರ ಪರವಾಗಿ ನಿಂತು ಹೋರಾಟ ಮಾಡಿದ್ದೇನೆ. ಸತ್ಯ ಸಚಿವ, ಶಾಸಕರಿಗೂ ಅನ್ಯಾಯವಾದಗಲೂ ಬಂದು ಹೋರಾಟ ಮಾಡಿದ್ದೇನೆ ಅದನ್ನು ಮರಿಬಾರದು.

ಹೋರಾಟಕ್ಕೆ ಬೆಂಬಲವಾಗಿ ನಿಂತವರ ಪರವಾಗಿ ಹೋರಾಟ ಮಾಡಿದ್ದೇನೆ. ಏಪ್ರಿಲ್ 20 ರಂದು ಕೂಡಲಸಂಗಮದಲ್ಲಿ ಕಾರ್ಯಕಾರಣಿ ಏರ್ಪಡಿಸಲಾಗಿತ್ತು. ಸಮಾಜದ ಮುಖಂಡರಾದ ವಿನಯ ಕುಲಕರ್ಣಿ ಹಾಗೂ ಎ ಬಿ ಪಾಟೀಲರ ತೀರ್ಮಾನದಂತೆ ಸಭೆಯನ್ನು ರದ್ದು ಮಾಡಲಾಯಿತು ಎಂದರು.

ನಾನು ಕಟ್ಟಡ, ಆಸ್ತಿಗಾಗಿ ಆಸೆ ಪಟ್ಟವನಲ್ಲ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು 1 ಕೋಟಿ, ಸದಾನಂದಗೌಡರು 50 ಲಕ್ಷ ರೂದಲ್ಲಿ ಶ್ರೀಮಠವನ್ನು ಕಟ್ಟಿಕೊಂಡಿದ್ದೇನೆ. ನಾನು ಮಠಕ್ಕಿಂತ ಭಕ್ತರ ಮನಸ್ಸುನಲ್ಲಿಯೇ ಮಠ ಕಟ್ಟಿಕೊಂಡಿದ್ದೇನೆ, ಭಕ್ತರ ಮನೆಗಳು ನನ್ನ ಪೀಠ.ಎಲ್ಲಿ ಗುರುಗಳು ಇರುತ್ತಾರೆ ಅದೇ ಪೀಠ. ಕರ್ನಾಟಕದ ಎಲ್ಲ ಮಠ ಮತ್ತು ಭಕ್ತರಲ್ಲೂ ಭಿನ್ನಾಭಿಪ್ರಾಯ ಬರುತ್ತವೆ. ಇದು ಹೊಸತಲ್ಲ.ಸಂಘಟನೆ ಫಲ ಅಜ್ಞಾನದ ವ್ಯಕ್ತಿಗಳ ಪಾಲಾಗಬಾರದು. ಸಮಾಜಕ್ಕಾಗಿ ದುಡಿಯುವ ಕಟ್ಟ ಕಡೆಯ ವ್ಯಕ್ತಿಯ ಪರವಾಗಿ ಆಗಬೇಕು ಎಂದು ಹೇಳಿದರು.

ನಾಲ್ಕು ಗೋಡೆಗಳ ಮಠ ಕಟ್ಟಿದ್ದೇನೆ. ಭಕ್ತರ ಮನಸ್ಸುಗಳು ಪೀಠದ ಒಳಗೆ ಹೋಗುವುದನ್ನು ಯಾರಿಂದ ತಡೆಗಟ್ಟಲು ಸಾಧ್ಯವಿಲ್ಲ. ಕೂಡಲಸಂಗಮದಲ್ಲೇ ಹೋರಾಟ ಆರಂಭವಾಗಿದ್ದು, ಅಲ್ಲೇ ನನ್ನ ಉಳಿವು ಅಳಿವು. ಅಂತ್ಯವು ಅಲ್ಲೇ ಆಗಲಿ ಎಂದರು.

ನನ್ನ ಕಡೆಯಿಂದ ಸಣ್ಣ ಪುಟ್ಟ ತಪ್ಪುಗಳು ಆಗಿರಬಹುದು, ಟೀಕೆ ಟಿಪ್ಪಣಿಗಳನ್ನು ಸಮಾನಾಗಿಸ್ವಿಕರಿಸುತ್ತೇನೆ. ನಿಮ್ಮೆಲ್ಲರ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ. ಇಲ್ಲಿಯೇ ಸುಖಾಂತ್ಯ ಮಾಡಲು ಬಯಸಿದರೆ ಅದಕ್ಕೂ ನಾನು ಸಿದ್ಧ ಎಂದರು.

ನನ್ನ ಮತ್ತು ಶಾಸಕ ಕಾಶಪ್ಪನವರ ಸಂಬಂಧ ಗುರು ಶಿಷ್ಯರ ಸಂಬಂಧ ನಮ್ಮ ನಡುವೆ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳಿರಬಹುದು. ಅವುಗಳನ್ನು ಸರಿಪಡಿಸುವ ಕೆಲಸವನ್ನು ಕೂಡಲಸಂಗಮ ಭಕ್ತರಿಂದ ನಡೆಯುತ್ತಿದೆ

ಟ್ರಸ್ಟಿ ಎಲ್. ಎಂ ಪಾಟೀಲ, ಮುಖಂಡರಾದ ಶಂಕ್ರಪ್ಪ ನೇಗಲಿ, ಎಂ ಎಸ್ ಪಾಟೀಲ, ರುದ್ರಗೌಡ್ರು, ದರಿಯಪ್ಪ ಸಾಂಗ್ಲಿಕರ, ರಾಜಕುಮಾರ ಬಾದವಾಡಗಿ, ಸುಭಾಷ್ ತಾಳಿಕೋಟಿ ಇತರರು ಮಾತನಾಡಿದರು. ಬಸವರಾಜ ಕಡಪಟ್ಟಿ,,ಸಿದ್ದಪ್ಪ ನಾಡಗೌಡ, ಮಹಾಂತೇಶ ಕಡಪಟ್ಟಿ,ಮಹಾಂತೇಶ ಪರೂತಿ, ಅಜ್ಜಪ್ಪ ನಾಡಗೌಡರ ಹಾಗೂವಿಜಯಪುರ ಧಾರವಾಡ ಗದಗ ಬೆಳಗಾವಿ ಬಾಗಲಕೋಟೆ ಜಿಲ್ಲೆ ವಿವಿಧ ತಾಲ್ಲೂಕುಗಳ ಸಮಾಜದ ಮುಖಂಡರು ಇದ್ದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರಾ.ಪ್ರಾ

ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು – 560 052 ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/44/2025-26 ದಿನಾಂಕ: 09.07.2025

"ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ ವಿ. ಶ್ರೀನಿವಾಸ್ ಬಿನ್ ಹೆಚ್.ಎನ್. ವೆಂಕಟರಮಣಪ್ಪ	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	114/3 119/3 119/4 119/6 119/5	1–28 ಮತ್ತು 0–02 'ಎ' ಖರಾಬು 1–01 0–10 ಪೈಕಿ 0–01 1–00 ಪೈಕಿ 0–30 0–06	ವ್ಯವಸಾಯ	ವಸತಿ
ಶ್ರೀ ಕೃಷ್ಣಮೂರ್ತಿ ವಿ. ಬಿನ್ ವೆಂಕಟರಮಣಪ್ಪ ಹೆಚ್.ಎನ್.	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	119/1 119/2 121/4 121/5 121/7 121/12 121/13 121/15	1–22 0–37 0–30 0–18½ 0–18½ 0–18½ 0–06 0–05½	ವ್ಯವಸಾಯ	ವಸತಿ
ಶ್ರೀ ಹೆಚ್. ಎಂ. ಮುನಿರಾಜು ಬಿನ್ ಲೇಟ್ ಮುನಿಸಂಜೀವಪ್ಪ	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	119/8	0–01	ವ್ಯವಸಾಯ	ವಸತಿ
ಶ್ರೀಮತಿ ಉಷಾ ಬಿನ್ ಹೆಚ್. ಎಂ. ಮುನಿರಾಜು	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	119/8	0–02	ವ್ಯವಸಾಯ	ವಸತಿ
ಶ್ರೀಮತಿ ಸುಮ ಎಂ. ಬಿನ್ ಹೆಚ್. ಎಂ. ಮುನಿರಾಜು	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	119/8	0–02	ವ್ಯವಸಾಯ	ವಸತಿ
ಶ್ರೀಮತಿ ಮಾಲ ಎಂ. ಬಿನ್ ಹೆಚ್.ಎಂ. ಮುನಿರಾಜು	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	119/8	0–02	ವ್ಯವಸಾಯ	ವಸತಿ
ಶ್ರೀ ಹೆಚ್.ಎಂ. ವೆಂಕಟಪ್ಪ ಬಿನ್ ಲೇಟ್ ಮುನಿಸಂಜೀವಪ್ಪ	ದೊಡ್ಡಬಳ್ಳಾಪುರ	ಕಸಬಾ	ಶಿವಪುರ	119/7	0–10 ಪೈಕಿ 0–06	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ'** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

"ಸದಸ್ಯ ಕಾರ್ಯದರ್ಶಿರವರ ದಿನಾಂಕ: 17.03.2025ರ ಅಧಿಕೃತ ಜ್ಞಾಪನ ಪತ್ರದಲ್ಲಿ ಅಧಿಕಾರ ಪ್ರತ್ಯೋಜಿಸಿರುವಂತೆ ಸಹಿ ಮಾಡಿದೆ."

ಸಹಿ/–
ಸದಸ್ಯ ಕಾರ್ಯದರ್ಶಿಗಳ ಪರವಾಗಿ
ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR)
ಯೋಜನಾ ಪ್ರಾಧಿಕಾರ, ಬೆಂಗಳೂರು.

ಡಿಐಪಿಆರ್/ಸಿಪಿ/1840/ಸಿಸಿಎಲ್/2025–26

ಪುರಸಭಾ ಕಾರ್ಯಾಲಯ, ತಿ.ನರಸೀಪುರ ಮೈಸೂರು ಜಿಲ್ಲೆ.

Email : itstaff_ulb_tnarasipura@yahoo.comPhone: 08227-261232
Website: www.tnarasipuratown.gov.inFax : 08227-261232

ನಂ: ಪುಸ/ತಿನಪುರ/ಕಿಅ/ಟೆಂಡರ್ಎಸ್ಎಫ್ಸಿ&15ನೇ ಹ.ಯೋ/2025–26 ದಿನಾಂಕ: 14.07.2025

ಟೆಂಡರ್ ಪ್ರಕಟಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ2025–26ನೇ ಸಾಲಿನ ಎಸ್ಎಫ್ಸಿ ಅನುದಾನ, ಎಸ್.ಎಫ್.ಸಿ ಕುಡಿಯುವ ನೀರು ಅನುದಾನ ಮತ್ತು 15ನೇ ಹಣಕಾಸು ಅನುದಾನ ಮತ್ತು ವಿವಿಧ ಸಾಲುಗಳ 15ನೇ ಹಣಕಾಸು ಯೋಜನೆಗಳಲ್ಲಿ ಉಳಿಕೆಯಾಗಿರುವ ಮೊತ್ತಕ್ಕೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪೊಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ KW-1& KW-2 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರರು http://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜ್‌ನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1) ಟೆಂಡರ್ ಸಲ್ಲಿಸಲು ಕಡೆಯ ದಿ: 30.07.2025 ಸಂಜೆ 4.00 ಗಂಟೆವರೆಗೆ **2)** ಟೆಂಡರ್ ತೆರೆಯುವ ದಿ: 31.07.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ	ವಿವರ	ಟೆಂಡರ್ ಮೀಸಲಾತಿ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂಗಳಲ್ಲಿ)
1.	DMA/2025-26/OW/WORK_INDENT44254	ಸಾಮಾನ್ಯ	3.00	7500
2.	DMA/2025-26/OW/WORK_INDENT44256	Cat-II(A)	3.00	3750
3.	DMA/2025-26/OW/WORK_INDENT44257	SC	6.00	7500
4.	DMA/2025-26/RD/WORK_INDENT44258	ಸಾಮಾನ್ಯ	3.00	7500
5.	DMA/2025-26/RD/WORK_INDENT44259	Cat-II(A)	3.00	3750
6.	DMA/2025-26/OW/WORK_INDENT44260	ಸಾಮಾನ್ಯ	3.00	7500
7.	DMA/2025-26/OW/WORK_INDENT44261	ಸಾಮಾನ್ಯ	3.00	7500
8.	DMA/2025-26/OW/WORK_INDENT44262	Cat-I	5.00	6250
9.	DMA/2025-26/OW/WORK_INDENT44263	ಸಾಮಾನ್ಯ	4.00	10000
10.	DMA/2025-26/OW/WORK_INDENT44264	ಸಾಮಾನ್ಯ	6.00	15000
11.	DMA/2025-26/OW/WORK_INDENT44265	ಸಾಮಾನ್ಯ	3.00	7500
12.	DMA/2025-26/OW/WORK_INDENT44266	ಸಾಮಾನ್ಯ	9.00	22500
13.	DMA/2025-26/OW/WORK_INDENT44267	ST	3.00	3750
14.	DMA/2025-26/OW/WORK_INDENT44268	ಸಾಮಾನ್ಯ	6.00	15000
15.	DMA/2025-26/OW/WORK_INDENT44269	ST	5.00	6250
16.	DMA/2025-26/OW/WORK_INDENT44270	ಸಾಮಾನ್ಯ	3.00	7500
17.	DMA/2025-26/OW/WORK_INDENT44271	Cat-II(A)	20.00	25000
18.	DMA/2025-26/OW/WORK_INDENT44272	ಸಾಮಾನ್ಯ	20.00	50000
19.	DMA/2025-26/OW/WORK_INDENT44273	ST	16.40	20500
20.	DMA/2025-26/OW/WORK_INDENT44274	SC	1.85	2350
21.	DMA/2025-26/OW/WORK_INDENT44275	ಸಾಮಾನ್ಯ	1.34	3350
22.	DMA/2025-26/EL/WORK_INDENT44276	ಸಾಮಾನ್ಯ	1.34	3350
23.	DMA/2025-26/EL/WORK_INDENT44277	SC	1.34	1675
24.	DMA/2025-26/EL/WORK_INDENT44278	ಸಾಮಾನ್ಯ	1.34	3350
25.	DMA/2025-26/EL/WORK_INDENT44279	SC	1.36	1700
26.	DMA/2025-26/OW/WORK_INDENT44838	ಸಾಮಾನ್ಯ	3.00	7500
27.	DMA/2025-26/WS/WORK_INDENT44840	SC	6.00	7500
28.	DMA/2025-26/OW/WORK_INDENT44841	Cat-I	10.00	12500
29.	DMA/2025-26/EL/WORK_INDENT44842	SC	10.00	12500
30.	DMA/2025-26/WS/WORK_INDENT44843	Cat-II(A)	24.40	24400
31.	DMA/2025-26/OW/WORK_INDENT44844	ಸಾಮಾನ್ಯ	1.13	2813
32.	DMA/2025-26/OW/WORK_INDENT44845	ಸಾಮಾನ್ಯ	1.15	2875
33.	DMA/2025-26/WS/WORK_INDENT44846	ಸಾಮಾನ್ಯ	1.24	3100
34.	DMA/2025-26/WS/WORK_INDENT44847	Cat-II(A)	0.98	1250
35.	DMA/2025-26/EL/WORK_INDENT44848	ಸಾಮಾನ್ಯ	1.36	3400
36.	DMA/2025-26/OW/WORK_INDENT44849	ಸಾಮಾನ್ಯ	3.56	8900
37.	DMA/2023-24/OW/WORK_INDENT17043/ CALL-2	ಸಾಮಾನ್ಯ	88.66	177350
38.	DMA/2025-26/IND5055	-	1.34	3350
39.	DMA/2024-25/IND4301/CALL-2	-	60.00	120000

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು http://kppp.karnataka.gov.inಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.
2) GST will be added to the contract Amount

ಸಹಿ/– ಅಧ್ಯಕ್ಷರು, ಪುರಸಭೆ ತಿ.ನರಸೀಪುರ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ

DIPR/DDMYS/631/KSMCA/369/2025-26

ಸಾರ್ವಜನಿಕ ಆಸ್ಪತ್ರೆ, ಯಲಹಂಕ

ಬೆಂಗಳೂರು – 560064. ದೂರವಾಣಿ ಸಂಖ್ಯೆ: 080–28563885
ಇ–ಮೇಲ್: amoghyelahanka@gmail.com

ಸಂಖ್ಯೆ: ಸಾ.ಆ.ಯ/ಪಥ್ಯಹಾರ/ಟೆಂ/15/2025–26 ದಿನಾಂಕ: 14–07–2025

ಟೆಂಡರ್ ಪ್ರಕಟಣೆ (ಕೆಪಿಪಿ–ಪೋರ್ಟಲ್‌ನಲ್ಲಿ ಮಾತ್ರ)

ಯಲಹಂಕ, ಸಾರ್ವಜನಿಕ ಆಸ್ಪತ್ರೆಯಲ್ಲಿ 2025–26 ನೇ ಸಾಲಿನ ಒಳರೋಗಿಗಳಿಗೆ ಸಿದ್ಧ ಪಡಿಸಿದ ಪಥ್ಯಾಹಾರ ಮತ್ತು ಬ್ರೆಡ್, ಟೀ / ಕಾಫಿ, ಹಾಲು, ಮೊಟ್ಟೆ, ಬಾಳೆಹಣ್ಣು ಸರಬರಾಜು ಮಾಡಲು ಇ–ಸಂಗ್ರಹಣಾ ವೇದಿಕೆಯ ಮುಖಾಂತರ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ **31–03–2026 ರ ವರೆಗೆ** ಮಾತ್ರ ಇರುತ್ತದೆ. ಒಟ್ಟು ಟೆಂಡರ್‌ನ ಅಂದಾಜು ಮೌಲ್ಯ ಒಂದು ವರ್ಷಕ್ಕೆ ಸಿದ್ಧಪಡಿಸಿದ ಆಹಾರ (ಪಥ್ಯಾಹಾರ), ಬಾಳೆಹಣ್ಣು ಮತ್ತು ಹಾಲು, ಬ್ರೆಡ್, ಟೀ / ಕಾಫಿ, ಹಾಲು, ಮೊಟ್ಟೆ, ಬಾಳೆಹಣ್ಣು ಸರಬರಾಜಿಗೆ **ರೂ. 30,00,000/–** ನಿಗದಿಪಡಿಸಿದೆ.

ಟೆಂಡರ್‌ನ ದಿನಾಂಕಗಳ ವಿವರಗಳು ಈ ಕೆಳಗಿನಂತಿರುತ್ತವೆ:

1) Tender No.: **DHFWS/2025-26/SE/623, 2)** Tender Opening Date and Time, Commencement of downloading of E-Tender forms from Website: **https://kppp.karnataka.gov.in from 16-07-2025, 4.00 PM onwards. 3)** Last date for uploading of Tender Documents in e-Procurement Platform: **23-07-2025 upto 4.00 PM. 4)** EMD Amount for Supply of Cooked Food, Banana & Milk: **Rs. 85,000/- (2.5%). 5)** Date and Time for Opening of Tender: **26-07-2025 at 4.00 PM at Office of the Administration Medical Officer, General Hospital, Yelahanka.**

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಆಡಳಿತ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಯಲಹಂಕ, ಬೆಂಗಳೂರು.

ವಾಸಾಸಂಇ/ವಾ.ಪ್ರ/1833/ಅಡ್ವರ್ಟೋರ್/2025–26

ಕರ್ನಾಟಕ ಸರ್ಕಾರ

ನಗರಸಭಾ ಕಾರ್ಯಾಲಯ, ಮಡಿಕೇರಿ. ಕೊಡಗು ಜಿಲ್ಲೆ.

ದೂರವಾಣಿ: 08272–228323 ಫ್ಯಾಕ್ಸ್: 08272–223998
e-mail: itstaff ulb madikeril@vahoo.com
ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ – 571201

ಸಂ:ಮಬಸ/ತಾಂತ್ರಿಕ/ಜೆಇ.4/ಅಮೃತ್2.0/ಟೆಂಡರ್–08/2025–26 ದಿನಾಂಕ: 15.07.2025

ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಅಮೃತ್ 2.0 ಯೋಜನೆಯಡಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999 ಹಾಗೂ ನಿಯಮ 2000 ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ–1) ನಿಯಮಾವಳಿಯಂತೆ KPP ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPP ಪೋರ್ಟಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ. ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್‌ಲೋಡ್, ಅಪ್‌ಲೋಡ್, ಟೆಂಡರ್ ಪ್ರೋಸೆಸಿಂಗ್ ಮತ್ತು ಇ.ಎಂ.ಡಿ ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/–	ಸಹಿ/–	ಸಹಿ/–
(ಪಿ ಕಲಾವತಿ)	(ಮಹೇಶ್ ಜೈನಿ)	(ಹೆಚ್.ಆರ್ ರಮೇಶ್)
ಅಧ್ಯಕ್ಷರು,	ಉಪಾಧ್ಯಕ್ಷರು,	ಪೌರಾಯುಕ್ತರು,
ನಗರಸಭೆ, ಮಡಿಕೇರಿ	ನಗರಸಭೆ, ಮಡಿಕೇರಿ	ನಗರಸಭೆ, ಮಡಿಕೇರಿ

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.

ಇ–ಟೆಂಡರ್ ಪುಕಟಣೆ ಸಂಖ್ಯೆ: ಸಂಖ್ಯೆ: ಕಾಯೋಮೋಶಿ /ಎ2/ಮೋಜಣಿ/ಇ–ಟೆಂಡರ್/ಸಿಆರ್–15/2025–26 E–1815793 ದಿನಾಂಕ: 09.07.2025

ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಮರು ಇ–ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ಶಿವಮೊಗ್ಗ, ಭದ್ರಾವತಿ, ಶಿವಮೊಗ್ಗ ವನ್ಯಜೀವಿ ವಿಭಾಗ ಮತ್ತು ಕುದುರೆಮುಖ ವನ್ಯಜೀವಿ ವಿಭಾಗಗಳಲ್ಲಿನ ವಿವಿಧ ವಲಯಗಳ ಅಧಿಸೂಚಿತ ಅರಣ್ಯ ಪ್ರದೇಶಗಳ ಮರುಮೋಜಣಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ. 111.32 ಲಕ್ಷಗಳ ಒಟ್ಟು 04 ಕಾಮಗಾರಿಗಳಿಗೆ ಮರು ಇ–ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ: 25.07.2025 ರ ಸಂಜೆಯೊಳಗೆ as per KPPP-Portal ಮುಖಾಂತರ ಇ–ಟೆಂಡರನ್ನು ಸಲ್ಲಿಸಬಹುದಾಗಿದೆ. ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ಅಥವಾ ಖುದ್ದಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–(ವೀರೇಶಗೌಡ ಪೋಲಿಸ್ ಪಾಟೀಲ್)
ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳ
ತಾಂತ್ರಿಕ ಸಹಾಯಕರು, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25–26/97/07/589

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ಬ.ಬಾಗೇವಾಡಿ, ಜಿ:ವಿಜಯಪುರ.

ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ–ವಿಭಾಗ/ಡಿ.ಎಮ್/ವಿಶೇಷ ದುರಸ್ತಿ/2025–26/499 ದಿನಾಂಕ: 11.07.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ ಆಲಮಟ್ಟಿ ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ಶೇಕಡಾವಾರು ಟೆಂಡರನ್ನು ಕೆಪಿಡಬ್ಲ್ಯೂಡಿ ತೃತೀಯ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಂದ **ಮುಖ್ಯ ಸ್ಥಾವರ (ಹೆಡ್ ವರ್ಕ) ಮತ್ತು ಕಾಲುವೆಗಳ ವಿಶೇಷ ದುರಸ್ತಿ ಕಾಮಗಾರಿಗಳಿಗೆ** ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆ.ಟಿ.ಟಿ.ಪಿ ಕಾಯ್ದೆ ನಿಯಮ–28 ರನ್ವಯ **KW–1** ರಲ್ಲಿ **ಏಕ ಲಕೋಟೆ** ಪದ್ಧತಿಯನ್ನು ಅನುಸರಿಸಲಾಗುವದು. ಗುತ್ತಿಗೆದಾರರು ಭದ್ರತಾ ಠೇವಣಿ ಸಹಿತ ಏಕ ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಟೆಂಡರಗಿಟ್ಟ ಕಾಮಗಾರಿಗಳ ಒಟ್ಟು ಮೊತ್ತ **ರೂ. 106.58 ಲಕ್ಷಗಳು (ಕನಿಷ್ಟ ರೂ.3.37 ಲಕ್ಷ ಗರಿಷ್ಟ ರೂ.14.25 ಲಕ್ಷ)**

ಇಂಡೆಂಟ್ ಸಂಖ್ಯೆ:– **General – 2188, 2189, 2238, 2237, 2278, 2281, 2190, 2243, 2244, 2245 & 2211.**
CAT-I – 2187 & 2234.
CAT(IIA) – 2236 & 2304. SC-2242, 2241 & 2239.
ST-2186 & 2240.

ಟೆಂಡರ ಪ್ರಕ್ರಿಯೆಯ ವಿವಿಧ ಹಂತಗಳು:

1) ಟೆಂಡರ ಡಾಕುಮೆಂಟನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ **ದಿನಾಂಕ: 16.07.2025 ರಿಂದ 25.07.2025 ರ ಸಾಯಂಕಾಲ 5.00 ಘಂಟೆಯವರೆಗೆ.**

2) ಬಿಡ್‌ನ್ನು ತೆರೆಯುವ **ದಿನಾಂಕ: 28.07.2025 ಬೆಳಿಗ್ಗೆ 11.00 ಘಂಟೆಯ ನಂತರ.**

ಯಾವದೇ ಸಂದರ್ಭದಲ್ಲಾದರೂ, ಯಾವದೇ ಕಾರಣ ನೀಡದೇ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ಅವಧಿಯಲ್ಲಿ ಅಥವಾ https://kppp.karnataka.gov.in/#/portal/portal ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/181/ಕೆಎಸ್‌ಎಂಸಿಎ/2025–26

ಇಬ್ಬರು ಕೊಲೆ ಆರೋಪಿಗಳ ಕಾಲಿಗೆ ಗುಂಡೇಟು

ವಿಜಯಪುರ: ನಗರದಲ್ಲಿ ನಡೆದ ಕೊಲೆ ಪ್ರಕರಣದ ಇಬ್ಬರು ಆರೋಪಿಗಳ ಮೇಲೆ ಪೊಲೀಸರು ಮಂಗಳವಾರ ಗುಂಡಿನ ದಾಳಿ ಮಾಡಿ ಬಂಧಿಸಿದ್ದಾರೆ.

ಆರೋಪಿಗಳಾದ ಆಕಾಶ್ ಕಲ್ಲವ್ವಗೋಳ ಮತ್ತು ಸುದೀಪ್ ಅಲಿಯಾಸ್ ಸುಭಾಷ ಬಗಲಿ ಎಂಬುವವರೇ ಗುಂಡೇಟು ತಿಂದವರು. ಆಕಾಶ್ ವಿರುದ್ಧ ಈಗಾಗಲೇ ಏಳು ಕೇಸ್ ಗಳು ದಾಖಲಾಗಿದ್ದವು. ಇದೇ ಕೊಲೆ ಪ್ರಕರಣದ ಇನ್ನೂ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಪ್ರಕರಣದ ಹಿನ್ನೆಲೆ: ನಗರದ ಎಸ್.ಎಸ್.ಕಾಂಪ್ಲೆಕ್ಸ್‌ನಲ್ಲಿರುವ ಅಮರ ವರ್ಷಿಣಿ ಬ್ಯಾಂಕ್ ನ ಆವರಣದಲ್ಲಿ ಸೋಮವಾರ ಮಧ್ಯಾಹ್ನ ಸುಶೀಲ್ ಕುಮಾರ ಕಾಳೆ ಎಂಬಾತನ ಮೇಲೆ ದುಷ್ಕರ್ಮಿಗಳು ದಾಳಿ ಮಾಡಿದ್ದರು. ಮಾರಕಾಸ್ತ್ರ ಮತ್ತು ನಾಡ ಪಿಸ್ತೂಲ್ ನಿಂದ ದಾಳಿ ನಡೆಸಿ ಪರಾರಿಯಾಗಿದ್ದರು. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಸುಶೀಲ್ ಚಿಕಿತ್ಸೆಗೆ ಸ್ಪಂದಿಸದೇ ಸಾವಿಗೀಡಾಗಿದ್ದ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದ ಗಾಂಧಿ ಚೌಕ್ ಠಾಣೆ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದರು. ಮಂಗಳವಾರ ಬೆಳಗಿನ ಜಾವ ಆರೋಪಿಗಳು ನಗರ ಹೊರವಲಯದ ಇಟ್ಟಂಗಿಹಾಳ ಬಳಿ ಪರಾರಿಯಾಗಲು ಯತ್ನಿಸುವ ಮಾಹಿತಿ ತಿಳಿದು ಪೊಲೀಸರು ಬಂಧನಕ್ಕೆ ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ಆರೋಪಿಗಳು ತಮ್ಮ ಬಳಿಯಿದ್ದ ನಾಡ ಪಿಸ್ತೂಲ್ ಮೂಲಕ ಗುಂಡಿನ ದಾಳಿ ನಡೆಸಲು ಸಹ ಪ್ರಯತ್ನಿಸಿದ್ದಾರೆ. ಆಗ ಪೊಲೀಸರು ತಮ್ಮ ಆತ್ಮರಕ್ಷಣೆಗಾಗಿ ಆರೋಪಿಗಳ ಕಾಲಿಗೆ ಗುಂಡು ಹಾರಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಜಟಿಲ

← ಮೊದಲಪುಟದಿಂದ

ಈ ಎಲ್ಲ ವರದಿಗಳು ಕೇಂದ್ರದ ವರಿಷ್ಠರಿಗೆ ತಲುಪಿವೆ. ಇದನ್ನೆಲ್ಲ ಪರಿಗಣಿಸಿ ಒಂದು ನಿರ್ಧಾರಕ್ಕೆ ಬರಬೇಕಾಗಿದ್ದ ಕೇಂದ್ರ ಬಿಜೆಪಿ ಇನ್ನೂ ಮೀನಮೇಷ ಎಣಿಸುತ್ತಿರುವುದು ಕೂಡ ಬಿಎಸ್‌ವೈ ಪಾಳಯದಲ್ಲಿ ಹಲವು ಅನುಮಾನ ಹುಟ್ಟುಹಾಕಿದೆ.

ಬತ್ತಿದ ಉತ್ಸಾಹ: ಪ್ರತಿಪಕ್ಷವಾಗಿ ಈ ಹಿಂದೆಲ್ಲಾ ಸದ್ದು ಮಾಡಿದ್ದ ಬಿಜೆಪಿ ಇದೀಗ ಸೊರಗಿ ಹೋಗುತ್ತಿದೆ. ಪಕ್ಷದ ಕಾರ್ಯಕರ್ತರಲ್ಲೂ ಉತ್ಸಾಹ ಬತ್ತುತ್ತಿದೆ. ಪ್ರತಿಪಕ್ಷವಾಗಿ ಬಿಜೆಪಿ ಯಾವತ್ತೂ ಸಕ್ಸಸ್ ಎಂಬ ವಾತಾವರಣ ಇತ್ತು. ಆಡಳಿತ ಪಕ್ಷದ ವಿರುದ್ಧ ಹೋರಾಟ ರೂಪಿಸುವಲ್ಲಿ ಹಾಗೂ ತಂತ್ರಗಾರಿಕೆ ರೂಪಿಸುವಲ್ಲಿ ಬಿಜೆಪಿ ಪರಿಣಾಮಕಾರಿ ಎಂಬ ಅಭಿಪ್ರಾಯ ಇತ್ತು. ಆದರೆ ಅದು ಇದೀಗ ಇಲ್ಲವಾಗಿದೆ.

ಬಿಜೆಪಿ ಪ್ರತಿಪಕ್ಷವಾಗಿ ಸಂಪೂರ್ಣ ವಿಫಲವಾಗಿ ರಾಜ್ಯ ಸರಕಾರದ ವಿರುದ್ಧ ಹಲವು ಸಂದರ್ಭದಲ್ಲಿ ಹೋರಾಟ ನಡೆಸುವ ಅವಕಾಶ ಇದ್ದಾಗಲೂ ಕೈಚೆಲ್ಲಿ ಕುಳಿತುಕೊಂಡಂತಿದೆ. ಬಿಜೆಪಿ ಕಾರ್ಯಕರ್ತ (ಕೇಡರ್) ಆಧಾರಿತ ಪಕ್ಷ. ಪಕ್ಷದ ನಾಯಕತ್ವ ಕೊಟ್ಟ ಸೂಚನೆಯನ್ನು ಕೇಡರ್‌ಗಳು ತಳಮಟ್ಟದಲ್ಲಿ ಯಶಸ್ವಿಯಾಗಿ ಜಾರಿಗೊಳಿಸುತ್ತವೆ. ಆದರೆ ಇದೀಗ ಬಿಜೆಪಿ ಕಾರ್ಯಕರ್ತರಲ್ಲಿ ಉತ್ಸಾಹ ಬತ್ತಿದೆ. ಪಕ್ಷದಲ್ಲಿರುವ ಗೊಂದಲಗಳು ನಮ್ಮನ್ನು ಧೃತಿಗೆಡಿಸಿವೆ. ಪ್ರತಿಪಕ್ಷವಾಗಿ ನಾವು ವಿಫಲವಾಗುತ್ತಿದ್ದೇವೆ. ನಾಯಕರ ನಡುವಿನ ಕಚ್ಚಾಟದಲ್ಲಿ ಪಕ್ಷ ದುರ್ಬಲವಾಗುತ್ತಿದೆ. ಹೀಗೇ ಮುಂದುವರಿದರೆ ಭವಿಷ್ಯದಲ್ಲಿ ಮತ್ತಷ್ಟು ಹಿನ್ನಡೆ ಆಗುವುದು ಖಚಿತ ಎನ್ನುತ್ತಾರೆ ನೊಂದ ಕಾರ್ಯಕರ್ತರು. ಅಲ್ಲದೆ, ಬಿಜೆಪಿ ನಾಯಕರಲ್ಲೂ ಪಕ್ಷದಲ್ಲಿ ಕಾಣಿಸಿಕೊಳ್ಳುತ್ತಿರುವ ಗೊಂದಲಗಳು ನಿರಾಸಕ್ತಿ ಮೂಡಿಸಿದೆ ಎನ್ನುವುದು ಈಗ ಗುಟ್ಟಾಗಿ ಉಳಿದಿಲ್ಲ ಹಾಗೂ ಬಿಜೆಪಿಯ ರಾಜ್ಯ ಕಚೇರಿಯಲ್ಲೇ ಉತ್ಸಾಹ ಕಾಣದೆ ಪಕ್ಷದ ನಾಯಕರು ಕಚೇರಿಯ ಕಡೆಗೆ ಮುಖ ಮಾಡದೆ ಎಂದಿನ ಕಳೆ ಕಾಣದಂತಾಗಿದೆ.

..ಭಾರೀ ಮಳೆ

← ಮೊದಲಪುಟದಿಂದ

ನಂತರ ಎರಡು ದಿನ (ಜುಲೈ 19ರವರೆಗೆ) ಸಾಧಾರಣದಿಂದ ಭಾರೀ ಮಳೆ ಆಗಲಿದ್ದು, 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ನಂತರ ಮತ್ತೆ ಕರಾವಳಿಯಲ್ಲಿ ಮಳೆ ಚುರುಕಾಗಲಿದೆ.

ಒಳನಾಡು ಜಿಲ್ಲೆಗಳಿಗೂ ಭಾರೀ ಮಳೆ: ಕರ್ನಾಟಕದ ಒಳನಾಡು ಜಿಲ್ಲೆಗಳಾದ ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜುಲೈ 18 ಮತ್ತು 19 ರಂದು ವ್ಯಾಪಕ ಮಳೆ ಆಗಲಿದೆ. ಚಂಡಮಾರುತ ಪ್ರಸರಣದ ಅಬ್ಬರ ಈ ಜಿಲ್ಲೆಗಳ ಮೇಲೂ ಆಗಲಿದ್ದು, ಎರಡು ದಿನ ಭಾರೀ ಮಳೆ ಹಿನ್ನೆಲೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬೆಳಗಾವಿ ಜಿಲ್ಲೆಗೆ ಒಂದು ದಿನ ಮಾತ್ರ ಭಾರೀ ಮಳೆ ಬರಲಿದೆ.

ದೇಶದ ಪ್ರಧಾನಿಗಳನ್ನು ಪ್ರಶ್ನಿಸೋದೇ ತಪ್ಪಾ?: ಸಚಿವ ಸಂತೋಷ್ ಲಾಡ್

ಧಾರವಾಡ: ಬಿಜೆಪಿಯವರಿಗೆ ಕೇಂದ್ರ ಸರಕಾರದ ವಿರುದ್ಧ ಒಂದೇ ಒಂದು ಪ್ರಶ್ನೆ ಕೇಳಬಾರದು. ಇವರಿಗೆ ಕೇವಲ ರಾಜ್ಯದ ವಿಷಯ ಮಾತನಾಡಬೇಕು. ಇವರು ಮಾತ್ರ ಪ್ರಪಂಚದ ಯಾವುದೇ ವಿಷಯದ ಬಗ್ಗೆ, ಯಾರ ಬಗ್ಗೆ ಬೇಕಾದರೂ ಮಾತನಾಡಬಹುದೇ ಎಂದು ಸಚಿವ ಸಂತೋಷ್ ಲಾಡ್ ಅವರು ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ರಾಹುಲ್ ಗಾಂಧಿ, ಇಂದಿರಾ ಗಾಂಧಿ, ನೆಹರು ಬಗ್ಗೆ ಮಾತನಾಡಬಹುದು. ಪ್ರಪಂಚದ ಎಲ್ಲ ನಾಯಕರ ಬಗ್ಗೆ ಮಾತನಾಡಬಹುದು. ಆದರೆ ಕಾಂಗ್ರೆಸ್ ನವರು ಮಾತ್ರ ಅವರಿಗೆ ಏನೂ ಕೇಳಬಾರದು. ಮುಜುಗರ ಆಗುವ ಪ್ರಶ್ನೆ ಕೇಳಬಾರದು. ಕೇಳಿದರೆ ಸಂತೋಷ್ ಲಾಡ್ ಹಾಗೆ ಮಾತನಾಡುತ್ತಾನೆ. ಹೀಗೆ ಮಾತನಾಡುತ್ತಾನೆ ಎಂದು ಹೇಳ್ತಾರೆ ಎಂದು ಹೇಳಿದರು.

ಟ್ರಂಪ್ ಯಾರ ಫ್ರೆಂಡ್: ಭಾರತ–ಪಾಕ್ ನಡುವಿನ ಯುದ್ಧ ನಿಲ್ಲಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಳೆದ 40–50 ದಿನಗಳಲ್ಲಿ ಹಲವಾರು ಬಾರಿ ಹೇಳಿದ್ದಾರೆ. ಹಾಗಾದರೆ ಟ್ರಂಪ್ ಯಾರ ಫ್ರೆಂಡ್. ಟ್ರಂಪ್ ಹೇಳಿಕೆ ಬಗ್ಗೆ ಯಾವುದೇ ಸಚಿವರು, ಹೋಗಲಿ ಪ್ರಧಾನಿ ಇದಕ್ಕೆ ಉತ್ತರ ಕೊಡುತ್ತಿಲ್ಲ. ಇದನ್ನು ಪ್ರಶ್ನೆ ಮಾಡಿದ್ದೇವೆ. ತಪ್ಪೇನಿದೆ ಎಂದು ಸಮರ್ಥಿಸಿಕೊಂಡರು.

ಬಿಜೆಪಿಯಲ್ಲಿ ಇಂಗ್ಲಿಷ್ ಮಾತನಾಡುವವರು ಇಲ್ಲವೇ: ಪ್ರಧಾನಿ ಮೋದಿ ಅವರು ಈವರೆಗೆ 90 ದೇಶಕ್ಕೆ ಹೋಗಿದ್ದಾರೆ. ಶಶಿತರೂರ್ ಅವರು ಇವರಿಗೆ ಯಾಕೆ ಬೇಕು. ಇವರು ವಿಶ್ವಗುರು ಅಲ್ಲವೇ. ಬಿಜೆಪಿಯಲ್ಲಿ ಇಂಗ್ಲಿಷ್ ನಲ್ಲಿ ಸಮರ್ಥವಾಗಿ ಮಾತನಾಡುವವರು ಯಾರು ಇಲ್ಲವೇ. ಮೋದಿ ಅವರ ಕಾಲದಲ್ಲಿ ಭಾರತಕ್ಕೆ ವಿಶ್ವದ ಬೆಂಬಲದ ಕಡಿಮೆ ಆಗಿದೆ ಎಂದು ಹೇಳಿದರು.

ಶುಕ್ಲಾ ಶುಭಾಗಮನ

← ಮೊದಲಪುಟದಿಂದ

ಸ್ಪ್ಲಾಶ್ ಡೌನ್ ಮಾಡುವ ಮೊದಲು ಎರಡು ಪ್ಯಾರಾಚೂಟ್‌ಗಳು 2.55 ನಿಮಿಷಗಳ ಮೊದಲು ತೆರೆದವು, ನಂತರ ಸ್ಪ್ಲಾಶ್ ಡೌನ್ ಮಾಡುವ ಮೊದಲು 2.30 ನಿಮಿಷಗಳ ಮೊದಲು ನಾಲ್ಕು ಮುಖ್ಯ ಪ್ಯಾರಾಚೂಟ್‌ಗಳನ್ನು ತೆರೆಯಲಾಯಿತು. ಬಳಿಕ ಡಿಯಾಗೊ ಕರಾವಳಿಯಲ್ಲಿ ಈ ನೌಕೆ ಇಳಿಯಿತು. ಶನಾನ್ ಎಂಬ ಹಡಗಿನಲ್ಲಿ ನೌಕೆಯನ್ನು ಹೇರಿಕೊಂಡ ಸಿಬ್ಬಂದಿ, ಗಗನಯಾನಿಗಳನ್ನು ಸುರಕ್ಷಿತವಾಗಿ ಹೊರಕ್ಕೆ ಹೊರಬರಲು ನೆರವಾದರು. ಮೂರು ವಾರಗಳ ಕಾಲ ಬಾಹ್ಯಾಕಾಶದಲ್ಲಿದ್ದ ಈ ನಾಲ್ವರು ಭೂಮಿಯ ಗುರುತ್ವಾಕರ್ಷಣ ಶಕ್ತಿಗೆ ಹೊಂದಿಕೊಳ್ಳುವ ಯತ್ನದ ಭಾಗದಂತೆ ಸಣ್ಣ ಹೆಜ್ಜೆಗಳನ್ನಿಡುತ್ತಿದ್ದುದು ಕಂಡುಬಂತು.

288 ಬಾರಿ ಭೂಕಕ್ಷೆ ಸುತ್ತಿದ: ತಮ್ಮ ಕಾರ್ಯಾಚರಣೆರಲ್ಲಿ 12.2 ಮಿಲಿಯನ್ ಕಿಲೋ ಮೀಟರ್‌ಗಳನ್ನು ಕ್ರಮಿಸಿ ರುವ ಆಕ್ಸಿಯಮ್–4 ಸಿಬ್ಬಂದಿ, ಭೂಮಿಯ ಸುತ್ತ ಸುಮಾರು 433 ಗಂಟೆಗಳನ್ನು ಕಳೆದಿದ್ದಾರೆ. 18 ದಿನಗಳಲ್ಲಿ ಒಟ್ಟು 288 ಬಾರಿ ಭೂಕಕ್ಷೆ ಯನ್ನು ಸುತ್ತಿದ ನಂತರ, ಆಕ್ಸಿಯಮ್ ಮಿಷನ್ 4 ಸಿಬ್ಬಂದಿ ಅಧಿಕೃತವಾಗಿ ಮನೆಗೆ ಮರಳಿದ್ದಾರೆ.

...ಅಂತಿಮ ವಿದಾಯ

← ಮೊದಲಪುಟದಿಂದ

ಇದಕ್ಕೂ ಮುನ್ನ ಬಿಡದಿ, ರಾಮನಗರ ಹಾಗೂ ಚನ್ನಪಟ್ಟಣದ ದಾರಿ ಉದ್ದಕ್ಕೂ ಅಭಿಮಾನಿಗಳು ಅಂತಿಮ ನಮನ ಸಲ್ಲಿಸಿದರು.

ಚನ್ನಪಟ್ಟಣದ ಗಾಂಧಿ ಭವನದ ಬಳಿ ಕೆಲ ಹೊತ್ತು ಸಾರ್ವಜನಿಕ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಬಳಿಕ ಹುಟ್ಟೂರು ದಶವಾರ ಗ್ರಾಮಕ್ಕೆ ವಾಹನ ಸಂಚರಿಸಿತು. ದಶವಾರ ಗ್ರಾಮದ ಹೊರ ವಲಯದಲ್ಲಿರುವ ಸರೋಜಾದೇವಿ ಅವರ ಮೆಚ್ಚಿನ ತೋಟದಲ್ಲೇ ಸಂಪ್ರದಾಯಗಳ ಪ್ರಕಾರ ಅಂತಿಮ ವಿಧಿವಿಧಾನಗಳು ನೆರವೇರಿತು. ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಗೌರವ ವಂದನೆ ಸಲ್ಲಿಸಿದರು. ಡಿಸಿಎಂ ಡಿ.ಕೆ ಶಿವಕುಮಾರ್, ಸ್ಥಳೀಯ ಶಾಸಕ ಸಿ.ಪಿ.ಯೋಗೇಶ್ವರ್ ಸೇರಿದಂತೆ ಸ್ಥಳೀಯ ರಾಜಕೀಯ ಮುಖಂಡರು, ಸಂಬಂಧಿಕರು, ಚಲನಚಿತ್ರ ನಟರು, ನಿರ್ಮಾಪಕರು, ನಿರ್ದೇಶಕರು ಹಾಗೂ ಗ್ರಾಮಸ್ಥರು ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದರು.

ಕರ್ನಾಟಕ ಸರಕಾರ

ಕೆ.ಎಚ್. ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ದೂರವಾಣಿ / ಫ್ಯಾಕ್ಸ್ ಸಂಖ್ಯೆ :08372–297213, ಇ–ಮೇಲ್ : gimsgadag@gmail.com

ಸಂ. ಕೆಎಚ್‌ಪಿವೈವಿಸಂ/ಟೆಂಡರ್/P.S/2025–26 ದಿನಾಂಕ: 15.07.2025

ಇ–ಟೆಂಡರ್ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಗದಗ ಇಲ್ಲಿಗೆ Plasma Sterilizer ಉಪಕರಣ ಸರಬರಾಜಿಗಾಗಿ ಆಸಕ್ತಿಯುಳ್ಳ ತಯಾರಕರಿಂದ, ಅಧಿಕೃತ ಮಾರಾಟಗಾರರಿಂದ ಹಾಗೂ ಸಂಘ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು **ದಿನಾಂಕ: 16.07.2025** ರಿಂದ **ದಿನಾಂಕ: 05.08.2025ರ ಸಾಯಂಕಾಲ 4:00** ಗಂಟೆವರೆಗೆ ಇ–ಪೋರ್ಟಲ್ ಸಂಖ್ಯೆ: **DME/2025-26/IND1560 (https://kppp.karnataka.gov.in/)** ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಚೇರಿಗೆ ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ಕೆ.ಎಚ್.ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ವಾ.ಸಾ.ಇ/ಗದಗ/176/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಉತ್ತರ ಕನ್ನಡ ಜಿಲ್ಲೆ, ಜಿಲ್ಲಾಧಿಕಾರಿಗಳ ಕಛೇರಿ, ಕಾರವಾರ–581301.

Phone: 08382-226514/9480843047 ಇ–ಮೇಲ್: ddswo.karwar@gmail.com

ಸಂ/ಉನಿಸಕಇಕಾ/ಕವಶಿಸಸ/ಸಿರಿಧಾನ್ಯ/ಸಿಆರ್–03/2025–26 ದಿನಾಂಕ: 14.07.2025

ಇ–ಟೆಂಡರ್ ಪ್ರಕಟಣೆ

ಉತ್ತರಕನ್ನಡ ಜಿಲ್ಲೆಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KRIES) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 27 ವಸತಿ ಶಾಲೆಗಳಿಗೆ ಸಿರಿಧಾನ್ಯ ಆಧಾರಿತ ಆಹಾರ ಸಾಮಗ್ರಿಗಳ ಪೂರೈಕೆ ಮಾಡುವ ಬಗ್ಗೆ (ಅಂದಾಜು ಮೊತ್ತ ರೂ.1,62,90,720/–) ದಿನಾಂಕ: 14.07.2025 ರಂದು ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಕೊನೆಯ ದಿನಾಂಕ: 28.07.2025 ರ ಸಂಜೆ 4.00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಹಾಗೂ ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– (ವೈ.ಕೆ. ಉಮೇಶ)
ಉಪನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಉ.ಕ.ಕಾರವಾರ

DIPR/KWR/KSMCA/283/25-26 dt.15.07.25

ಪತಿಯನ್ನು ನದಿಗೆ ತಳ್ಳಿದ ಕೇಸ್: ವಿಚ್ಛೇದನಕ್ಕೆ ಮುಂದಾದ ದಂಪತಿ

ರಾಯಚೂರು: ಜಿಲ್ಲೆಯ ಕೃಷ್ಣಾ ನದಿಯ ಗುರ್ಜಾಪುರ ಬ್ಯಾರೇಜ್ ಬಳಿ ಫೋಟೊ ತೆಗೆಯುವ ನೆಪದಲ್ಲಿ ಪತಿಯನ್ನು ಪತ್ನಿ ನದಿಗೆ ತಳ್ಳಿದ ಆರೋಪ ಪ್ರಕರಣಕ್ಕೆ ಈಗ ಟ್ವಿಸ್ಟ್ ಸಿಕ್ಕಿದೆ. ಪತ್ನಿಯಿಂದ ವಿಚ್ಛೇದನ ಪಡೆಯಲು ಪತಿ ತಾತಪ್ಪ ಮುಂದಾಗಿದ್ದಾನೆ. ಪತ್ನಿ ಗದ್ದೆಮ್ಮ ಸಹ ಸ್ವಯಂ ವಿವಾಹ ವಿಚ್ಛೇದನ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿದ್ದಾಳೆ. ಕುಟುಂಬದ ಹಿರಿಯರ ಸಮ್ಮುಖದಲ್ಲಿ ಮಾತುಕತೆ ನಡೆಸಿ ಕುಟುಂಬಸ್ಥರು ಬಾಂಡ್ ಬರೆಯಿಸಿಕೊಂಡಿದ್ದಾರೆ. ಘಟನೆ ಬಳಿಕ ಇಬ್ಬರು ಒಟ್ಟಿಗೆ ಇರುವುದು ಬೇಡ ಅಂತ ನಿರ್ಧರಿಸಿದ್ದಾರೆ. ಮದುವೆಯಾಗಿ ಕೆಲವೇ ದಿನಕ್ಕೆ ಸಂಸಾರ ಕೆಟ್ಟಿದ್ದರೂ ನಮ್ಮ ತಮ್ಮ ಹೇಳಿಕೊಂಡಿರಲಿಲ್ಲ. ನದಿಗೆ ತಳ್ಳಿದ ಬಳಿಕ ಗಂಡನಿಗೆ ಚಪ್ಪಲಿ ತೋರಿಸಿದ್ದಾಳೆ. ಕೂಡಲೇ ತನ್ನ ಚಿಕ್ಕಮ್ಮಳಿಗೆ ಫೋನ್ ಮಾಡಿ ನದಿಗೆ ಬಿದ್ದಿದ್ದಾನೆ ಅಂತ ಹೇಳಿದ್ದಾಳೆ ಅಂತ ತಾತಪ್ಪನ ಸಹೋದರರು ಆರೋಪಿಸಿದ್ದಾರೆ. ನಾವು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲ್ಲಾ, ಕೋರ್ಟ್‌ನಲ್ಲಿ ವಿಚ್ಛೇದನ ಪಡೆಯುತ್ತೇವೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಚಾಕು ಇರಿತ: ಚಿಕಿತ್ಸೆ ಫಲಿಸದೆ ಸಾವು

ಹುಬ್ಬಳ್ಳಿ: ಕಳೆದ ವಾರ ಧಾರವಾಡದ ಕಂಠಿ ಗಲ್ಲಿಯಲ್ಲಿ ಹಾಡಹಗಲೇ ಚಾಕು ಇರಿತಕ್ಕೊಳಗಾಗಿ ಗಂಭೀರ ಗಾಯಗೊಂಡಿದ್ದ ರಾಘವೇಂದ್ರ ಗಾಯಕವಾಡ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಕೊನೆಯುಸಿರೆಳೆದಿದ್ದಾನೆ. ಮಲಿಕ್ ಎಂಬಾತ ರಾಘವೇಂದ್ರನಿಗೆ ಚಾಕುವಿನಿಂದ ಇರಿದಿದ್ದು ಗಂಭೀರ ಗಾಯಗೊಂಡ ಈತನಿಗೆ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಬಲವಾದ ಇರಿತವಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ರಾಘವೇಂದ್ರ ಮೃತಪಟ್ಟಿದ್ದಾನೆ ಎಂದು ಮೂಲಗಳು ತಿಳಿಸಿವೆ.

ನಾಡದೋಣಿ ಮಗುಚಿ 3 ಸಾವು



ಉಡುಪಿ: ನಾಡದೋಣಿ ಮಗುಚಿ ಮೂವರು ಮೀನುಗಾರರು ನೀರುಪಾಲಾಗಿರುವ ಘಟನೆ ಉಡುಪಿ ಜಿಲ್ಲೆ ಬೈಂದೂರು ತಾಲೂಕಿನ ಗಂಗೊಳ್ಳಿಯಲ್ಲಿ ನಡೆದಿದೆ. ಸುರೇಶ್ ಖಾರ್ವಿ (45), ರೋಹಿತ್ ಖಾರ್ವಿ (38), ಜಗ್ಗು ಯಾನೆ ಜಗದೀಶ್ ಖಾರ್ವಿ (36) ನೀರುಪಾಲಾದ ಮೀನುಗಾರರು. ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡ ಹಿನ್ನೆಲೆ ವಾಪಸ್ ಆಗುವಾಗ ದೋಣಿ ಮಗುಚಿದೆ. ದೋಣಿ ಮಗುಚಿದ ವೇಳೆ ಓರ್ವ ನೀರಿಗೆ ಬಿದ್ದಿದ್ದಾನೆ. ಆತನನ್ನು ರಕ್ಷಿಸಲು ಮುಂದಾದ ಇನ್ನಿಬ್ಬರು ಕೂಡ ನೀರುಪಾಲಾಗಿದ್ದಾರೆ. ಸದ್ಯ ನೀರುಪಾಲಾದ ಮೀನುಗಾರರಿಗೆ ಸಮುದ್ರದಲ್ಲಿ ಹುಡುಕಾಟ ನಡೆಸಲಾಗುತ್ತಿದೆ.

ವಿದ್ಯುತ್ ತಂತಿ ಸ್ಪರ್ಶಿಸಿ ರೈತ ಸಾವು

ಮೂಡಿಗೆರೆ: ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿ ರೈತರೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಊರುಬಗೆ ಗ್ರಾ.ಪಂ. ವ್ಯಾಪ್ತಿಯ ಬೈರಾಪುರ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಬೈರಾಪುರ ಗ್ರಾಮದ ನಾಗೇಶ್ ಗೌಡ (72) ಮೃತ ಕೃಷಿಕ. ನಾಗೇಶ್ ಅವರು ಮಂಗಳವಾರ ಮಧ್ಯಾಹ್ನ ತಮ್ಮ ಜಾನುವಾರುಗಳನ್ನು ಮೇಯಿಸಲು ತೆರಳಿದ್ದ ವೇಳೆ ಬೈರಾಪುರ ಸರಕಾರಿ ಶಾಲೆಯ ಸಮೀಪ ವಿದ್ಯುತ್ ಸ್ಪರ್ಶಿಸಿ ಸಾವನ್ನಪ್ಪಿದ್ದಾರೆ. 11 ಕೆಂ.ವಿ. ವಿದ್ಯುತ್ ಪವರ್ ಲೈನ್ ಕಂಬದ ಬಳಿ ವಿದ್ಯುತ್ ಗ್ರೌಂಡ್ ಆಗಿದ್ದು ಘಟನೆಗೆ ಕಾರಣ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. ಆ ಸ್ಥಳದಲ್ಲಿ ಜಾನುವಾರುಗಳನ್ನು ಮೇಯಿಸಲು ಹೋದಾಗ ನಾಗೇಶ್ ಅವರಿಗೆ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಸಾವನಪ್ಪಿದ್ದಾರೆ ಎಂದು ತಿಳಿದು ಬಂದಿದೆ.

ಬಾಂಬ್ ಬೆದರಿಕೆ ಆರೋಪಿ ಪತ್ತೆ



ಭಟ್ಕಳ: ನಗರ ಠಾಣೆಗೆ ಬಾಂಬ್ ಬೆದರಿಕೆ ಇ ಮೇಲ್ ಸಂದೇಶ ಕಳುಹಿಸಿದ್ದ ವ್ಯಕ್ತಿಗಳನ್ನು ಕೊನೆಗೂ ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಮುಖ ಆರೋಪಿಯನ್ನು ನಿತೀನ್ ಶರ್ಮಾ ಅಲಿಯಾಸ್ ಖಾಲಿದ್ ಎಂದು ಗುರುತಿಸಲಾಗಿದ್ದು, ಇನ್ನೋರ್ವ ಕಣ್ಣನ್ ಗುರುಸ್ವಾಮಿಯನ್ನು ಕೂಡ ವಶಕ್ಕೆ ಪಡೆಯಲಾಗಿದೆ. ಮೈಸೂರಿನ ಕೇಂದ್ರ ಕಾರಾಗೃಹದಲ್ಲಿರುವ ಆರೋಪಿ ಖಾಲಿದ್‌ನನ್ನು ಬಾಡಿ ವಾರಂಟ್ ಪಡೆದು ಹೆಚ್ಚಿನ ವಿಚಾರಣೆ ನಡೆಸಲು ಪೊಲೀಸರು ಮುಂದಾಗಿದ್ದಾರೆ. ವಿಶೇಷ ತನಿಖಾ ತಂಡ ಮೊದಲು ತಮಿಳುನಾಡಿಗೆ ತೆರಳಿ ಕಣ್ಣನ್ ಗುರುಸ್ವಾಮಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಈತನ ಮೊಬೈಲ್‌ನಿಂದಲೇ ಆರೋಪಿ ನಿತೀನ್ ಶರ್ಮಾ ಅಲಿಯಾಸ್ ಖಾಲಿದ್ ಇಮೇಲ್ ಸಂದೇಶ ಕಳುಹಿಸಿದ್ದಾನೆ. ಗುರುಸ್ವಾಮಿ ಯಿಂದ ಮನೆಗೆ ಕರೆ ಮಾಡಬೇಕು ಎಂದು ಹೇಳಿ ಮೊಬೈಲ್ ಪಡೆದು ಈ ರೀತಿಯ ಕೃತ್ಯ ಎಸಗಿದ್ದಾನೆ.

ಪೊಲೀಸರ ಮೇಲೆ ಹಲ್ಲೆಗೆ ಯತ್ನ: ಗುಂಡು

ಕಾರವಾರ: ಜಾತಿ ನಿಂದನೆ ಪ್ರಕರಣ ಎದುರಿಸುತ್ತಿರುವ ಆರೋಪಿಯ ಬಂಧನಕ್ಕೆ ತೆರಳಿದ ಪೊಲೀಸರ ಮೇಲೆ ಆರೋಪಿ ಪ್ರವೀಣ ಮನೋಹರ ಸುಧೀರ (37) ಹಲ್ಲೆಗೆ ಯತ್ನಿಸಿದ ಹಿನ್ನೆಲೆಯಲ್ಲಿ ಆತನ ಕಾಲಿಗೆ ಗುಂಡೇಟು ನೀಡಿ ಬಂಧಿಸಿದ ಘಟನೆ ಯಲ್ಲಾಪುರ ತಾಲೂಕಿನ ಕಣ್ಣಿಗೇರಿ ಸಮೀಪದ ಅರಣ್ಯ ಪ್ರದೇಶದಲ್ಲಿ ನಡೆದಿದೆ. ಜೊಯಿಡಾ ತಾಲೂಕು ರಾಮನಗರ ಪೊಲೀಸ್ ಠಾಣೆಯಲ್ಲಿ ಸುಧೀರ ವಿರುದ್ಧ ಮಾ.31 ರಂದು ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ, ಜಾತಿ ನಿಂದನೆ ಮಾಡಿದ್ದ ಪ್ರಕರಣ ದಾಖಲಾಗಿತ್ತು. ಪರಾರಿಯಾಗಿದ್ದ ಆರೋಪಿಯು ಕಣ್ಣಿಗೇರಿ ಅರಣ್ಯ ಪ್ರದೇಶದಲ್ಲಿ ಆರೋಪಿ ಅಡಗಿರುವ ಮಾಹಿತಿ ಆಧರಿಸಿ ಪೊಲೀಸರು ದಾಳಿ ಮಾಡಿದ್ದರು.

ವಿಶ್ವವಾಣಿ ಕ್ಲಬ್ ಹೌಸ್
16.07.2025
ಬುಧವಾರದ ಅತಿಥಿ

ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು 13
vishwavani.news

ಐಐಎಸ್‌ಸಿ – ಅರಣ್ಯ ಇಲಾಖೆ ಒಡಂಬಡಿಕೆಗೆ ಸಹಿ: ಅರಣ್ಯ ಸಚಿವ ಈಶ್ವರ ಖಂಡ್ರೆ

ಮಾನವ-ಆನೆ ಸಂಘರ್ಷ ನಿಯಂತ್ರಣಕ್ಕೆ ಆನೆಪಥ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಮತ್ತು ಕಾಡಿನಂಚಿನ ರೈತರ ಬೆಳೆ ರಕ್ಷಿಸುವ ನಿಟ್ಟಿನಲ್ಲಿ ಆನೆ ಪಥ (ಕಾರಿಡಾರ್), ಆವಾಸಸ್ಥಾನ ರಕ್ಷಣೆಗೆ ಆಧುನಿಕ ತಂತ್ರಜ್ಞಾನ ಬಳಸಲು ತೀರ್ಮಾನಿಸಲಾಗಿದ್ದು, ಐಐಎಸ್‌ಸಿ ಯೊಂದಿಗೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ ಎಂದು ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಐಐಎಸ್‌ಸಿ ಯ ಪ್ರೊ.ರಮನ್ ಸುಕುಮಾರ್ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಪಿ.ಸಿ.ರೇ ಸಹಿ ಹಾಕಿ ಒಡಂಬಡಿಕೆ ವಿನಿಮಯ ಮಾಡಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿ, ಹಾಸನ, ಕೊಡಗು ಭಾಗದಲ್ಲಿ ಹೆಚ್ಚಾಗಿ ಆನೆ-ಮಾನವ ಸಂಘರ್ಷವಿದ್ದು, ಜೀವಹಾನಿ, ಬೆಳೆ ಹಾನಿ ಸಂಭವಿಸುತ್ತಿದೆ ಇದರ ನಿಯಂತ್ರಣಕ್ಕೆ ಎಲ್ಲ ಸಾಧ್ಯ ಕ್ರಮಗಳನ್ನು ಇಲಾಖೆ ಕೈಗೊಳ್ಳುತ್ತಿದೆ ಎಂದರು.

ಪ್ರಸ್ತುತ ಮಾನವ-ಆನೆ ಸಂಘರ್ಷ ಇತರ ಪ್ರದೇಶಕ್ಕೂ ವಿಸ್ತರಿಸುತ್ತಿದ್ದು, ಪರಿಸರ ಸಂಶೋಧನೆ ಮತ್ತು ಕ್ಷೇತ್ರ ಅನುಷ್ಠಾನ ಸಮನ್ವಯಗೊಳಿಸುವ ಮೂಲಕ, ಆನೆಪಥ, ಆವಾಸಸ್ಥಾನಗಳ ಸಂರಕ್ಷಣೆಗೆ ಈ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಏಷ್ಯನ್ ಆನೆಗಳ ಭೂಪ್ರದೇಶ ನಿರ್ವಹಣೆಗಾಗಿ ಐದು ವರ್ಷಗಳ ಸಹಯೋಗದ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಸ್ಯಾಟಲೈಟ್ ಟೆಲಿಮೆಟ್ರಿ, ಕ್ಯಾಮೆರಾ ಟ್ರಾಪ್‌ಗಳು ಮತ್ತು ಜಿಐಎಸ್ ಮಾದರಿಗಳನ್ನು ಬಳಸಿಕೊಂಡು ಆನೆ ಕಾರಿಡಾರ್‌ಗಳನ್ನು ಗುರುತಿಸುವುದು ಮತ್ತು ಆನೆಗಳ ಸುಗಮ ಸಂಚಾರಕ್ಕೆ ಎದುರಾಗಿರುವ ಅಡೆತಡೆಗಳನ್ನು ಗುರುತಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಆನೆ ಲದ್ದಿಯಲ್ಲಿರುವ ಹಾರ್ಮೋನ್ ಗಳ ಪರೀಕ್ಷೆ ನಡೆಸುವ ಮೂಲಕ ಆನೆಗಳ ದೇಹದ ಸ್ಥಿತಿ ಮತ್ತು ಒತ್ತಡ ಸೂಚಕಗಳನ್ನು ಅಂದಾಜು ಮಾಡಲಾಗುತ್ತದೆ. ಅದೇ ರೀತಿ ಬೆಳೆ ನಾಶದ ಮಾದರಿಗಳ ಅಧ್ಯಯನ, ಸಂಘರ್ಷದ ಹಾದಿ ತುಳಿದ ಆನೆಗಳ ಅಧ್ಯಯನ – ವಿಶ್ಲೇಷಣೆ ಮಾಡಿ ರೈತರಿಗೆ ಅರಿವು ಮೂಡಿಸುವುದೂ ಈ ಯೋಜನೆಯ ಭಾಗವಾಗಿದೆ ಎಂದರು.

ವಿಕಾಸಸೌಧದ ಸಚಿವ ಈಶ್ವರ್ ಖಂಡ್ರೆ ಅವರ ಕಚೇರಿಯಲ್ಲಿ ಐಐಎಸ್‌ಸಿ ಯ ಪ್ರೊ.ರಮನ್ ಸುಕುಮಾರ್ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಪಿ.ಸಿ.ರೇ ಸಹಿ ಹಾಕಿ ಒಡಂಬಡಿಕೆ ವಿನಿಮಯ ಮಾಡಿಕೊಂಡರು.

> **ಕರ್ನಾಟಕ ಸೇರಿದಂತೆ ದೇಶಾದ್ಯಂತ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದ್ದು, ನಾವು ಕಾರಣಗಳನ್ನು ತಿಳಿಯುವುದು ಇಂದಿನ ಅಗತ್ಯ. ಈ ನಿಟ್ಟಿನಲ್ಲಿ ಈ ಒಡಂಬಡಿಕೆ ಮಹತ್ವಪೂರ್ಣ. ಈ ಅಧ್ಯಯನದಿಂದ ಅಥವಾ ಯೋಜನೆಯ ಅನುಷ್ಠಾನದಿಂದ ಸಂಪೂರ್ಣವಾಗಿ ಮಾನವ-ಆನೆ ಸಂಘರ್ಷ ನಿರ್ಮೂಲನೆ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ಪರಿಣಾಮಕಾರಿಯಾಗಿ ಸಂಘರ್ಷ ತಗ್ಗಿಸಬಹುದಾಗಿದೆ.**
> **ಪ್ರೊ.ರಮನ್ ಸುಕುಮಾರ್,** ಐಐಎಸ್‌ಸಿ

ಯೋಜನೆಯ ಅವಧಿ:

2025-2029 (5 ವರ್ಷ)

ಆರ್ಥಿಕ ವೆಚ್ಚ: 4.74 ಕೋಟಿ ರು. (ಕರ್ನಾಟಕ ಅರಣ್ಯ ಇಲಾಖೆಯ ನೆರವು)
ಮೌಲ್ಯಮಾಪನ: ವರ್ಷಕ್ಕೆ ಎರಡು ಬಾರಿ ಪರಿಶೀಲನಾ ಸಭೆಗಳು, ವಾರ್ಷಿಕ ವರದಿಗಳು, ಮತ್ತು ಸಕಾಲಿಕ ದತ್ತಾಂಶದ ಡ್ಯಾಶ್ ಬೋರ್ಡ್ ನಿರ್ವಹಣೆ.

ಹಳೆ ಮೈಸೂರು ಭಾಗದಲ್ಲಿ ಹೆಚ್ಚಿನ ಅಧ್ಯಯನ

ಮೈಸೂರು ಆನೆ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಪ್ರಮುಖ ಅರಣ್ಯ ವಿಭಾಗಗಳು ಹಾಗೂ ಸಂರಕ್ಷಿತ ಪ್ರದೇಶಗಳು ಅಂದರೆ ಹುಲಿ ಸಂರಕ್ಷಿತ ಪ್ರದೇಶಗಳು, ರಾಷ್ಟ್ರೀಯ ಉದ್ಯಾನವನಗಳು, ವನ್ಯಜೀವಿ ಅಭಯಾರಣ್ಯಗಳು ಹಾಗೂ ಮಾನವ ವಾಸವಿರುವ ಕೃಷಿ ಪ್ರದೇಶಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಸಂಶೋಧನಾ ಚಟುವಟಿಕೆಗಳನ್ನು ಭಾರತೀಯ ವಿಜ್ಞಾನ ಮಂದಿರದ ಪರಿಸರ ಶಾಸ್ತ್ರ ಕೇಂದ್ರ, ಹಾಗೂ ಏಷಿಯನ್ ನೇಚರ್ ಕನ್ಸರ್ವೇಷನ್ ಫೌಂಡೇಶನ್, ಫೌಂಡೇಶನ್ ಫಾರ್ ಇಕಲಾಜಿಕಲ್ ರಿಸರ್ಚ್, ಅಡ್ವಕಸಿ ಅಂಡ್ ಲರ್ನಿಂಗ್, ನ್ಯಾಶನಲ್ ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಸಹಯೋಗದಲ್ಲಿ ನಡೆಸಲುದ್ದೇಶಿಸಲಾಗಿದೆ. ಸ್ಥಳಾಂತರಗೊಂಡ ಆನೆಗಳಿಗಾಗಿ ಮೃದು ಬಿಡುಗಡೆ ಶಿಷ್ಟಾಚಾರ, ಝ್ಯೂಪ್ ಕಾಲರ್‌ಗಳು, ಬಜರ್ ಗಳು ಮತ್ತು ಸಮುದಾಯ ಬೆಂಬಲಿತ ಬೇಲಿಗಳಂತಹ ನವೀನ ಉಪಕರಣಗಳ ಅಭಿವೃದ್ಧಿಗೂ ಈ ಯೋಜನೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಮುನ್ನೆಚ್ಚರಿಕೆಯ ಗಂಟೆ: ಆನೆಗಳು ನಾಡಿನತ್ತ ಬಂದಾಗ ಮುನ್ನೆಚ್ಚರಿಕೆಯ ಗಂಟೆ ಮೊಳಗಿಸುವ ವ್ಯವಸ್ಥೆ ರೂಪಿಸುವ ಹಾಗೂ ಸ್ವಯಂ ಚಾಲಿತ ಧ್ವನಿಯಂತ್ರಗಳ

ಹುಲಿಗಳ ಸಾವಿಗೆ ಕೀಟನಾಶಕ ಕಾರಣ

ಚಾಮರಾಜನಗರ: ಮಲೆಮಹದೇಶ್ವರ ವನ್ಯಜೀವಿಧಾಮದಲ್ಲಿ ಐದು ಹುಲಿಗಳ ಸಾವಿಗೆ ಕೀಟನಾಶಕ ಕಾರಣವೆಂದು ಉನ್ನತ ಮಟ್ಟದ ತನಿಖಾ ಸಮಿತಿಯ ಅಂತಿಮ ವರದಿಯಲ್ಲಿ ಉಲ್ಲೇಖವಾಗಿದೆ. ಹುಲಿಗಳ ಸಾವಿಗೆ ಸಂಬಂಧಿಸಿದಂತೆ ರಚಿಸಿದ್ದ ಉನ್ನತ ಮಟ್ಟದ ತನಿಖಾ ಸಮಿತಿಯು ಈಗಾಗಲೇ ಅಂತಿಮ ವರದಿಯನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಸಲ್ಲಿಸಿದೆ.

ಹಸು ಹಾಗೂ ಐದು ಹುಲಿಗಳ ಅಂಗಾಂಗ ವ್ಯಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದ ವೇಳೆ ಕಾರ್ಬೋಫ್ಯುರಾನ್ ಎಂಬ ಕೀಟನಾಶಕ ಪತ್ತೆಯಾಗಿದ್ದು, ವಿಷಕಾರಿ ಕೀಟನಾಶಕ ಮಿಶ್ರಿತ ಹಸುವಿನ ಮಾಂಸ ತಿಂದು ಐದು ಹುಲಿಗಳು ಅಸುನೀಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಈ ಕುರಿತು ಪರಿಸರವಾದಿ ಜೋಸೆಫ್ ಹೂವರ್ ಮಾಹಿತಿ ಹಂಚಿಕೊಂಡಿದ್ದು, ಕಾರ್ಬೋಫ್ಯೂರನ್ ಕೀಟನಾಶಕವನ್ನು ಬೇಟೆಗಾರರೇ ಅತ್ಯಧಿಕವಾಗಿ ಬಳಸುತ್ತಾರೆ. ಇದರ ಬಗ್ಗೆ ತಿಳಿದೇ ಆರೋಪಿಗಳು ಹುಲಿಗಳನ್ನು ಕೊಂದಿದ್ದಾರೆ. ಅರಣ್ಯ ಇಲಾಖೆ ಮತ್ತು ಸರಕಾರಗಳು ಕಾಡಿನ ರಕ್ಷಣೆ ಮತ್ತು ವನ್ಯಜೀವಿ ರಕ್ಷಣೆಯಲ್ಲಿ ಹೊಸ ವಿಧಾನ ಕಂಡುಕೊಳ್ಳಬೇಕಿದೆ ಎಂದಿದ್ದಾರೆ.

ಪಂಚಮಸಾಲಿ ಮುಖಂಡರ ಸಭೆಯಲ್ಲಿ ಮೃತ್ಯುಂಜಯ ಸ್ವಾಮೀಜಿ ಬೇಸರ

ಶ್ರೀಮಠಕ್ಕೆ ಬೀಗ, ಮನಸ್ಸಿಗೆ ಗಾಯ

ಬಾಗಲಕೋಟೆ: ನಾನು ಸಮಾಜಕ್ಕೆ 2ಎ ಮೀಸಲಾತಿ ಕೊಡಿಸುವವರೆಗೆ ಶ್ರೀಪೀಠಕ್ಕೆ ಬರಲ್ಲ ಎಂದು ಹಿಂದೆಯೇ ಪ್ರತಿಜ್ಞೆ ಮಾಡಿದ್ದೆ. ಅದರಂತೆ ರಾಜ್ಯಾದ್ಯಂತ ಸುತ್ತಿ ಸಮಾಜವನ್ನು ಸಂಘಟಿಸಿ ಮೀಸಲಾತಿಗೆ ಆಗ್ರಹಿಸುವ ಕೆಲಸ ಮಾಡಿದ್ದೇನೆ. ಆದರೆ, ಶ್ರೀಪೀಠಕ್ಕೆ ಬೀಗ ಹಾಕಿದ್ದಾರೆಂಬ ಸುದ್ದಿ ತಿಳಿದು ಮನಸ್ಸಿಗೆ ನೋವಾಗಿದೆ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಬೇಸರ ವ್ಯಕ್ತ ಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಲ್ಲಿರುವ ಎಲ್ಲ ಭಕ್ತರು ನನ್ನನ್ನು ಪೀಠಕ್ಕೆ ಹೋಗಿ ಎಂದರೆ ಪೀಠಕ್ಕೆ ಹೋಗುತ್ತೇನೆ. ಇಲ್ಲದಿದ್ದರೆ ಇಲ್ಲಿಯೇ ಭಕ್ತರ ಮನೆಯಲ್ಲಿರುತ್ತೇನೆ ಎಂದರು.

ನನ್ನ ಸ್ವಾಭಿಮಾನಕ್ಕೆ ಪೆಟ್ಟುಬಿದ್ದಿದೆ: ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಹಾಗೂ ನಾನು ಗುರು ಶಿಷ್ಯರು. ಸಮಾಜದ ಹಿರಿಯರು ಇಬ್ಬರನ್ನು ಕರೆದು ಸರಿ ಮಾಡುತ್ತಾರೆ. ಸೋಮವಾರದ ಘಟನೆ ನನ್ನ ಸ್ವಾಭಿಮಾನಕ್ಕೆ ಪೆಟ್ಟುಬಿದ್ದಿದೆ. ಅವರು ತಪ್ಪು ತಿಳಿದಿದ್ದು, ಆ ಎಲ್ಲ ಗೊಂದಲಗಳನ್ನು ಪರಿಹರಿಸುತ್ತೇವೆ. ಕೂಡಲಸಂಗಮದ ಭಕ್ತರೊಂದಿಗೆ ಅವರು (ಕಾಶಪ್ಪನವರ) ಮಾತನಾಡಿದ್ದಾರೆ. ಅವರ ಮಾತಿನಂತೆ ಕೂಡಲಸಂಗಮ ಭಕ್ತರು ಕರೆಯಲು ಬಂದಿದ್ದಾರೆ ಎಂದರು.

ನನಗೇನೂ ಆಸೆಯೇ ಇಲ್ಲ: ಹೊಸ ಟ್ರಸ್ಟ್ ಮಾಡುವ ವಿಚಾರ ಸಭೆಯಲ್ಲಿ ಪ್ರಸ್ತಾಪವಾಯಿತು. ಹೊಸದು ಅಲ್ಲ, ಇದೇ ಟ್ರಸ್ಟ್‌ನಲ್ಲಿ ಎಲ್ಲ ತಾಲೂಕಿನ ಸದಸ್ಯರನ್ನು ಹಾಕಿಕೊಳ್ಳಿ ಎಂದು ಮುಖಂಡರು ಹೇಳಿದ್ದಾರೆ. ಅದನ್ನು ಹಿರಿಯರು ನಾವು ಸೇರಿ ಸರಿಪಡಿಸುತ್ತೇವೆ. ಕರ್ನಾಟಕದ ಎಲ್ಲ ಮಠ ಮಾನ್ಯಗಳ ಟ್ರಸ್ಟ್‌ಗೆ ಗುರುಗಳು (ಸ್ವಾಮೀಜಿ) ಅಧ್ಯಕ್ಷರಾಗಿರುತ್ತಾರೆ. ಆದರೆ, ನನ್ನ ವಿಶಾಲವಾದ ಭಾವನೆಯಿಂದ ಭಕ್ತರು ಅಧ್ಯಕ್ಷರಾಗಿರಲಿ ಅಂತಾ ಬಿಟ್ಟಿದ್ದೇ ತಪ್ಪಾಗಿದೆ. ನನಗೇನೂ ಆಸೆಯೇ ಇಲ್ಲ, ಆಸ್ತಿ, ಟ್ರಸ್ಟ್ ಹಾಗೂ ಇದನ್ನು ಹಿಡಕೊಂಡು ಅವರು ಸಂಪೂರ್ಣವಾಗಿ ಬೆಳೆಯಲಿ. ಅವರ ಬೆಳವಣಿಗೆಯನ್ನ ನೋಡಿ ನಾನು ಖುಷಿ ಪಡುತ್ತೇನೆ. ಮಠದಲ್ಲೇ ಇರುತ್ತೇನೆ. ಮಠ ಕಾರ್ಯಕ್ಷೇತ್ರ, ಪ್ರವಾಸ ನಿರಂತರ ಎಂದರು.

ಸಿಎಂ ವಿರುದ್ಧ ಹೇಳಿಕೆ ನನಗೆ ಮುಳುವಾಯಿತು

ಮೀಸಲಾತಿ ಹೋರಾಟಕ್ಕೆ ಸಿಎಂಗೆ ಸಿದ್ದರಾಮಯ್ಯ ಸ್ಪಂದಿಸಿಲ್ಲ ಎಂಬ ಹೇಳಿಕೆ ಮುಳುವಾಯ್ತಾ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿಗಳು ನನಗೆ ಆತ್ಮೀಯರು. ನಾನು ಯಡಿಯೂರಪ್ಪ, ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ ಅವರ ಮನೆಯ ಎದುರು ಪ್ರತಿಭಟನೆ ಮಾಡಿದ್ದೆ. ಆದರೆ, ಸಿಎಂ ಸಿದ್ದರಾಮಯ್ಯ ಅವರು ಸ್ಪಂದಿಸಿಲ್ಲ ಎಂದು ಹೇಳಿದ್ದೆ. ಅದರಲ್ಲಿ ತಪ್ಪೇನಿದೆ. ಸಿಎಂ ವಿರುದ್ಧ ಆ ಹೇಳಿಕೆಯೇ ನನಗೆ ಬಹುದೊಡ್ಡ ಮುಳುವಾಯಿತು. ಹೋರಾಟವೇ ನನಗೆ ಇಷ್ಟೆಲ್ಲ ಆಗಲು ಮುಳುವಾಯ್ತು ಎಂದು ಸ್ವಾಮೀಜಿ ಬೇಸರ ಪಟ್ಟರು.

ಮುಂದಿನ ವಾರ ಗಜಪಡೆಯ ಪಟ್ಟಿ ಬಿಡುಗಡೆಯಾಗುವ ಸಾಧ್ಯತೆ

ಮತ್ತೆ ಅಭಿಮನ್ಯು ಹೆಗಲಿಗೆ ಅಂಬಾರಿ ಹೊಣೆ

ಮೈಸೂರು: 2025ನೇ ಸಾಲಿನ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿರುವುದರ ನಡುವೆಯೇ ಅರಣ್ಯ ಇಲಾಖೆಯು ಮತ್ತೊಮ್ಮೆ ಅಭಿಮನ್ಯುವನ್ನೇ ಅಂಬಾರಿ ಹೊರಲು ಆಯ್ಕೆ ಮಾಡಿದೆ.

ಈ ಕುರಿತು ಮಾಹಿತಿ ನೀಡಿದ ಡಿಸಿಎಫ್ ಪ್ರಭುಗೌಡ, ಈ ಬಾರಿಯೂ ಅಭಿಮನ್ಯು ಅಂಬಾರಿ ಹೊರಲಿದ್ದಾನೆ. ಅಭಿಮನ್ಯುಗೆ ಈಗ 59 ವರ್ಷ ವಯಸ್ಸಾಗಿದ್ದು, ಫುಲ್ ಫಿಟ್ ಅಂಡ್ ಫೈನ್ ಆಗಿದ್ದಾನೆ. ಹೀಗಾಗಿ ಈ ಬಾರಿಯೂ ಆತನೇ ಗಜಪಡೆ ಲೀಡ್ ಮಾಡುತ್ತಾನೆ ಎಂದರು.

ಅಭಿಮನ್ಯು ನಂತರದಲ್ಲಿ ಮಹೇಂದ್ರ, ಧನಂಜಯ, ಹೀಗೆ ಅನೇಕ ಆನೆಗಳಿವೆ. ಏಕಲವ್ಯ ಕೂಡ ಕ್ಯೂಂಬಿಂಗ್ ನಲ್ಲಿ ಹೆದರದೆ ಭಾಗಿಯಾಗುತ್ತಿದ್ದಾನೆ. ಆತ ಕೂಡ ಭವಿಷ್ಯದಲ್ಲಿ ಒಳ್ಳೆಯ ಕುಮ್ಕಿ ಆನೆಯಾಗುತ್ತಾನೆ. ಮುಂದಿನ ವಾರ ಗಜಪಡೆಯ ಲಿಸ್ಟ್ ಬಿಡುಗಡೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದರು.

ಅಭಿಮನ್ಯು ಆನೆಗೆ 59 ವರ್ಷ ವಯಸ್ಸಾಗಿದ್ದು, ಮುಂದಿನ ವರ್ಷವೂ ಅಂಬಾರಿ ಹೊರುವ ಸಾಧ್ಯತೆ ಇದೆ. ಈ ಮಧ್ಯೆ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯ ಮಾರ್ಗಸೂಚಿ ಪ್ರಕಾರ 60 ವರ್ಷದ ಮೇಲೆ ಆನೆಗಳಿಗೆ ಭಾರ ಹೊರಿಸಬಾರದು ಎಂಬ ನಿಯಮವಿದೆ. ಈ ಹಿನ್ನೆಲೆಯಲ್ಲಿ ಅಭಿಮನ್ಯು ಆನೆಗೆ 59 ವರ್ಷ ವಯಸ್ಸಾಗಿದ್ದು ಅಂಬಾರಿ ಹೊರುವುದು ಈ ಬಾರಿ ಕಡೆನಾ ಅಥವಾ ಮುಂದಿನ ಬಾರಿಯೂ ಅಂಬಾರಿ ಹೊರತ್ತಾನೆಯೇ ಎಂಬುದನ್ನ ಕಾದು ನೋಡಬೇಕಿದೆ.

ಆ.4ಕ್ಕೆ ಗಜಪಡೆ ಮೈಸೂರಿಗೆ ಆಗಮನ

ಈಗಾಗಲೇ ಅರಣ್ಯ ಇಲಾಖೆ ಗಜಪಡೆಯ ಆಯ್ಕೆ ಪ್ರಕ್ರಿಯೆ ಶುರು ಮಾಡಿದ್ದು, ಹೆಣ್ಣಾನೆಗಳಿಗೆ ಪ್ರಗ್ನೆನ್ಸಿ ಟೆಸ್ಟ್ ಕೂಡ ಮಾಡಿಸಲಾಗಿದೆ. ಈ ಬಾರಿ ಕುಮ್ಕಿ ಆನೆ ಸೇರಿ ಆರು ಹೆಣ್ಣಾನೆಗಳು ಬರಲಿವೆ. ಆನೆಗಳ ಹೆಲ್ತ್ ಕಾರ್ಡ್ ದಸರಾ ಹೈ ಪವರ್ ಕಮಿಟಿಗೆ ಸಲ್ಲಿಕೆಯಾಗಲಿದೆ. ಯಾವೆಲ್ಲ ಆನೆಗಳು ಈ ಬಾರಿ ದಸರಾದಲ್ಲಿ ಭಾಗಿಯಾಗುತ್ತವೆ ಎಂಬ ಬಗ್ಗೆ ಅಂತಿಮ ಪಟ್ಟಿಯನ್ನು ಹೈ ಪವರ್ ಕಮಿಟಿ ಬಿಡುಗಡೆ ಮಾಡಲಿದೆ. ಮತ್ತಿಗೋಡು, ದುಬಾರೆ, ಬಳ್ಳೆ, ಸೇರಿದಂತೆ 6 ಕ್ಯಾಂಪ್ ನಿಂದ ಆನೆಗಳು ಬರಲಿವೆ. ಕಳೆದ ಬಾರಿ ಏಕಲವ್ಯ ಹೊಸ ಆನೆಯಾಗಿ ಬಂದಿತ್ತು. ಆಗಸ್ಟ್ 4ರಂದು ಗಜಪಡೆ ಮೈಸೂರಿಗೆ ಆಗಮಿಸಲಿವೆ ಎಂದು ಡಿಸಿಎಫ್ ಪ್ರಭುಗೌಡ ಮಾಹಿತಿ ನೀಡಿದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಅಸಮಾಧಾನ

ನಮ್ದೇನು ತಪ್ಪಿಲ್ಲ, ಮಿನಿಸ್ಟರ್ ಮಧ್ಯಪ್ರವೇಶದಿಂದ ಸಮಸ್ಯೆ

ಕಲಬುರಗಿ: 'ನಮ್ಮವರದ್ದು ಏನು ತಪ್ಪಿಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮಧ್ಯ ಪ್ರವೇಶ ಮಾಡಿದಕ್ಕೆ ಸಮಸ್ಯೆ ಆಗಿದೆ. ನೀವು ಒಂದು ಮಾತು ಅಲ್ಲೇ ಹೇಳಬೇಕು ಅಲ್ವಾ, ಇಷ್ಟು ಕಷ್ಟಪಟ್ಟು ಇಷ್ಟ ದೂರ ಏಕೆ ಬಂದಿದ್ರಿ, ನೀವು ಸ್ವಲ್ಪ ಎಡವಿ ಬಿದಿದ್ರೆ ಅವರು ಅಲ್ಲೆ ನಿಮಗೆ ಸಿಗ್ತಿದ್ರು, ಆಗ ಅವರಿಗೆ ಹೇಳಬಹುದಾಗಿತ್ತು' ಎಂದು ಸಚಿವ ಶಿವಾನಂದ ಪಾಟೀಲ್ ಹೋರಾಟಗಾರರ ಮುಂದೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಅಸಮಾಧಾನ ತೋರಿಕೊಂಡ ಪರಿ ಇದು.

ಎಪಿಎಂಸಿ ಯಾರ್ಡ್ ನಲ್ಲಿ ಅನಧಿಕೃತ ಕರ್ಮಷಿಯಲ್ ಕಟ್ಟಡ ತೆರವುಗೊಳಿಸುವಂತೆ ಆಗ್ರಹಿಸಿ ಕಲಬುರಗಿಯಿಂದ ಬಾಗೇವಾಡಿವರೆಗೂ ಪಾದಯಾತ್ರೆ ಮೂಲಕ ತೆರಳಿದ ಹೋರಾಟಗಾರರ ಮುಂದೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ ವಿಡಿಯೊ ವೈರಲ್ ಆಗಿದ್ದು, ಇದೀಗ ಕಾಂಗ್ರೆಸ್ ಸರಕಾರದ ಸಚಿವರಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದು ಮತ್ತೊಮ್ಮೆ ಬಹಿರಂಗಗೊಂಡಿದೆ.

ಕಲಬುರಗಿ ಎಪಿಎಂಸಿ ವ್ಯಾಪಾರಸ್ಥರ ತಂಡವೊಂದು ನಮ್ಮ ಬಳಿ ಬಂದಿದ್ದರು, ನಾನು ಅವರಿಗೆ ಹಚ್ಚಿಕೊಂಡಿರಲಿಲ್ಲ. ಬಹಳ ಒದ್ದಾಡಿದ ಮೇಲೆ ಎರಡು ತಿಂಗಳ ಸಮಯ ಕೊಡುತ್ತೇನೆ ಎಂದು ಹೇಳಿ ಕಳುಹಿಸಿದ್ದೆ. ಎರಡು ತಿಂಗಳು ಟೈಮ್ ಮುಗಿದ ಮೇಲೆ ಈಗ ಅವರು ಅಲ್ಲಿ ಹೋಗಿದ್ದಾರೆ. ಆದರೆ, ನಿಮಗೆ ಏನು ಸಪೋರ್ಟ್ ಬೇಕು, ಏನು ದಾಖಲೆ ಬೇಕು ಅದನ್ನು ನಾನು ಕೊಡುತ್ತೇನೆ. ನಮ್ಮ ಫುಲ್ ಸಪೋರ್ಟ್ ನಿಮಗಿದೆ' ಎಂದು ಹೋರಾಟಗಾರರಿಗೆ ಸಚಿವ ಶಿವಾನಂದ ಪಾಟೀಲ್ ಭರವಸೆ ನೀಡಿ ಕಳುಹಿಸಿರುವ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ.

ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಮಂತ್ರಾಲಯಕ್ಕೆ ಭೇಟಿ ನೀಡಿ ರಾಯರ ಮೂಲ ಬೃಂದಾವನದ ದರ್ಶನ ಪಡೆದಿದ್ದಾರೆ. ಮಂಚಾಲಮ್ಮ ದೇವಿ ದರ್ಶನ ಬಳಿಕ ರಾಯರ ಬೃಂದಾವನಕ್ಕೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಬಳಿಕ ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಚನ ಪಡೆದರು. ಸಚಿವರಿಗೆ ಫಲಮಂತ್ರಾಕ್ಷತೆ, ಶೇಷವಸ್ತ್ರ ಸ್ಮರಣಿಕೆಯನ್ನು ನೀಡಿ ಶ್ರೀಗಳು ಆಶೀರ್ವದಿಸಿದರು.

ಕಾಂಗ್ರೆಸ್‌ನವರ ಆರೋಪ ಸುಳ್ಳಾಗಿದೆ

ಉಡುಪಿ: ಪರಶುರಾಮ ಥೀಂ ಪಾರ್ಕ್ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಇದುವರೆಗೆ ಮಾಡಿಕೊಂಡು ಬಂದ ಆರೋಪ ಸುಳ್ಳಾಗಿದೆ. ಕಾರ್ಕಳ ಕಾಂಗ್ರೆಸ್ ನಡೆಸಿದ ಹತಾಶ ಪ್ರಯತ್ನಕ್ಕೆ ರಾಜ್ಯ ನಾಯಕರು ಪರಾಮರ್ಶೆ ನಡೆಸದೇ ಮಾಡಿದ ಅಭಿಯಾನಕ್ಕೆ ಸೋಲಾಗಿದೆ ಎಂದು ಮಾಜಿ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಪ್ರತಿಪಕ್ಷಗಳ ಮೇಲೆ ವಿನಾಕಾರಣ ಆರೋಪ ಮತ್ತು ತನಿಖೆ ನಡೆಸುವ ಪ್ರವೃತ್ತಿ ಹೆಚ್ಚಿದ್ದು, ಫೈಬರ್ ಪ್ರತಿಮೆ ವಿಚಾರವು ಕೂಡಾ ಆ ಪ್ರಯತ್ನದ ಭಾಗವಾಗಿತ್ತು ಎಂದು ತಿರುಗೇಟು ನೀಡಿದ್ದಾರೆ. ಪರಶುರಾಮ ಥೀಂ ಪಾರ್ಕ್ ನನ್ನ ಕನಸಿನ ಯೋಜನೆಯಾಗಿತ್ತು. ಇಡೀ ದಕ್ಷಿಣ ಭಾರತದ ಶ್ರೇಷ್ಠ ಪ್ರವಾಸಿ ತಾಣವಾಗಿ ಇದನ್ನು ಅಭಿವೃದ್ಧಿಪಡಿಸುವ ಗುರಿ ನಮ್ಮದಾಗಿತ್ತು. ಆದರೆ ಹೊಟ್ಟೆ ಉರಿಗೆ ಮದ್ದಿಲ್ಲ ಎಂಬಂತೆ ಕಾಂಗ್ರೆಸ್ ನಾಯಕರ ಅಸೂಯೆಗೆ ಆಹಾರವಾಗಿದೆ. ಪುತ್ಥಳಿ ಲೋಹದ್ದಲ್ಲ, ಫೈಬರ್ ದ್ದು ಎಂದು ಸುಳ್ಳು, ಕಪೋಲ ಕಲ್ಪಿತ ಕಟ್ಟುಕತೆಯನ್ನು ಎರಡು ವರ್ಷಗಳ ಕಾಲ ವ್ಯಾಪಕವಾಗಿ ಅಪಪ್ರಚಾರ ನಡೆಸಿದವರು ಇಂದು ಉತ್ತರ ಕೊಡಲಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಎಸ್‌ಆರ್‌ಟಿಸಿ, ಪ್ರಥಮ ದರ್ಜೆ ನೌಕರ, ನವ ವಿವಾಹಿತ ಸೇರಿ ಐವರು ಬಲಿ

ಹೃದಯಾಘಾತದಿಂದ ಐವರು ಸಾವು

ಬೆಂಗಳೂರು: ರಾಜ್ಯದಲ್ಲಿ ಹೃದಯಾಘಾತದ ಸಾವಿನ ಸರಣಿ ಮುಂದುವರಿದಿದೆ. ಶನಿವಾರ ರಾಜ್ಯದ ವಿವಿಧೆಡೆ ಐವರು ಸಾವನ್ನಪಿದ್ದಾರೆ.

ಕೆಎಸ್‌ಆರ್‌ಟಿಸಿ ನೌಕರ ಸಾವು: ಕೆಎಸ್‌ಆರ್‌ಟಿಸಿ ನೌಕರ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಬಾಬಾಜಾನ್ (53) ಮೃತ ನೌಕರ. ಅನಾರೋಗ್ಯದಿಂದ ಬಳಲುತ್ತಿದ್ದ ಮುತ್ತಕಪಲ್ಲಿ ಗ್ರಾಮದ ನಿವಾಸಿ ಬಾಬಾಜಾನ್ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಚಾಲಕರಾಗಿ ಕೆಲಸಕ್ಕೆ ಸೇರಿದ್ದ ಬಾಬಾಜಾನ್ ಅಪಘಾತದಲ್ಲಿ ಕಾಲಿಗೆ ಪೆಟ್ಟಾದ ಕಾರಣ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ಕೂಡ ಕರ್ತವ್ಯ ನಿಭಾಯಿಸಿ ಮನೆಗೆ ತೆರಳಿದ್ದರು. ಸೋಮವಾರ ರಾತ್ರಿ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ಬಾಬಾಜಾನ್ ಮೃತಪಟ್ಟಿದ್ದಾರೆ.

ಪ್ರಥಮ ದರ್ಜೆ ನೌಕರ ಸಾವು: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು ಆಡಳಿತ ಸೌಧದ ಪ್ರಥಮ ದರ್ಜೆ ಸಹಾಯಕ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಬೆಳ್ತಂಗಡಿ ತಾಲೂ ಕು ಆಡಳಿತಸೌಧದ ಪ್ರಥಮ ದರ್ಜೆ ಸಹಾ ಯಕ ಸತೀಶ್ (46) ಮಂಗಳವಾರ ಬೆಳಗ್ಗೆ ಸ್ನಾನ ಮಾಡಿ ಹೊರ ಬರುವಾಗ ಕುಸಿದು ಬಿದ್ದಿದ್ದಾರೆ. ಕುಸಿದು ಬಿದ್ದ ಸತೀಶ್ ಅವ ರನ್ನು ಪತ್ನಿ ಆಸ್ಪತ್ರೆಗೆ ಕರೆದುಕೊಂಡು ಬಂದಿ ದ್ದು, ಪರೀಕ್ಷಿಸಿದ ವೈದ್ಯರು ಹೃದಯಾಘಾ ತದಿಂದ ಮೃತಪಟ್ಟಿದ್ದಾರೆಂದು ತಿಳಿಸಿದ್ದಾರೆ.

ತುಮಕೂರಿನಲ್ಲಿ ನವ ವಿವಾಹಿತ ಸಾವು: 20 ದಿನಗಳ ಹಿಂದೆ ಮದುವೆಯಾಗಿದ್ದ ಯುವಕ ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ಜಿಲ್ಲೆಯ ಗುಬ್ಬಿ ತಾಲೂಕಿನ ಹೊಸಕೆರೆ ಬಳಿಯ ಅರೇಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಸಿದ್ದೇಶ್ (23) ಚಿಕ್ಕನಾಯಕನಹಳ್ಳಿ ಸಮೀಪದ ತನ್ನ ಸ್ನೇಹಿತನ ಅಕ್ಕನ ಮನೆಗೆ ಊಟಕ್ಕೆ ಹೋಗಿ ಬರುವಾಗ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಸಂಡೂರಿನಲ್ಲಿ ಬಾಲಕಿ ಬಲಿ

12 ವರ್ಷದ ಬಾಲಕಿ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ಸಂಡೂರು ತಾಲೂಕಿನಲ್ಲಿ ಮಂಗಳವಾರ ನಡೆದಿದೆ. ಕಾಳಿಂಗೇರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿಯಲ್ಲಿ ಓದುತ್ತಿದ್ದ ದೀಕ್ಷಾ (12) ಮೃತಪಟ್ಟ ಬಾಲಕಿ. ಶಾಲೆಗೆ ತೆರಳಲು ತಲೆ ಬಾಚಿಕೊಳ್ಳುತ್ತಿದ್ದಾಗ ಬಾಲಕಿ ಇದ್ದಕ್ಕಿದ್ದಂತೆ ಕುಸಿದು ಬಿದ್ದಿದ್ದಾಳೆ. ಕೂಡಲೇ ಚೋರನೂರು ಪಿಹೆಚ್‌ಸಿಯಲ್ಲಿ ದಾಖಲಿಸಿ, ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗೆ ಸಂಡೂರಿಗೆ ಕರೆತರುವಾಗ ಮೃತಪಟ್ಟಿದ್ದಾಳೆ.

ಹಾಸ್ಯ ಕಲಾವಿದ ಮೌನೇಶ್ ಆಚಾರ್ಯ ಸಾವು

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಹಾಸ್ಯ ಕಲಾವಿದರಾದ ಮೌನೇಶ್ ಆಚಾರ್ಯ ಮಾಣಿ ಕಾಪಿಕಾಡು(42) ಹೃದಯಾಘಾತದಿಂದ ನಿಧನರಾಗಿದ್ದಾರೆ. ನೆಲ್ಯಾಡಿಯ ನಮ್ಮ ಕಲಾವಿದರು ತಂಡದಲ್ಲಿ ಕಲಾವಿದನಾಗಿ ಹಾಸ್ಯ, ಪೋಷಕ ಪಾತ್ರದಲ್ಲಿ ಗುರುತಿಸಿಕೊಂಡಿರುವವರು. ಸಾಮಾಜಿಕ ಜಾಲತಾಣಗಳಲ್ಲೂ ಇವರ ಹಾಸ್ಯ ಅಭಿನಯ ಪ್ರಖ್ಯಾತಿಯನ್ನು ಪಡೆದಿದೆ.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಹೆಚ್ಚುತ್ತಿರುವ ಡ್ರಗ್ಸ್ ಹಾವಳಿ

ಅಮಲು ಪದಾರ್ಥಗಳಿಗೆ ದಾಸರಾಗಿರುವ ಜನರ ಪ್ರಮಾಣ ಹೆಚ್ಚುತ್ತಲೇ ಹೋದ ಹಿನ್ನೆಲೆಯಲ್ಲಿ ಪಂಜಾಬ್ ರಾಜ್ಯವು 'ಉಡ್ತಾ ಪಂಜಾಬ್' ಎಂಬ ಹಣೆಪಟ್ಟಿಯನ್ನು ಕಟ್ಟಿಸಿಕೊಳ್ಳುವಂತಾಗಿದ್ದು ಬಹುತೇಕರಿಗೆ ಗೊತ್ತಿರುವ ಸಂಗತಿಯೇ. ಈ ವಿಷಯದಲ್ಲಿ ತಾವೇನೂ ಕಮ್ಮಿಯಿಲ್ಲ ಎನ್ನುವ ರೀತಿಯಲ್ಲಿ ದೇಶದ ಮತ್ತಷ್ಟು ರಾಜ್ಯಗಳು ಮಾದಕವಸ್ತುಗಳ ಮಾರಾಟಜಾಲಕ್ಕೆ ಮಡಿಲಾದುದನ್ನು ಕಾಲಾನುಕಾಲಕ್ಕೆ ಕೇಳುತ್ತಲೇ ಬಂದಿದ್ದೇವೆ. ಇದಕ್ಕೆ ಕರ್ನಾಟಕ ರಾಜ್ಯವೂ ಹೊರತಲ್ಲ. ಡ್ರಗ್ಸ್ ಪೂರೈಕೆ ಮತ್ತು ಮಾರಾಟದ ಆರೋಪಗಳ ಅಡಿಯಲ್ಲಿ 2024ರಲ್ಲಿ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ 3,500ಕ್ಕೂ ಹೆಚ್ಚು ಎಫ್ಐಆರ್‌ಗಳು ದಾಖಲಾಗಿದ್ದವು ಮತ್ತು 2,417 ಆರೋಪಿಗಳನ್ನು ಬಂಧಿಸಲಾಗಿತ್ತು. ಅಫೀಮು, ಗಾಂಜಾ, ಹೆರಾಯಿನ್, ಮಾರ್ಫಿನ್, ಎಡಿಎಂಎ, ಎಲ್ಎಸ್‌ಡಿ, ಕೊಕೇನ್ ಮುಂತಾದ ಮಾದಕ ವಸ್ತುಗಳ ಮಾರಾಟ ಹಾಗೂ ಪೂರೈಕೆಗೆ ಇನ್ನೂ ಲಗಾಮು ಬಿದ್ದಿಲ್ಲ ಎಂಬ ಕಾರಣಕ್ಕೇ ರಾಜ್ಯದಲ್ಲಿ ಗೃಹ ಸಚಿವರ ನೇತೃತ್ವದಲ್ಲಿ ಏಳು ಸಚಿವರ ಕಾರ್ಯಪಡೆಯನ್ನು ಕೆಲ ತಿಂಗಳ ಹಿಂದೆ ರಚಿಸಿ, ಈ ದಂಧೆಗೆ ಇತಿಶ್ರೀ ಹಾಡಲು ಸಂಕಲ್ಪಿಸಲಾಗಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು. ಈ ಜಾಲವು ತನ್ನ ಕಬಂಧಬಾಹುವನ್ನು ಚಾಚುತ್ತಲೇ ಇದೆ ಎಂಬುದಕ್ಕೆ ಪುಷ್ಟಿ ನೀಡುವಂಥ ಸುದ್ದಿಯು ಹೈದರಾಬಾದ್‌ನಿಂದ ಬಂದಿದೆ. 'ಮುತ್ತಿನ ನಗರಿ' ಎಂದೇ ಖ್ಯಾತವಾಗಿದ್ದು ದೇಶದ ಮಾಹಿತಿ ತಂತ್ರಜ್ಞಾನದ ಹಬ್ ಎಂದೇ ಕರೆಸಿಕೊಳ್ಳುತ್ತಿರುವ ಹೈದರಾಬಾದ್‌ನಲ್ಲಿ ಮರಿಜುವಾನಾ ಮತ್ತು ಗಾಂಜಾದ ಹಾವಳಿ ಮಿತಿಮೀರಿದ್ದು, ಈ ಸಂಬಂಧವಾಗಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಿದ ಅಲ್ಲಿನ ಪೊಲೀಸರು 14 ಮಂದಿಯನ್ನು ಬಂಧಿಸಿದ್ದಾರೆ ಎನ್ನುತ್ತವೆ ಲಭ್ಯ ವರದಿಗಳು. ನಮ್ಮ ದೇಶದ ಭವಿಷ್ಯವನ್ನು ರೂಪಿಸಬೇಕಾದ ಯುವಜನರೇ ಡ್ರಗ್ಸ್ ಚಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಿರುವುದು ಆಘಾತಕಾರಿ ಸಂಗತಿ. ಹೀಗಾಗಿ ಆಯಾ ರಾಜ್ಯಗಳ ಆಳುಗರು ಡ್ರಗ್ಸ್ ದಂಧೆಯನ್ನು ಮಟ್ಟಹಾಕಲು ಆದ್ಯಗಮನವನ್ನು ನೀಡಬೇಕಿದೆ.

ಸೊಂಪಾದಕೀಯ

ಲಡ್ಡು ಬಂದು ಬಾಯಿಗೆ ಬಿತ್ತಾ?

ಸಿಗರೇಟು, ಮದ್ಯ ಸೇವನೆಯ ವಿಷಯದಲ್ಲಿ ಜನರಿಗೆ ತಿಳಿವಳಿಕೆ ನೀಡೋಕೆ ಅಂತ ಶಾಸನ ವಿಧಿಸಿದ ಎಚ್ಚರಿಕೆಯ ಸಂದೇಶಗಳನ್ನು ನೀವು ನೋಡಿರುತ್ತೀರಿ. ಈಗ ಈ ರೀತಿಯ ಸಂದೇಶಗಳು ಸಿಹಿತಿಂಡಿಗಳ ಮೇಲೆ ಮತ್ತು ಕರಿದ ಆಹಾರಗಳ ಮೇಲೂ ಕಾಣಿಸುವ ಲಕ್ಷಣಗಳಿವೆ. ದೇಶದಲ್ಲಿ ಯುವಜನರ ಆರೋಗ್ಯ ಹದಗೆಡುತ್ತಿದೆ. ಸ್ಥೂಲಕಾಯದಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅಷ್ಟೇ ಅಲ್ಲದೆ ಯುವಜನರಲ್ಲಿ

ಹೃದಯಾಘಾತ ಹೆಚ್ಚಾಗಿ ಕಾಣಿಸಿಕೊಂಡು ಸಾವನ್ನಪ್ಪುತ್ತಿರುವವರ ಸಂಖ್ಯೆ ಮಿತಿಮೀರುತ್ತಿದೆ. ಈ ಕಾರಣಕ್ಕೆ ಯುವಜನರ ಆರೋಗ್ಯದ ಕಾಳಜಿಯಿಂದ ಸರಕಾರ ಈಗ ಎಲ್ಲ ಸಿಹಿ ತಿಂಡಿ ತಿನಿಸುಗಳು ಮತ್ತು ಕರಿದ ಆಹಾರಗಳ ಮೇಲೆ ಅದರಲ್ಲಿರುವ ಬೊಜ್ಜು ಮತ್ತು ಎಣ್ಣೆಯ ಪ್ರಮಾಣವನ್ನು ನಮೂದಿಸಬೇಕು ಅಂತ ತಾಕೀತು ಮಾಡಿದೆ. ಹಾಗಾಗಿ ಇನ್ನು ಮುಂದೆ ನಿಮಗೆ ಸಿಹಿ ತಿಂಡಿ ತಿನ್ನುವ ಅಭ್ಯಾಸ ಇದ್ದರೆ, ಲಡ್ಡು ಬಂದು ಬಾಯಿಗೆ ಬಿತ್ತಾ ಅನ್ನೋಕೆ ಮುಂಚೆ ಅದರಲ್ಲಿರುವ ಅಪಾಯಕಾರಿ ಅಂಶಗಳು ಕಣ್ಣಿಗೆ ಬೀಳುತ್ತವೆ. ಅವುಗಳನ್ನು ಓದಿಕೊಂಡು ಆಮೇಲೆ ಆ ತಿಂಡಿಗಳನ್ನು ತಿಂದು ಸ್ಥೂಲಕಾಯ ಬೆಳೆಸಿಕೊಂಡು ಊದಿಕೊಳ್ಳಬೇಕಾ ಇಲ್ಲವಾ ಅಂತ ನೀವೇ ನಿರ್ಧಾರ ಮಾಡಬೇಕು. ಸರಕಾರವೇನೋ ಹೀಗೆ ನಿರ್ಧಾರ ತೆಗೆದುಕೊಂಡಿದೆ. ಆದರೆ ಅದು ಹೇಗೆ ಜಾರಿ ಆಗುತ್ತದೆ ಅನ್ನೋದು ಸದ್ಯಕ್ಕೆ ಗೊತ್ತಿಲ್ಲ. ಯಾಕಂದ್ರೆ ಯಾವುದೇ ಕಾನೂನು ಬಂದ್ರೂ ನಮ್ಮಲ್ಲಿ ಜಾರಿಕೊಳ್ಳಲು ಬಹಳಷ್ಟು ದಾರಿಗಳಿರುತ್ತವೆ. ಹೋಟೆಲುಗಳಲ್ಲಿ ಮಾರುವ ಜಾಮೂನು, ಹಲ್ವಾ, ಜಿಲೇಬಿ ತಯಾರಕರು ಈ ನಿಯಮಗಳನ್ನು ಪಾಲಿಸುತ್ತಾರಾ, ಬೇಕರಿ ಮತ್ತು ಸ್ವೀಟ್ಸ್ ಅಂಗಡಿಗಳಲ್ಲಿ ಬಿಡಿಬಿಡಿಯಾಗಿ ಮಾರುವ ಸಿಹಿ ತಿಂಡಿಗಳು ಮತ್ತು ರಸ್ತೆ ಬದಿಯಲ್ಲಿ ಮಾರುವ ಎಣ್ಣೆ ಪದಾರ್ಥ ತಯಾರಕರಿಗೆ ಈ ನಿಯಮ ಹೇಗೆ ಅನ್ವಯಿಸುತ್ತದೆ. ಅವರು ಇದನ್ನು ಹೇಗೆ ಪಾಲಿಸುತ್ತಾರೆ ಅನ್ನೋದರ ಬಗ್ಗೆ ಅನುಮಾನಗಳಂತೂ ಸಾಕಷ್ಟು ಇವೆ. ಒಟ್ಟಾರೆ ರಸ್ತೆ ಬದಿಯಲ್ಲಿ ಗೋಬಿ ಮಂಚೂರಿ, ಕಬಾಬ್ ಮಾರೋರು ಇನ್ನು ಮುಂದೆ ಬಾಂಡ್ಲಿಯಲ್ಲಿರುವ ಎಣ್ಣೆ ಕಾದಿದೆಯಾ ಅಂತ ನೋಡುವ ಮುನ್ನ, ಆಹಾರದ ದರ ಪಟ್ಟಿಯ ಜತೆಗೆ ಅದರಲ್ಲಿರುವ ಎಣ್ಣೆಯ ಪ್ರಮಾಣವನ್ನೂ ಲೆಕ್ಕ ಹಾಕಿ ಬೋರ್ಡ್‌ನಲ್ಲಿ, ಪ್ರದರ್ಶನ ಮಾಡುತ್ತಾರಾ ಅನ್ನೋದನ್ನ ಕಾದುನೋಡಬೇಕಿದೆ.

ಸಂಪಾದಕರ ಸದ್ಯಶೋಧನೆ

ವಿಮಾನದ ಟಾಯ್ಲೆಟ್ ಕತೆ

ಏರ್‌ಬಸ್ ಎ-380ಯಂಥ ವಿಮಾನ ಸುಮಾರು ಐನೂರು ಪ್ರಯಾಣಿಕರನ್ನು ಹೇರಿಕೊಂಡು ಸುಮಾರು 17-18 ಗಂಟೆ ಹಾರುತ್ತದೆ. ಈ ಅವಧಿಯಲ್ಲಿ ಬಹುತೇಕ ಎಲ್ಲ ಪ್ರಯಾಣಿಕರು ಒಂದು ಅಥವಾ ಎರಡು ಸಲ ಟಾಯ್ಲೆಟ್‌ಗಳನ್ನೂ ಬಳಸುತ್ತಾರಷ್ಟೇ. ಭೂಮಿಯಿಂದ 36-38 ಸಾವಿರ ಅಡಿ ಎತ್ತರದಲ್ಲಿ ಹಾರುವ ವಿಮಾನದ ಟಾಯ್ಲೆಟ್ ಮೇಲೆ ಯಾವ ರೀತಿಯ ಒತ್ತಡ ಬೀಳಬಹುದು ಮತ್ತು ಅದು ಹೇಗೆ ಕಾರ್ಯನಿರ್ವಹಿಸಬಹುದು ಎಂದು ಎಂದಾದರೂ ಯೋಚಿಸಿದ್ದೀರಾ? ವಿಮಾನದ ಶೌಚಾಲಯಗಳು ಸಣ್ಣದಾದರೂ, ಅವುಗಳ ವಿಜ್ಞಾನ ಮಾತ್ರ ಅದ್ಭುತ ಮತ್ತು ಅತ್ಯುನ್ನತ. ವಿಮಾನದಲ್ಲಿರುವ ಶೌಚಾಲಯವು, ನಮ್ಮ ಮನೆಗಳಲ್ಲಿರುವ ಶೌಚಾಲಯಕ್ಕಿಂತ ಸಂಪೂರ್ಣವಾಗಿ ವಿಭಿನ್ನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಮನೆಯಲ್ಲಿರುವ ಟಾಯ್ಲೆಟ್ಟಿನಲ್ಲಿ ನಾವು ನೀರನ್ನು ಬಳಸಿದರೆ, ವಿಮಾನದಲ್ಲಿ ತ್ಯಾಜ್ಯವನ್ನು ತೆಗೆದುಹಾಕಲು ನಿರ್ವಾತ ಹೀರಿಕೊಳ್ಳುವ (ವ್ಯಾಕ್ಯೂಮ್ ಸಕ್ಷನ್) ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಪ್ರತಿ ಫ್ಲಶ್‌ಗೆ ಕೇವಲ ಅರ್ಧ ಗ್ಯಾಲನ್ ದ್ರವವನ್ನು (ಸುಮಾರು 2 ಲೀಟರ್‌ಗಿಂತ ಕಡಿಮೆ) ಬಳಸುವ ಈ ವಿಧಾನ ನಂಬಲಾಗದಷ್ಟು ಪರಿಣಾಮಕಾರಿಯಾಗಿದೆ. ಇದು ಪ್ರತಿ ವಿಮಾನ ಪ್ರಯಾಣದಲ್ಲಿ ನೂರಾರು ಗ್ಯಾಲನ್‌ಗಳಷ್ಟು ನೀರನ್ನು ಉಳಿಸುತ್ತದೆ. ಅಷ್ಟಕ್ಕೂ ನಿರ್ವಾತ ಶೌಚಾಲಯಗಳು ಹೇಗೆ ಕಾರ್ಯನಿರ್ವಹಿಸುತ್ತವೆ? ಇದು ನಿಜಕ್ಕೂ ಕುತೂಹಲಕಾರಿ. ನೀವು ಫ್ಲಶ್ ಬಟನ್ ಒತ್ತುತ್ತಿದ್ದಂತೆ, ಪ್ರಬಲವಾದ ನಿರ್ವಾತವು ತ್ಯಾಜ್ಯವನ್ನು ಮುಚ್ಚಿದ ಸಂಗ್ರಹ ಟ್ಯಾಂಕ್‌ಗೆ ತಕ್ಷಣ ಹೀರಿಕೊಳ್ಳುತ್ತದೆ. ಈ ವ್ಯವಸ್ಥೆಯು ಗುರುತ್ವಾಕರ್ಷಣ ಶಕ್ತಿಯ ಮೇಲೆ ಅವಲಂಬಿತವಾಗಿಲ್ಲ, ಇದು ಎತ್ತರದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಸೂಕ್ತವಾಗಿದೆ. ಇದು ಪೈಪ್‌ಗಳಲ್ಲಿ ತ್ಯಾಜ್ಯವಸ್ತು ನಿಲ್ಲುವುದನ್ನು ತಡೆಯುತ್ತದೆ, ಇದರಿಂದಾಗಿ ಕ್ಯಾಬಿನ್ ವಾಸನೆಮುಕ್ತವಾಗಿರುತ್ತದೆ ಮತ್ತು ನೈರ್ಮಲ್ಯದಿಂದ ಕೂಡಿರುತ್ತದೆ. ಪ್ರಯಾಣಿಕರು ಫ್ಲಶ್ ಬಟನ್ ಒತ್ತಿದಾಗ, ಅದು ಇಲೆಕ್ಟ್ರಾನಿಕ್ ಸಂಕೇತವನ್ನು ಕಳುಹಿಸುತ್ತದೆ. ಈ ಸಂಕೇತವು ಶೌಚಾಲಯದ ಬೌಲ್‌ನ ಕೆಳಭಾಗದಲ್ಲಿರುವ ಒಂದು ವಾಲ್ವ್ (ಫ್ಲಶ್ ವಾಲ್ವ್) ತೆರೆಯುವಂತೆ ಮಾಡುತ್ತದೆ. ಅದೇ ಸಮಯದಲ್ಲಿ, ಶೌಚಾಲಯ ವ್ಯವಸ್ಥೆಯು ಸಂಗ್ರಹ ಟ್ಯಾಂಕ್‌ಗೆ ಸಂಪರ್ಕಗೊಂಡಿರುತ್ತದೆ. ಈ ಟ್ಯಾಂಕ್‌ನಲ್ಲಿ ಸಾಮಾನ್ಯವಾಗಿ ವಿಮಾನದ ಹೊರಗಿನ ಅಥವಾ ಒಳಗಿನ ವಾತಾವರಣದ ಕಡಿಮೆ ಒತ್ತಡವನ್ನು ಬಳಸಿಕೊಂಡು ಕಡಿಮೆ ನಿರ್ವಾತವನ್ನು ನಿರ್ವಹಿಸಲಾಗುತ್ತದೆ. ವಿಮಾನವು 35 ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿರುವಾಗ, ಕ್ಯಾಬಿನ್ ಒಳಗಿನ ಒತ್ತಡವು ಹೊರಗಿನ ಒತ್ತಡಕ್ಕಿಂತ ಹೆಚ್ಚಾಗಿರುತ್ತದೆ. ಈ ಒತ್ತಡದ ವ್ಯತ್ಯಾಸವನ್ನೇ ನಿರ್ವಾತ ಸೃಷ್ಟಿಗೆ ಬಳಸಿಕೊಳ್ಳಲಾಗುತ್ತದೆ. ಫ್ಲಶ್ ವಾಲ್ವ್ ತೆರೆದ ತಕ್ಷಣ, ಕ್ಯಾಬಿನ್‌ನ ಹೆಚ್ಚಿನ ಒತ್ತಡವು ಬೌಲ್‌ನಿಂದ ಸಂಗ್ರಹ ಟ್ಯಾಂಕ್‌ನ ಕಡಿಮೆ ಒತ್ತಡದ ಕಡೆಗೆ ತ್ಯಾಜ್ಯವನ್ನು ತಳ್ಳುತ್ತದೆ. ಇದು ಅತ್ಯಂತ ವೇಗವಾಗಿ ಮತ್ತು ಪ್ರಬಲವಾಗಿ ನಡೆಯುತ್ತದೆ. ಹೀಗಾಗಿ ಜೋರಾದ, ಗಾಬರಿ ಹುಟ್ಟಿಸುವ 'ವೂಶ್' ಎಂಬ ಶಬ್ದ ಕೇಳಿಸುತ್ತದೆ. ತ್ಯಾಜ್ಯವು ಕಡಿಮೆ ನೀರಿನೊಂದಿಗೆ (ಕೆಲವೊಮ್ಮೆ ನೀರುರಹಿತ ಶುಚಿಕಾರಕ ದ್ರವ) ವೇಗವಾಗಿ ಪೈಪ್‌ಗಳ ಮೂಲಕ ಹಾದುಹೋಗುತ್ತದೆ ಮತ್ತು ನೇರವಾಗಿ ಮುಚ್ಚಿದ ಸಂಗ್ರಹ ಟ್ಯಾಂಕ್‌ಗೆ ಸೇರುತ್ತದೆ. ಫ್ಲಶ್ ಪ್ರಕ್ರಿಯೆ ಮುಗಿದ ತಕ್ಷಣ, ವಾಲ್ವ್ ಮುಚ್ಚುತ್ತದೆ. ಸಿಸ್ಟಮ್ ಅನ್ನು ಮತ್ತೆ ಸೀಲ್ ಮಾಡುತ್ತದೆ ಮತ್ತು ಕ್ಯಾಬಿನ್‌ನೊಳಗೆ ಯಾವುದೇ ದುರ್ವಾಸನೆ ಹರಡುವುದನ್ನು ತಡೆಯುತ್ತದೆ. ಹೆಚ್ಚಿನ ವ್ಯವಸ್ಥೆಗಳು ಬೌಲ್ ಅನ್ನು ಸ್ವಚ್ಛಗೊಳಿಸಲು ಕಡಿಮೆ ಪ್ರಮಾಣದ ನೀರು ಅಥವಾ ನೀರುರಹಿತ ಶುಚೀಕರಣ ದ್ರವವನ್ನು ಸಿಂಪಡಿಸುತ್ತವೆ. ಇದು ಟಾಯ್ಲೆಟ್ ಸಂಪೂರ್ಣವಾಗಿ ಸ್ವಚ್ಛವಾಗಿದೆಯೆ ಎಂದು ಖಚಿತಪಡಿಸುತ್ತದೆ. 1980ರ ದಶಕದಲ್ಲಿ ನಿರ್ವಾತ ಶೌಚಾಲಯಗಳನ್ನು ಅಭಿವೃದ್ಧಿಪಡಿಸಲಾಯಿತು. ಈ ಆವಿಷ್ಕಾರವು ವಿಮಾನ ಪ್ರಯಾಣದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಇದರ ಮೊದಲು, ವಿಮಾನದ ಶೌಚಾಲಯಗಳು ಸಂಪೂರ್ಣವಾಗಿ ಭಿನ್ನವಾಗಿದ್ದವು ಮತ್ತು ಅದರಲ್ಲಿ ಅನೇಕ ಅಡಚಣೆಗಳಿದ್ದವು. 1980ಕ್ಕಿಂತ ಮೊದಲು, ವಿಮಾನಗಳ ಟಾಯ್ಲೆಟ್‌ಗಳು ಭೂಮಿಯ ಮೇಲಿನ ಶೌಚಾಲಯಗಳಂತೆಯೇ ಹೆಚ್ಚು ನೀರನ್ನು ಅವಲಂಬಿಸಿದ್ದವು.

ಬಿಳಿಚರ್ಮವೇ ಶ್ರೇಷ್ಠ ಎಂಬ ವ್ಯಸನವನ್ನು ಕಳೆದ ಅಧ್ಯಯನ

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನಿಯಾಗಿದ್ದ ಆಲ್‌ಫ್ರೆಡ್ ಕಾರ್ಟ್ ಹೇಡನ್, ಮಾನವ ವಿಜ್ಞಾನದಲ್ಲಿ ವಿಶೇಷ ಅಧ್ಯಯನ ನಡೆಸಿದ್ದ. ಇವನು ಟಾರೆಸ್ ಜಲಸಂಧಿಯ ದ್ವೀಪಗಳಿಗೆ ಭೇಟಿ ನೀಡಿ, ಅವರ ಸಂಸ್ಕೃತಿಯ ಬಗ್ಗೆ ಕುತೂಹಲ ತಳೆದು, ಅವರ ಕ್ರಮಬದ್ಧ ಅಧ್ಯಯನಕ್ಕೆ ಮಹಾಮೇಧಾವಿಗಳ ತಂಡವನ್ನು ಸಿದ್ಧಪಡಿಸಿದ್ದ.

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಮಾನವ ಜನಾಂಗವನ್ನು ಅವರ ಚರ್ಮದ ಬಣ್ಣವನ್ನಾಧರಿಸಿ ವರ್ಗೀಕರಿಸುವ ಮೊದಲ ಪ್ರಯತ್ನವನ್ನು 15-17ನೆಯ ಶತಮಾನದ ಯುರೋಪಿಯನ್ ಜನಾಂಗದವರು ಮಾಡಿದರು. ಪ್ರಾಚೀನ ಮೆಸೊಪೊಟೋಮಿಯನ್, ಈಜಿಪ್ಷಿಯನ್, ಇಂಡಿಯನ್, ಗ್ರೀಸ್ ಅಥವಾ ರೋಮ್ ಸಾಮ್ರಾಜ್ಯಗಳಲ್ಲಿ ಚರ್ಮದ ಬಣ್ಣವನ್ನು ಪರಿಗಣಿಸಿ ಉಚ್ಚ-ನೀಚ ಎನ್ನುವ ಪರಿಪಾಠವಿರಲಿಲ್ಲ, ಮಧ್ಯಯುಗದಲ್ಲೂ ಇರಲಿಲ್ಲ. ಯುರೋಪಿಯನ್ ಸಾಹಸಿಗಳು ವ್ಯಾಪಾರಕ್ಕೆಂದು ಹಡಗುಗಳಲ್ಲಿ ಜಗತ್ತಿನ ಎಲ್ಲ ದೇಶಗಳಿಗೆ ಭೇಟಿ ನೀಡಿದಾಗ, ತಮ್ಮ ಬಿಳಿಯ ಚರ್ಮದ ಬಗ್ಗೆ ಅವರಿಗೆ ಹೆಮ್ಮೆಯೆನಿಸಿತು. ಜೊಹಾನ್ ಫ್ರೆಡ್ರಿಕ್ ಬ್ಲೂಮೆನ್ ಬ್ಯಾಕ್ ಎಂಬ ಜರ್ಮನ್ ವಿದ್ವಾಂಸನು 1779ರಲ್ಲಿ ಮಾನವ ಜನಾಂಗವನ್ನು ಕಕೇಶಿಯನ್ಸ್ (ಬಿಳಿ ಚರ್ಮ) ಮಂಗೋಲಿಯನ್ಸ್ (ಹಳದಿ ಚರ್ಮ) ಮಲಯನ್ಸ್ (ಕಂದು ಚರ್ಮ) ಇಥಿಯೋಪಿಯನ್ಸ್ (ಕಪ್ಪು ಚರ್ಮ) ಹಾಗೂ ಅಮೆರಿಕನ್ಸ್/ರೆಡಿ ಇಂಡಿಯನ್ಸ್ (ಕೆಂಪು ಚರ್ಮ) ಎಂದು ವರ್ಗೀಕರಿಸಿದ. ವಿಶ್ವದ ಎರಡನೆಯ ಮಹಾಯುದ್ಧವು ನಡೆದ ಮೇಲೆ ತಳಿವಿಜ್ಞಾನ ಹಾಗೂ ಮಾನವ ವಿಜ್ಞಾನ ಕ್ಷೇತ್ರಗಳಲ್ಲಿ ಗಣನೀಯ ಸಂಶೋಧನೆಗಳು ನಡೆದು, ಈ ಭೂಮಿಯ ಮೇಲೆ ಎಲ್ಲ ಮನುಷ್ಯರ ಡಿಎನ್ಎ ಶೇ.99.9ರಷ್ಟು ಏಕರೂಪವಾಗಿರುತ್ತದೆ ಎಂಬ ಸತ್ಯವನ್ನು ಹೊರಗೆಡವಿತು. 19ನೆಯ ಶತಮಾನದಲ್ಲಿ, ಬಿಳಿ ಚರ್ಮದವರೇ ಸರ್ವಶ್ರೇಷ್ಠ ಎಂಬ ನಂಬಿಕೆಯು ಜೀವಂತವಾಗಿದ್ದ ದಿನಗಳಲ್ಲಿ ನಡೆದ ಒಂದು ಮಾನವ ವಿಜ್ಞಾನದ ಕ್ಷೇತ್ರ ಅಧ್ಯಯನವು 'ಮಾನವ ಜಾತಿ ತಾನೊಂದೇ ವಲಂ' ಎಂಬ ಪಂಪನ ಮಾತಿಗೆ ಪುರಾವೆಯನ್ನು ಒದಗಿಸಿತು.

ಟಾರೆಸ್ ಜಲಸಂಧಿಯು ಆಸ್ಟ್ರೇಲಿಯಾದ ಕೇಪ್ ಯಾರ್ಕ್ ಪರ್ಯಾಯ ದ್ವೀಪ ಹಾಗೂ ಪಪುವ ನ್ಯೂಗಿನಿ ಪ್ರದೇಶಗಳ ನಡುವೆ ಇರುವ ಕಿರಿದಾದ ಆದರೆ ನೀಳವಾದ ಸಮುದ್ರ. ಈ ಸಮುದ್ರದಲ್ಲಿ 274 ಸಣ್ಣ ಪುಟ್ಟ ದ್ವೀಪಗಳಿವೆ. ಇವುಗಳಲ್ಲಿ ದೊಡ್ಡದಾದ 17-18 ದ್ವೀಪಗಳಲ್ಲಿ ಮಾತ್ರ ಜನವಸತಿಯಿದ್ದು, ಸುಮಾರು 150 ಕಿ.ಮೀ. ವ್ಯಾಪ್ತಿಯ ಸಮುದ್ರದಲ್ಲಿ ಹರಡಿವೆ. ಇಂದು ಆಡಳಿತಾತ್ಮಕವಾಗಿ ನೈಋತ್ಯ ಶಾಂತ ಮಹಾಸಾಗರದ ದ್ವೀಪಗಳಲ್ಲಿ ವಾಸಿಸುತ್ತಿರುವ ಜನರನ್ನು ವಿಶಾಲವಾಗಿ 'ಓಷಿಯನ್ಸ್' ಎಂದು ಕರೆಯುವುದುಂಟು. ಇವರಲ್ಲಿ ಮೆಲನೇಷಿಯನ್ಸ್, ಮೈಕ್ರೋನೇಷಿಯನ್ಸ್ ಹಾಗೂ ಪಾಲಿನೇಷಿಯನ್ಸ್ ಮುಖ್ಯರಾದವರು.

ಮೆಲನೇಷಿಯ ಎನ್ನುವುದು ಗ್ರೀಕ್ ಶಬ್ದ. 'ಮೆಲಾಸ್' ಎಂದರೆ ಕಪ್ಪು. 'ನೆಸೋಯಿ' ಎಂದರೆ ದ್ವೀಪಗಳು. 'ಕಪ್ಪು ದ್ವೀಪಗಳು' ಎಂಬ ಅರ್ಥವನ್ನು ಹೊಮ್ಮಿಸುತ್ತವೆ. ಆದರೆ ನಾವು ಅದನ್ನು 'ಕಪ್ಪು ಜನರು ವಾಸಿಸುವ ದ್ವೀಪಗಳು' ಎಂದು ಅರ್ಥೈಸಬೇಕಾಗುತ್ತದೆ. ಇಂದಿಗೆ ಸುಮಾರು 70,000-60,000 ವರ್ಷಗಳ ಹಿಂದೆ, ಪೂರ್ವ ಆಫ್ರಿಕದಿಂದ ಹೊರಟ 'ಮಾನವ ಜನಾಂಗದ ಮೊದಲ ಮಹಾವಲಸೆ'ಯ ಜನರು ಅರೇಬಿಯ, ಭಾರತ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಆಗ್ನೇಯ ಏಷ್ಯಾದ ಮೂಲಕ ಮೆಲನೇಷಿಯವನ್ನು ತಲುಪಿ, ಕೊನೆಗೆ ಆಸ್ಟ್ರೇಲಿಯಾದಲ್ಲಿ ಬೀಡುಬಿಟ್ಟರು. ಹಾಗಾಗಿ ಟಾರಸ್ ಜಲಸಂಧಿಯ ದ್ವೀಪಗಳಲ್ಲಿ ವಾಸಿಸುವ ಮೆಲನೇಷಿಯನ್ನರು ಜಗತ್ತಿನ ಅತ್ಯಂತ ಪುರಾತನ ಬುಡಕಟ್ಟುಗಳಲ್ಲಿ ಒಬ್ಬರು ಆಗಿದ್ದಾರೆ.

19ನೆಯ ಶತಮಾನದ ಆದಿಭಾಗ. ಯುರೋಪಿಯನ್ನರಿಗೆ ಯೂರೋಪನ್ನು ಬಿಟ್ಟು, ಜಗತ್ತಿನ ಇತರ ಪ್ರದೇಶಗಳಲ್ಲಿ ವಾಸ ಮಾಡುವ ಜನರ ಬಗ್ಗೆ ಅಂಥ ತಿಳಿವಳಿಕೆ ಏನೂ ಇರಲಿಲ್ಲ. ವಸಾಹತುಶಾಹಿ ಆಡಳಿತಗಾರರು ಹಾಗೂ ಕ್ರೈಸ್ತ ಮತಪ್ರಚಾರಕರು ಹೇಳುವ ವಿಚಾರಗಳನ್ನೇ 'ಪರಮಸತ್ಯ' ಎಂದು ಭಾವಿಸಿದ್ದರು. ಆದರೆ ವಿಜ್ಞಾನಿಗಳಿಗೆ ಇವರು ನೀಡಿದ ಉತ್ಪ್ರೇಕ್ಷಿತ ವರದಿಗಳ ಬಗ್ಗೆ ನಂಬಿಕೆ ಇರಲಿಲ್ಲ. ಹಾಗಾಗಿ ಸ್ವತಃ ತಾವೇ ಕ್ಷೇತ್ರಾಧ್ಯಯನವನ್ನು ಮಾಡಿ ವಾಸ್ತವವನ್ನು ಅರಿಯಬೇಕು ಎಂದರು. ಕೇಂಬ್ರಿಜ್ ವಿಶ್ವವಿದ್ಯಾಲಯವು 'ಟಾರೆಸ್ ಜಲಸಂಧಿಯ ಕೇಂಬ್ರಿಜ್ ಮಾನವ ಶಾಸ್ತ್ರೀಯ ಕ್ಷೇತ್ರಯಾನ'ವನ್ನು ನಡೆಸಲು ಸಿದ್ಧತೆಗಳನ್ನು ನಡೆಸಿತು. ಇದೊಂದು ಬಹುಮುಖಿ-ಅಧ್ಯಯನದ ಯಾನವಾಗಿತ್ತು. ಈ ಕ್ಷೇತ್ರಯಾನದಲ್ಲಿ ಟಾರೆಸ್ ಜಲಸಂಧಿಯ ದ್ವೀಪಗಳಲ್ಲಿ ವಾಸವಾಗಿರುವ ಮೆಲನೇಷಿಯನ್ನರ ಮಾನವ ವಿಜ್ಞಾನ ಅಥವಾ ಆಂಥ್ರೋಪಾಲಜಿ, ಮನೋವಿಜ್ಞಾನ ಅಥವಾ ಸೈಕಾಲಜಿ, ಜನಾಂಗೀಯ ವಿಜ್ಞಾನ ಅಥವಾ ಎಥ್ನೋಗ್ರಫಿ ಹಾಗೂ ಸಂಶೋಧನೆಯಲ್ಲಿ ನೈತಿಕ ಇತಿಮಿತಿಗಳನ್ನು ಕುರಿತು ಅಧ್ಯಯನ ಮಾಡುವ ಯೋಜನೆಯನ್ನು ಹಾಕಿಕೊಂಡಿತ್ತು. ಆದರೆ ಈ ಯೋಜನೆಗೆ ಅನುಮತಿಯನ್ನು ನೀಡಿದ ಆಳರಸರಲ್ಲಿ 'ಈ ಯುರೋಪಿಯನ್ನೇತರ ಕಾಡುಜನರನ್ನು ಅಧ್ಯಯನ ಮಾಡಿ, ಇವರು ಎಲ್ಲ ವಿಚಾರಗಳಲ್ಲಿ ತಮಗಿಂತಲೂ ಕೀಳು' ಎನ್ನುವುದನ್ನು ನಿರೂಪಿಸುವ ಒಳಹುನ್ನಾರವಿತ್ತು.

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನಿಯಾಗಿದ್ದ ಆಲ್‌ಫ್ರೆಡ್ ಕಾರ್ಟ್ ಹೇಡನ್ (1855-1940) ಮಾನವ ವಿಜ್ಞಾನದಲ್ಲಿ ಆಸಕ್ತಿಯನ್ನು ತಳೆದು, ವಿಶೇಷ ಅಧ್ಯಯನವನ್ನು ನಡೆಸಿ ತಜ್ಞನೆನಿಸಿಕೊಂಡಿದ್ದ. ಇವನು 1888ರಲ್ಲಿ ಟಾರೆಸ್ ಜಲಸಂಧಿಯ ದ್ವೀಪಗಳಿಗೆ ಭೇಟಿಯನ್ನು ನೀಡಿದ್ದ. ಅವರ



ಸಂಸ್ಕೃತಿಯ ಬಗ್ಗೆ ಅಪಾರ ಕುತೂಹಲವನ್ನು ತಳೆದು, ಅವರನ್ನು ಕ್ರಮಬದ್ಧವಾಗಿ ಅಧ್ಯಯನವನ್ನು ಮಾಡಬೇಕೆನ್ನುವ ಮಹದಾಸೆಯಿಂದ ಮಹಾ ಮೇಧಾವಿಗಳ ತಂಡವನ್ನು ಸಿದ್ಧಪಡಿಸಿದ್ದ.

1. ವಿಲಿಯಮ್ ಹಾಲ್ಸ್ ರಿವರ್ಸ್ (1864-1922) ಒಬ್ಬ ವೈದ್ಯ ಹಾಗೂ ಪ್ರಾಯೋಗಿಕ ಮನೋವಿಜ್ಞಾನಿಯಾಗಿದ್ದ.
2. ಚಾರ್ಲ್ಸ್ ಗೇಬ್ರಿಯಲ್ ಸೆಲಿಗ್ಮನ್ (1873-1940) ಒಬ್ಬ ರೋಗವಿಜ್ಞಾನಿ ಹಾಗೂ ಜನಾಂಗವಿಜ್ಞಾನಿಯಾಗಿದ್ದ. ಇವನು ಭವಿಷ್ಯದಲ್ಲಿ ಬಹು ಚರ್ಚೆಗೆ ಎಡೆಮಾಡಿಕೊಟ್ಟ ಜನಾಂಗೀಯ ಸಿದ್ಧಾಂತಗಳನ್ನು ಮಂಡಿಸಿದವನು.
3. ಚಾರ್ಲ್ಸ್ ಸ್ಯಾಮ್ಯುಯಲ್ ಮೇಯರ್ಸ್ (1873-1946) ಓರ್ವ ವೈದ್ಯನಾಗಿದ್ದ. ಜತೆಗೆ ಮನೋವಿಜ್ಞಾನ ಹಾಗೂ ಸಂಗೀತದಲ್ಲಿ ಅಪಾರ ಪರಿಣತಿಯನ್ನು ಪಡೆದಿದ್ದ.
4. ಸಿಡ್ನಿ ಹರ್ಬರ್ಟ್ ರೇ (1858-1939) ಅಧ್ಯಾಪಕನಾಗಿದ್ದ ಹಾಗೂ ಮೆಲನೇಷಿಯನ್ ಭಾಷೆಗಳನ್ನು ಬಲ್ಲ ಭಾಷಾತಜ್ಞನಾಗಿದ್ದ.
5. ವಿಲಿಯಂ ಮ್ಯಾಕ್ ಡೌಗಾಲ್ (1871-1938) ವೈದ್ಯನೂ, ಮನೋವಿಜ್ಞಾನಿಯೂ ಆಗಿದ್ದ.
6. ಆಂಥೋನಿ ವಿಲ್ಕಿನ್ಸ್ (1877-1901) ತಂಡದಲ್ಲಿ ಅತ್ಯಂತ ಚಿಕ್ಕವಯಸ್ಸಿನವನಾಗಿದದು, ಪದವೀಧರನಾಗಿದ್ದ ಹಾಗೂ ಛಾಯಾಗ್ರಹಣದಲ್ಲಿ ಪರಿಣತಿಯನ್ನು ಪಡೆದಿದ್ದ.

ಯುರೋಪಿಯನ್ ಇತಿಹಾಸದಲ್ಲಿ ಮೊದಲ ಬಾರಿಗೆ ಹೀಗೆ ಹಲವು ತಜ್ಞರಿಂದ ಕೂಡಿದ್ದ ತಂಡವು ಟಾರೆಸ್ ಜಲಸಂಧಿಯ ದ್ವೀಪಗಳಲ್ಲಿದ್ದ ಮೆಲನೇಷಿಯನ್ನರ ಸಮಗ್ರ ಅಧ್ಯಯನಕ್ಕೆ ಹೊರಟಿತ್ತು. ಈ ತಂಡದ ಪ್ರಾಥಮಿಕ ಆಸಕ್ತಿಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

- ಸ್ಥಳೀಯ ಸಂಸ್ಕೃತಿಯ ದಾಖಲೀಕರಣ: ಅವರ ಪುರಾಣಗಳನ್ನು, ಧರ್ಮಾಚರಣೆಗಳನ್ನು, ಸಾಮಾಜಿಕ ರಚನೆಯನ್ನು ಹಾಗೂ ದೈನಂದಿನ ಜೀವನಶೈಲಿಯನ್ನು ಕ್ರಮಬದ್ಧವಾಗಿ ದಾಖಲಿಸುವುದು.
- ಮನೋವ್ಯಾಪಾರಗಳಲ್ಲಿ ವಿಭಿನ್ನತೆ: ಯುರೋಪಿಯನ್ನರ ಹಾಗೂ ಮೆಲನೇಷಿಯನ್ನರ ಅರಿವಿನ ಪ್ರಕ್ರಿಯೆಗಳಲ್ಲಿ (ಕಾಗ್ನಿಟಿವ್ ಪ್ರೋಸೆಸಸ್) ಇರಬಹುದಾದ ವ್ಯತ್ಯಾಸಗಳನ್ನು ಗುರುತಿಸುವುದು.
- ಭಾಷಾ ವೈಶಿಷ್ಟ್ಯಗಳ ಸಂಗ್ರಹ: ಸ್ಥಳೀಯ ಭಾಷೆಗಳ ವಿನ್ಯಾಸ ಹಾಗೂ ಪದಸಂಪತ್ತನ್ನು ಕ್ರಮಬದ್ಧವಾಗಿ ಸಂಗ್ರಹಿಸುವುದು.
- ಮಾನವಶಾಸ್ತ್ರೀಯ ಅಳತೆಗಳನ್ನು ಗುರುತಿಸುವುದು: ಮೆಲನೇಷಿಯನ್ನರ ದೇಹದ ವಿವಿಧ ಅಂಶಗಳನ್ನು ಅಳೆಯುವುದು. ಉದಾಹರಣೆಗೆ ಅವರು ಎಷ್ಟು ಎತ್ತರವಿದ್ದಾರೆ, ಅವರ ತಲೆಯು ಎಷ್ಟು ಉದ್ದವಿದೆ, ಎಷ್ಟು ಅಗಲವಿದೆ, ದೇಹ ರಚನೆ ಹೇಗಿದೆ ಇತ್ಯಾದಿ.
- ಆರೋಗ್ಯ ಮತ್ತು ರೋಗರುಜಿನಗಳು: ಮೆಲನೇಷಿಯನ್ನರ ಒಟ್ಟಾರೆ ಆರೋಗ್ಯ ಹಾಗೂ ಅವರಿಗೆ ಇರಬಹುದಾದ ರೋಗರುಜಿನಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು.

ಈ ಅಧ್ಯಯನವು ಮಾನವನ ಇತಿಹಾಸದಲ್ಲಿ ಮೊದಲ ಬಾರಿಗೆ ಅನೇಕ ದಾಖಲೆಗಳನ್ನು ಮಾಡಿತು. ಅದುವರೆಗೂ ಜನಾಂಗೀಯ ಅಧ್ಯಯನವೆಂದರೆ ಅವರು ಇವರು ಹೇಳಿದ ಮಾತುಗಳನ್ನು ಆಲಿಸಿ ತೀರ್ಮಾನಕ್ಕೆ ಬರುವುದಾಗಿತ್ತು. ಈಗ ಮೊದಲ ಬಾರಿಗೆ ತಜ್ಞರು ಜನಾಂಗೀಯ ಕ್ಷೇತ್ರಾಧ್ಯಯನವನ್ನು (ಫೀಲ್ಡ್ ವರ್ಕ್ ಎಥ್ನೋಗ್ರಫಿ) ಕೈಗೊಂಡಿದ್ದರು. ವಿಜ್ಞಾನಿಗಳು ತಾವೇ ಕಣ್ಣಿಂದ ನೋಡಿದ್ದನ್ನ ಹಾಗೂ ನೇರವಾದ ಮಾತುಕತೆಯಿಂದ ವಿಚಾರಗಳನ್ನು ಸಂಗ್ರಹಿಸಿದ್ದರು. ಮಾನವ ಪ್ರಾಯೋಗಿಕ ಕ್ಷೇತ್ರ ಮನೋವಿಜ್ಞಾನದ ಅಧ್ಯಯನಗಳು (ಎಕ್ಸ್‌ಪೆರಿಮೆಂಟಲ್ ಸೈಕಾಲಜಿ ಇನ್ ದಿ ಫೀಲ್ಡ್) ಯುರೋಪಿಯನ್ನರ ಮೇಲರಿಮೆಗೆ ಬಲವಾದ ಪೆಟ್ಟನ್ನು ನೀಡಿದವು. ಅವರು ಮೆಲನೇಷಿಯನ್ನರ ವೀಕ್ಷಣಾ ಸಾಮರ್ಥ್ಯ, ಬಣ್ಣಗಳನ್ನು ತಿಳಿಯುವ ಸಾಮರ್ಥ್ಯ, ಕ್ರಿಯೆಗೆ ಪ್ರತಿಕ್ರಿಯೆಯನ್ನು ನೀಡುವ ಸಾಮರ್ಥ್ಯ, ನೆನಪಿನ ಶಕ್ತಿ ಇತ್ಯಾದಿಗಳನ್ನು ಅಧ್ಯಯನದ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಮುರ್ರೆ ದ್ವೀಪದಲ್ಲಿದ್ದ ಪಾಲಿನೇಷಿಯನ್ನರ ಬಣ್ಣವನ್ನು ತಿಳಿಯುವ ಸಾಮರ್ಥ್ಯದ ಪ್ರಯೋಗವನ್ನು ಮಾಡಿದರು. ವಿಲಿಯಮ್ ಹಾಲ್ಸ್ ರಿವರ್ಸ್, ಸೂಕ್ಷ್ಮ ವರ್ಣವೈವಿಧ್ಯಗಳಿದ್ದ ನೀಲಿ ಮತ್ತು ಹಸಿರು ಬಣ್ಣಗಳ ಉಣ್ಣೆಯ ದಾರವನ್ನು ದ್ವೀಪವಾಸಿಗಳಿಗೆ ನೀಡಿದ. ಅವರು ಯುರೋಪಿಯನ್ನರಿಗಿಂತಲೂ ಹೆಚ್ಚು ನಿಖರವಾಗಿ ವಿವಿಧ ಬಣ್ಣಗಳ ಸೂಕ್ಷ್ಮ ಛಾಯಾ ವ್ಯತ್ಯಾಸಗಳನ್ನು ಗುರುತಿಸಿದರು. ಅವರು ಹುಟ್ಟಿನಿಂದ ಸಮುದ್ರದ ನೀಲಿ ಹಾಗೂ ಕಾಡಿನ ಹಸಿರಿನ ಸೂಕ್ಷ್ಮಗಳನ್ನು ನೋಡುತ್ತಾ ಬೆಳೆದವರು. ಹಾಗಾಗಿ ಅವರ ಬಣ್ಣ ತಿಳಿಯುವ ಸಾಮರ್ಥ್ಯವು ಸಹಜವಾಗಿಯೇ ಉತ್ತಮವಾಗಿತ್ತು.

ಆಂಥೋನಿ ವಿಲ್ಕಿನ್ಸ್, ಮೊದಲ ಬಾರಿಗೆ ಪಾಲಿನೇಷಿಯನ್ನರ ಚಿತ್ರಗಳನ್ನು ಸೆರೆ ಹಿಡಿದಿದ್ದನು. ಪಾಲಿನೇಷಿಯನ್ನರು ತಮ್ಮದೇ ಧಾರ್ಮಿಕ ನೃತ್ಯಗಳನ್ನು ಹಾಗೂ ಆಚರಣೆಗಳನ್ನು ನಡೆಸುತ್ತಿದ್ದರು. ಆತ ಹೆಂಗಸರನ್ನು ದೂರವಿಟ್ಟು, ಗಂಡಸರು ಮಾತ್ರ ಭಾಗವಹಿಸಿದ ನೃತ್ಯವನ್ನು ಚಿತ್ರೀಕರಿಸಿದ. ನಂತರ ಅದನ್ನು ಬೃಹತ್ ಪರದೆಯ ಮೇಲೆ ತೋರಿಸಿದ. ಅವರು ಭಯಾಶ್ಚರ್ಯದಿಂದ ತಮ್ಮನ್ನು ತಾವೇ ಬೃಹತ್ ಪರದೆಯ ಮೇಲೆ ನೋಡಿದರು. ಆಗ ಹಿರಿಯನೊಬ್ಬ 'ಇವರು ತಮ್ಮ ಆತ್ಮಗಳನ್ನು ಸೆರೆಹಿಡಿದು ತೋರಿಸುತ್ತಿದ್ದಾರೆ' ಎಂದು ಕ್ಯಾತೆ ತೆಗೆದ. ಆಗ ವಿಲ್ಕಿನ್ಸ್ ಆತ್ಮಗಳನ್ನು ಸೆರೆಹಿಡಿಯಲು ಸಾಧ್ಯವಿಲ್ಲವೆಂದು ಬಹಳ ಕಷ್ಟಪಟ್ಟು ಅವರಿಗೆ ಮನದಟ್ಟು ಮಾಡಿಕೊಟ್ಟ.

ವಿಜ್ಞಾನಿಗಳಿಗೆ ಮೆಲನೇಷಿಯನ್ನರ ವಿವಿಧ ಬುಡಕಟ್ಟುಗಳಲ್ಲಿ ಇದ್ದ ವಿಧಿ ನಿಷೇಧಗಳನ್ನು ಹಾಗೂ ಕುಲಲಾಂಛನಗಳ (ಟೋಟೆಮ್) ಬಗ್ಗೆ ತಿಳಿಯುವ ಕುತೂಹಲವಿತ್ತು. ಮೆಲನೇಷಿಯನ್ನರು ಇಡೀ ಪ್ರಕೃತಿಯನ್ನು ಒಂದು ಕುಟುಂಬದಂತೆ ಕಾಣುತ್ತಿದ್ದರು. ಆ ಪ್ರಕೃತಿಯಲ್ಲಿರುವ ಪ್ರತಿಯೊಂದು ಪಶು, ಪಕ್ಷಿ, ಗಿಡ ಮತ್ತು ಮರಗಳೊಡನೆ ಅವರು ಸಂಬಂಧವನ್ನು ಕಾಣುತ್ತಿದ್ದರು. ಅವುಗಳನ್ನು ಬಂಧುಗಳೆಂದು ಪರಿಗಣಿಸುತ್ತಿದ್ದರು. ಒಬ್ಬ ಹಿರಿಯ 'ನಾನು ಆ ಹಕ್ಕಿಯ ಮಾಂಸವನ್ನು ತಿನ್ನುವುದಿಲ್ಲ' ಎಂದ. 'ಏಕೆ?' ಎಂದು ಕೇಳಿದಾಗ, 'ಆ ಹಕ್ಕಿಯು ನನ್ನ ತಾಯಿಯ ಸೋದರ. ಹಾಗಾಗಿ ನಾನು ಅದನ್ನು ತಿನ್ನಲಾರೆ' ಎಂಬ ವಿವರಣೆಯನ್ನು ನೀಡಿದ. ತಮ್ಮ ಹಿರಿಯರೆಲ್ಲ ಪಶುಪಕ್ಷಿಗಳ ರೂಪದಲ್ಲಿ ತಮ್ಮ ನಡುವೆಯೇ ವಾಸಿಸುತ್ತಾರೆ ಎನ್ನುವುದು ಅವರ ನಂಬಿಕೆಯಾಗಿತ್ತು. ಇಂಥ ಕಥೆಗಳನ್ನು ಆಧರಿಸಿ ಫ್ರಾಯ್ಡ್, 'ಟೋಟೆಮ್ ಆ್ಯಂಡ್ ಟಾಬು' ಎಂಬ ಪುಸ್ತಕವನ್ನು 1913ರಲ್ಲಿ ಪ್ರಕಟಿಸಿದ.

ಭಾಷಾ ಶಾಸ್ತ್ರಜ್ಞನಾಗಿದ್ದ ಸಿಡ್ನಿ ರೇ, ಪಾಲಿನೇಷಿಯನ್ನರ 'ಮೆರಿಯಮ್ ಮಿರ್' ಹಾಗೂ 'ಕಲ ಲಗಾವ್ ಯ' ಭಾಷೆಗಳನ್ನು ತಿಳಿದಿದ್ದ. ಹಾಗಾಗಿ ಆ ಭಾಷೆಗಳಲ್ಲಿದ್ದ ಪುರಾಣಗಳನ್ನು, ಕಥೆಗಳನ್ನು, ನುಡಿಗಟ್ಟುಗಳನ್ನು ಹಾಗೂ ಭಾಷಾ ಸಂಪತ್ತನ್ನು ಸಂಗ್ರಹಿಸಿದ. ಒಬ್ಬ ಹಿರಿಯ 'ನಿಮ್ಮ ಇಂಗ್ಲಿಷಿನಲ್ಲಿ ದೊಡ್ಡ ದೊಡ್ಡ ಪುಸ್ತಕಗಳಿದ್ದರೆ, ನಮ್ಮಲ್ಲಿ ದೊಡ್ಡ ದೊಡ್ಡ ನೆನಪುಗಳಿವೆ' ಎಂದು ಹೇಳಿದ. ಸಿಡ್ನಿ ರೇ, ಪಾಲಿನೇಷಿಯನ್ನರ ಮೌಖಿಕ ಪರಂಪರೆಗೆ ಮನಸೋತ. ಹಾಗಾಗಿ ತನ್ನಿಂದ ಸಾಧ್ಯವಾದಷ್ಟು ಅವರ ಸಾಹಿತ್ಯವನ್ನು ಬರೆದುಕೊಂಡ. ಅವನು ಅಂದು ಬರೆದಿಟ್ಟ ಮೌಖಿಕ ಸಾಹಿತ್ಯವು ಇಂದಿಗೂ ಜೀವಂತವಾಗಿ ಉಳಿದಿದ್ದು, ಪಾಲಿನೇಶಿಯನ್ನರ ಬದುಕನ್ನು ಸಂತೃಪ್ತಗೊಳಿಸುತ್ತಿದೆ.

ಮಾನವ ವಿಜ್ಞಾನದ ಭಾಗವಾಗಿ ಮೆಲನೇಷಿಯನ್ನರ ತಲೆಯ ಉದ್ದ, ಅಗಲ, ಗಾತ್ರ ಮುಂತಾದವನ್ನು ಅಳೆದಾಗ, ಒಬ್ಬ- 'ನನ್ನ ತಲೆಯನ್ನ ಯಾಕೆ ಅಳೀತಾ ಇದ್ದೀರಿ. ನಾನು ಸತ್ತ ಮೇಲೆ ನನ್ನ ತಲೆಯನ್ನೇನಾದರೂ ನಿಮ್ಮ ರಾಣಿಗೆ ಉಡುಗೊರೆಯನ್ನಾಗಿ ನೀಡುತ್ತೀರ' ಎಂದು ಪ್ರಶ್ನಿಸಿದ. ಆತನ ಮಾತನ್ನು ಕೇಳಿ ಹೇಡನ್ ಚಿಂತಿಸಲಾರಂಭಿಸಿದ. ಬುಡಕಟ್ಟಿನ ಜನರನ್ನು 'ನಮಗಿಂತ ಕೀಳು' ಎಂದು ಭಾವಿಸುವ ಮನೋಭಾವವನ್ನು ಹಾಗೂ ಅವರ ದೇಹವನ್ನು ಪ್ರಯೋಗಾಲಯದ ಮಾದರಿಯೆಂಬಂತೆ ಪರಿಗಣಿಸುವುದನ್ನು ನೋಡಿ ನಾಚಿದ. ಕೊನೆಗೆ ಮಾನವ ವಿಜ್ಞಾನ ಹಾಗೂ ಜನಾಂಗೀಯ ಅಧ್ಯಯನಗಳು ಮಾನವೀಯತೆಯ ನೆಲೆಯಲ್ಲಿಯೇ ನಡೆಯಬೇಕೆಂದು ನೈತಿಕ ವಿಧಿ ವಿಧಾನಗಳನ್ನು ಹಾಗೂ ಮಾನದಂಡವನ್ನು ರೂಪಿಸಿದ.

ಮನೋವಿಜ್ಞಾನಿ ರಿವರ್ಸ್‌ನಿಗೆ ಪಾಲಿನೇಷಿಯನ್ನರು ಹೇಳುವ ಕಥಾವಿಧಾನಗಳು ಮೆಚ್ಚುಗೆಯಾದವು. 'ತನ್ನಂತೆ ಪರರ ಬಗೆಯುವ' ದ್ವೀಪವಾಸಿಗಳ ನಿಲುವು ಅವನ ಬದುಕನ್ನೇ ಬದಲಾಯಿಸಿತು. ಮೊದಲನೆಯ ಮಹಾಯುದ್ಧದ ವೇಳೆಯಲ್ಲಿ ಮನೋಸಮಸ್ಯೆಗಳಿಂದ ದಾಖಲಾಗಿದ್ದ ಸೈನಿಕರಿಗೆ ಈತನು 'ಮಾತಿನ ಮೂಲಕವೇ ಚಿಕಿತ್ಸೆ'ಯನ್ನು ನೀಡಿದ. 2004. ಟಾರೆಸ್ ಜಲಸಂಧಿಯ ದ್ವೀಪವಾಸಿಗಳು ಕೇಂಬ್ರಿಜ್‌ಗೆ ಬಂದರು. ಅವರಲ್ಲಿ ಒಬ್ಬ ತನ್ನ ಮುತ್ತಜ್ಜನ ಫೋಟೋವನ್ನು ನೋಡಿ ಅಳಲಾರಂಭಿಸಿದ. ಇದನ್ನು ಕಂಡ ವಿಶ್ವವಿದ್ಯಾಲಯದವರು ಮೆಲನೇಷಿಯನ್ನರಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಡಿಜಿಟಲೀಕರಿಸಿ ಅವರಿಗೆ ನೀಡಿದರು. ಅಂದು ಅವರ ದ್ವೀಪದಿಂದ ತಂದಿದ್ದ ಎಲ್ಲ ಮುಖವಾಡಗಳನ್ನು (ಮಾಸ್ಕ್) ಹಿಂದಿರುಗಿಸಿದರು. ಅದೊಂದು ಭಾವನಾತ್ಮಕ ಸನ್ನಿವೇಶವಾಗಿತ್ತು.

ವಸಾಹತುಶಾಹಿ ಆಡಳಿತಗಾರರು ತಮ್ಮ ಮೇಲ್ಮೈ ಸಾಧನೆಗೆಂದು ಕಳುಹಿಸಿದ ಕ್ಷೇತ್ರಾಧ್ಯಯನವು ಅಭೂತಪೂರ್ವ ಯಶಸ್ಸನ್ನು ಗಳಿಸಿತು. ಜತೆಗೆ ಅವರ ಮೇಲ್ಮೈ ಮೌಢ್ಯವನ್ನು ಕಳೆಯಿತು. ಬುಡಕಟ್ಟಿನ ಜನರು ಅಮೆರಿಕನ್ ಅಥವಾ ಯುರೋಪಿಯನ್ ನಾಗರಿಕರಿಗಿಂತ ಯಾವುದೇ ವಿಷಯದಲ್ಲಿ ಕಡಿಮೆಯಿಲ್ಲ; ಕೆಲವು ವಿಷಯಗಳಲ್ಲಿ ಅವರನ್ನೂ ಮೀರಿಸಬಲ್ಲರು ಎಂಬ ಸತ್ಯವು ಬೆಳಕಿಗೆ ಬಂದಿತು. ಜತೆಗೆ ಇಂಥ ಕ್ಷೇತ್ರಾಧ್ಯಯನಗಳು ನಡೆಯಲು ಒಂದು 'ಗೋಲ್ಡ್ ಸ್ಟಾಂಡರ್ಡ್' ಮಾನಕವನ್ನು ರೂಪಿಸಿತು. ಇದು ಇಂದಿಗೂ ಮರೆಯಲಾಗದ ಕ್ಷೇತ್ರಾಧ್ಯಯನ ಎಂದು ಹೆಸರಾಗಿದೆ.

ಡಿಎನ್ಎ ಬೆರಳಚ್ಚು ಎಂಬ ವಿಶಿಷ್ಟ ವರದಾನ

ವ್ಯಕ್ತಿಯ ಗುರುತನ್ನು ಪತ್ತೆ ಹಚ್ಚಲು ಡಿಎನ್ಎ ಬೆರಳಚ್ಚು ಪರೀಕ್ಷೆಯ ಸಹಾಯ ಪಡೆಯುವುದಲ್ಲದೆ, ಆಸ್ಪತ್ರೆಯಲ್ಲಿ ಮಕ್ಕಳನ್ನು ಬದಲಾಯಿಸಿರುವುದನ್ನು ಕಂಡುಹಿಡಿಯುವುದಕ್ಕೆ, ಪಿತೃತ್ವ/ಮಾತೃತ್ವ ಪರೀಕ್ಷೆಗೆ, ಸಾಮೂಹಿಕ ಅತ್ಯಾಚಾರ, ಕೊಲೆ, ಮಕ್ಕಳ ಮೇಲಿನ ಲೈಂಗಿಕ ಕಿರುಕುಳದಂಥ ಅಪರಾಧ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡುಹಿಡಿಯಲು ಈ ವಿಧಾನವನ್ನು ಅವಲಂಬಿಸಲಾಗುತ್ತದೆ.

ವಿಧಿಕೌಶಲ

ಡಾ. ಶಶಿಕುಮಾರ್ ಎಲ್.
vveditoped@gmail.com

ಅಹಮದಾಬಾದ್‌ನಲ್ಲಿ ಇತ್ತೀಚೆಗೆ ಸಂಭವಿಸಿದ ಏರ್ ಇಂಡಿಯಾ ವಿಮಾನದ ಅಪಘಾತದಲ್ಲಿ 260 ಮಂದಿ ಅಸುನೀಗಿದ ವಿಷಯ ಎಲ್ಲರಿಗೂ ಗೊತ್ತಿರುವಂಥದ್ದೇ. ಬೆಂಕಿಗೆ ಆಹುತಿಯಾಗಿ ಸುಟ್ಟು ಕರಕಲಾಗಿದ್ದ ಮೃತದೇಹಗಳನ್ನು ಗುರುತಿಸಿ ಸೂಕ್ತ ವಾರಸುದಾರರಿಗೆ ತಲುಪಿಸುವುದಕ್ಕೆ ಸಹಾಯಕವಾಗಿದ್ದು ವಿಧಿವಿಜ್ಞಾನ ಪ್ರಯೋಗಾಲಯವು ನಡೆಸಿದ ಡಿಎನ್ಎ ಬೆರಳಚ್ಚು ಪರೀಕ್ಷೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ವಿಧಿವಿಜ್ಞಾನ ಎಂಬುದು ಕಾನೂನು ವ್ಯವಸ್ಥೆಯಲ್ಲಿ ಬಳಸಲಾಗುವ ವಿಜ್ಞಾನದ ಅನ್ವಯಿಕ ಶಾಖೆಯಾಗಿದೆ. ಆಧುನಿಕ ವಿಧಿವಿಜ್ಞಾನದ ಪುರಾವೆಗಳ ಒಂದು ಉದಾಹರಣೆ ಎಂದರೆ ಡಿಎನ್ಎ ಬೆರಳಚ್ಚು ಬಳಕೆ. 'ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಆಸಿಡ್' ಎಂಬುದರ ಸಂಕ್ಷಿಪ್ತ ರೂಪವೇ 'ಡಿಎನ್ಎ'. ಜೀವಿಗಳ ವರ್ಣತಂತುಗಳಲ್ಲಿರುವ ಅತ್ಯಂತ ಸಂಕೀರ್ಣವಾದಂಥ, ಅನುವಂಶೀಯ ರಾಸಾಯನಿಕ ಗುಣಗಳನ್ನು ಹೊಂದಿರುವ ಅಣು ಇದು. ವಂಶವಾಹಿಯ ಮುಖ್ಯಭಾಗವಾಗಿರುವ 'ಡಿಎನ್ಎ'ಯು ಏಣಿಯ ರೂಪದಲ್ಲಿ ಜೀವಕೋಶದ ಕೇಂದ್ರ ಭಾಗದಲ್ಲಿರುತ್ತದೆ. ವ್ಯಕ್ತಿ ಅಥವಾ ಜೀವಿಗಳ ವಂಶಾವಳಿಯ ಮಾಹಿತಿಗಳನ್ನು ಇದು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುತ್ತದೆ. ಡಿಎನ್ಎ ಮೂಲಗಳಲ್ಲಿ ವೀರ್ಯಾಣು, ರಕ್ತ, ಕೂದಲು, ಜೊಲ್ಲು, ಮೂತ್ರ, ಚರ್ಮ, ಮೂಳೆ ಮತ್ತು ಅಂಗಾಂಶಗಳು ಒಳಗೊಂಡಿವೆ.

ಡಿಎನ್ಎ ಬೆರಳಚ್ಚು ಅಥವಾ ಡಿಎನ್ಎ ಫಿಂಗರ್ ಪ್ರಿಂಟಿಂಗ್ ಎಂಬುದು, ವ್ಯಕ್ತಿಯ 'ಡಿಎನ್ಎ'ಯ ವಿಶಿಷ್ಟ ಮಾದರಿಯನ್ನು ಗುರುತಿಸುವ ಒಂದು ತಂತ್ರಜ್ಞಾನವಾಗಿದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ 'ಡಿಎನ್ಎ'ಯ ಭಾಗಗಳನ್ನು ವಿಶ್ಲೇಷಿಸುತ್ತದೆ. ಪ್ರತಿಯೊಬ್ಬರ 'ಡಿಎನ್ಎ'ಯ ಒಳಗೆ ಜೀನ್‌ಗಳ ನಡುವೆ ಪುನರಾವರ್ತಿತ ಸರಣಿಗಳು ಇರುತ್ತವೆ. ಇದನ್ನು Tandem repeats (ತಾಂಡೆಂ ಪುನರಾವರ್ತನೆಗಳು) ಎನ್ನುತ್ತಾರೆ. ಈ ಪುನರಾವರ್ತನೆಯ ಅನುಕ್ರಮವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಡಿಎನ್ಎ ಬೆರಳಚ್ಚು ತಂತ್ರಜ್ಞಾನವನ್ನು ಬಳಸಿಕೊಂಡು, ಪ್ರತಿ ವ್ಯಕ್ತಿಗೆ ಸಂಬಂಧಿಸಿದ ಒಂದು ಅನನ್ಯ ಪುನರಾವರ್ತನೆಯ ಮಾದರಿಯನ್ನು ನಾವು ಕಂಡುಕೊಳ್ಳಬಹುದು. ರಕ್ತಸಂಬಂಧಿಕರ ನಡುವಿನ ಡಿಎನ್ಎ ಅನುಕ್ರಮಗಳು, ಪರಸ್ಪರ ಸಂಬಂಧವಿಲ್ಲದ ವ್ಯಕ್ತಿಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಹೋಲುತ್ತವೆ. ಇದು ಹಲವಾರು ಪ್ರಕರಣಗಳಲ್ಲಿ ವ್ಯಕ್ತಿಯ ಗುರುತನ್ನು ಖಚಿತಪಡಿಸಲು ಮತ್ತು ರಕ್ತಸಂಬಂಧಗಳನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಡಿಎನ್ಎ ಬೆರಳಚ್ಚು ವಿಧಾನದಲ್ಲಿ ವ್ಯಕ್ತಿಯಿಂದ ರಕ್ತ, ಕೂದಲು, ಲಾಲಾರಸ ಅಥವಾ ಇತರ ಅಂಗಾಂಶದ ಮಾದರಿಗಳನ್ನು ಮೊದಲು ಸಂಗ್ರಹಿಸಲಾಗುತ್ತದೆ. ನಂತರ ಈ ಮಾದರಿಗಳಿಂದ 'ಡಿಎನ್ಎ' ಅನ್ನು ಹೊರತೆಗೆಯಲಾಗುತ್ತದೆ. ಹೀಗೆ ಹೊರತೆಗೆದ ಡಿಎನ್ಎ ಅನ್ನು ನಿರ್ದಿಷ್ಟ ಕಿಣ್ವಗಳನ್ನು ಬಳಸಿ ಸಣ್ಣ ತುಣುಕುಗಳಾಗಿ ವಿಭಜಿಸಲಾಗುತ್ತದೆ. ಈ ತುಣುಕಗಳನ್ನು 'ಜೆಲ್ ಎಲೆಕ್ಟ್ರೋ ಫೋರೋಸಿಸ್' ಎಂಬ ವಿಧಾನವನ್ನು ಬಳಸಿ, ಗಾತ್ರದ ಆಧಾರದ ಮೇಲೆ ಪ್ರತ್ಯೇಕಿಸಲಾಗುತ್ತದೆ. ಪ್ರತ್ಯೇಕಗೊಂಡ ಡಿಎನ್ಎ ತುಣುಕುಗಳನ್ನು 'ಪಾಲಿಮರೇಸ್ ಚೈನ್ ರಿಯಾಕ್ಷನ್' (ಪಿಸಿಆರ್) ತಂತ್ರಜ್ಞಾನವನ್ನು ಬಳಸಿ ವರ್ಧಿಸಲಾಗುತ್ತದೆ. ಇದರಿಂದಾಗಿ ಹೆಚ್ಚು ಡಿಎನ್ಎ



ಸಿಗುತ್ತದೆ. ವರ್ಧಿತ ಡಿಎನ್ಎ ಮಾದರಿಗಳನ್ನು ಎಕ್ಸ್‌ರೇ ಫಿಲಂ ಅಥವಾ ಇತರ ವಿಧಾನಗಳನ್ನು ಬಳಸಿ ದೃಶ್ಯೀಕರಿಸಲಾಗುತ್ತದೆ. ಈ ಮೂಲಕ ವಿಶಿಷ್ಟ ಮಾದರಿಯನ್ನು ಪಡೆಯಲಾಗುತ್ತದೆ. ಪಡೆದ ಮಾದರಿಯನ್ನು ಹೋಲಿಸಿ ನೋಡಿ ವ್ಯಕ್ತಿಯ ಗುರುತನ್ನು ಸುಲಭವಾಗಿ ಪತ್ತೆ ಹಚ್ಚಬಹುದು.

ವ್ಯಕ್ತಿಯ ಗುರುತನ್ನು ಪತ್ತೆ ಹಚ್ಚಲು ಡಿಎನ್ಎ ಬೆರಳಚ್ಚು ಪರೀಕ್ಷೆಯ ಸಹಾಯ ಪಡೆಯುವುದಲ್ಲದೆ, ಆಸ್ಪತ್ರೆಯಲ್ಲಿ ಮಕ್ಕಳನ್ನು ಬದಲಾಯಿಸಿರುವುದನ್ನು ಕಂಡುಹಿಡಿಯುವುದಕ್ಕೆ, ಪಿತೃತ್ವ/ಮಾತೃತ್ವ ಪರೀಕ್ಷೆಗೆ ಕೂಡ ಈ ವಿಧಾನವನ್ನು ನೆಚ್ಚಲಾಗುತ್ತದೆ. ಮಾತ್ರವಲ್ಲದೆ, ಸಾಮೂಹಿಕ ಅತ್ಯಾಚಾರ, ಅಪಹರಣ, ಕೊಲೆ, ದರೋಡೆ, ಮಕ್ಕಳ ಮೇಲಿನ ಲೈಂಗಿಕ ಕಿರುಕುಳದಂಥ ಅಪರಾಧ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡುಹಿಡಿಯಲು, ಪ್ರವಾಹ, ಭೂಕಂಪದಂಥ ಪ್ರಕೃತಿ ವಿಕೋಪಗಳು ಘಟಿಸಿದ ಸಂದರ್ಭದಲ್ಲಿ ಸಂತ್ರಸ್ತರ ಪತ್ತೆಗೂ ಈ ವಿಧಾನವನ್ನು ಅವಲಂಬಿಸಲಾಗುತ್ತದೆ. ಪ್ರಾಣಿಗಳ ಬೇಟೆ ಮತ್ತು ಕಳ್ಳಸಾಗಣೆಯನ್ನು ಪತ್ತೆ ಹಚ್ಚುವ ಸಂದರ್ಭದಲ್ಲೂ ಈ ಪರೀಕ್ಷಾ ವಿಧಾನದ ಬಳಕೆಯಾಗುತ್ತದೆ ಎಂಬುದು ಗಮನಿಸಬೇಕಾದ ಸಂಗತಿ.

ಜ್ಞಾನಭಾರತಿ ಸಾಮೂಹಿಕ ಅತ್ಯಾಚಾರ ಪ್ರಕರಣ, ಭಾಸ್ಕರ್‌ಶೆಟ್ಟಿ ಕೊಲೆ ಪ್ರಕರಣ, ಮೈಸೂರಿನಲ್ಲಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಸೇರಿದಂತೆ ಹಲವು ಅತಿಸೂಕ್ಷ್ಮ ಪ್ರಕರಣಗಳಲ್ಲಿ ಅಪರಾಧಿಗಳ ಹೆಡೆಮುರಿ ಕಟ್ಟುವ ನಿಟ್ಟಿನಲ್ಲಿ ಡಿಎನ್ಎ ಬೆರಳಚ್ಚು ಪರೀಕ್ಷೆಯು ಪೊಲೀಸ್ ಮತ್ತು ನ್ಯಾಯಾಂಗ ಇಲಾಖೆಗಳಿಗೆ ಸಹಾಯ ಮಾಡಿದೆ. ಕೊಲೆ, ದರೋಡೆ, ಅತ್ಯಾಚಾರ, ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಮುಂತಾದ ಘಟನೆಗಳ ಬಗ್ಗೆಯೇ ಇಂದು ಬಹುತೇಕ ಪ್ರತಿನಿತ್ಯವೂ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಸಮಾಜದಲ್ಲಿ ಇಂಥ ಪ್ರಕರಣಗಳು ನಡೆಯಲೇಬಾರದು, ಒಂದೊಮ್ಮೆ ನಡೆದರೆ ನಿಜವಾದ ಅಪರಾಧಿಗೆ ಶಿಕ್ಷೆ ಕೊಡಿಸುವಂತಾಗಬೇಕು. ಆಗ ಮಾತ್ರವೇ ಇಂಥ ಅಪರಾಧಗಳು ಮರುಕಳಿಸದಂತೆ ನೋಡಿಕೊಳ್ಳಲು ಸಾಧ್ಯವಿದೆ. ಮೇಲೆ ಉಲ್ಲೇಖಿಸಿರುವಂಥ ಅಪರಾಧಗಳ ತನಿಖೆಯಲ್ಲಿ ಡಿಎನ್ಎ ಬೆರಳಚ್ಚು ತಂತ್ರಜ್ಞಾನವು ಮಹತ್ತರ ಪಾತ್ರವನ್ನು ವಹಿಸುತ್ತದೆ. ಈ ತಂತ್ರಜ್ಞಾನವು ಅತ್ಯಂತ ನಿಖರವಾದದ್ದು ಹಾಗೂ ಯಾರೇ ಎಲ್ಲೇ ಪ್ರಯೋಗ-ಪರೀಕ್ಷೆ ಮಾಡಿದರೂ ಒಂದೇ ಫಲಿತಾಂಶ ಸಿಗುತ್ತದೆ. 2024ರಲ್ಲಿ, ಡಿಎನ್ಎ ಬೆರಳಚ್ಚು ತಂತ್ರಜ್ಞಾನವು ಸುಮಾರು 25 ಲಕ್ಷದಷ್ಟು ಸೂಕ್ಷ್ಮ ಪ್ರಕರಣಗಳಲ್ಲಿ ನೊಂದವರಿಗೆ ನ್ಯಾಯ ದೊರಕಿಸಿಕೊಡಲು ಸಹಾಯಮಾಡಿದೆ ಎಂದು ಗುಜರಾತಿನ ವಿಧಿವಿಜ್ಞಾನ ಪ್ರಯೋಗಾಲಯದ ನಿರ್ದೇಶನಾಲಯವು ಅತ್ಯಂತ ಹೆಮ್ಮೆಯಿಂದ ಹೇಳಿಕೊಂಡಿದೆ. ಅಹಮದಾಬಾದ್‌ನ ವಿಮಾನ ದುರಂತದಲ್ಲಿ ಮೃತಪಟ್ಟವರ ಗುರುತಿಸುವಿಕೆಯ ಕಾರ್ಯವನ್ನು ಡಿಎನ್ಎ ಬೆರಳಚ್ಚು ತಂತ್ರಜ್ಞಾನ ಮಾಡಿರುವುದಲ್ಲದೆ, ವಾಹನ ಅಪಘಾತ, ರೈಲು ದುರಂತ, ಕಟ್ಟಡ ಕುಸಿತ ಮತ್ತು ಭಾರಿ ಅಗ್ನಿ ಅವಘಡದ ಸಂದರ್ಭದಲ್ಲೂ ಸಂತ್ರಸ್ತರ ಗುರುತಿನ ಪತ್ತೆಗೆ ಅತ್ಯವಶ್ಯಕವಾಗಿದೆ. ಒಟ್ಟಿನಲ್ಲಿ ಡಿಎನ್ಎ ಬೆರಳಚ್ಚು ತಂತ್ರಜ್ಞಾನವು ಮಾನವನಿಗೆ ದೊರೆತಿರುವ ಒಂದು ಅದ್ಭುತ ಮತ್ತು ಆಪದ್ಬಾಂಧವ ಸ್ವರೂಪಿ ಕೊಡುಗೆಯೇ ಸರಿ!

(ಲೇಖಕರು ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಅಧಿಕಾರಿ)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೀಗಿತ್ತು ವಿಶ್ವವಿಹಾರ

ಭಾನುವಾರದ (ಜು.13) ವಿಶ್ವವಾಣಿಯ ಓದು ಒಂದು ಚೇತೋಹಾರಿ ಅನುಭವವನ್ನೇ ನೀಡಿತು. 'ಮೋದಿಯನ್ನು ಮರೆಸುವವ ಸಿಗುವುದಾದರೆ ಸರಿ' ಎಂದು ಶೀರ್ಷಿಕೆಯಲ್ಲೇ ಹೇಳಿಬಿಟ್ಟ 'ವಿದ್ಯಮಾನ' ಅಂಕಣಕಾರ ವಿನಾಯಕ ವೆಂ.ಭಟ್ಟರು, ನೆಹರು ನಂತರ ಯಾರು? ಇಂದಿರಾ ನಂತರ ಯಾರು? ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿರುವಂತೆಯೇ ಮೋದಿಯ ನಂತರ ಯಾರು? ಎಂಬ ಪ್ರಶ್ನೆಗೂ ತಮ್ಮ ಬರಹದಲ್ಲೇ ಮಾರ್ಮಿಕವಾಗಿ ಉತ್ತರಿಸಿದ್ದಾರೆ.

ಸಂತೋಷ ಎಂದರೆ ದೊಡ್ಡದ್ದರಿಂದ ಮಾತ್ರ ಬರುವುದಲ್ಲ, ಅದು ನಮ್ಮ ನಿತ್ಯಜೀವನದ ನಗು, ನೆಮ್ಮದಿ, ಸಹಾನುಭೂತಿ ಮತ್ತು ಕೃತಜ್ಞತೆಯಲ್ಲೂ ಇವೆ ಎಂಬ ವಿಶ್ವೇಶ್ವರ ಭಟ್ ಅವರ ಮಾತುಗಳೂ (ಆಸ್ಕ್ ದಿ ಎಡಿಟರ್) ಮೆಲುಕುಹಾಕುವಂಥವು. ಇನ್ನು, ಗಡ್ಡ ಕೆರೆಯುವ ಬಗೆಗಿನ ಭಟ್ಟರ ಅಂಕಣ ಬರಹವನ್ನು ಓದಿ, ಹಿಂದಿಯ 'ಗೋಲ್‌ಮಾಲ್' ಸಿನಿಮಾ ನೆನಪಾಯಿತು. ಭಟ್ಟರು ಅದನ್ನು ನೋಡಿದ್ದಿರಲೇಬೇಕು.

ಸಂಗೀತ ಸುಧೆಯನ್ನು ಮಾನವರು ಮಾತ್ರವಲ್ಲದೆ ಪಶು-ಪಕ್ಷಿಗಳೂ ಆಸ್ವಾದಿಸುತ್ತವೆ ಎಂಬುದನ್ನು ಶ್ರೀವತ್ಸ ಜೋಶಿಯವರು ತಮ್ಮ 'ತಿಳಿರು ತೋರಣ' ಅಂಕಣದಲ್ಲಿ ಉದಾಹರಣೆ ಸಮೇತ ಬಣ್ಣಿಸಿ ಬರೆದಿದ್ದನ್ನು ಓದಿ, ಅಜಿತ್ ಕಡಕಡೆ ಅವರ ಅಭಂಗವನ್ನು ಕೇಳಲೇಬೇಕು ಅಂತ ಅನಿಸಿದ್ದು ಸುಳ್ಳಲ್ಲ. ಯಗಟಿ ರಘು ನಾಡಿಗ್ ಅವರ 'ರಸದೌತಣ'ದ ಬರಹವು ಪ್ರಸ್ತುತ 9 ಸಂಚಿಕೆ ದಾಟಿಯೂ 'ಕಳ್ಳಬೆಕ್ಕು' ಪತ್ತೆಯಾಗಿಲ್ಲವಲ್ಲ ಎನಿಸಿದರೂ, 'ಗುರಿ ತಲುಪುವುದು ಎಷ್ಟು ಮುಖ್ಯವೋ, ಅದರ ಕಡೆಗಿನ ಪ್ರಯಾಣವನ್ನೂ ಆನಂದಿಸಬೇಕು' ಎಂಬಂತೆ ಅವಧೂತರ ಸಾಂಗತ್ಯದಲ್ಲಿ ಶಿಷ್ಯರಿಗೆ ಸಿಗುತ್ತಿರುವ ಅನುಭವಗಳನ್ನು ಮಣ್ಣಿನ ಭಾಷೆಯ ಸೊಗಡಲ್ಲಿ ಓದುಗರಿಗೂ ಅದು ತಲುಪಿಸುತ್ತಿದೆ, ಅದನ್ನು ನಾವೂ ಮೆಲ್ಲುತ್ತಿದ್ದೇವೆ ಎನ್ನಲಡ್ಡಿಯಿಲ್ಲ. ಇನ್ನು, ನಮ್ಮ ದೊಡ್ಡ ದೇಹಕ್ಕೆ ಹೃದಯ ಎಂಬ ಪುಟ್ಟ ಯಂತ್ರ ಎಷ್ಟು ಮುಖ್ಯ, ಅದನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ಸರಳಸೂತ್ರಗಳನ್ನು ತಿಳಿಯಪಡಿಸಿದ ಡಾ. ಶ್ರೀಲತಾ ಪದ್ಯಾಣ ಅವರಿಗೆ ಹೃದಯಪೂರ್ವಕ ವಂದನೆಗಳು.

ಇದೇ ಧಾಟಿಯಲ್ಲಿ, ಖಡಕ್ ರೊಟ್ಟಿ, ಪುಂಡಿ ಪಲ್ಯ, ಕೆಂಪು ಖಾರ, ತುಪ್ಪದ ಮುಟಿಗಿ, ಜೋಳದ ನುಚ್ಚುಕ್ಕೆನೆಯಿಂದ ಕಡೆದ ಮಜ್ಜಿಗೆ, ಜೋಳ-ರಾಗಿ-ಹುರುಳಿ ಅಂಬಲಿಗಳ ಸ್ವಾದ-ರುಚಿಯನ್ನು ಬಣ್ಣಿಸಿ ಓದುಗರ ಬಾಯಲ್ಲಿ ನೀರೂರುವಂತೆ ಮಾಡಿದ ಬಸವರಾಜ ಶಿವಪ್ಪ ಗಿರಗಾಂವಿ ಅವರೂ ಮಾನ್ಯರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?!' ಮುಂತಾದ ಪ್ರಸಂಗಗಳನ್ನು ದಶಕಗಳ ಹಿಂದೆ ಓದಿದ್ದೆ. ಇದನ್ನು ಮತ್ತೊಮ್ಮೆ ನೆನಪಿಸಿದ್ದಾರೆ ಬರಹಗಾರ ಗೊರೂರು ಶಿವೇಶ್. ಅವರಿಗೂ ವಂದನೆಗಳು. ಅಂತೂ, ಭಾನುವಾರಕ್ಕೆ ಕನಿಷ್ಠ 25 ಗಂಟೆಯಾದರೂ ಇದ್ದಿದ್ದರೆ ಇನ್ನೂ ಹೆಚ್ಚು ಓದಬಹುದಾಗಿತ್ತು!

- ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

ಭಟ್ಟರ್ ಸ್ಕಾಚ್

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಕಾಡಲ್ಲಿದ್ದು ನಾಡಿಗೆ ಉಪಟಳ ಕೊಡೋನು ನಕ್ಸಲೈಟ್. ಊರಲ್ಲಿದ್ದುಕೊಂಡೇ ಉಪಟಳ ಕೊಡೋನು?
– **ಲೋಕಲ್ಲೈಟ್!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಸ್ಕೂಲಿನಲ್ಲಿ ಕೊಡುವ ಹೋಮ್ ವರ್ಕ್‌ಗೂ, ಮನೆಯಿಂದ ಮಾಡುವ ವರ್ಕ್ ಫ್ರಮ್ ಹೋಮ್‌ಗೂ ಸಾಮ್ಯವೇನು?
– **ಎರಡೂ ಕಡೆ ಚೆನ್ನಾಗಿ ಊಟ, ನಿದ್ದೆ ಮಾಡಬಹುದು!**

- **ಸತೀಶ ಎಲ್.ವಿ.,(ಇಮೇಲ್ ಮೂಲಕ)**
ಭಟ್ರೇ, ಆಸೆಯೇ ದುಃಖಕ್ಕೆ ಮೂಲ. ದುರಾಸೆ?
– **ಅತಿ ದುಃಖಕ್ಕೆ ಮೂಲ!**

- **ರವಿ ಮೂಡಲಮನೆ, (ಇಮೇಲ್ ಮೂಲಕ)**
ಭಟ್ರೇ, ಹಬ್ಬಕ್ಕೂ, ಬೆಲೆ ಏರಿಕೆಗೂ ಏನು ಸಂಬಂಧ?
– **ಹಬ್ಬ ಅಂದ್ರೆ ಹೈರಾಣ ಗಾದೆ ಕೇಳಿಯೂ ಈ ಪ್ರಶ್ನೆಯಾ?!**

- **ಶಿವಾಜಿರಾವ್ ಘೋಂಗ್ರೆ, ಕೆಜಿಎಫ್**
ಕೈಸಾಲ ಕೊಟ್ರೆ ಮೂರು ವರ್ಷ ಆದ್ಮೇಲೆ ವಾಪಸ್ ಕೇಳಂಗಿಲ್ವಂತೆ?
– **ಅಲ್ಲಿಗೆ ಕೈಸಾಲ ಕೊಟ್ರೆ 'ಕೈಲಾಸ' ಮತ್ತು 'ಕೈ ಲಾಸ್' ಅಷ್ಟೇ!**

- **ನವೀನ ಶೆಣೈ, ಕುಂದಾಪುರ**
ಭಟ್ರೇ, ಮೀನ್ ಮೈಂಡೆಡ್ ಫೆಲೋ ಅಂತಾರಲ್ಲ, ಹಾಗಂದ್ರೆ ಏನರ್ಥ?
– **ಸದಾ ಮೀನುಗಳ ಬಗ್ಗೆ ಯೋಚನೆ ಮಾಡುವವನು ಎಂದರ್ಥ!**

- **ರಾಜು ಬಿ., ಕೆ.ಬಿ.ಕ್ರಾಸ್**
ಭಟ್ರೇ, ಇಲ್ಲೊಬ್ಬ ಹತ್ತೂ ಬೆರಳಿಗೆ ಉಂಗುರ ಧರಿಸುತ್ತಾನಲ್ಲ?
– **ದೈವಜ್ಞ ಸೋಮಯಾಜಿ ಹತ್ತೂ ಬೆರಳಿಗೆ ಇಪ್ಪತ್ತೊಂದು ಉಂಗುರ ಧರಿಸುವುದನ್ನು ನೋಡಿದ್ರೆ ಏನು ಅಂತಾ ಇದ್ಯೋ!**

- **ಮೀನಾ ವಿಶ್ವನಾಥ, ಬೆಂಗಳೂರು**
ಭಟ್ರೇ, ಹೆಂಡತಿ ಬೇಡಿಕೆಗಳಿಗೆಲ್ಲ ಇಲ್ಲೊಬ್ಬ ತಥಾಸ್ತು ಅಂತಾನಲ್ಲ?
– **ಯಾರ ಹೆಂಡತಿ ಎನ್ನುವುದನ್ನು ಸ್ಪಷ್ಟಪಡಿಸಬೇಕಿತ್ತು!**

- **ಕೆ.ಅರುಣ್, ಗಿರಿನಗರ**
ಭಟ್ರೇ, ಕನ್ನಡದ ಕವಿಗಳೆಲ್ಲ ನಿಷ್ಕ್ರಿಯರಾಗಿದ್ದಾರಲ್ಲ?
– **ಅವರು ಇರುವುದೇ ಹಾಗಲ್ಲವೇ?!**

- **ಕೆ.ಸಿ.ರಮೇಶ, ಬ್ರಹ್ಮಾವರ**
ಭಟ್ರೇ, ಅವನೊಬ್ಬ ಮಹಾಕೊಳಕು ಸಾಹಿತಿ ಅಂತ ಲಂಕೇಶ್ ಬೈತಾ ಇದ್ದರು, ಯಾಕೆ?
– **ತಪ್ಪು.. ಕೊಳಕು ಅನ್ನಲಿ ಅಥವಾ ಸಾಹಿತಿ ಅನ್ನಲಿ, ಆದರೆ ದ್ವಿರುಕ್ತಿ ಸಲ್ಲ!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಎಲ್ಲ ಪ್ರಶ್ನೆಗಳನ್ನು ನೀವೇ ಓದಿ, ನೀವೇ ಉತ್ತರ ಕೊಡ್ತೀರಾ?
– **ಇಲ್ಲ, ಆಗಾಗ ಮೋದಿಯವರ ಬಂದು ಸಹಾಯ ಮಾಡ್ತಾರೆ!**

ಬೇಕಿರುವುದು ವ್ಯಾಧಿ ಮೂಲಕ್ಕೆ ಮದ್ದು !

ಲೋಕಮತ

ಲೋಕೇಶ್ ಕಾಯರ್ಗ

vveditoped@gmail.com

kaayarga@gmail.com

ಕರ್ನಾಟಕದಲ್ಲಿ ಹೃದಯಾಘಾತ ಸಂಬಂಧಿ ಸಾವುಗಳು ಹೆಚ್ಚುತ್ತಿವೆ ಎಂಬ ಆತಂಕ ವ್ಯಾಪಕವಾಗಿದೆ. ಸರಕಾರ ನೇಮಿಸಿದ ಸಮಿತಿ, 'ಹಾಗೇನೂ ಇಲ್ಲ ಹಿಂದಿನ ವರ್ಷಗಳಲ್ಲೂ ಸಾವಿನ ಪ್ರಮಾಣ ಇಷ್ಟೇ ಇರುತ್ತಿತ್ತು' ಎಂದು ವರದಿ ನೀಡಿದೆ. ಆದರೆ ಜನರು ಮಾತ್ರ ತಮ್ಮ ಕಣ್ಣೆದುರು ಕುಸಿದು ಬೀಳುತ್ತಿರುವವರನ್ನು ಕಂಡು ಕಳವಳಗೊಂಡಿದ್ದಾರೆ. ದಶಕದ ಹಿಂದೆ 60ರ ಆಸುಪಾಸಿನಲ್ಲಿ ಮತ್ತು ನಗರವಾಸಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಹೃದ್ರೋಗ ಈಗ ಹಳ್ಳಿ, ಪಟ್ಟಣ, ಹಿರಿಯರು, ಯುವಕರು, ಮಕ್ಕಳೆಂಬ ಭೇದವಿಲ್ಲದೆ ಎಲ್ಲರನ್ನೂ ಆವರಿಸಿಕೊಂಡಿರುವುದು ಸತ್ಯ. 10 ವರ್ಷದೊಳಗಿನ ಮಕ್ಕಳು ಶಾಲಾ ಆವರಣದಲ್ಲಿಯೇ ಕುಸಿದು ಬಿದ್ದು ಮೃತಪಟ್ಟ ಘಟನೆಗಳನ್ನು ನಾವು ಈ ಹಿಂದೆ ಕೇಳಿದ್ದಿಲ್ಲ. ದೊಡ್ಡವರ ಸಾವಿಗೆ ಆಧುನಿಕ ಜೀವನಶೈಲಿಯತ್ತ ಬೊಟ್ಟು ಮಾಡುವುದಾದರೆ, ಈ ಮಕ್ಕಳ ಸಾವಿಗೆ ಏನು ಕಾರಣ ಎನ್ನುವುದು ನಿಗೂಢವಾಗಿಯೇ ಕಾಣುತ್ತದೆ. ಇಷ್ಟರ ನಡುವೆಯೂ ಸರಕಾರ ನೇಮಿಸಿದ ಸಮಿತಿ ರೋಗಕ್ಕೆ ಮದ್ದರೆಯಲು ಹೊರಟಿದೆಯೇ ಹೊರತು ರೋಗ ಮೂಲ ಪತ್ತೆ ಮಾಡುವಲ್ಲಿ ಯಾವುದೇ ಆಸಕ್ತಿ ತೋರಿಸಿಲ್ಲ.

ಕೇಂದ್ರಸರಕಾರ ಮತ್ತು ರಾಜ್ಯ ಸರಕಾರ ನೇಮಿಸಿದ ಸಮಿತಿಗಳ ವರದಿಗಳನ್ನು ಗಮನಿಸಿದರೆ, ಕೋವಿಡ್ ಲಸಿಕೆಯಿಂದ ಸಾವು ಸಂಭವಿಸಿಲ್ಲ ಎನ್ನುವ ಅಂಶದತ್ತ ಹೆಚ್ಚು ಒತ್ತು ಕೊಟ್ಟಂತೆ ಕಾಣುತ್ತದೆ. ಕೋವಿಡ್ ಕಾರಣ ಅಲ್ಲ ಎಂದಾಗಿದ್ದರೆ ಇನ್ನೇನು ಕಾರಣ ಎಂದಾದರೂ ಈ ಸಮಿತಿಗಳು ಬೆಳಕು ಚೆಲ್ಲಬೇಕಿತ್ತು. ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಾಗಲೀ ನಮ್ಮ ಕಣ್ಣೆದುರು ಕುಸಿದು ಬಿದ್ದವರಲ್ಲಿ ಅತ್ಯುತ್ತಮ ಜೀವನ ಶೈಲಿ ರೂಪಿಸಿಕೊಂಡವರೂ ಇದ್ದಾರೆ. ಯಾವುದೇ ದುಶ್ಚಟಗಳಿಲ್ಲದ, ದೇಹದ ವ್ಯಾಯಮ ಮತ್ತು ಕಸರತ್ತುಗಳಿಗೆ ಒತ್ತುಕೊಟ್ಟ ಕ್ರೀಡಾಪಟುಗಳು ಹೃದಯ ಸ್ತಂಭನದಿಂದ ಮೈದಾನದಲ್ಲಿಯೇ ಉಸಿರು ಚೆಲ್ಲಿದ ಘಟನೆಗಳನ್ನು ಗಮನಿಸಿದರೆ, ಹೃದಯಬೇನೆಗೆ, ಈ ಸಮಿತಿ ಹೇಳಿದ ಕಾರಣಗಳಲ್ಲದೆ ಇನ್ನಾವುದೋ ಕಾರಣ ಇದೆ ಎನ್ನುವುದು ಸ್ಪಷ್ಟ.

ಸದ್ಯ ಈ ವಿಷಯಗಳೆಲ್ಲವೂ ಒತ್ತಟ್ಟಿಗಿರಲಿ. ನಮ್ಮ ನಿರೀಕ್ಷೆಗಳ ತೂಕದಲ್ಲಿ ಬಾಲ್ಯದಲ್ಲಿಯೇ ತಮ್ಮ ತೂಕ ಹೆಚ್ಚಿಸಿಕೊಂಡ ಎಳೆಯರ ಭವಿಷ್ಯದ ಬಗ್ಗೆ ಚಿಂತಿಸಿದರೆ ಅದೇಕೋ ತೀರಾ ಭಯ ಕಾಡುತ್ತದೆ. ನಮ್ಮ ಪ್ರತಿಷ್ಠಿತ ಶಾಲೆಗಳ ಗೇಟ್ ಮುಂದೆ ಶಾಲೆ ಆರಂಭ ಇಲ್ಲವೇ ಬಿಡುವ ವೇಳೆಗೆ ಸ್ವಲ್ಪ ಹೊತ್ತು ನಿಂತು ಗಮನಿಸಿ. ಹತ್ತಿಪ್ಪತ್ತು ಕಿಲೋ ಬ್ಯಾಗ್ ಹೊತ್ತ ನಾಲ್ಕು, ಐದನೇ ತರಗತಿ ಮಕ್ಕಳಲ್ಲಿ ಅನೇಕರು ಮೇಲ್ನೋಟಕ್ಕೇ 50 ಕಿಲೋಗಿಂತ ಹೆಚ್ಚಿನ ತೂಕ ಹೊಂದಿರುತ್ತಾರೆ. ಆರನೇ ತರಗತಿ ದಾಟುವ ಮುನ್ನವೇ ಅನೇಕ ಹೆಣ್ಣು ಮಕ್ಕಳಲ್ಲಿ 'ಹರೆಯ'ದ ಲಕ್ಷಣಗಳು ಕಂಡು ಬರುತ್ತಿವೆ. ಎಲ್‌ಕೆಜಿ, ಯುಕೆಜಿಯಲ್ಲಿ ದಷ್ಟಪುಷ್ಟರಂತೆ ಕಾಣುವ ಮಕ್ಕಳು ಪ್ರಾಥಮಿಕ ತರಗತಿಗಳಿಗೆ ಬರುವಷ್ಟರಲ್ಲಿ ಒಂದೆರಡು ಮೆಟ್ಟಿಲು ಏರಬೇಕಾದರೂ ಏದುಸಿರು ಬಿಡುತ್ತಾರೆ. ಶ್ರೀಮಂತ, ಮಧ್ಯಮವರ್ಗದ ಮನೆಯ ಜೀವನ ಶೈಲಿ, ಆಹಾರ ಪದ್ಧತಿ ಮಾತ್ರವಲ್ಲ, ಶಾರೀರಿಕ ದಂಡನೆಗೆ ಎಳ್ಳಷ್ಟೂ ಅವಕಾಶವಿಲ್ಲದ ಶಿಕ್ಷಣ ಪದ್ಧತಿಯಲ್ಲಿ ನಮ್ಮ ಎಳೆಯರು ಫಾರಂ ಕೋಳಿಗಳಾಗದೆ ಇನ್ನೇನು ಆಗಲು ಸಾಧ್ಯ ?

ರಾಜ್ಯ ಸರಕಾರ ನೇಮಿಸಿದ ಸಮಿತಿಯು 15 ವರ್ಷದೊಳಗಿನ ಮಕ್ಕಳ ಕಡ್ಡಾಯ ಹೃದಯ ತಪಾಸಣೆಗೆ ಶಿಫಾರಸು ಮಾಡಿದೆ. ಇದರಿಂದ ಹುಟ್ಟಿನಿಂದ ಹೃದಯದ ಕಾಯಿಲೆ ಇರುವ ಮಕ್ಕಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಅನುಕೂಲವಾಗಬಹುದು. ಆದರೆ ಹೆತ್ತವರ ಜೀವನ ಶೈಲಿ ಮತ್ತು ಅವರ ಆಸೆ, ಆಕಾಂಕ್ಷೆಗಳ ಮೂಟೆ ಹೊತ್ತು ನಿಂತ ಮಕ್ಕಳ ಆರೋಗ್ಯದ ರಕ್ಷಣೆ ಹೇಗೆ ಎಂದರೆ ಯಾವುದೇ ಉತ್ತರ ಸಿಗುವುದಿಲ್ಲ. ದಿನದಿಂದ ದಿನಕ್ಕೆ ನಮ್ಮ ಮಕ್ಕಳ ಶಾರೀರಿಕ ಚಟುವಟಿಕೆಗಳು ಕಡಿಮೆಯಾಗುತ್ತಲೇ ಇವೆ. ಎದೆ ಹಾಲು ಉಣಿಸುವಾಗಲೇ ನೀಟ್, ಐಐಟಿ, ಐಐಎಂ, ಬಂಗಲೆ, ಕಾರು, ವಿದೇಶ ವಾಸ್ತವ್ಯದ ಕನಸುಗಳನ್ನು ಬಿತ್ತುವ ಹೆತ್ತವರು ಈ ಬೌದ್ಧಿಕ ಕಸರತ್ತಿನ ನಡುವೆ ದೈಹಿಕ ಕಸರತ್ತುಗಳು ಅಗತ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದಂತಿದೆ. ಪೋಷಕರ ಈ ಕನಸುಗಳ ಮೇಲೆ ಹೂಡಿಕೆ ಮಾಡಿರುವ ಶಿಕ್ಷಣ ಸಂಸ್ಥೆಗಳು ಕೂಡ ದೈಹಿಕ ವ್ಯಾಯಾಮದ ಬಗ್ಗೆ ಯಾವುದೇ ಒತ್ತು ನೀಡದೆ, ಶಿಕ್ಷಣವನ್ನು ಪಾಠ, ಪ್ರವಚನಕ್ಕಷ್ಟೇ ಸೀಮಿತಗೊಳಿಸಿವೆ.

ಮೂರ್ನಾಲ್ಕು ದಶಕಗಳ ನಾವು 'ಇಲ್ಲಗಳ' ಮಧ್ಯೆ ನಮ್ಮ ಬಾಲ್ಯವನ್ನು ಕಳೆದರೆ, ಈಗಿನ ಮಕ್ಕಳು ಎಲ್ಲವೂ ಕೈಯಳತೆಯಲ್ಲಿ ಸಿಗುವ ವಾತಾವರಣದಲ್ಲಿ ಬೆಳೆಯುತ್ತಿದ್ದಾರೆ. ಈಗ ತೂತು ಚಡ್ಡಿಗೆ, ಹರಿದ ಬ್ಯಾಗಿಗೆ, ಮುರಿದ ಕೊಡೆಯ ಕಾಲಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಅಗತ್ಯ ಇಲ್ಲ. ಚಪ್ಪಲಿ ಇಲ್ಲದೆ ಮೈಲುಗಟ್ಟಲೆ ಹಳ್ಳ-ಕೊಳ್ಳ ದಾಟಿ ಶಾಲೆಯ ಹಾದಿ ಹಿಡಿಯಬೇಕಾದ ಅನಿವಾರ್ಯತೆಯೂ ಇಲ್ಲ. ಅಪ್ಪ-ಅಮ್ಮ ಇಸ್ತ್ರಿ ಮಾಡಿದ ಒಪ್ಪ ಓರಣವಾದ ಸಮವಸ್ತ್ರ ತೊಟ್ಟು, ಮಿರಿ ಮಿರಿ ಮಿಂಚುವ ಶೂ ತೊಟ್ಟು ಮನೆ ಬಾಗಿಲಿನಲ್ಲಿಯೇ ವ್ಯಾನೋ, ಬಸ್ಸೋ ಹತ್ತಿದರೆ ಮುಗಿಯಿತು. ಮೂರೂ ಹೊತ್ತು ಗಂಜಿ ಉಂಡು ಬೆಳೆದ ನಮಗೆ ಕೊಟ್ಟಿದ್ದೆಲ್ಲವನ್ನೂ ಗಬಕ್ಕನೆ ತಿನ್ನುವ ಅನಿವಾರ್ಯತೆ ಇತ್ತು. ನಮ್ಮ ಅಂದಿನ ಊಟ, ತಿಂಡಿ ನಮ್ಮ ಮಕ್ಕಳಿಗೆ ರುಚಿಸುತ್ತಿಲ್ಲ. ಬೆಳಿಗ್ಗೆ ಟಿ.ವಿ ಜಾಹೀರಾತಿನಲ್ಲಿ ಬಂದ ಪೌಡರ್‌ಗಳ ಪೇಯದ ಜತೆ ಅಷ್ಟಿಷ್ಟು ತಿಂಡಿ, 11ರ ಸುಮಾರಿಗೆ ಚಾಕ್ಲೆಟ್,ಬಿಸ್ಕೆಟ್, ಚಕ್ಕುಲಿ, ನಿಪ್ಪಟ್ಟು ಮಾದರಿಯ ತಿಂಡಿ ಸ್ನ್ಯಾಕ್ಸ್. ಲಂಚ್‌ಗೆ ಕೆಚಪ್ ಹಚ್ಚಿದ ಬ್ರೆಡ್ಡು, ಸಂಜೆ ಮ್ಯಾಗಿ ಅಥವಾ ಅಂಥದ್ದೇ ಮತ್ತೊಂದು ಖಾದ್ಯ. ರಾತ್ರಿಯೂ ಉಪ್ಪು, ಹುಳಿ, ಸಿಹಿ ಜತೆ ಎಣ್ಣೆ ,ಬೆಣ್ಣೆ, ತುಪ್ಪ ಎಲ್ಲವೂ ಸಮೃದ್ಧವಾಗಿರುವ ಊಟ.

ನಮ್ಮ ಅಂದಿನ ಶಾಲೆಗಳಲ್ಲಿ ಪ್ರತ್ಯೇಕ ಕ್ರೀಡಾಂಗಣ, ದೈಹಿಕ ಶಿಕ್ಷಕರು, ದೈಹಿಕ ಶಿಕ್ಷಣ ಪಾಠ ಇರಲಿಲ್ಲ. ಸಂಜೆ ಮೂರರ ಬಳಿಕ ನಾಲ್ಕು ಗಂಟೆ ತನಕ ಎಲ್ಲ ಮಕ್ಕಳಿಗೂ ಸಾಮೂಹಿಕ ಪಿ.ಟಿ ಪೀರಿಯಡ್ ಆಗಿತ್ತು. ಈ ಹೊತ್ತಲ್ಲಿ ಮಕ್ಕಳು ತಮಗೆ ಬೇಕಾದ ಆಟವನ್ನು, ಬೇಕಾದ ರೀತಿಯಲ್ಲಿ ಆಡಬಹುದಿತ್ತು. ಕೊನೆಗೆ ಜನಗಣಮನ ಹಾಡಿ ಮನೆಗೆ ಮರಳುವಷ್ಟರಲ್ಲಿ ಇಡೀ ದೇಹ ಬೆವರಿನಿಂದ ಒದ್ದೆಯಾಗಿರುತ್ತಿತ್ತು. ಮನೆಗೆ ಬಂದ ಬಳಿಕವೂ ನಮ್ಮ ಆಟಕ್ಕೆ ಬ್ರೇಕ್ ಇರುತ್ತಿರಲಿಲ್ಲ. ದಣಿವು, ಸುಸ್ತು ಎಂಬ ಪದ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಎಸ್ಸೆಸ್ಸೆಲ್ಸಿಗೆ ಬಂದಾಗಲೂ ಹುಡುಗ, ಹುಡುಗಿಯರು 'ಪೀಚಲು'ಗಳಾಗಿಯೇ ಕಾಣುತ್ತಿದ್ದರು. ಈಗಿನ ಎಸ್ಸೆಸ್ಸೆಲ್ಸಿ ಮಕ್ಕಳಲ್ಲಿ ಕಾಣುವ ಯಾವ 'ಪ್ರೌಢತೆ'ಯ ಲಕ್ಷಣಗಳೂ ನಮ್ಮಲ್ಲಿ ಕಾಣುತ್ತಿರಲಿಲ್ಲ. ಅಂದಿನ ಅಭಾವ ವೈರಾಗ್ಯ ಪರೋಕ್ಷವಾಗಿ ನಮ್ಮ ಆರೋಗ್ಯವನ್ನು ಕಾಪಾಡಿತ್ತು. ಆದರೆ ಈಗಿನ ಮಕ್ಕಳಿಗೆ ಕೈಯಳತೆಯೊಳಗೆ ಸಿಗುತ್ತಿರುವ ಆಕಾಶ ಮತ್ತು ಅವಕಾಶ ದೈಹಿಕ, ಮಾನಸಿಕ ಆರೋಗ್ಯವನ್ನು ಬಿಟ್ಟು ಉಳಿದ ಎಲ್ಲವನ್ನು ನೀಡುತ್ತಿದೆ.

ಒಂದೆಡೆ 2036ರ ಒಲಿಂಪಿಕ್ಸ್ ಕ್ರೀಡಾಕೂಟದ ಆತಿಥ್ಯವನ್ನು ವಹಿಸುವಂತೆ ನಮ್ಮ ಸರಕಾರ ಬಿಡ್ ಸಲ್ಲಿಸಲು ಮುಂದಾಗಿದೆ. ಇನ್ನೊಂದೆಡೆ ನಮ್ಮ ಸರಕಾರಿ ಮತ್ತು ಖಾಸಗಿ ಶಾಲೆಗಳೆಲ್ಲವೂ ಆಟೋಟಗಳೆಲ್ಲವನ್ನೂ ಬಿಟ್ಟು ಮಕ್ಕಳಿಗೆ ಪಠ್ಯವನ್ನು ಉರುಹೊಡೆಸಿ ಅತ್ಯಧಿಕ ಪರ್ಸೆಂಟೇಜ್‌ನೊಂದಿಗೆ ಎಸ್ಸೆಸೆಲ್ಸಿ, ಪಿಯುಸಿ ತೇರ್ಗಡೆ ಮಾಡಿಸಲು ಟೊಂಕ ಕಟ್ಟಿ ನಿಂತಿವೆ. ಎಲ್‌ಕೆಜಿಯಿಂದ ಪದವಿ ಹಂತದವರೆಗೆ ಎಲ್ಲ ಸಂದರ್ಭಗಳಲ್ಲೂ ತಮ್ಮ ಬಟ್ಟೆಯ ಇಸ್ತ್ರಿ ಉಳಿಸಿಕೊಂಡ ಮಕ್ಕಳು, ಬೆವರು, ಮಣ್ಣು ಎಂದರೆ ಕೊಳಕು. ಆಟೋಟಗಳೆಲ್ಲವೂ ವೇಸ್ಟು. ಉತ್ತಮ ಅಂಕ ಗಳಿಸಿ, ಒಳ್ಳೆಯ ಉದ್ಯೋಗ ಗಿಟ್ಟಿಸಿ ಸಂಪಾದನೆಯ ದಾರಿ ಹಿಡಿಯುವುದೇ ಜೀವನದ ಪರಮ ಉದ್ದೇಶ ಎಂಬ ಮನಸ್ಥಿತಿ ಬೆಳೆಸಿಕೊಂಡರೆ ಅದಕ್ಕೆ ನಾವಲ್ಲದೆ ಇನ್ನಾರು ಕಾರಣ ?

2020ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಖೇಲೋ ಇಂಡಿಯಾದಂತಹ ಸರಕಾರಿ ಯೋಜನೆಗಳು ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಅಗತ್ಯವನ್ನು ಒತ್ತಿಹೇಳುತ್ತವೆ. ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ಕ್ರೀಡೆಗಳಲ್ಲಿ ಅವರ ಸಾಧನೆಯನ್ನು ಉಲ್ಲೇಖಿಸಬೇಕಾಗಿದೆ. ಆದರೆ ವಾಸ್ತವದಲ್ಲಿ ಇವೆಲ್ಲವೂ ಯೋಜನಾ ಹಂತಕ್ಕಿಂತ ಮೇಲೇರುವ ಯಾವ ಸಾಧ್ಯತೆಯೂ ಕಾಣುತ್ತಿಲ್ಲ.

ಕರ್ನಾಟಕವೂ ಸೇರಿದಂತೆ ದೇಶದ ಮುಕ್ಕಾಲು ಪಾಲು ಶಾಲೆಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟದ ಮೈದಾನಗಳು, ಕ್ರೀಡಾ ಸಲಕರಣೆಗಳ ಕೊರತೆ ಇದೆ. ಬೆಂಗಳೂರಿನಂತಹ ನಗರದಲ್ಲಿಯೇ 7,000 ಶಾಲೆಗಳ ಪೈಕಿ ಶೇ 40ರಷ್ಟರಲ್ಲಿ ಸುಸಜ್ಜಿತ ಕ್ರೀಡಾ ಮೈದಾನಗಳಿಲ್ಲ. ಕ್ರೀಡಾ ಪರಿಕರಗಳಿಲ್ಲ. ಅದೆಷ್ಟೋ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೇ ಇಲ್ಲ. ಪಠ್ಯೇತರ ಚಟುವಟಿಕೆಗಳಿಗಿಂತ ಅಕಾಡೆಮಿಕ್ ಅಂಕಗಳಿಗೆ ಹೆಚ್ಚು ಒತ್ತು ನೀಡುವ ಪೋಷಕರಿಗೂ ಶಾಲೆಗಳಲ್ಲಿ ಕ್ರೀಡೆ ಸೇರಿದಂತೆ ಪಠ್ಯೇತರ ಚಟುವಟಿಕೆಗಳಿಗೆ ಒತ್ತು ನೀಡುವುದು ಬೇಕಿಲ್ಲ.

ಕರ್ನಾಟಕ ಸರಕಾರದ 2018ರ ಕ್ರೀಡಾ ನೀತಿಯು 2030 ರೊಳಗೆ ರಾಜ್ಯವ್ಯಾಪಿ ಕ್ರೀಡಾ ವಾತಾವರಣವನ್ನು ಸೃಷ್ಟಿಸುವ, ಎಲ್ಲರನ್ನೂ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸುವ ಮೂಲಕ ಆರೋಗ್ಯಕರ ಸಮಾಜವನ್ನು ನಿರ್ಮಿಸುವ ಗುರಿ ಹೊಂದಿದೆ. ರಾಜ್ಯದ ಎಲ್ಲೆಡೆ, ಎಲ್ಲಾ ವಯೋಮಾನದವರಿಗೆ ಕ್ರೀಡಾ ಸೌಲಭ್ಯಗಳನ್ನು ಒದಗಿಸುವ ಬಗ್ಗೆಯೂ ಈ ನೀತಿಯಲ್ಲಿ ಪ್ರಸ್ತಾವಿಸಲಾಗಿದೆ. ಈ ಗುರಿ ಈಡೇರಲು ಇನ್ನು ಕೇವಲ ಐದು ವರ್ಷಗಳಷ್ಟೇ ಬಾಕಿ ಇದೆ. ಆದರೆ ವಾಸ್ತವ ಏನು ಗೊತ್ತೇ ? 2017ರಿಂದ ನಮ್ಮ ಯಾವುದೇ ಸರಕಾರಿ ಶಾಲೆಗಳಿಗೆ ದೈಹಿಕ ಶಿಕ್ಷಕರ ನೇಮಕ ಆಗಿಲ್ಲ. ನಿವೃತ್ತರಾದ ಶಿಕ್ಷಕರ ಸ್ಥಾನಗಳಿಗೆ ಹೊಸಬರನ್ನು ನೇಮಿಸಿಲ್ಲ. ಕ್ರೀಡಾ ಚಟುವಟಿಕೆಗಳಲ್ಲಿ ಮುಂದಿರುವ ವಿಜಯಪುರ, ಚಾಮರಾಜನಗರ, ದಕ್ಷಿಣ ಕನ್ನಡ, ಕಲಬುರಗಿ ಜಿಲ್ಲೆಗಳಲ್ಲಿ ಶೇ. 50ಕ್ಕಿಂತ ದೈಹಿಕ ಶಿಕ್ಷಕರ ಹೆಚ್ಚು ಹುದ್ದೆಗಳು ಖಾಲಿ ಇವೆ.

ಇನ್ನು ಪದವಿ ಪೂರ್ವ ಕಾಲೇಜುಗಳಲ್ಲಿ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಸುಮಾರು 1300 ಸರಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕೇವಲ 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳು ಮಂಜೂರಾಗಿವೆ. ಅದರಲ್ಲಿಯೂ ಕೇವಲ 6 ಹುದ್ದೆಗಳು ಮಾತ್ರ ತುಂಬಿವೆ ಎಂಬ ಮಾಹಿತಿ ಇದೆ. ನಿಯಮಾವಳಿಗಳ ಪ್ರಕಾರ 200 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಒಬ್ಬ ದೈಹಿಕ ಶಿಕ್ಷಣ ಶಿಕ್ಷಕರಿರಬೇಕು. ಇದಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ದೈಹಿಕ ಶಿಕ್ಷಕರನ್ನು ಹೊಂದುವ ಭಾಗ್ಯವೂ ಇಲ್ಲ.

ಪೋಷಕರು, ಶಿಕ್ಷಕರು ಮತ್ತು ಸರಕಾರದ ನಿರ್ಲಕ್ಷ್ಯದ ಕಾರಣದಿಂದ ನಮ್ಮ ಮಕ್ಕಳು ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯಿಲ್ಲದೆ ದೈಹಿಕ ಚಟುವಟಿಕೆಗಳಿಂದ ವಂಚಿತರಾಗುತ್ತಿದ್ದಾರೆ. ಇದು ಬೊಜ್ಜು, ಮಧುಮೇಹ, ಹೃದಯಾಘಾತ ಮತ್ತು ಇತರ ಜೀವನಶೈಲಿ ಕಾಯಿಲೆಗಳ ಅಪಾಯವನ್ನು ಹೆಚ್ಚಿಸುತ್ತಲೇ ಇದೆ. ದೈಹಿಕ ಚಟುವಟಿಕೆಗಳು ಶರೀರಕ್ಕೆ ಮಾತ್ರವಲ್ಲ, ನಮ್ಮ ಮಕ್ಕಳ ಮಾನಸಿಕ ವಿಕಸನಕ್ಕೂ ಅಗತ್ಯವಿದೆ. ಮಾನಸಿಕ ಒತ್ತಡವನ್ನು ಕಡಿಮೆ ಮಾಡಲು ಕ್ರೀಡೆಗಿಂತ ಉತ್ತಮ ಮಾರ್ಗ ಬೇರೆ ಇಲ್ಲ. ಆದರೆ ದೈಹಿಕ ಚಟುವಟಿಕೆಗಳಿಂದ ದೂರವಾದ ಸಮಾಜ ಹೇಗಿರಬಹುದೆನ್ನುವುದಕ್ಕೆ ಭಾರತವೇ ಉದಾಹರಣೆಯಾಗಿ ನಿಲ್ಲುತ್ತಿದೆ.

ಅಂತಾರಾಷ್ಟ್ರೀಯ ಡಯಾಬಿಟಿಸ್ ಫೆಡರೇಶನ್ ಪ್ರಕಾರ ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಟೈಪ್ 1 ಮಧುಮೇಹ ಹೊಂದಿರುವ ಮಕ್ಕಳನ್ನು ಹೊಂದಿದೆ. ಇತ್ತೀಚಿನ ಸಂಶೋಧನೆಗಳ ಪ್ರಕಾರ, ಭಾರತದಲ್ಲಿ 0-19 ವರ್ಷ ವಯಸ್ಸಿನ ಸುಮಾರು ಮೂರು ಲಕ್ಷ ಟೈಪ್ 1 ಮಧುಮೇಹದಿಂದ ಬಳಲುತ್ತಿದ್ದಾರೆ. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಒಂದು ಲಕ್ಷಕಿಂತ ಹೆಚ್ಚು ಮಕ್ಕಳು ಟೈಪ್ 1 ಮಧುಮೇಹದಿಂದ ಬಳಲುತ್ತಿದ್ದಾರೆ.

ಇದರ ಜತೆಗೆ ಟೈಪ್ ಟೈಪ್ 2 ಮಧುಮೇಹದ ಪ್ರಮಾಣವೂ ಇತ್ತೀಚೆಗೆ ಗಣನೀಯವಾಗಿ ಹೆಚ್ಚಾಗಿದೆ. ಡಯಾಬಿಟಿಸ್ ಫೆಡರೇಶನ್ ವರದಿಯ ಪ್ರಕಾರ, ಭಾರತ 10 ಕೋಟಿಗಿಂತಲೂ ಹೆಚ್ಚು ಮಧುಮೇಹಿಗಳನ್ನು ಹೊಂದಿದೆ. ಸುಮಾರು 14 ಕೋಟಿ ಮಂದಿ ಮಧುಮೇಹ ಪೂರ್ವ ಹಂತದಲ್ಲಿದ್ದಾರೆ. ಈ ಒಟ್ಟು ಸಂಖ್ಯೆಯಲ್ಲಿ ಮಕ್ಕಳ ಅನುಪಾತವೂ ಹೆಚ್ಚಾಗುತ್ತಲೇ ಇದೆ.

ನಿಜ ಹೇಳಬೇಕೆಂದರೆ ಹೃದಯದ ಕಾಯಿಲೆ ಎಂದರೆ ನಮ್ಮ ಮನಸ್ಸಿನ ಕಾಯಿಲೆಯೂ ಹೌದು. ಮನಸ್ಸಿನೊಳಗೆ ಬೇಕುಗಳ ಒತ್ತಡ ಹೆಚ್ಚಿದಂತೆಲ್ಲ, ಶರೀರವನ್ನೂ ಸಜ್ಜುಗೊಳಿಸಬೇಕಾಗುತ್ತದೆ. ಆಧುನಿಕ ಜೀವನದ ಅಗತ್ಯ ಮತ್ತು ಅನಿವಾರ್ಯತೆಗಳಿಗೆ ಒಡ್ಡಿಕೊಂಡ ದೇಹಕ್ಕೆ ಅಗತ್ಯ ದಂಡನೆ, ಆರೈಕೆ, ಪೋಷಣೆ, ಸಾಂತ್ವನ, ವಿಶ್ರಾಂತಿ ದೊರೆಯದೆ ಹೋದಾಗ ಶರೀರವೂ ಜರ್ಜರಿತಗೊಳ್ಳುತ್ತದೆ. ನಮ್ಮ ಎಲ್ಲ 'ಇಲ್ಲ'ಗಳ ನಡುವೆ ಇರುವುದರ ಬಗ್ಗೆ ಯೋಚಿಸಿ ಅದರಲ್ಲಿ ನೆಮ್ಮದಿ ಕಂಡುಕೊಂಡರೆ ಹೃದಯಕ್ಕೂ ಸಾಂತ್ವನ ದೊರಕಬಹುದು. ವ್ಯಾಧಿಯ ಮೂಲ ಪತ್ತೆ ಹಚ್ಚದೆ ರೋಗ ವಾಸಿ ಮಾಡಲು ಸಾಧ್ಯವಿಲ್ಲ. ನಮಗೆ ಮತ್ತು ನಮ್ಮ ಸರಕಾರಕ್ಕೆ ಅಂಟಿರುವ ಅಂಕ ಆಧಾರಿತ ಮೂಲವ್ಯಾಧಿಯನ್ನು ತೊಡೆದುಹಾಕುವುದು ಸದ್ಯದ ತುರ್ತು ಅಗತ್ಯ.

ಪ್ರತಿಸ್ಪಂದನ

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಕನ್ನಡ ಸುದ್ದಿವಾಹಿನಿ ಅಂದ್ರೆ ನೀವು ಏನಂದ್ಕಂಡಿದ್ದೀರಿ?!

ಪತ್ರಕರ್ತರಿಗೆ ಬೆಳಗ್ಗೆ ಎದ್ದ ತಕ್ಷಣ ಪತ್ರಿಕೆ ಓದದಿದ್ದರೆ ದಿನಚರಿಯಲ್ಲಿ ನಿರುತ್ಸಾಹ ತಲೆದೋರುತ್ತದೆ, ಇಡೀ ದಿನ ಪತ್ರಿಕೆ ಸಿಗದಿದ್ದರೆ ಮೂಡ್ ಆಫ್ ಆಗುತ್ತದೆ ಎಂಬ ವಾಸ್ತವವನ್ನು ಸ್ವಾನುಭವ ಕಥನದ ಮೂಲಕ 'ನೂರೆಂಟು ವಿಶ್ವ' ಅಂಕಣದಲ್ಲಿ (ಜು.10) ಸೊಗಸಾಗಿ ಬಣ್ಣಿಸಿದ್ದಾರೆ ವಿಶ್ವೇಶ್ವರ ಭಟ್ಟರು. ಇದು ಪತ್ರಕರ್ತರ 'ಜಡ್ಡು' ಮಾತ್ರವಲ್ಲ, ನನ್ನಂಥ ಅಸಂಖ್ಯಾತ ಪತ್ರಿಕಾ ಹುಳಗಳ ಜಡ್ಡು ಕೂಡ. ಪತ್ರಿಕೆಯು ಮನೆಗೆ ಬಂದು ಬೀಳುವುದು ವಿಳಂಬವಾದರೆ ಚಡಪಡಿಕೆ, ತರಿಸುತ್ತಿರುವ ಪತ್ರಿಕೆಗಳ ಪೈಕಿ ಒಂದು ಪತ್ರಿಕೆ ಮಿಸ್ ಆದರೆ ಪತ್ರಿಕಾ ವಿತರಕನ ಮೇಲೆ ಕೋಪ, ಆ ದಿನ ಪತ್ರಿಕೆಗೆ ರಜೆಯಾದರೆ ಇಡೀ ದಿನ ಮೂಡ್ ಆಫ್, ಇದು ನನ್ನಂಥವರ ಜಡ್ಡು. ಆದರೆ, ಈ ಜಡ್ಡು ನಮಗೆಲ್ಲ ಸಕಾರಾತ್ಮಕ ಕೊಡುಗೆ ನೀಡುತ್ತದೆ! ಹೇಗೆಂದರೆ, ದಿನಪತ್ರಿಕೆಯೊಂದು ನಮ್ಮ ಇಡೀ ದಿನದ ದಿನಚರಿಗಳಿಗೆ ಉತ್ಸಾಹ ತುಂಬುತ್ತದಲ್ಲವೇ? ಇದು ಪತ್ರಿಕೆಗಳ ಶಕ್ತಿ.

ಇದೇ ಅಂಕಣಬರಹದಲ್ಲಿ ಭಟ್ಟರು ಸೀಶೆಲ್ಸ್ ದ್ವೀಪರಾಷ್ಟ್ರವನ್ನು ಉಲ್ಲೇಖಿಸಿ ಬರೆಯುತ್ತ, ಅಲ್ಲಿ ರಾಜಕಾರಣಿಗಳ ಮೇಲಾಟಗಳಾಗಲೀ, ಆರೋಪ-ಪ್ರತ್ಯಾರೋಪಗಳಾಗಲೀ, ಅಪರಾಧ-ಅಪಘಾತಗಳಾಗಲೀ, ಹಗರಣ-ಕರ್ಮಕಾಂಡಗಳಾಗಲೀ, ಪ್ರತಿಭಟನೆ-ಮುಷ್ಕರಗಳಾಗಲೀ, ಕೊಲೆ-ಸುಲಿಗೆ-ಹಿಂಸಾಚಾರಗಳಾಗಲೀ, ಭ್ರಷ್ಟಾಚಾರ ಮೊದಲಾದ ಪಿಡುಗುಗಳಾಗಲೀ ಯಾವುವೂ ಇಲ್ಲದಿರುವುದರಿಂದ, ಅಲ್ಲಿಯ ಪತ್ರಿಕೆಗಳಲ್ಲಿ ಇಂಥ ಯಾವುದೇ ಸುದ್ದಿ ಇರುವುದಿಲ್ಲ ಎಂದೂ, ಆ ದೇಶದಲ್ಲಿ ನ್ಯೂಸ್ ಚಾನೆಲ್ ಆರಂಭಿಸುವ ಕೆಲಸವನ್ನು ನಮ್ಮ ಕನ್ನಡ ಚಾನೆಲ್‌ಗಳಿಗೆ ಕೊಟ್ಟರೆ ಅವು ಒಂದೇ ವಾರದಲ್ಲಿ ಸುದ್ದಿಯ ಬರದಿಂದ ಉಪವಾಸಬಿದ್ದು ಬಾಗಿಲು ಹಾಕುವುದು ಗ್ಯಾರಂಟಿ ಎಂದೂ ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು ನನ್ನ ಅಭಿಪ್ರಾಯ ಭಿನ್ನವಾಗಿದೆ. ನಮ್ಮ ಕನ್ನಡ ಸುದ್ದಿವಾಹಿನಿಗಳವರು ಅಲ್ಲಿಯೂ ಸುದ್ದಿವಾಹಿನಿಯನ್ನು ಬೊಂಬಾಟಾಗಿ ನಡೆಸುತ್ತಾರೆ ಎಂಬುದು ನನ್ನ ಖಚಿತ ಅಭಿಪ್ರಾಯ. ಹೇಗೆ ಅದು ಸಾಧ್ಯ ಎಂದಿರೋ? ಮುಂದೆ ಓದಿ.

ಪೇಲವ ಸುದ್ದಿಗಳಿಗೆ ಮಸಾಲೆ ಬೆರೆಸಿ, ಜಾಣ್ಮೆಯಿಂದ ತಿರುಚಿ ರೋಚಕ ಸುದ್ದಿಗಳನ್ನಾಗಿ ಬಿತ್ತರಿಸುವುದು, ಸಾಮಾನ್ಯ ಸುದ್ದಿಗಳನ್ನು ಅತಿಯಾಗಿ ವೈಭವೀಕರಿಸುವುದು, ಕಪೋಲಕಲ್ಪಿತ ಸುದ್ದಿಗಳನ್ನು ಪ್ರಸಾರ ಮಾಡುವುದು, ಸಿಕ್ಕಾಪಟ್ಟೆ ಗಾಸಿಪ್‌ಗಳನ್ನು ಹರಿಬಿಡುವುದು, ಭವಿಷ್ಯ-ಪ್ರಳಯ-(ಎಲ್ಲೋ ಸಂಭವಿಸುವ) ಗ್ರಹಣ ಮುಂತಾದ ವಿಷಯಗಳನ್ನು ಎತ್ತಿಕೊಂಡು ಭೀಕರ ಕೃತ್ರಿಮ ವಿಡಿಯೋಗಳನ್ನು ಹೆಣೆದು, ಭೀಕರ ಕಾರ್ಯಕ್ರಮಗಳನ್ನು ಕಡುಭೀಕರ ಫಾರ್ಮ್ಯಾಟಿನಲ್ಲಿ ಬಿತ್ತರಿಸುತ್ತ ಪ್ರತಿನಿತ್ಯ ವೀಕ್ಷಕರಲ್ಲಿ ಕುತೂಹಲ-ರೋಚಕ ಭಾವ- ಹೆದರಿಕೆ ಹುಟ್ಟಿಸುವುದು, ಅತಿ ಸಾಮಾನ್ಯ ಸಂಗತಿಗಳನ್ನು ಭಯಂಕರ ಭಾಷೆಯಲ್ಲಿ, ಭಯೋತ್ಪಾದಕ ಶೈಲಿಯಲ್ಲಿ, ಭಯಾನಕ ಸುದ್ದಿಗಳ ರೀತಿ ಬಿಂಬಿಸುವುದು, ಹೇಳಿದ್ದನ್ನೇ ಮತ್ತೆಮತ್ತೆ ಹೇಳುತ್ತ ವೀಕ್ಷಕರ ಬ್ರೈನ್ ವಾಶ್ ಮಾಡುವುದು, ಸಾಮಾನ್ಯ ಮಳೆ ಬಂದದ್ದನ್ನು ಮೂರು ದಿನಗಳ ಕಾಲ ಭಯಂಕರ ಬ್ರೇಕಿಂಗ್ ಸುದ್ದಿಯನ್ನಾಗಿ ಒದರುವುದು, ಅರೆಜ್ಞಾನಿ ಅರಚಪ್ಪಗಳನ್ನು ಸ್ಟುಡಿಯೋಕ್ಕೆ ಕರೆಸಿ ಡಿಬೇಟ್ ಎಂಬ ಹೆಸರಿನಲ್ಲಿ ಒಣ ವಿಷಯವೊಂದರ ಕುರಿತು ಅವರನ್ನು ಕೂಗಾಡಲು-ಜಗಳವಾಡಲು ಹಚ್ಚಿ, ನಿರೂಪಕರಾಗಿ ತಾವೂ ಅರಚಾಡುವುದು, ಯಾವ್ಯಾವ ವಿಷಯದ ಮೇಲೋ, ಯಾರ್ಯಾರ ಮೇಲೋ ಸುಮ್ ಸುಮ್ನೆ ಅಬ್ಬರಿಸುವುದು, ಬೊಬ್ಬಿರಿಯುವುದು, ಇಂಥ ಅಸಂಖ್ಯಾತ ಕಾರ್ಯಕ್ರಮಗಳಿಂದ ನಮ್ಮ ಸುದ್ದಿವಾಹಿನಿಗಳವರು ಸೀಶೆಲ್ಸ್ ದೇಶದಲ್ಲೂ ಜನರನ್ನು ದಿಕ್ಕುಗೆಡಿಸುತ್ತಾರೆ, ಜನರಲ್ಲಿ ಹುಸಿ ಕುತೂಹಲ ಹುಟ್ಟಿಸುತ್ತಾರೆ. ಹುರಿಗಾಳು ತಿನ್ನುವಂತೆ, ಗುಟ್ಕಾ ಹಾಕುವಂತೆ ಜನರು ಪದೇ ಪದೆ ಟಿವಿ-ಮೊಬೈಲ್ ಆನ್ ಮಾಡಿ ನ್ಯೂಸ್ ನೋಡುವ ಚಟಕ್ಕಿಳಿಯುವಂತೆ ಮಾಡುತ್ತಾರೆ. ಇಲ್ಲಿ ಇವರು ಮಾಡುತ್ತಿರುವುದು ಇವನ್ನೇ ಅಲ್ಲವೇ? ಈ ರೀತಿ ಜನರನ್ನು ತಮ್ಮ ಚಾನೆಲ್ಲಿಗೆ ಅಡಿಕ್ಟ್ ಆಗಿಸಿ ಟಿಆರ್‌ಪಿ ಹೆಚ್ಚಿಸಿಕೊಂಡು, ಅಲ್ಲಿಯೂ ಬೊಂಬಾಟಾಗಿ ಚಾನೆಲ್ ನಡೆಸುತ್ತಾರೆ. ಎಷ್ಟು ಪರಿಣಾಮಕಾರಿಯಾಗಿ ಈ ಕೆಲಸವನ್ನು ಮಾಡುತ್ತಾರೆಂದರೆ, ಆ ದೇಶದಲ್ಲಿ ಇಲ್ಲದಿರುವ ಎಲ್ಲ ಅಪಸವ್ಯಗಳೂ ಕ್ರಮೇಣ ಹುಟ್ಟಿಕೊಳ್ಳುವಂತೆ ಮಾಡಿಬಿಡುತ್ತಾರೆ!

ಕನ್ನಡದ ಸುದ್ದಿವಾಹಿನಿಗಳ ಈ ಚಾತುರ್ಯದ ಮುಂದೆ ವಿಶ್ವೇಶ್ವರ ಭಟ್ಟರೂ ಅಲ್ಲ, ಆ ಪರಬ್ರಹ್ಮನೂ ಅಲ್ಲ!

(ಲೇಖಕರು ಹಿರಿಯ ಸಾಹಿತಿ)

ಜನಸಂಖ್ಯೆ ಹೊರೆಯಾಗದೆ ಸಂಪನ್ಮೂಲವಾಗಲಿ

ಜನಸಂಪತ್ತು

ಡಾ.ಎ.ಜಯಕುಮಾರ ಶೆಟ್ಟಿ

vveditoped@gmail.com

ಜನಸಂಖ್ಯೆ ಎಂಬುದನ್ನು ಮಾನವ ಸಂಪನ್ಮೂಲ ಎಂದು ಪರಿಭಾವಿಸಿದಾಗ ಅದು ದೇಶಕ್ಕೆ ಕೊಡುಗೆಯೇ. ಆದರೆ ಅದು ಕೇವಲ ಸಂಖ್ಯೆಯಷ್ಟೇ ಆದರೆ ದೇಶಕ್ಕೆ ಅದಕ್ಕಿಂತ ದೊಡ್ಡ ಸಮಸ್ಯೆ ಬೇರಿಲ್ಲ. ಇಂದಿನ ಅಭಿವೃದ್ಧಿಶೀಲ ಯುಗದಲ್ಲಿ ವೈಜ್ಞಾನಿಕ ಅನ್ವೇಷಣೆಗಳು ಮಾನವನನ್ನು ಈ ವಿಶ್ವದ ಒಡೆಯನಾಗಿ ಮಾಡಿದರೂ, ಅವನು ಮಾತ್ರ ತನ್ನನ್ನು ತಾನೇ ನಿಯಂತ್ರಣಕ್ಕೊಳಪಡಿಸುವುದು ಅಸಾಧ್ಯವಾಗಿದೆ. ಜನಸಂಖ್ಯಾ ಸ್ಫೋಟವು ಜಗತ್ತಿನ ಬಹುತೇಕ ಭಾಗಗಳಲ್ಲಿ ಬಿಡಿಸಲಾಗದ ಒಗಟಾಗಿದೆ.

146 ಕೋಟಿ ಜನಸಂಖ್ಯೆ ಹಾಗೂ ಅತಿ ಹೆಚ್ಚು ಯುವಜನರನ್ನು ಹೊಂದಿರುವ ಭಾರತಕ್ಕೆ ಮಾನವ ಸಂಪನ್ಮೂಲ ವರವೂ ಹೌದು. ಅಧಿಕ ಸಂಖ್ಯೆಯಲ್ಲಿರುವ ಯುವ ಶಕ್ತಿಯು ಭಾರತದ ವರ್ತಮಾನ ಮತ್ತು ಭವಿಷ್ಯವಾಗಿದೆ. ಮಾನವ ಬಂಡವಾಳದ ಸದ್ಬಳಕೆಯ ಮೂಲಕ ಆರ್ಥಿಕಾಭಿವೃದ್ಧಿಯ ಲಾಭಗಳು ಜನಸಾಮಾನ್ಯರಿಗೆ ತಲುಪುವಂತಾದಾಗ ಮಾತ್ರ ಸುಸ್ಥಿರ ಹಾಗೂ ಅರ್ಥಪೂರ್ಣ ಅಭಿವೃದ್ಧಿ ಸಾಧ್ಯ.

ಡೇ ಆಫ್ 5 ಬಿಲಿಯನ್: ಜನಸಂಖ್ಯೆಯು ಬಹಳ ಹಿಂದಿನಿಂದಲೂ ಮಾನವ ಸಮಾಜದಲ್ಲಿ ಆತಂಕ ಮೂಡಿಸುತ್ತಲೇ ಬಂದಿದೆ. ಕ್ರಿ.ಪೂ 4ನೇ ಶತಮಾನದಲ್ಲಿ ಜಗತ್ತಿನ ಜನಸಂಖ್ಯೆ ಕೇವಲ 20 ಕೋಟಿ ಇದ್ದಾಗಲೇ ಪ್ಲೇಟೋ ಮತ್ತು ಅರಿಸ್ಟಾಟಲ್ ಮೊದಲಾದ ದಾರ್ಶನಿಕರು ಕಟ್ಟುನಿಟ್ಟಿನ ಜನನ ನಿಯಂತ್ರಣ ಕ್ರಮಗಳಿಗೆ ಸಲಹೆ ನೀಡಿದ್ದರು.

ವಿಶ್ವ ಜನಸಂಖ್ಯೆಯು 1987ರ ಜುಲೈ 11ರಂದು 500 ಕೋಟಿಯ ಗಡಿಯನ್ನು ತಲುಪಿತು. ಇದು ವಿಶ್ವಜನಸಂಖ್ಯಾ ಶಾಸ್ತ್ರದಲ್ಲಿ ಒಂದು ಹೆಗ್ಗುರುತು ಕ್ಷಣವಾಗಿತ್ತು ಮತ್ತು ವಿಶ್ವದಾದ್ಯಂತ ತ್ವರಿತ ಜನಸಂಖ್ಯಾ ಬೆಳವಣಿಗೆಯತ್ತ ಗಮನ ಸೆಳೆಯಿತು. ಜನಸಂಖ್ಯೆ ಎನ್ನುವುದು ಕೇವಲ ಅಂಕಿ-ಅಂಶಗಳ ಲೆಕ್ಕಾಚಾರದಲ್ಲಿ ಉಳಿದಿಲ್ಲ, ಇದು ಆಕಾಂಕ್ಷೆಗಳು, ಕನಸುಗಳು ಮತ್ತು ಪರಿವರ್ತನಾ ಸಾಮರ್ಥ್ಯದ ರೋಮಾಂಚನ ಅಸ್ತ್ರವಾಗಿದೆ.

ಎಷ್ಟೋ ಮಿಲಿಯನ್ ವರ್ಷಗಳ ನಂತರ 1800ರಲ್ಲಿ ಜಗತ್ತಿನ ಒಟ್ಟು ಜನಸಂಖ್ಯೆ ಒಂದು ಬಿಲಿಯನ್ ಅಂದರೆ 100 ಕೋಟಿಯನ್ನು ಮೊತ್ತ ಮೊದಲ ಬಾರಿಗೆ ತಲುಪಿತು. ಮುಂದೆ 127 ವರ್ಷಗಳ ನಂತರ, ಅಂದರೆ 1927ರಲ್ಲಿ ಜಗತ್ತಿನ ಜನಸಂಖ್ಯೆ ದ್ವಿಗುಣಗೊಂಡು 2 ಬಿಲಿಯನ್ ತಲುಪಿತು. ಮುಂದಿನ 33 ವರ್ಷಗಳಲ್ಲಿ, ಅಂದರೆ 1960ರಲ್ಲಿ 3 ಬಿಲಿಯನ್ ತಲುಪಿ, ಮುಂದೆ 14 ವರ್ಷಗಳಲ್ಲಿ 1974ಕ್ಕೆ 4 ಬಿಲಿಯನ್ ತಲುಪಿತು. ಮುಂದೆ ಕೇವಲ 13 ವರ್ಷಗಳಲ್ಲಿ (1987) ಜುಲೈ 11ರಂದು ಜಗತ್ತಿನ ಜನಸಂಖ್ಯೆ 5 ಬಿಲಿಯನ್ ತಲುಪಿತು. ಮುಂದೇ ಕೇವಲ 12 ವರ್ಷಗಳ ಅಂತರದಲ್ಲಿ 6 ಬಿಲಿಯನ್ (1999) ಹಾಗೂ 7 ಬಿಲಿಯನ್ (2011) ತಲುಪಿತು. ಇದೀಗ 11 ವರ್ಷಗಳ ಅಂತರದಲ್ಲಿ 8 ಬಿಲಿಯನ್ (2022) ತಲುಪಿ ಈಗ 8.23 ಬಿಲಿಯನ್ ಪ್ರಮಾಣದಲ್ಲಿದೆ.

ಐವರು ಯುವಕರಲ್ಲಿ ಒಬ್ಬ ಭಾರತೀಯ: ಚೀನಾದ ನಂತರ ಅತಿ ಹೆಚ್ಚು ಜನರನ್ನು ಹೊಂದಿರುವ ದೇಶವಾದ ಭಾರತ ಭೌಗೋಳಿಕವಾಗಿ ಜಗತ್ತಿನ ಶೇ.2.4ರಷ್ಟು ಭೂಭಾಗವನ್ನು ಹೊಂದಿದೆ, ಆದರೆ ಜಗತ್ತಿನ ಶೇ.17.05ರಷ್ಟು ಜನರು ಭಾರತದಲ್ಲಿದ್ದಾರೆ. ಜಗತ್ತಿನ ಪ್ರತಿ 6 ಜನರಲ್ಲಿ ಒಬ್ಬ ಭಾರತೀಯ. ಜಾಗತಿಕ ವರಮಾನದಲ್ಲಿ ಭಾರತದ ಪಾಲು ಕೇವಲ ಶೇ.2.51ರಷ್ಟು. ಭೌಗೋಳಿಕವಾಗಿ ಅಮೆರಿಕ ಭಾರತದ ಎರಡೂವರೆ ಪಟ್ಟು ದೊಡ್ಡದಿದೆ. ಆದರೆ ಜನಸಂಖ್ಯೆಯಲ್ಲಿ ಭಾರತವು ಅಮೆರಿಕದ ಮೂರೂವರೆ ಪಟ್ಟು ದೊಡ್ಡದಿದೆ. ಭಾರತದ ವಾರ್ಷಿಕ ಜನಸಂಖ್ಯಾ ಹೆಚ್ಚಳವು ಆಸ್ಟ್ರೇಲಿಯಾ ದೇಶದ ಒಟ್ಟು ಜನಸಂಖ್ಯೆಗೆ ಸಮನಾಗಿದೆ. 15ರಿಂದ 25 ವರ್ಷ ವಯೋಮಾನದವರ ಸಂಖ್ಯೆ ಜಗತ್ತಿನಲ್ಲಿ 120 ಕೋಟಿ ಇದ್ದರೆ, ಭಾರತದಲ್ಲೇ 25 ಕೋಟಿಗೂ ಅಧಿಕ ಇದೆ. ಅಂದರೆ ಜಗತ್ತಿನ ಪ್ರತಿ ಐವರು ಯುವಜನರಲ್ಲಿ ಒಬ್ಬರು ಭಾರತೀಯ. ಯುವಪೀಳಿಗೆ ಜಗತ್ತಿಗೆ ಹೊಸರೂಪ ಕೊಡಬೇಕಿದೆ. ಇದರಲ್ಲಿ ಭಾರತೀಯರೇ ಹೊರಬೇಕಾದ ಹೊಣೆಗಾರಿಕೆ ದೊಡ್ಡದು!

ಭಾರತವು 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.66ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಯುವದೇಶವಾಗಿದೆ. ಯುವಜನರಲ್ಲಿರುವ ಅಪಾರ ಸಾಮರ್ಥ್ಯವನ್ನು ಬಳಸಿಕೊಳ್ಳಲು, ಅವರ ಶಕ್ತಿಯನ್ನು ಸಕಾರಾತ್ಮಕ ದಿಕ್ಕಿನಲ್ಲಿ ನಡೆಸುವುದು ಹಾಗೂ ಅವರಿಗೆ ತಮ್ಮನ್ನು ತಾವು ವ್ಯಕ್ತಪಡಿಸಲು ಅಗತ್ಯವಾದ ಬೆಂಬಲ ಮತ್ತು ವೇದಿಕೆಯನ್ನು ನೀಡುವುದು ಅತ್ಯಂತ ಅವಶ್ಯಕವಾಗಿದೆ.

ಯುವಕರ ಸಬಲೀಕರಣ: ಇಂದು, ಪ್ರಪಂಚವು 10ರಿಂದ 24 ವರ್ಷದೊಳಗಿನ 1.8 ಶತಕೋಟಿ ಯುವಜನರನ್ನು ಹೊಂದಿದೆ. ಇತಿಹಾಸದಲ್ಲಿ ಅತಿದೊಡ್ಡ ಪೀಳಿಗೆಯಾದ ಇವರು ಆರ್ಥಿಕ ಅಭದ್ರತೆ, ಲಿಂಗ ಅಸಮಾನತೆ, ಸೀಮಿತ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ, ಹವಾಮಾನ ವೈಪರೀತ್ಯ ಮತ್ತು ಸಂಘರ್ಷವನ್ನು ಎದುರಿಸುತ್ತಿದ್ದಾರೆ. ಆದುದರಿಂದ 2025ರ ಜನಸಂಖ್ಯಾ ದಿನಾಚರಣೆಯ ಧ್ಯೇಯವಾಕ್ಯ- ನ್ಯಾಯಯುತ ಮತ್ತು ಭರವಸೆಯ ಜಗತ್ತಿನಲ್ಲಿ ತಾವು ಬಯಸುವ ಕುಟುಂಬಗಳನ್ನು ರಚಿಸಲು ಯುವಜನರನ್ನು ಸಬಲೀಕರಣಗೊಳಿಸುವುದು, ಯುವಕರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಹಕ್ಕುಗಳು, ಸಾಧನಗಳು ಮತ್ತು ಅವಕಾಶಗಳನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು. ಯುವಕರು ನಮ್ಮ ಭವಿಷ್ಯವನ್ನು ಮಾತ್ರ ರೂಪಿಸುತ್ತಿಲ್ಲ; ಅವರು ನ್ಯಾಯಯುತ, ಅಂತರ್ಗತ ಮತ್ತು ಸುಸ್ಥಿರವಾದದ್ದನ್ನು ಬೇಡುತ್ತಿದ್ದಾರೆ ಎಂದು ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಆಂಟೋನಿಯೊ ಗುಟೆರೆಸ್ ಒತ್ತಿಹೇಳುತ್ತಾರೆ.

ವರದಾನವಾಗುವ ಅಂಶಗಳು

- **ಯುವ ಶಕ್ತಿ-ಶ್ರಮಶಕ್ತಿ:** ಭಾರತದಲ್ಲಿ ಶೇ. 60ಕ್ಕಿಂತ ಹೆಚ್ಚು ಜನರು 15ರಿಂದ 59 ವಯಸ್ಸಿನ ನಡುವೆ ಇದ್ದು, ಈ ಜನಶಕ್ತಿ ದೇಶದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುತ್ತಿದೆ. ಇದನ್ನು 'ಲಾಭದಾಯಕ ಜನಸಂಖ್ಯಾ ಕಿಟಕಿ' ಎಂದು ಕರೆಯಲಾಗುತ್ತದೆ.
- **ಆವಿಷ್ಕಾರ ಮತ್ತು ಉದ್ಯಮಶೀಲತೆ:** ಯುವಜನತೆಗೆ ಇರುವ ಹೊಸ ಆಲೋಚನೆಗಳು ಹಾಗೂ ತಂತ್ರಜ್ಞಾನ ಪ್ರಿಯ ಮನಸ್ಥಿತಿಯು ನೂರಾರು ಸ್ಟಾರ್ಟ್-ಅಪ್‌ಗಳ ರೂಪದಲ್ಲಿ ವೃದ್ಧಿಯ ಹಾದಿಯಲ್ಲಿ ಸಾಗುತ್ತಿದೆ. ಭಾರತವು ಇಂದು ವಿಶ್ವದ ಮೂರನೇ ಅತಿದೊಡ್ಡ 'ಸ್ಟಾರ್ಟ್-ಅಪ್ ಇಕೋಸಿಸ್ಟಂ' ಹೊಂದಿದೆ.
- **ದೊಡ್ಡ ಆಂತರಿಕ ಮಾರುಕಟ್ಟೆ:** ದೇಶದ ವಿಶಾಲ ಜನಸಂಖ್ಯೆಯು ವ್ಯಾಪಾರ-ವ್ಯವಹಾರಕ್ಕೆ ಬೃಹತ್ ಗ್ರಾಹಕ ಮಾರುಕಟ್ಟೆಯಾಗಿ ಕೆಲಸ ಮಾಡುತ್ತಿದೆ. ಇದು ದೇಶೀಯ ಉತ್ಪಾದನೆಯ ಮೇಲೂ ಧನಾತ್ಮಕ ಪರಿಣಾಮ ಬೀರುತ್ತದೆ.
- **ವೈವಿಧ್ಯಮಯ ಪ್ರತಿಭೆಗಳು:** ಜನಸಂಖ್ಯೆಯಲ್ಲಿನ ವೈವಿಧ್ಯ- ಭಾಷೆ, ಸಂಸ್ಕೃತಿ, ಕೌಶಲ- ದೇಶದ ಸೇವಾ, ತಂತ್ರಜ್ಞಾನ, ಸೃಜನಾತ್ಮಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ನಿರಂತರ ಬೆಳವಣಿಗೆಯನ್ನು ತರುತ್ತಿದೆ.

ಭಾರತದಲ್ಲಿ ಡೆಮೊಗ್ರಫಿಕ್ ಡಿವಿಡೆಂಡ್: ಜನಸಂಖ್ಯೆಯ ವಯಸ್ಸಿನ ರಚನೆಯ ಬದಲಾವಣೆಯು ಆರ್ಥಿಕ ಬೆಳವಣಿಗೆಗೆ ಪೂರಕವಾಗುವ ಸಂಭವನೀಯತೆಯನ್ನು 'ಡೆಮೊಗ್ರಫಿಕ್ ಡಿವಿಡೆಂಡ್' ಎಂದು ಕರೆಯುತ್ತಾರೆ. ಈ ಸಮಯದಲ್ಲಿ ಅವಲಂಬಿತ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಿ, ಕೆಲಸ ಮಾಡುವ ವಯಸ್ಸಿನ ಜನರ ಪ್ರಮಾಣ ಹೆಚ್ಚಾಗುವ ಸ್ಥಿತಿಯಾಗಿರುತ್ತದೆ.

ಜನಸಂಖ್ಯಾ ಸ್ಫೋಟದ ಈ ಸಂದರ್ಭದಲ್ಲಿ ಭಾರತ ಈಗ ಆರ್ಥಿಕ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣವನ್ನು ಹೊಂದಿದೆ. ಹೆಚ್ಚುತ್ತಿರುವ ಜನಸಂಖ್ಯೆ ಒಂದೆಡೆ ಸವಾಲಾದರೆ, ಇನ್ನೊಂಡೆಡೆ ಅದು ಬೆಳವಣಿಗೆಗೆ ಅವಕಾಶವನ್ನೂ ಒದಗಿಸಿಕೊಡುತ್ತದೆ.

ಭಾರತದ ಜನಸಂಖ್ಯೆಯಲ್ಲಿ ಶೇ.62.5ರಷ್ಟು ಜನರು ಕೆಲಸ ಮಾಡುವ/ಉದ್ಯೋಗಸ್ಥ (15-59) ಪ್ರಾಯದವರಾಗಿದ್ದಾರೆ. ಈ ಪ್ರಮಾಣವು 2036ರಲ್ಲಿ ಗರಿಷ್ಠ ಶೇ.65ರ ಮಟ್ಟವನ್ನು ತಲುಪಲಿದೆ. ಈ ರೀತಿಯ ಲಾಭವನ್ನು ಭಾರತವು 2006ರಿಂದ 2036ವರೆಗೆ ಮೂರು ದಶಕಗಳ ಕಾಲ ಅನುಭವಿಸಲಿದೆ. ಆದರೆ ಇದು ವಾಸ್ತವವಾಗಬೇಕಾದಲ್ಲಿ ಜನರ ಜೀವನಮಟ್ಟ ಸುಧಾರಿಸುವಂಥ ಅನೇಕ ವಲಯಗಳಲ್ಲಿ ಹಣಹೂಡಿಕೆ ಅಗತ್ಯವಾಗುತ್ತದೆ.

ಜನಸಂಖ್ಯೆ ಸಂಪನ್ಮೂಲವಾಗಲಿ: ದೇಶದ ಉತ್ಪಾದಕತೆಯನ್ನು ಹೆಚ್ಚಿಸಿಕೊಂಡು, ಲಭ್ಯ ಸಂಪನ್ಮೂಲಗಳನ್ನು ಜಾಣತನದಿಂದ ಬಳಸಿಕೊಂಡರೆ ಮಾತ್ರ ಮುಂದಿನ ದಿನಗಳಲ್ಲಿ ಭಾರತೀಯರ ಬದುಕು ಸಹನೀಯವಾಗಿರಲು ಸಾಧ್ಯವಿದೆ. ಅತಿ ಹೆಚ್ಚು ಯುವಜನರನ್ನು ಹೊಂದಿರುವ ಭಾರತಕ್ಕೆ ಜನಸಂಖ್ಯೆ ವರದಾನವಾಗಿದೆ, ಯುವಶಕ್ತಿಯು ಭಾರತದ ವರ್ತಮಾನ ಮತ್ತು ಭವಿಷ್ಯವಾಗಿದೆ.

ಮಾನವ ಬಂಡವಾಳದ ಸದ್ಬಳಕೆಯ ಮೂಲಕ ಆರ್ಥಿಕಾಭಿವೃದ್ಧಿಯ ಲಾಭಗಳು ಜನಸಾಮಾನ್ಯರಿಗೆ ತಲುಪುವಂತಾದಾಗ ಮಾತ್ರ ಸುಸ್ಥಿರ ಹಾಗೂ ಅರ್ಥಪೂರ್ಣ ಅಭಿವೃದ್ಧಿ ಸಾಧ್ಯ. ಯುವಜನರಲ್ಲಿ ಸಮಕಾಲೀನ ಕೌಶಲವರ್ಧನೆ ಮಾಡುವ ಮೂಲಕ ಜನಸಂಖ್ಯೆಯನ್ನು ಮಾನವ ಸಂಪತ್ತು ಆಗಿ ಪರಿವರ್ತಿಸಿ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ.

ಶಿಕ್ಷಣ ಸಂಸ್ಥೆಗಳು ಕೇವಲ ಪದವೀಧರರನ್ನು ಉತ್ಪಾದನೆ ಮಾಡುವ ಕಾರ್ಖಾನೆಗಳಾಗದೆ, ಜ್ಞಾನ, ಕೌಶಲ, ಮೌಲ್ಯ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಪೋಷಿಸುವ ಕೇಂದ್ರಗಳಾಗಬೇಕು. ಸಂಶೋಧನೆ ಮತ್ತು ನಾವಿನ್ಯಗಳು ಉನ್ನತ ಶಿಕ್ಷಣದ ಪ್ರಮುಖ ಅಂಶಗಳಾಗಬೇಕು. ನಮ್ಮ ದೇಶದ ಸಮಸ್ಯೆಗಳ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸುವ ಹಾಗೂ ಹೊಸತನವನ್ನು ಕಂಡುಕೊಳ್ಳುವ ಪ್ರಕ್ರಿಯೆಗಳಲ್ಲಿ ಯುವಮನಸ್ಸುಗಳು ತೊಡಗಿಸಿಕೊಳ್ಳುವಂತಾಗಬೇಕು. ಮಾನವಸಂಪತ್ತನ್ನು ಸಮರ್ಪಕವಾಗಿ ಹೂಡಿಕೆ ಮಾಡುವ ಮೂಲಕ, ಕೌಶಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಭಾರತವು ತನ್ನ ಜನಸಂಖ್ಯಾ ಲಾಭಾಂಶವನ್ನು ಸಾರ್ಥಕವಾಗಿಸಬಹುದು. ಇದು ದೇಶದ ಉದ್ಯಮ, ನಾವೀನ್ಯ ಹಾಗೂ ಉತ್ಪಾದಕತೆಯನ್ನು ಉತ್ತೇಜಿಸಿ, ದೀರ್ಘಕಾಲಿಕ ಆರ್ಥಿಕ ಶಕ್ತಿಯಾಗಿ ಭಾರತವನ್ನು ರೂಪಿಸಲು ನೆರವಾಗುತ್ತದೆ.

ಸಮರ್ಥ ಯೋಜನೆಗಳು ಹಾಗೂ ಜವಾಬ್ದಾರಿಯುತ ನಾಗರಿಕತೆಯಿಂದ ಜನಸಂಖ್ಯೆ ಶಕ್ತಿಯಾಗಬಹುದು. ಆದರೆ ಹೊಣೆಗಾರಿಕೆ, ಯೋಜನೆ, ಶಿಕ್ಷಣ ಹಾಗೂ ಸಮರ್ಥ ಆಡಳಿತದ ಮೂಲಕ ಮಾತ್ರ ಜನಸಂಖ್ಯೆ ಒಂದು ವರದಾನವಾಗಲು ಸಾಧ್ಯ. ದೇಶದ ಶ್ರಮಶಕ್ತಿಯನ್ನು ದೇಶದ ಶಕ್ತಿಯನ್ನಾಗಿ ಪರಿವರ್ತಿಸುವ ಸವಾಲು ನಮ್ಮ ಮುಂದಿದೆ. ಭಾರತವು ತನ್ನ ಯುವಜನಸಂಖ್ಯೆಯ ಸಂಪೂರ್ಣ ಸಾಮರ್ಥ್ಯವನ್ನು ಅನಾವರಣಗೊಳಿಸುವ ಮತ್ತು ಜಾಗತಿಕ ನಾಯಕನಾಗುವ ಹಾದಿಯನ್ನು ರೂಪಿಸುವ ಸಮಯ ಕೂಡಿಬಂದಿದೆ. ಜನಸಂಖ್ಯೆ ಒಂದು ಶಕ್ತಿ- ಅದನ್ನು ಸಮರ್ಥವಾಗಿ ರೂಪಿಸುವ ಕೌಶಲ ನಮ್ಮದಾಗಲಿ.

(ಲೇಖಕರು ವಿಶ್ರಾಂತ ಪ್ರಾಂಶುಪಾಲರು)

ಸದಾಶಯ

ರಾಘವೇಂದ್ರ ಜೋಯಿಸ್, ಮೈಸೂರು

ಬದುಕಿನ ಕೆಲವು ಮುಖ್ಯ ಪಾಠಗಳು

ಇಂದು ಹೆಚ್ಚಿನ ಶಾಲಾ-ಕಾಲೇಜುಗಳು ಒಂದು ಕೆಲಸ ಪಡೆದುಕೊಳ್ಳಲು ಅಥವಾ ಕಸುಬು/ವ್ಯವಹಾರ ನಡೆಸಲು ಬೇಕಾದ ಶಿಕ್ಷಣ (?)ಕೊಡುವುದಕ್ಕೆ ಮತ್ತು ಪ್ರಮಾಣಪತ್ರ ನೀಡುವುದಕ್ಕೆ ಮಾತ್ರ ಸೀಮಿತವಾಗಿವೆ. ನೆಮ್ಮದಿಯ ಬದುಕು ಕಟ್ಟಿಕೊಳ್ಳಲು, ಉತ್ತಮವಾದ ನಡತೆ ರೂಪಿಸಿಕೊಳ್ಳಲಿಕ್ಕೆ, ಔದ್ಯೋಗಿಕ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲಿಕ್ಕೆ ಬೇಕಾದ ಮಾರ್ಗದರ್ಶನವಾಗಲಿ, ಉತ್ತಮ ಸಲಹೆಗಳಾಗಲಿ, ಪಾಠಗಳಾಗಲಿ ಅಲ್ಲಿ ದಕ್ಕುವುದು ಅಪರೂಪವೆಂದೇ ಹೇಳಬೇಕು. ಹೀಗಾಗಿ ಅವುಗಳನ್ನು ನಾವೇ ಕಲಿಯಬೇಕು ಮತ್ತು ನಮ್ಮ ದಿನನಿತ್ಯದ ಬದುಕಿನಲ್ಲಿ ರೂಢಿಸಿಕೊಳ್ಳಬೇಕು. ಆಗ ಮಾತ್ರ ಕಲಿತ ವಿದ್ಯೆಗೊಂದು ಅರ್ಥ ಇರುತ್ತದೆ.

ಹೆಚ್ಚು ಓದಿಕೊಂಡು ದೊಡ್ಡ ದೊಡ್ಡ ಹುದ್ದೆಯಲ್ಲಿರುವವರು, ಭಾರಿ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಕೆಲವರು ಏನಾದರೂ ಎಡವಟ್ಟು ಮಾಡಿಕೊಳ್ಳುವುದು, ಎಡುವುವುದು ಈಗ ಸಾಮಾನ್ಯವಾಗಿದೆ. ಇದಕ್ಕೆಲ್ಲಾ ಮುಖ್ಯ ಕಾರಣ, ಸಣ್ಣ ಸಣ್ಣ ಜೀವನ ಪಾಠವನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳದಿರುವುದು. ಹೀಗಾಗಿ ಕೊನೆಯಲ್ಲಿ ಅವರು ಭಾರಿ ಬೆಲೆ ತೆರಬೇಕಾಗುವ ಪರಿಸ್ಥಿತಿ ಉಂಟಾಗಬಹುದು. ಆದ್ದರಿಂದ ಶೈಕ್ಷಣಿಕವಾಗಿ ಕಲಿಯದ ಕೆಲವೊಂದು ಒಳ್ಳೆಯ ಜೀವನಪಾಠಗಳನ್ನು ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರಿಗೂ ಅತಿ ಮುಖ್ಯ ಎನಿಸುತ್ತದೆ ಮತ್ತು ಅವನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬಂದರೆ ಮಾತ್ರ ಕಲಿತ ವಿದ್ಯೆಗೆ, ಏರಿದ ಉನ್ನತ ಹುದ್ದೆಗೆ ಒಂದು ಗೌರವ ಇರುತ್ತದೆ. ಬದುಕಿನಲ್ಲಿ ಅಳವಡಿಸಿಕೊಳ್ಳಬಹುದಾದ ಕೆಲವು ಸಣ್ಣ ಸಣ್ಣ ವಿಷಯಗಳು:

- ವಿದ್ಯೆಯ ಜತೆ ವಿನಯವನ್ನೂ ಬೆಳೆಸಿಕೊಳ್ಳುವುದು.
- ಜೀವನದ ಪ್ರತಿ ಹಂತದಲ್ಲೂ ಪ್ರಾಮಾಣಿಕತೆಯನ್ನು ರೂಢಿಸಿಕೊಳ್ಳುವುದು.
- ಗೆಲುವಿನ ಪಾಲನ್ನು ಜತೆಯಲ್ಲಿದ್ದವರಿಗೂ ಕೊಡುವುದು, ಸೋಲಿನ ಜವಾಬ್ದಾರಿಯನ್ನು ತನ್ನ ಹೆಗಲಿಗೆ ಹಾಕಿಕೊಳ್ಳುವುದು.
- ಅಸೂಯೆ, ಗುಂಪುಗಾರಿಕೆ, 'ನಾನೇ ಎಲ್ಲ' ಎಂಬ ಅಹಂಕಾರದಿಂದ ದೂರವಿರುವುದು.
- ಯಾರನ್ನೂ ಕೀಳಾಗಿ ಕಾಣದಿರುವುದು, ಪ್ರತಿಯೊಬ್ಬರನ್ನೂ ಗೌರವಿಸುವುದು.
- ಪರರ ಅಭಿಪ್ರಾಯ ಮತ್ತು ಪ್ರತಿಕ್ರಿಯೆಯನ್ನು ಕೇಳಿ ಗೌರವಿಸುವುದು.
- ಸಾರ್ವಜನಿಕವಾಗಿ ನಾಲಿಗೆ ಹರಿಬಿಟ್ಟು ಮೈಮೇಲೆ ವಿವಾದವನ್ನು ಎಳೆದುಕೊಳ್ಳದೇ ಇರುವುದು.
- ಸಮಯಕ್ಕೆ ಹೆಚ್ಚು ಮಹತ್ವ ಕೊಡುವುದು ಮತ್ತು ಆದ್ಯತೆಯ ಮೇಲೆ ಕೆಲಸ ಮಾಡುವುದು.
- ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು
- ಎಲ್ಲಾ ವಿಷಯಗಳಲ್ಲೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು.

ಇನ್ನು, ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ಮಾಡಿದ ಕೆಲವು ಪ್ರತಿಭಾವಂತರು, ಉನ್ನತ ಸ್ಥಾನದಲ್ಲಿರುವ ರಾಜಕಾರಣಿಗಳು ಸಾರ್ವಜನಿಕವಾಗಿ ಏನೇನೊ ಅಸಂಬದ್ಧವಾಗಿ ಮಾತನಾಡಿ ಮುಜುಗರಕ್ಕೀಡಾಗುವುದುಂಟು. ಅಂಥವರು ಕೂಡ ಜಾಗೃತರಾಗಿರಬೇಕು. 'ರಾಜಕಾರಣಿಗಳು ಅಂದರೆ ಬರೀ ಸ್ವಾರ್ಥಸಾಧಕರು' ಎಂಬ ಅಪವಾದದಿಂದ ಹೊರಬರಬೇಕು. ಇವತ್ತು ಅತ್ಯಾಚಾರ, ಕೊಲೆ,ದರೋಡೆ, ಸೈಬರ್ ಕ್ರೈಂ ಮಾಡುವವರಲ್ಲಿ ಹೆಚ್ಚಿನವರು ವಿದ್ಯಾವಂತರಾಗಿರುವುದು ದುರಂತ. ಇಂಥವರು ತಾವು ಸಾಗುತ್ತಿರುವ ದಾರಿ ತಪ್ಪು ಎಂಬ ಅರಿವನ್ನು ದಕ್ಕಿಸಿಕೊಂಡು ಸರಿಯಾದ ಮಾರ್ಗದಲ್ಲಿ ಸಾಗಬೇಕಾಗಿದೆ. ಬದುಕಿನಲ್ಲಿ ಒಳ್ಳೆಯ ಹಾದಿಯಲ್ಲಿ ಸಾಗಿ ಯಶಸ್ಸು ಗಳಿಸಬೇಕಾದರೆ, ಶಾಲೆಗಳು ಕಲಿಸದ ಸಣ್ಣ ಸಣ್ಣ ಪಾಠಗಳನ್ನು ಎಲ್ಲರೂ ಕಲಿತು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲೇಬೇಕು. ಅದೇ ರೀತಿ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲೂ ವಿದ್ಯೆಯ ಜತೆಜತೆಗೆ ಬದುಕಿನ ಮೌಲ್ಯವನ್ನು ಹೆಚ್ಚಿಸುವ ಶಿಕ್ಷಣ ಎಲ್ಲರಿಗೂ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಯೋಚಿಸಲಿ.

(ಲೇಖಕರು ಬ್ಯಾಂಕ್ ಅಧಿಕಾರಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:68, Issue: 72

ಸಮಾಚಾರ ಸಣ್ಣದಲ್ಲ

ಗೋವಾ, ಲಡಾಖ್ ಹೊಸ ರಾಜ್ಯಪಾಲರು

ದೆಹಲಿ: ಹರಿಯಾಣ ಮತ್ತು ಗೋವಾ ರಾಜ್ಯಗಳಿಗೆ ಹೊಸ ರಾಜ್ಯಪಾಲರು ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಕ್ಕೆ ಲೆಫ್ಟಿನೆಂಟ್ ಗವನರ್ ನೇಮಕವಾಗಿದೆ. ಲಡಾಕ್‌ಗೆ ಲೆಫ್ಟಿನೆಂಟ್ ಗವರ್ನರ್ ಆಗಿ ಕವಿಂದರ್ ಗುಪ್ತಾ ಅವರನ್ನು ನೇಮಕ ಮಾಡಲಾಗಿದೆ. ಹರಿಯಾಣ ನೂತನ ರಾಜ್ಯಪಾಲ ರಾಗಿ ಪ್ರೊ. ಆಶಿಮ್ ಕುಮಾರ್ ಘೋಷ್ ಹಾಗೂ ಗೋವಾ ರಾಜ್ಯಪಾಲರಾಗಿ ಕೇಂದ್ರದ ಮಾಜಿ ಸಚಿವ ಪುಸಪತಿ ಅಶೋಕ್ ಗಜಪತಿ ರಾಜು ಅವರನ್ನು ನೇಮಕಗೊಳಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಚೇರಿಯಿಂದ ಈ ಸಂಬಂಧ ಆದೇಶ ಹೊರಬಿದ್ದಿದೆ.

ಕಂದಕಕ್ಕೆ ಟೆಂಪೋ: 5 ಸಾವು

ಶ್ರೀನಗರ: ಜಮ್ಮು-ಕಾಶ್ಮೀರದ ದೋಡಾ ಜಿಲ್ಲೆಯ ಪರ್ವತ ಪ್ರದೇಶದಲ್ಲಿ ಮಂಗಳವಾರ ಟೆಂಪೋ ಟ್ರಾವೆಲರ್ ಕಂದಕಕ್ಕೆ ಉರುಳಿದ ಪರಿಣಾಮ ಒಬ್ಬ ಮಹಿಳೆ ಸೇರಿದಂತೆ ಐವರು ಸಾವಿಗೀಡಾದರು. 17 ಜನರು ಗಾಯಗೊಂಡಿದ್ದಾರೆ. ವಾಹನದ ಮೇಲಿನ ನಿಯಂತ್ರಣವನ್ನು ಚಾಲಕ ಕಳೆದುಕೊಂಡಿದ್ದರಿಂದ ಟೆಂಪೊ ಟ್ರಾವೆಲರ್ ಕಂದಕಕ್ಕೆ ಉರುಳಿದೆ ಎನ್ನಲಾಗಿದೆ.

ಸಿಪಿಐ ನಾಯಕನ ಹತ್ಯೆ

ಹೈದರಾಬಾದ್: ತೆಲಂಗಾಣ ರಾಜಧಾನಿ ಹೈದರಾಬಾದ್‌ನ ಮಲಕಪೇಟೆಯಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯದ ರಾಜ್ಯ ಪರಿಷತ್ ಸದಸ್ಯ ಕೆ.ಚಂದು ನಾಯ್ಕ (47) ಎಂಬವರನ್ನು ಅಪರಿಚಿತ ವ್ಯಕ್ತಿಗಳು ಮಂಗಳವಾರ ಬೆಳಗ್ಗೆ ಗುಂಡಿಕ್ಕಿ ಕೊಂದಿದ್ದಾರೆ. ಕಾರಿನಲ್ಲಿ ಬಂದ ನಾಲ್ವರು ದುಷ್ಕರ್ಮಿಗಳು, ಉದ್ಯಾನವನದ ಬಳಿ ಬೆಳಗ್ಗೆ ವಾಕ್ ಮಾಡುತ್ತಿದ್ದ ನಾಯ್ಕ ಅವರ ಕಣ್ಣಿಗೆ ಕಾರದಪುಡಿ ಎರಚಿದ್ದಾರೆ. ಬಳಿಕ ಹಲವು ಸುತ್ತು ಗುಂಡು ಹಾರಿಸಿದ್ದಾರೆ. ಗಂಭೀರವಾಗಿ ಗಾಯಗೊಂಡ ನಾಯ್ಕ ರಕ್ತದ ಮಡುವಿನಲ್ಲಿ ಬಿದ್ದು, ಸ್ಥಳದಲ್ಲೇ ಕೊನೆಯುಸಿರೆಳೆದರು. ಆ ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾದರು. ನಾಯ್ಕ ಅವರಿಗೆ ರಾಜೇಶ್ ಎಂಬಾತನೊಂದಿಗೆ ದೀರ್ಘಕಾಲದ ದ್ವೇಷವಿತ್ತು ಎಂದು ನಾಯ್ಕ ಅವರ ಪತ್ನಿ ಹೇಳಿದ್ದಾಗಿ ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ರಾಜೇಶ್ ಕೂಡಾ ಸಿಪಿಐ(ಎಂಎಲ್) ನಂಟು ಹೊಂದಿದ್ದಾರೆಂದು ವರದಿಯಾಗಿದೆ. ನಾಯ್ಕ ಹತ್ಯೆ ಸ್ಥಳೀಯರಲ್ಲಿ ಭೀತಿ ಉಂಟು ಮಾಡಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದು, ಮಂಗಳವಾರ ಸಂಜೆವರೆಗೂ ಯಾರನ್ನೂ ಬಂಧಿಸಿರಲಿಲ್ಲ.

63 ಕೋಟಿ ರು. ಕೊಕೇನ್ ಸಹಿತ ಮಹಿಳೆ ಬಂಧನ

ಮುಂಬೈ: ಮಹಾರಾಷ್ಟ್ರದಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 62.60 ಕೋಟಿ ರು. ಮೌಲ್ಯದ ಕೊಕೇನ್ ವಶಕ್ಕೆ ಪಡೆದಿರುವ ಕಸ್ಟಮ್ಸ್ ಗುಪ್ತಚರ ಇಲಾಖೆ ಅಧಿಕಾರಿಗಳು, ಕೊಕೇನ್ ಹೊಂದಿದ್ದ ಭಾರತೀಯ ಮಹಿಳೆಯನ್ನು ಬಂಧಿಸಿದ್ದಾರೆ. ಜು.14ರ ಸೋಮವಾರ ಮಹಿಳೆ ದೋಹಾದಿಂದ ಮುಂಬೈ ಬಂದಿಳಿದಿದ್ದಳು. ಗುಪ್ತಚರ ಇಲಾಖೆ ನೀಡಿದ ಖಚಿತ ಮಾಹಿತಿ ಮೇರೆಗೆ ಡಿಆರ್‌ಐ ಅಧಿಕಾರಿಗಳು ಮಹಿಳೆಯ ಲಗೇಜ್‌ಗಳನ್ನು ಪರಿಶೀಲನೆ ನಡೆಸಿದಾಗ 6261 ಗ್ರಾಂಗಳಷ್ಟು ಕೊಕೇನ್ ಮಾದಕ ದ್ರವ್ಯವನ್ನು 300 ಕ್ಯಾಪ್ಸುಲ್‌ಗಳಲ್ಲಿ ತುಂಬಿಸಿ 6 ಬಿಸ್ಕೆಟ್ ಬಾಕ್ಸ್ ಹಾಗೂ 3 ಚಾಕೊಲೇಟ್ ಬಾಕ್ಸ್‌ಗಳಲ್ಲಿ ಅಡಗಿಸಿಟ್ಟಿರುವುದು ಪತ್ತೆಯಾಯಿತು. ವಶಪಡಿಸಿಕೊಂಡ ಮಾದಕ ದ್ರವ್ಯವನ್ನೂ ಸ್ಥಳದಲ್ಲೇ ಪರೀಕ್ಷೆಗೊಳಪಡಿಸಿದಾಗ ಕೊಕೇನ್ ಎಂಬುದು ದೃಢಪಟ್ಟಿತು. 1985ರ ಮಾದಕ ದ್ರವ್ಯ ನಿಗ್ರಹ ಕಾಯ್ದೆಯಡಿ ಮಹಿಳೆಯನ್ನು ಬಂಧಿಸಿ, ವಿಚಾರಣೆಗೊಳಪಡಿಸಲಾಗಿದೆ.

ಆಂಧ್ರದಲ್ಲಿ ಮದ್ಯ ದರ ಭಾರೀ ಇಳಿಕೆ

ಅಮರಾವತಿ: ಆಂಧ್ರಪ್ರದೇಶ ಸರಕಾರ ಮದ್ಯದ ದರ ಇಳಿಸಿದೆ. ಪ್ರತಿ ಬಾಟಲಿಗೆ ಕನಿಷ್ಠ 10 ರು.ನಿಂದ ಗರಿಷ್ಠ 100 ರು.ವರೆಗೆ ಬೆಲೆ ಕಡಿತಗೊಳಿಸಿದೆ. ಇದರಿಂದಾಗಿ ಆಂಧ್ರದಲ್ಲಿ 30 ಬ್ರಾಂಡ್‌ಗಳ ಮದ್ಯದ ಬೆಲೆ ತೆಲಂಗಾಣ, ಕರ್ನಾಟಕ ಮತ್ತು ತಮಿಳುನಾಡಿಗಿಂತ ಕಡಿಮೆಯಾಗಿದೆ. ಆಂಧ್ರದ ಈ ಕ್ರಮದಿಂದ ಕರ್ನಾಟಕದ ಗಡಿ ಭಾಗದಲ್ಲಿ ಮದ್ಯ ಮಾರಾಟದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ. ಮದ್ಯ ನೀತಿಯಲ್ಲಿ ಪಾರದರ್ಶಕತೆ ಕಾಯ್ದುಕೊಂಡು ಜನರಿಗೆ ಕಡಿಮೆ ದರದಲ್ಲಿ ಮದ್ಯ ದೊರೆಯುವಂತೆ ಮಾಡಲು ಅಬಕಾರಿ ಇಲಾಖೆಗೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸೂಚನೆ ನೀಡಿದ್ದಾರೆ. ಆ ಬಳಿಕ ದರದಲ್ಲಿ ಇಳಿಕೆಯಾಗಿದೆ. ಪ್ರವಾಸಿ ತಾಣಗಳಲ್ಲಿ ಪರವಾನಗಿ ಇಲ್ಲದ ಮದ್ಯ ಮಳಿಗೆಗಳನ್ನು ಬಂದ್ ಮಾಡಿಸುವಂತೆ ಹಾಗೂ ಡಿಜಿಟಲ್ ಪಾವತಿಗೆ ಆದ್ಯತೆ ನೀಡುವಂತೆಯೂ ಸಿಎಂ ಸೂಚಿಸಿದ್ದಾರೆ ಎನ್ನಲಾಗಿದೆ.

{ ಅರ್ಜುನ್ ಎರಿಗೈಸಿ } ಭಾರತ ಚೆಸ್ ಜಿಎಂ

ಬ್ರಿಟಿಷ್ ಏರ್‌ವೇಸ್‌ನಲ್ಲಿ ಅತಿ ಕೆಟ್ಟ ಪ್ರಯಾಣದ ಅನುಭವವಾಗಿದೆ. ವಿಮಾನದ ಮತ್ತು ನಿಲ್ದಾಣದ ಸಿಬ್ಬಂದಿ ಪ್ರಯಾಣಿಕರ ಕೋರಿಕೆಗೆ ಸರಿಯಾಗಿ ಸ್ಪಂದಿಸುತ್ತಲೇ ಇರಲಿಲ್ಲ. ಲಗ್ಗೇಜ್ ಸಿಗುವುದು 84 ಗಂಟೆಗಳಷ್ಟು ವಿಳಂಬವಾಯಿತು. ಏರ್‌ವೇಸ್ ಸಿಬ್ಬಂದಿಗಳದ್ದು ದುರಹಂಕಾರ ನಡೆ. ತೀರಾ ನಿರಾಶಾದಾಯಕ ಸೇವೆ. ಬ್ರಿಟಿಷ್ ಏರ್‌ವೇಸ್ ಗ್ರಾಹಕರನ್ನು ಬಹಳ ಕೆಟ್ಟದಾಗಿ ನಡೆಸಿಕೊಳ್ಳುತ್ತಿದೆ.

ಸಂವಾದ ಮಾರ್ಗ ಮುಕ್ತ: ಭಾರತ-ಚೀನಾ ನಿರ್ಧಾರ

ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಭೇಟಿ ಮಾಡಿದ ವಿದೇಶಾಂಗ ಸಚಿವ ಜೈಶಂಕರ್ | ಎಸ್‌ಸಿಒ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗಿಯಾಗಲು ಚೀನಾಕ್ಕೆ ಭೇಟಿ

ಬೀಜಿಂಗ್: ಉಭಯ ದೇಶಗಳ ನಡುವೆ ಮುಕ್ತ ಸಂವಾದದ ಅಗತ್ಯವಿರುವುದನ್ನು ಭಾರತ ಮತ್ತು ಚೀನಾ ಮನಗಂಡಿವೆ. ಪರಿಣಾಮವಾಗಿ, ಎರಡೂ ದೇಶಗಳೂ ಸಕಾರಾತ್ಮಕವಾಗಿ ಬಾಂಧವ್ಯ ವೃದ್ಧಿ ದಿಕ್ಕಿನಲ್ಲಿ ಹೆಜ್ಜೆಯಿಡಲು ಮುಂದಾಗಿವೆ ಎಂದು ಮೂಲಗಳು ತಿಳಿಸಿವೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಮಂಗಳವಾರ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಿದರು. ಈ ಸಂದರ್ಭ, ಭಾರತ-ಚೀನಾ ನಡುವಿನ 5 ವರ್ಷಗಳ ಕಾಲದ ಉದ್ವಿಗ್ನತೆ ನಿಧಾನವಾಗಿ ಕರಗುತ್ತಾ ಸಾಗಿರುವುದನ್ನು ನಾಯಕರಿಬ್ಬರೂ ಚರ್ಚಿಸಿದರು. ಉಭಯ ದೇಶಗಳ ನಡುವಿನ ಸಂಬಂಧ ಮರಳಿ ಹಂತ ಹಂತವಾಗಿ ಸುಧಾರಿಸುತ್ತಿರುವುದಕ್ಕೆ ಹಾಗೂ ಸ್ನೇಹ ಪೂರ್ವಕವಾಗುತ್ತಿರುವುದಕ್ಕೆ ಇಬ್ಬರೂ ನಾಯಕರು ಹರ್ಷ ವ್ಯಕ್ತಪಡಿಸಿದರು ಎಂದು ವರದಿಯಾಗಿದೆ.

ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿದ ಮರುಕ್ಷಣವೇ ಜೈಶಂಕರ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಚೀನಾ ಅಧ್ಯಕ್ಷರಿಗಾಗಿ ನೀಡಿದ್ದ ಸಂದೇಶವನ್ನು ಅರುಹಿದರು.

ವಿದೇಶಾಂಗ ಸಚಿವ ಜೈಶಂಕರ್ ಅವರು ಕ್ಸಿ ಜಿನ್ ಪಿಂಗ್ ಅವರ ಜತೆ ಮಂಗಳವಾರ ನಡೆಸಿದ ಸಭೆಯ ವೀಡಿಯೊ ಚಿತ್ರೀಕರಿಸಿರುವ ಬೀಜಿಂಗ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಬಿಡುಗಡೆ ಮಾಡಿದ್ದಾರೆ. ಜೈಶಂಕರ್ ಮತ್ತು ಜಿನ್‌ಪಿಂಗ್ ಪರಸ್ಪರ ಕೈಕುಲುಕುವುದು ವಿಡಿಯೊದಲ್ಲಿದೆ.

ಇದಕ್ಕೂ ಮುನ್ನ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಮತ್ತು ಚೀನಾ ಉಪಾಧ್ಯಕ್ಷ ಹ್ಯಾನ್ ಝೆಂಗ್ ಅವರನ್ನು ವಿದೇಶಾಂಗ ಸಚಿವ ಎಸ್ ಜೈಶಂಕರ್ ಸೋಮವಾರ ಭೇಟಿಯಾಗಿ ಪ್ರತ್ಯೇಕ ಸಭೆ ನಡೆಸಿದ್ದರು.

ಕಳೆದ 5 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಚೀನಾಗೆ ಭೇಟಿ ನೀಡಿದ್ದಾರೆ. ಪೂರ್ವ ಲಡಾಖ್‌ನ ಗಡಿಯಲ್ಲಿ ಎರಡೂ ಕಡೆಯ ಸೈನಿಕರ ನಡುವೆ 5 ವರ್ಷಗಳ ಹಿಂದೆ ತೀವ್ರ ಸ್ವರೂಪದ ಸಂಘರ್ಷ ಉಂಟಾಗಿದ್ದ ಬಳಿಕ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧವನ್ನು ಸಹಜತೆ ತರುವ ಪ್ರಯತ್ನದ ಭಾಗವಾಗಿ ಜೈಶಂಕರ್ ಅವರ ಬೀಜಿಂಗ್ ಭೇಟಿಯನ್ನು ಬಳಸಿಕೊಳ್ಳಲಾಗಿದೆ.



ಬೀಜಿಂಗ್‌ನಲ್ಲಿ ಮಂಗಳವಾರ ಬೆಳಗ್ಗೆ ವಿದೇಶಾಂಗ ಸಚಿವ ಜೈಶಂಕರ್ ಅವರು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಸಂಬಂಧ ಹಂತ ಹಂತವಾಗಿ ಸುಧಾರಣೆ

ಜೈಶಂಕರ್ ಅವರ ಈಗಿನ ಚೀನಾ ಭೇಟಿ ಭಯ ದೇಶಗಳ ನಡುವಿನ ಸಂಬಂಧದಲ್ಲಿ ಮತ್ತಷ್ಟು ಸುಧಾರಣೆ ತರಲಿದೆ ಎಂದು ನಂಬಲಾಗಿದೆ. ಪರಸ್ಪರರ ಸಂಬಂಧದಲ್ಲಿ ನಂಬಿಕೆಯ ಮರುಸ್ಥಾಪನೆಗೆ ಮತ್ತು ಗಡಿ ವಿವಾದಗಳನ್ನು ಪರಿಹರಿಸಲು ಇದು ಪ್ರಮುಖ ಹೆಜ್ಜೆಯಾಗಲಿದೆ ಎಂದೇ ವಿಶ್ಲೇಷಿಸಲಾಗಿದೆ. ಇದಕ್ಕೂ ಮೊದಲು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೂ 'ಎಸ್‌ಸಿಒ'ದ ರಕ್ಷಣಾ ಸಚಿವರ ಸಭೆಗಾಗಿ ಚೀನಾಕ್ಕೆ ಭೇಟಿ ನೀಡಿದ್ದರು. ಕಳೆದ ವರ್ಷ ಕಜಾನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಜಿನ್‌ಪಿಂಗ್ ನಡುವೆ ಮುಖಾಮುಖಿ ಭೇಟಿ ನಡೆದಿತ್ತು. ಆನಂತರದಲ್ಲೇ ಎರಡೂ ದೇಶಗಳ ನಡುವೆ ಸಂಬಂಧ ಉತ್ತಮಗೊಳ್ಳಲಾರಂಭಿಸಿತು.

2020ರಲ್ಲಿ ನಡೆದಿದ್ದೇನು?

2020ರಲ್ಲಿ ಪೂರ್ವ ಲಡಾಕ್‌ನಲ್ಲಿರುವ ಚೀನಾ ಗಡಿ ಸಮೀಪದ ಗಾಲ್ವಾನ್ ಪ್ರದೇಶದಲ್ಲಿ ತಂತಿ ಬೇಲಿ ಅಳವಡಿಕೆ ವಿಚಾರವಾಗಿ ಭಾರತ ಮತ್ತು ಚೀನಾದ ಸೈನಿಕರ ನಡುವೆ ಘರ್ಷಣೆಯಾಗಿ ಭಾರೀ ಸಾವು-ನೋವು ಸಂಭವಿಸಿತ್ತು. ಈ ಸಂಘರ್ಷದ ಬಳಿಕ ಎರಡೂ ದೇಶಗಳು ಗಡಿಭಾಗದಲ್ಲಿ ಪೈಪೋಟಿಯ ಮೇರೆಗೆ ದೊಡ್ಡ ಪ್ರಮಾಣದಲ್ಲಿ ಸೇನಾಪಡೆಗಳನ್ನು ನಿಯೋಜಿಸಲು ಆರಂಭಿಸಿದ್ದವು. ದೊಡ್ಡ ಸಂಖ್ಯೆಯ ಯೋಧರು, ಯುದ್ಧ ಟ್ಯಾಂಕ್‌ಗಳು, ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳ ನಿಯೋಜನೆಯಾಗಿತ್ತು. ಭಾರತವಂತೂ ರಫೇಲ್ ಯುದ್ಧ ವಿಮಾನಗಳನ್ನೂ ಗಡಿಭಾಗಕ್ಕೆ ರವಾನಿಸಿ ಎಂಥಹುದೇ ಪರಿಸ್ಥಿತಿ ಬಂದರೂ ಎದುರಿಸಲು ಸಿದ್ಧ ಎಂಬ ಕಠಿಣ ಸಂದೇಶವನ್ನು ಚೀನಾಕ್ಕೆ ರವಾನಿಸಿತ್ತು. ಪರಿಣಾಮ ಗಡಿ ಭಾಗದಲ್ಲಿ ಯಾವಾಗೆಂದರೆ ಆಗ ಯುದ್ಧ ಶುರುವಾಗ ಬಹುದು ಎಂಬ ದ್ವೇಷಮಯ ವಾತಾವರಣ ಸೃಷ್ಟಿಯಾಗಿತ್ತು. ಆ ಬಳಿಕ ತುಸು ಮೆತ್ತಗಾದ ಚೀನಾ, ಮಾತುಕತೆಗೆ ಆಹ್ವಾನ ನೀಡಿತು. ಭಾರತ ಸರಕಾರವೂ ಮಾತುಕತೆ ಮೂಲಕವೇ ಸಮಸ್ಯೆ ಪರಿಹರಿಸಿಕೊಳ್ಳಲು ಸಮ್ಮತಿಸಿತು. ಆ ಬಳಿಕ ಎರಡೂ ಕಡೆಯ ಉನ್ನತ ಸೇನಾಧಿಕಾರಿಗಳ ಮಟ್ಟದಲ್ಲಿ 18-20 ಸುತ್ತು ಮಾತುಕತೆ ನಡೆದು ಉದ್ವಿಗ್ನತೆ ತಗ್ಗಿತು. ಎರಡೂ ದೇಶಗಳೂ ಹೆಚ್ಚುವರಿ ಸೇನಾಪಡೆ ನಿಯೋಜನೆಯನ್ನು ಅಂತ್ಯಗೊಳಿಸಿ ವಾಪಸ್ ಕರೆಸಿಕೊಂಡವು. ಆ ಬಳಿಕವಷ್ಟೇ ಗಡಿಯಲ್ಲಿ ಸಹಜಸ್ಥಿತಿ ಮರಳಲು ಸಾಧ್ಯವಾಯಿತು.

ಜಿನ್‌ಪಿಂಗ್ ಹರ್ಷ: ಜೈಶಂಕರ್

ಶಾಂಘೈ ಸಹಕಾರ ಸಂಘಟನೆ(ಎಸ್‌ಸಿಒ)ಯ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲು ಜೈಶಂಕರ್ ಪ್ರಸ್ತುತ ಚೀನಾ ಪ್ರವಾಸ ಕೈಗೊಂಡಿದ್ದಾರೆ. 'ಈ ಸಂದರ್ಭದಲ್ಲೇ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಮಂಗಳವಾರ ಭೇಟಿ ಮಾಡಿದೆ. ಭಾರತ-ಚೀನಾ ದ್ವಿಪಕ್ಷೀಯ ಸಂಬಂಧದಲ್ಲಿ ಇತ್ತೀಚೆಗೆ ಬಹಳಷ್ಟು ಸುಧಾರಣೆ ಆಗಿರುವ ಬಗ್ಗೆ ಅಧ್ಯಕ್ಷ ಜಿನ್‌ಪಿಂಗ್ ಅವರಿಗೆ ಮಾಹಿತಿ ನೀಡಿದೆ. ಈ ವಿಚಾರವಾಗಿ ಜಿನ್‌ಪಿಂಗ್ ಅವರೂ ಹರ್ಷ ವ್ಯಕ್ತಪಡಿಸಿದರು' ಎಂದು ಜೈಶಂಕರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪೂರ್ವ ಲಡಾಖ್‌ನಲ್ಲಿನ ಗಡಿ ವಿವಾದ-ಸೈನಿಕರ ನಡುವಿನ ಸಂಘರ್ಷ ತುಸು ತಣ್ಣಗಾಗಿದ್ದು, ಉಭಯ ದೇಶಗಳ ನಡುವಿನ ಸಂಬಂಧವನ್ನು ಮರಳಿ ಸರಿಪಡಿಸಲು ಎರಡೂ ದೇಶಗಳು ಸಮಾನವಾಗಿ ಪ್ರಯತ್ನಿಸುತ್ತಿವೆ. ಭಾರತ-ಚೀನಾ ಸಂಬಂಧ ವೃದ್ಧಿ ನಿಟ್ಟಿನಲ್ಲಿ ಈಗಿನ ಚೀನಾ ಭೇಟಿ ಮತ್ತು ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ವಿದೇಶಾಂಗ ಸಚಿವ ಜತೆಗಿನ ಪ್ರತ್ಯೇಕ ಮಾತುಕತೆ ಭಾರತದ ಮಟ್ಟಿಗೆ ಬಹಳ ಮಹತ್ವದ್ದಾಗಿದೆ ಎಂದು ಜೈಶಂಕರ್ ಬಣ್ಣಿಸಿದ್ದಾರೆ.

ಕಳೆದ 9 ತಿಂಗಳಲ್ಲಿ ಉಭಯ ದೇಶಗಳ ಸಂಬಂಧ ಸಾಮಾನ್ಯ ಮಟ್ಟಕ್ಕೆ ಬಂದಿದೆ. ಸಂವಾದದಲ್ಲಿಯೂ ಉತ್ತಮ ಪ್ರಗತಿ ಸಾಧ್ಯವಾಗಿದೆ. ಈಗ ನಾವು ಗಡಿಗೆ ಸಂಬಂಧಿಸಿದ ಇತರ ಅಂಶಗಳತ್ತ ಗಮನಹರಿಸಬೇಕು, ವಿಶೇಷವಾಗಿ ಉದ್ವಿಗ್ನತೆಯನ್ನು ಕಡಿಮೆ ಮಾಡಬೇಕು. ಭಿನ್ನಾಭಿಪ್ರಾಯಗಳು ವಿವಾದದ ರೂಪ ಪಡೆಯಲು ಮತ್ತು ಸ್ಪರ್ಧೆಯು ಸಂಘರ್ಷಕ್ಕೆ ತಿರುಗಲು ಬಿಡಬಾರದು ಎಂಬುದನ್ನು ಚೀನಾ ನಾಯಕರ ಜತೆಗಿನ ಸಂವಾದ ವೇಳೆ ಮನದಟ್ಟು ಮಾಡಲಾಗಿದೆ ಎಂದು ಜೈಶಂಕರ್ ಹೇಳಿದರು.

ಕಡೆಗೂ ಎಲ್‌ಸಿಎ ಎಂಜಿನ್ ರವಾನಿಸಿದ ಅಮೆರಿಕ

ವರ್ಷಾಂತ್ಯಕ್ಕೆ ಮತ್ತೆ ಹನ್ನೆರಡು ಜೆಟ್ ಎಂಜಿನ್ ಬರುವ ನಿರೀಕ್ಷೆ

ದೆಹಲಿ: ಭಾರತೀಯ ವಾಯುಪಡೆಗೆ ಅತ್ಯಗತ್ಯವಾಗಿರುವ 'ಎಲ್‌ಸಿಎ ಮಾರ್ಕ್ 1ಎ' ಸರಣಿಯ ಲಘು ಯುದ್ಧ ವಿಮಾನಗಳನ್ನು ತಯಾರಿಸಿಕೊಡುವುದಕ್ಕೆ ಹಿಂದೂಸ್ಥಾನ್ ಏರೊನಾಟಿಕ್ಸ್ ಲಿ.(ಎಚ್‌ಎಎಲ್)ಗೆ ಬೇಕಾಗಿದ್ದ 'ಜಿಇ-404' ಎಂಜಿನ್‌ಗಳನ್ನು ಅಮೆರಿಕದ ಕಂಪನಿ ದೀರ್ಘ ಕಾಯುವಿಕೆಯ ನಂತರ ಕಡೆಗೂ ರವಾನಿಸಲು ಆರಂಭಿಸಿದೆ.

ಅಮೆರಿಕದ ಕಂಪನಿಯಿಂದ 2ನೇ 'ಜಿಇ-404' ಜೆಟ್ ಎಂಜಿನನ್ನು ಎಚ್‌ಎಎಲ್ ಸೋಮವಾರ ಪಡೆದುಕೊಂಡಿದೆ. ಉಳಿದಂತೆ ಹಣಕಾಸು ವರ್ಷಾಂತ್ಯ ವೇಳೆಗೆ ಮತ್ತೂ 12 ಎಂಜಿನ್‌ಗಳನ್ನು ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿ ಕಳುಹಿಸಿಕೊಡಲಿದೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ಶಿಬಿರಗಳು ಮತ್ತು ವಾಯು ನೆಲೆಗಳ ಮೇಲಿನ ದಾಳಿಗೆ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ನಡೆಸಿ ತನ್ನ ಯುದ್ಧಾಸ್ತ್ರಗಳ ಸಾಮರ್ಥ್ಯವನ್ನು ಜಗತ್ತಿನೆದುರು ಪ್ರದರ್ಶಿಸಿದ್ದ ಭಾರತ, ಈಗ ರಕ್ಷಣಾ ವಲಯಕ್ಕೆ ಹೆಚ್ಚಿನ ಗಮನ ಕೇಂದ್ರೀಕರಿಸಿದೆ. ರಕ್ಷಣಾ ಸಾಮಗ್ರಿಗಳು, ಯುದ್ಧ ವಿಮಾನಗಳನ್ನು ವಿದೇಶದಿಂದ ಖರೀದಿಸುವುದರ ಜತೆಗೇ 'ಆತ್ಮನಿರ್ಭರ ಭಾರತ' ಪರಿಕಲ್ಪನೆಯಡಿ ದೇಶೀಯವಾಗಿಯೂ ತಯಾರಿಸಿಕೊಳ್ಳುವುದಕ್ಕೆ ಆದ್ಯತೆ ನೀಡುತ್ತಿದೆ.

ಭಾರತೀಯ ವಾಯುಪಡೆಗೆ ಅತ್ಯಗತ್ಯವಾಗಿದ್ದ 'ಎಲ್‌ಸಿಎ'(ಲಘು ಯುದ್ಧ ವಿಮಾನ)ಗಳನ್ನು ಎಚ್‌ಎಎಲ್‌ನಿಂದ ಖರೀದಿಸಲು ಒಪ್ಪಂದವಾಗಿದೆ. ಆದರೆ, ಎಲ್‌ಸಿಎ ಮಾರ್ಕ್ 1ಎ ಯುದ್ಧ ವಿಮಾನಗಳನ್ನು ತಯಾರಿಸಿಕೊಡುವುದಕ್ಕೆ ಎಚ್‌ಎಎಲ್ ಸಂಸ್ಥೆ ಅಮೆರಿಕದ ಜಿಇ-404 ಎಂಜಿನ್‌ಗಳ ಮೇಲೆ ಅವಲಂಬಿತವಾಗಿದೆ. 2-3 ವರ್ಷಗಳಿಂದ ಅಮೆರಿಕದಿಂದ ತೇಜಸ್ ಸರಣಿ ಲಘು ಯುದ್ಧ ವಿಮಾನಗಳಿಗೆ ಅಗತ್ಯವಾದ ಎಂಜಿನ್‌ಗಳನ್ನು ವಿವಿಧ ಕಾರಣಗಳಿಂದಾಗಿ ಅಮೆರಿಕದ ಕಂಪನಿ ರವಾನಿಸಿರಲಿಲ್ಲ. 2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸ ಕೈಗೊಂಡ ಬಳಿಕ ಜಿಇ 404 ಎಂಜಿನ್‌ಗಳನ್ನು ಭಾರತಕ್ಕೆ ಕಳುಹಿಸಿಕೊಡಲು ಕಂಪನಿ ಒಪ್ಪಿಕೊಂಡಿತು ಎನ್ನಲಾಗಿದೆ.

10 ವರ್ಷಕ್ಕೆ 400 ವಿಮಾನ

ಈಗ ಅಮೆರಿಕದಿಂದ ಜಿಇ-404 ಜೆಟ್ ಎಂಜಿನ್‌ಗಳು ಬರಲಾರಂಭಿಸಿರುವುದರಿಂದ ಮುಂದಿನ 10 ವರ್ಷಗಳಲ್ಲಿ 400ಕ್ಕೂ ಅಧಿಕ ಎಲ್‌ಸಿಎ ಸರಣಿ ಯುದ್ಧ ವಿಮಾನಗಳನ್ನು ತಯಾರಿಸುವ ಗುರಿಯನ್ನು ಹೊಂದಲಾಗಿದೆ. ಅಲ್ಲದೇ, ರಕ್ಷಣಾ ಸಚಿವಾಲಯ 'ಎಲ್‌ಸಿಎ-ಮಾರ್ಕ್2' ಶ್ರೇಣಿ ಯುದ್ಧ ವಿಮಾನಗಳನ್ನು ಅಭಿವೃದ್ಧಿಪಡಿಸುವುದಕ್ಕೂ ಸೂಚಿಸಿದ್ದು, ಅದಕ್ಕಾಗಿ 9 ಸಾವಿರ ಕೋಟಿ ರು. ಯೋಜನೆಗೆ ಅನುಮೋದನೆಯನ್ನೂ ನೀಡಿದೆ.

ವಿಳಂಬಕ್ಕೆ ಐಎಎಫ್ ಬೇಸರ

ಎಲ್‌ಸಿಎ ಮಾರ್ಕ್ 1ಎ ಸರಣಿಯ 83 ಯುದ್ಧ ವಿಮಾನಗಳಿಗೆ ಭಾರತೀಯ ವಾಯುಪಡೆ ಬೇಡಿಕೆ ಸಲ್ಲಿಸಿದ್ದು, ವರ್ಷಗಳಿಂದ ವಿಮಾನಗಳಿಗಾಗಿ ಕಾಯುತ್ತಿದೆ. ಲಘು ಯುದ್ಧ ವಿಮಾನಗಳನ್ನು ತಯಾರಿಸಿಕೊಡುವುದಕ್ಕೆ ಎಚ್‌ಎಎಲ್ ವಿಳಂಬ ಮಾಡುತ್ತಿದೆ ಎಂದು ಏರ್ ಚೀಫ್ ಮಾರ್ಷಲ್ ಇತ್ತೀಚೆಗೆ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು ಎಂಬುದು ನೆನಪಿಸಿಕೊಳ್ಳಬಹುದು. ಇದಲ್ಲದೇ ರಕ್ಷಣಾ ಸಚಿವಾಲಯದ ಅನುಮತಿ ಸಿಕ್ಕ ನಂತರ 97 ಲಘು ಯುದ್ಧ ವಿಮಾನಗಳನ್ನು ಖರೀದಿಸುವ ಪ್ರಸ್ತಾಪ ಸಲ್ಲಿಸಲಿದೆ ಎಂದು ಐಎಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಮಾನಹಾನಿ ಪ್ರಕರಣ: ರಾಹುಲ್‌ಗೆ ಜಾಮೀನು

ಲಖನೌ: 'ಭಾರತ್ ಜೋಡೋ' ಯಾತ್ರೆ ವೇಳೆ 2022ರಲ್ಲಿ ಭಾರತೀಯ ಸೈನಿಕರ ವಿರುದ್ಧ ಮಾನಹಾನಿಕರ ಹೇಳಿಕೆ ನೀಡಿದ ಸಂಬಂಧ ದಾಖಲಾಗಿದ್ದ ಮಾನನಷ್ಟ ಪ್ರಕರಣದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಲಖನೌ ನ್ಯಾಯಾಲಯ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ವಕೀಲರು, ಕಕ್ಷಿದಾರರಿಂದ ಕಿಕ್ಕಿರಿದಿದ್ದ ನ್ಯಾಯಾಲಯಕ್ಕೆ ಬೆಳಗ್ಗೆ ರಾಹುಲ್ ಖುದ್ದು ಹಾಜರಾದರು. ಅವರನ್ನು ನ್ಯಾಯಾಧೀಶರ ಚೆಂಬರ್‌ಗೆ ಕರೆದೊಯ್ಯಲಾಯಿತು. ಅಲ್ಲಿ ಬಾಂಡ್ ಮತ್ತು ಶ್ಯೂರಿಟಿ ಸಲ್ಲಿಸುವ ಔಪಚಾರಿಕ ಪ್ರಕ್ರಿಯೆ ನಡೆಸಿದ ಬಳಿಕ ಜಾಮೀನು ಮಂಜೂರಾಯಿತು. ರಾಹುಲ್ ಪರ ವಕೀಲ ಪ್ರಾಂಶು ಅಗರ್ವಾಲ್ ಹಾಜರಾಗಿದ್ದರು.

ಗಡಿಯಲ್ಲಿ ಭಾರತೀಯ ಸೈನಿಕರನ್ನು ಚೀನಾ ಸೈನಿಕರು ಥಳಿಸಿದ್ದಾರೆ ಎಂದು ರಾಹುಲ್ 2022ರ ಡಿ.16ರಂದು ಯಾತ್ರೆ ವೇಳೆ ಸಾರ್ವಜನಿಕರನ್ನು ಉದ್ದೇಶಿಸಿದ ಭಾಷಣದಲ್ಲಿ ಹೇಳಿದ್ದರು. ಇದರಿಂದ ಭಾರತೀಯ ಸೈನಿಕರ ಮಾನಹಾನಿಯಾಗಿದೆ ಎಂದು ಬಾರ್ಡರ್ ರೋಡ್ಸ್ ಆರ್ಗನೈಸೇಷನ್ (ಬಿಆರ್) ನಿವೃತ್ತ ನಿರ್ದೇಶಕ ಉದಯ್ ಶಂಕರ್ ಶ್ರೀವಾಸ್ತವ ಅವರು ರಾಹುಲ್ ವಿರುದ್ಧ ಮಾನನಷ್ಟ ಪ್ರಕರಣ ದಾಖಲಿಸಿದ್ದಾರೆ. ಪ್ರಕರಣದ ವಿಚಾರಣೆ ಆರಂಭಿಸಿದ್ದ ನ್ಯಾಯಾಲಯ, ರಾಹುಲ್ ಗಾಂಧಿಗೆ ಸಮನ್ಸ್ ನೀಡಿತ್ತು. ಬಳಿಕ ಜಾಮೀನು ಕೋರಿ ರಾಹುಲ್ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ವಜಾಗೊಂಡಿದ್ದರಿಂದ ರಾಹುಲ್ ನ್ಯಾಯಾಲಯಕ್ಕೆ ಹಾಜರಾಗುವುದು ಅನಿವಾರ್ಯವಾಯಿತು. ಕಾಂಗ್ರೆಸ್‌ನ ಉತ್ತರ ಪ್ರದೇಶ ಘಟಕ ಅಧ್ಯಕ್ಷ ಅಜಯ್ ರೈ ಮತ್ತು ಉಸ್ತುವಾರಿ ಅವಿನಾಶ್ ಪಾಂಡೆ ಜತೆ ರಾಹುಲ್ ನ್ಯಾಯಾಲಯಕ್ಕೆ ಬಂದರು. ನ್ಯಾಯಾಲಯ ಆವರಣದಲ್ಲಿ ಭದ್ರತೆ ಹೆಚ್ಚಿಸಲಾಗಿತ್ತು.

ಪಹಲ್ಗಾಮ್ ದಾಳಿ ಲಷ್ಕರೆ, ಐಎಸ್‌ಐನ ಜಂಟಿ ಸಂಚು

ದೆಹಲಿ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿನ ಪಹಲ್ಗಾಮ್ ಪ್ರವಾಸಿ ತಾಣದಲ್ಲಿ 25 ಪ್ರವಾಸಿಗರು ಮತ್ತು ಒಬ್ಬ ಸ್ಥಳೀಯ ನಿವಾಸಿಯನ್ನು ಹತ್ಯೆ ಮಾಡಿದ ಪಾಕಿಸ್ತಾನ ಮೂಲದ ಭಯೋತ್ಪಾದಕರ ಹಿಂದೆ ಪಾಕಿಸ್ತಾನದ ಕೈವಾಡ ಇರುವುದು ಇದೀಗ ಮತ್ತಷ್ಟು ಸಾಕ್ಷ್ಯಗಳ ಸಮೇತ ದೃಢಪಟ್ಟಿದೆ. ಪಾಕಿಸ್ತಾನದ ಕೆಲವು ಪ್ರಮುಖ ರಾಜಕಾರಣಿಗಳು ಮತ್ತು ಸೇನಾಪಡೆಯ ಉನ್ನತ ಅಧಿಕಾರಿಗಳ ಸೂಚನೆಯ ಮೇರೆಗೇ ಪಾಕ್‌ನ ಗುಪ್ತಚರ ಸಂಸ್ಥೆ 'ಇಂಟರ್-ಸರ್ವಿಸಸ್ ಇಂಟೆಲಿಜೆನ್ಸ್'(ಐಎಸ್‌ಐ) ಹಾಗೂ ನಿಷೇಧಿತ ಉಗ್ರ ಸಂಘಟನೆ 'ಲಷ್ಕರ್-ಎ-ತಯ್ಯಬಾ'(ಎಲ್‌ಇಟಿ) ಜಂಟಿಯಾಗಿ ಸಂಚು ರೂಪಿಸಿ ಭಯೋತ್ಪಾದಕ ದಾಳಿ ನಡೆಯುವಂತೆ ಮಾಡಿವೆ ಎಂಬುದು ಮತ್ತಷ್ಟು ಸಾಕ್ಷ್ಯಗಳ ಮೂಲಕ ದೃಢಪಟ್ಟಿದೆ. ಲಷ್ಕರೆ ಕಮಾಂಡರ್ ಸಾಜಿದ್ ಜಟ್‌ಗೆ ಪಹಲ್ಗಾಮ್ ದಾಳಿ ಯೋಜನೆ ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಐಎಸ್‌ಐ ನೀಡಿತ್ತು ಮತ್ತು ರಹಸ್ಯ ಕಾಪಾಡಿಕೊಳ್ಳಲು ವಿದೇಶಿ ಭಯೋತ್ಪಾದಕರನ್ನು ಬಳಸಿಕೊಳ್ಳುವಂತೆಯೂ ಸೂಚಿಸಿತ್ತು. ಅದೇ ಬಗೆಯಲ್ಲಿ ಕಾಶ್ಮೀರದಲ್ಲಿ ಅದಾಗಲೇ ಸಕ್ರಿಯವಾಗಿದ್ದ ವಿದೇಶಿ ಎಲ್‌ಇಟಿ ಉಗ್ರರನ್ನು ಹತ್ಯಾಕಾಂಡಕ್ಕೆ ಬಳಸಿಕೊಂಡಿತು. ಸ್ಥಳೀಯರ ಪಾತ್ರ, ಉಗ್ರರಿಗೆ ಆಶ್ರಯ, ಆಹಾರ ಒದಗಿಸುವುದಕ್ಕೆ ಮತ್ತು ವಾಹನ ವ್ಯವಸ್ಥೆ ಮಾಡಿಕೊಡುವುದಕ್ಕೆ ಸೀಮಿತವಾಗಿತ್ತು ಎಂದು ಮೂಲಗಳು ತಿಳಿಸಿವೆ.

ಭಾರತದ ಮಾರುಕಟ್ಟೆ ಪ್ರವೇಶಿಸಿದ ಟೆಸ್ಲಾ ಕಾರು!

ಬಾಂದ್ರಾದಲ್ಲಿ ಮೊದಲ ಶೋರೂಂ ಉದ್ಘಾಟಿಸಿದ ಸಿಎಂ ಫಡ್ನವಿಸ್

ಮುಂಬೈ: ಭಾರೀ ನಿರೀಕ್ಷೆ, ಕುತೂಹಲ ಹುಟ್ಟುಹಾಕಿರುವ ಅಮೆರಿಕ ಮೂಲದ 'ಟೆಸ್ಲಾ' ವಿದ್ಯುಚ್ಛಕ್ತಿ ಚಾಲಿತ ಕಾರು ಕಡೆಗೂ ಭಾರತದ ಮಾರುಕಟ್ಟೆಯನ್ನು ಮಂಗಳವಾರ ಪ್ರವೇಶಿಸಿದೆ. ದೇಶದ ವಾಣಿಜ್ಯ ರಾಜಧಾನಿ ಎನಿಸಿಕೊಂಡಿರುವ ಮಹಾರಾಷ್ಟ್ರದ ಮುಂಬೈ ಮಹಾನಗರದಲ್ಲಿ ಬಾಂದ್ರಾ ಪ್ರದೇಶದಲ್ಲಿ ದುಬಾರಿ ವಾಣಿಜ್ಯ ಸಂಕೀರ್ಣವಾದ 'ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್'(ಬಿಕೆಸಿ)ನಲ್ಲಿ 'ಮೇಕರ್ ಮ್ಯಾಕ್ಸಿಟಿ ಮಾಲ್'ನಲ್ಲಿ ದೊಡ್ಡದಾದ 'ಟೆಸ್ಲಾ ಎಕ್ಸ್‌ಪೀರಿಯನ್ಸ್ ಸೆಂಟರ್' ಶೋರೂಂ ತೆರೆದಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಹೊಸ ಶೋರೂಂ ಮಂಗಳವಾರ ಬೆಳಗ್ಗೆ ಉದ್ಘಾಟಿಸಿದ್ದಾರೆ. 'ಟೆಸ್ಲಾ ಕಾರು ಸರಿಯಾದ ರಾಜ್ಯದಲ್ಲಿ, ಅದೂ ಸರಿಯಾದ ನಗರದ ಮೂಲಕವೇ ಭಾರತದ ಮಾರುಕಟ್ಟೆ ಪ್ರವೇಶಿಸಿದೆ' ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರೂ ಟೆಸ್ಲಾ ಕಾರುಗಳು ಭಾರತದ ಮಾರುಕಟ್ಟೆ ಪ್ರವೇಶಿಸುವ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಆದರೆ, ಆತ್ಮನಿರ್ಭರ ಪರಿಕಲ್ಪನೆಯಡಿ ಭಾರತದ ರಸ್ತೆಗಳಲ್ಲಿ ಸಂಚರಿಸಬೇಕಿರುವ ಟೆಸ್ಲಾ ಕಾರುಗಳು ಭಾರತದಲ್ಲೇ ತಯಾರಾಗಲಿ ಎಂಬುದೇ ಅವರ ಷರತ್ತಾಗಿದೆ.

ಬ್ಲೂಮ್‌ಬರ್ಗ್ ವರದಿ ಪ್ರಕಾರ, 'ಟೆಸ್ಲಾ ವೈ' ಮಾಡೆಲ್‌ನ 6 ಕಾರುಗಳಷ್ಟೇ ಚೀನಾದ ಶಾಂಘೈ ನಗರದಲ್ಲಿನ ಕಾರು ತಯಾರಿಕಾ ಘಟಕದಿಂದ ಮುಂಬೈ ಶೋರೂಂಗೆ ಹಡಗಿನಲ್ಲಿ ಬಂದಿಳಿದಿವೆ. ಸದ್ಯಕ್ಕೆ ಮುಂಬೈನಲ್ಲಿ 4 ಕಡೆ ಎಲೆಕ್ಟ್ರಿಕ್ ಚಾರ್ಜಿಂಗ್ ಘಟಕಗಳನ್ನೂ ಟೆಸ್ಲಾ ಕಂಪನಿ ಸ್ಥಾಪಿಸಲಿದೆ ಎಂದು ಹೇಳಲಾಗಿದೆ.

ದೆಹಲಿಯಲ್ಲಿ 2ನೇ ಶೋರೂಂ!

ಭಾರತದಲ್ಲಿನ 2ನೇ 'ಟೆಸ್ಲಾ ಕಾರು ಶೋರೂಂ' ದೆಹಲಿಯಲ್ಲಿ ತೆರೆಯುವುದಕ್ಕೆ ಟೆಸ್ಲಾ ಕಂಪನಿ ಯೋಜಿಸಿದೆ. ಈ ಮಾಸಾಂತ್ಯದಲ್ಲಿ ದೆಹಲಿ ಶೋರೂಂ ಬಾಗಿಲು ತೆರೆಯುವ ಸಾಧ್ಯತೆ ಇದೆ. ಆಗಸ್ಟ್ ಮೊದಲ ವಾರದಲ್ಲಿ ಟೆಸ್ಲಾ ಕಾರುಗಳು ಗ್ರಾಹಕರ ಕೈಸೇರುವ ನಿರೀಕ್ಷೆ ಇದೆ. ಅದಕ್ಕಾಗಿ ಸಿಬ್ಬಂದಿಗಳ ನೇಮಕ ಪ್ರಕ್ರಿಯೆ ಮುಂದುವರಿದಿದೆ. ಜತೆಗೆ ಕಾರುಗಳನ್ನು ಸಂಗ್ರಹಿಸಿಡುವುದಕ್ಕಾಗಿ ದೊಡ್ಡ ಗಾತ್ರದ ಗೋದಾಮಿಗಾಗಿಯೂ ಕಂಪನಿ ಶೋಧ ನಡೆಸುತ್ತಿದೆ ಎಂದು ಬ್ಲೂಮ್‌ಬರ್ಗ್ ಮಾಧ್ಯಮ ವರದಿ ಮಾಡಿದೆ. 3ನೇ ಟೆಸ್ಲಾ ಕಾರು ಶೋರೂಂ ಬೆಂಗಳೂರಿನಲ್ಲಿ ತೆರೆಯಲು ಕಂಪನಿ ಯೋಚಿಸಿದೆ ಎನ್ನಲಾಗಿದೆ.

ಬೇರೆ ದೇಶದಲ್ಲಿ ಕಡಿಮೆ ಬೆಲೆ

ಲಾಂಗ್ ರೇಂಜ್ ರಿಯರ್ ವೀಲ್ ಡ್ರೈವ್

ಅಮೆರಿಕ	**44,900** ಡಾಲರ್ (38.61 ಲಕ್ಷ ರು.)
ಚೀನಾ	**2,63,500** ಯುವಾನ್ (31.55 ಲಕ್ಷ ರು.)
ಜರ್ಮನಿ	**45,970** ಯುರೊ (46.10 ಲಕ್ಷ ರು.)

ಬೆಲೆ ಬಲು ತುಟ್ಟಿ

ಭಾರತದಲ್ಲಿ ಸದ್ಯ ಮಾರಾಟಗೊಳ್ಳಲಿರುವ 'ಟೆಸ್ಲಾ ವೈ' ಮಾದರಿಯ 'ಎಸ್‌ಯುವಿ' ವಿಭಾಗದ ಕಾರುಗಳು ಎರಡು ಬಗೆಯ ಆಯ್ಕೆಗಳಲ್ಲಿ ಗ್ರಾಹಕರಿಗೆ ಲಭಿಸಲಿವೆ. ಅವೆರಡೂ 'ರೇರ್ ವ್ಹೀಲ್ ಡ್ರೈವ್' ಮತ್ತು 'ಲಾಂಗ್ ರೇಂಜ್ ರೇರ್ ವ್ಹೀಲ್ ಡ್ರೈವ್' ಮಾದರಿಗಳಾಗಿರಲಿವೆ. ಟೆಸ್ಲಾ 'ವೈ' ಶ್ರೇಣಿಯ ಕಾರಿನ 'ರೇರ್ ವ್ಹೀಲ್ ಡ್ರೈವ್' ಮಾದರಿಗೆ ಮುಂಬೈನಲ್ಲಿ ಆನ್‌ರೋಡ್ ಪ್ರೈಸ್ (ಎಲ್ಲಾ ತೆರಿಗೆಗಳೂ ಸೇರಿ ಗರಿಷ್ಠ ಖರೀದಿ ದರ) 60.10 ಲಕ್ಷ ರು.ಗಳಷ್ಟಿರಲಿದೆ. ಟೆಸ್ಲಾ ವೈ ಶ್ರೇಣಿಯ ಕಾರಿನ 'ಲಾಂಗ್ ರೇಂಜ್ ರೇರ್ ವ್ಹೀಲ್ ಡ್ರೈವ್' ಮಾದರಿಗೆ ಮುಂಬೈನಲ್ಲಿ ಆನ್‌ರೋಡ್ ಪ್ರೈಸ್(ಎಲ್ಲಾ ತೆರಿಗೆಗಳೂ ಸೇರಿ ಗರಿಷ್ಠ ಖರೀದಿ ದರ) 67.80 ಲಕ್ಷ ರು.ಗಳಾಗಲಿದೆ.

ಬೆಂಗಳೂರಿನಲ್ಲಿ: ಬೆಂಗಳೂರಿನಲ್ಲಿ ಆನ್‌ರೋಡ್ ಪ್ರೈಸ್ 'ಟೆಸ್ಲಾ 'ವೈ' ಶ್ರೇಣಿಯ ಕಾರಿನ 'ರೇರ್ ವ್ಹೀಲ್ ಡ್ರೈವ್' ಮಾದರಿಗೆ(ಎಲ್ಲಾ ತೆರಿಗೆಗಳೂ ಸೇರಿ ಗರಿಷ್ಠ ಖರೀದಿ ದರ) 68.53 ಲಕ್ಷ ರು.ಗಳಷ್ಟಿರಲಿದೆ. 'ಲಾಂಗ್ ರೇಂಜ್ ರೇರ್ ವ್ಹೀಲ್ ಡ್ರೈವ್' ಮಾದರಿಗೆ ಆನ್‌ರೋಡ್ ಪ್ರೈಸ್(ಎಲ್ಲಾ ತೆರಿಗೆಗಳೂ ಸೇರಿ ಗರಿಷ್ಠ ಖರೀದಿ ದರ) 79.21 ಲಕ್ಷ ರು.ಗಳಾಗಲಿದೆ ಎಂದು ಜಾಲತಾಣದಲ್ಲಿ ಪ್ರಕಟವಾಗಿದೆ.

ಇವೇ ಕಾರುಗಳ ಮಾದರಿ ಭಾರತದಲ್ಲೇ ತಯಾರಾಗುವಂತಿದ್ದರೆ ಬೆಲೆ ಅರ್ಧದಷ್ಟು ಕಡಿಮೆ ಇರುತ್ತಿತ್ತು. ಆದರೆ, ಎಲಾನ್ ಮಸ್ಕ್ ಸದ್ಯಕ್ಕೆ ಭಾರತದಲ್ಲಿ ಟೆಸ್ಲಾ ಕಾರು ತಯಾರಿಕಾ ಘಟಕ ಆರಂಭಿಸಲು ಸದ್ಯಕ್ಕೆ ಸಿದ್ಧರಿಲ್ಲ. ಶಾಂಘೈ ಘಟಕದಿಂದ ಕಾರು ರವಾನಿಸಲು ಯೋಜಿಸಿದ್ದಾರೆ. ಹಾಗಾಗಿ ಭಾರತದ ಕಾರು ಪ್ರಿಯರು 'ಟೆಸ್ಲಾ ಎಲೆಕ್ಟ್ರಿಕ್ ಕಾರು' ಖರೀದಿಸಲು ಸದ್ಯಕ್ಕೆ ದುಪ್ಪಟ್ಟು ಬೆಲೆ ತೆರಬೇಕಿದೆ. ಪ್ರಸ್ತುತ ಬೇರೆ ದೇಶದಲ್ಲಿ ಪೂರ್ಣ ಸಿದ್ಧವಾಗಿ ಭಾರತಕ್ಕೆ ಬರುವ ಎಲೆಕ್ಟ್ರಿಕ್ ಕಾರುಗಳಿಗೆ ಆಮದು ತೆರಿಗೆ (ಟಾರಿಫ್) ದರ ಶೇ.70ರಷ್ಟಿದೆ.

2 ಮಾದರಿ ಕಾರುಗಳ ವೈಶಿಷ್ಟ್ಯ

'ರೇರ್ ವ್ಹೀಲ್ ಡ್ರೈವ್'

- ಬ್ಯಾಟರಿ ಪೂರ್ಣ ಪ್ರಮಾಣದಲ್ಲಿ ಚಾರ್ಜ್ ಆಗಿದ್ದರೆ 500 ಕಿಮೀಗಳಷ್ಟು ದೂರದವರೆಗೂ ಸರಾಗ ಸಾಗಲಿದೆ.
- ಎಂಜಿನ್ 60 ಕೆಡಬ್ಲ್ಯುಎಚ್ ಎಲೆಕ್ಟ್ರಿಕ್, ಆಟೊಮ್ಯಾಟಿಕ್. ಆಟೊ ಪೈಲಟ್ ಆಯ್ಕೆ ಅವಕಾಶವಿದೆ. ಗರಿಷ್ಠ ವೇಗ 201 ಕಿ.ಮೀ.
- ಕ್ಷಿಪ್ರಗತಿ ಎಂಜಿನ್, ಆಕ್ಸಿಲೇಟರ್ ಪೆಡಲ್ ತುಳಿದ 59 ಸೆಕೆಂಡ್‌ಗಳಲ್ಲೇ 100 ಕಿಮೀ ವೇಗ ಪಡೆದುಕೊಳ್ಳಲಿದೆ.
- ಉತ್ತಮ ಧ್ವನಿ ವ್ಯವಸ್ಥೆಯ 9 ಸ್ಪೀಕರ್‌ಗಳಿವೆ. ಡ್ಯಾಷ್‌ಬೋರ್ಡ್‌ನಲ್ಲಿ 15.4 ಇಂಚು ವಿಸ್ತಾರದ ಟಚ್ ಸ್ಕ್ರೀನ್ ಪ್ಯಾನೆಲ್ ಇದೆ.
- ಸಸ್ಪೆನ್ಸನ್ ನಾಯ್ಸ್ ತಗ್ಗಿಸಬಲ್ಲ 2ನೇ ಪೀಳಿಗೆಯ ಹಾರ್ಡ್ ವೇರ್ ಅಳವಡಿಕೆಯಾಗಿದೆ. 'ಓವರ್ ದಿ ಏರ್' (ಒಟಿಎ)ಗೆ ಪರಿಷ್ಕರಣೆಗೆ ಅವಕಾಶವಿದೆ.

'ಲಾಂಗ್ ರೇಂಜ್ ರೇರ್ ವ್ಹೀಲ್ ಡ್ರೈವ್'

- ಬ್ಯಾಟರಿ ಪೂರ್ಣ ಚಾರ್ಜ್‌ನಲ್ಲಿದ್ದರೆ ಗರಿಷ್ಠ 622 ಕಿಮೀಗಳವರೆಗೂ ಚಲಿಸಬಲ್ಲದಾಗಿದೆ.
- 75 ಕೆಡಬ್ಲ್ಯುಎಚ್ ಸಾಮರ್ಥ್ಯದ ಎಲೆಕ್ಟ್ರಿಕ್ ಮತ್ತು ಆಟೊಮ್ಯಾಟಿಕ್ ಎಂಜಿನ್. ಪೆಡಲ್ ತುಳಿದ 5.6 ಸೆಕೆಂಡ್‌ಗಳಿಗೇ 100 ಕಿಮೀ ವೇಗವನ್ನು ಪಡೆದುಕೊಳ್ಳಬಲ್ಲದು. ಗರಿಷ್ಠ ವೇಗ 201 ಕಿ.ಮೀ.
- ಉತ್ತಮ ಧ್ವನಿ ವ್ಯವಸ್ಥೆಯ 9 ಸ್ಪೀಕರ್‌ಗಳಿವೆ. ಡ್ಯಾಷ್‌ಬೋರ್ಡ್‌ನಲ್ಲಿ 15.4 ಇಂಚು ವಿಸ್ತಾರದ ಟಚ್‌ಸ್ಕ್ರೀನ್ ಪ್ಯಾನೆಲ್ ಜೋಡಿಸಲಾಗಿದೆ.
- ಸಸ್ಪೆನ್ಸನ್ ನಾಯ್ಸ್ ತಗ್ಗಿಸಬಲ್ಲ 2ನೇ ಪೀಳಿಗೆಯ ಹಾರ್ಡ್‌ವೇರ್ ಅಳವಡಿಕೆಯಾಗಿದೆ. 'ಓವರ್ ದಿ ಏರ್'(ಒಟಿಎ)ಗೆ ಪರಿಷ್ಕರಣೆಗೆ ಅವಕಾಶವಿದೆ.

ವಿಶ್ವದ 3ನೇ ಅತಿದೊಡ್ಡ ವಾಹನ ಮಾರುಕಟ್ಟೆ!

ಭಾರತ ವಿಶ್ವದಲ್ಲೇ 3ನೇ ಅತಿದೊಡ್ಡದಾದ ವಾಹನಗಳ ಮಾರುಕಟ್ಟೆ ಎನಿಸಿಕೊಂಡಿದೆ. ಸದ್ಯ ಭಾರತದ ರಸ್ತೆಗಳಲ್ಲಿ ಸಂಚರಿಸುತ್ತಿರುವ ವಿದೇಶಿ ಮೂಲದ ಐಶಾರಾಮಿ ಹಾಗೂ ಅತ್ಯಧಿಕ ಎಂಜಿನ್ ಸಾಮರ್ಥ್ಯದ ಕಾರುಗಳಾದ ಮರ್ಸಿಡಿಸ್ ಬೆಂಜ್, ಬಿಎಂಡಬ್ಲ್ಯು, ಮಾರಿಸನ್ ಗ್ಯಾರೇಜ್ (ಎಂಜಿ) ಮತ್ತು ದಕ್ಷಿಣ ಕೊರಿಯ ಮೂಲದ 'ಕಿಯಾ' ಮೊದಲಾದ ವಿದೇಶಿ ಮೂಲದ ಕಾರುಗಳಿಗೆ 'ಟೆಸ್ಲಾ' ಭಾರತೀ ಸ್ಪರ್ಧೆ ಒಡ್ಡಲಿದೆ.

ಎಲ್ಲಕ್ಕಿಂತ ಗಮನ ಸೆಳೆವ ಸಂಗತಿ ಎಂದರೆ, ಅಮೆರಿಕ, ಜರ್ಮನಿ, ಜಪಾನ್, ಚೀನಾ ಮಾರುಕಟ್ಟೆಗಳಲ್ಲಿನ ಬೆಲೆಗಿಂತಲೂ 'ಟೆಸ್ಲಾ'ದ ವಿವಿಧ ಶ್ರೇಣಿಯ ಕಾರುಗಳು ಭಾರತದ ಮಾರುಕಟ್ಟೆಯಲ್ಲಿ ಭಾರೀ ದುಬಾರಿ ಎನಿಸಿಕೊಳ್ಳಲಿವೆ. ಕಾರಣ, ಅಮೆರಿಕದ ಉತ್ಪನ್ನಗಳಿಗೆ ಭಾರತದಲ್ಲಿನ ಅತ್ಯಧಿಕ ಪ್ರಮಾಣದ ಆಮದು ತೆರಿಗೆ!

ಹಾಗಾಗಿಯೇ, ವಿಶ್ವದ ನಂ.1 ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದ ಟೆಸ್ಲಾ ಕಾರು ಕಂಪನಿ, ಭಾರತದಲ್ಲಿ ಸದ್ಯ ಒಂದು ಮಾದರಿ ಕಾರನ್ನು ಮಾತ್ರವೇ ಮಾರಾಟ ಮಾಡಲು ನಿರ್ಧರಿಸಿದೆ. 'ಟೆಸ್ಲಾ ಮಾಡೆಲ್ ವೈ' ಕಾರು ಮಾತ್ರ ಭಾರತದ ಕಾರು ಪ್ರಿಯರಿಗೆ ಸದ್ಯ ಲಭ್ಯವಾಗಲಿದೆ.

ಸದ್ಯಕ್ಕೆ ಎಂಜಿ, ಕಿಯಾ, ಹುಂಡೈ ಸೇರಿದಂತೆ ವಿವಿಧ ವಿದೇಶಿ ಕಾರುಗಳು 'ಎಲೆಕ್ಟ್ರಿಕ್ ಮಾದರಿ'ಗಳನ್ನು ಭಾರತದಲ್ಲಿ ರಸ್ತೆಗಿಳಿಸಿವೆ. ದೇಶೀ ತಯಾರಿಕೆಗಳಾದ ಮಹೀಂದ್ರ, ಟಾಟಾ ಕಂಪನಿಗಳೂ ವಿದ್ಯುಚ್ಛಾಲಿತ ಕಾರುಗಳನ್ನು ತಯಾರಿಸಲಾರಂಭಿಸಿವೆ.

ಸಮಾಚಾರ ಸಣ್ಣದಲ್ಲ

ವಸತಿ ನಿಲಯ ಪ್ರವೇಶಕ್ಕೆ ಅರ್ಜಿಗಳ ಆಹ್ವಾನ

ಕೊಪ್ಪಳ: ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ ಮಾತ್ರ) ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಎಸಿ,ಎಸ್ಟಿ ಮತ್ತು ಇತರೆ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಆಸಕ್ತರು https://shp.karnataka.gov.in/bcwd ಆ. 14 ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥವಾ ಸಹಾಯವಾಣಿ ಸಂಖ್ಯೆ: 8050770004, 8050770005 ಕ್ಕೆ ಸಂಪರ್ಕಿಸಬಹುದು ಎಂದು ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

19ಕ್ಕೆ ವಾಕ್ ಇನ್ ಇಂಟರ್ವ್ಯೂವ್

ಕೊಪ್ಪಳ: ಇಲ್ಲಿನ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಜು.19 ರಂದು ವಾಕ್ ಇನ್ ಇಂಟರ್ವ್ಯೂವ್ ಆಯೋಜಿಸಲಾಗಿದ್ದು, ಖಾಸಗಿ ಸಂಸ್ಥೆಗಳು ಖಾಲಿ ಹುದ್ದೆಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಉಚಿತ ಪ್ರವೇಶವಿರುತ್ತದೆ. ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ ಹಾಗೂ ಯಾವುದೇ ಪದವಿ ಅಭ್ಯರ್ಥಿಗಳಿಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. 18 ರಿಂದ 30 ವರ್ಷದೊಳಗಿನ ಅರ್ಹ ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿ ಯುವಕ ಮತ್ತು ಯುವತಿಯರು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ಪ್ರತಿ, ಬಯೋಡಾಟಾ ಹಾಗೂ ಪಾಸ್ಪೋರ್ಟ್ ಅಳತೆಯ 2 ಭಾವಚಿತ್ರದೊಂದಿಗೆ ವಾಕ್ ಇನ್ ಇಂಟರ್ವ್ಯೂವ್‌ನಲ್ಲಿ ಭಾಗವಹಿಸಿ, ಉದ್ಯೋಗದ ನೆರವು ಪಡೆಯಬಹುದಾಗಿದೆ. ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇಲ್ಲಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸಗೊಬ್ಬರದ ಅಂಗಡಿ ಪರವಾನಿಗೆ ರದ್ದು

ಕೊಪ್ಪಳ: ಜಿಲ್ಲೆಯ ಕನಕಗಿರಿ ತಾಲೂಕು ಮುಸಲಾಪುರ ಗ್ರಾಮದ ಸಜ್ಜಲಶ್ರೀ ಆಗ್ರೋ ಕೇಂದ್ರ ಮತ್ತು ಹಾಗೂ ಕೊಪ್ಪಳ ತಾಲೂಕು ಇರಕಲ್ಲಗಡಾದ ಗ್ರಾಮದ ಸ್ಪಂದನ ಆಗ್ರೋ ಟ್ರೇಡರ್ಸ್ ಇವರ ರಸಗೊಬ್ಬರ ಮಾರಾಟ ಪರವಾನಿಗೆ ಅಮಾನತು ಮಾಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಂ.ರುದ್ರೇಶಪ್ಪ ತಿಳಿಸಿದ್ದಾರೆ. ರಸಗೊಬ್ಬರ ನಿಯಂತ್ರಣ ಆದೇಶ 1985ರ ಕ್ಲಾಸ್ 3, 4, 5, 8 ಮತ್ತು 35ರ ಉಲ್ಲಂಘನೆಗಾಗಿ ಅಮಾನತು ಮಾಡಲಾಗಿದೆ. ರಸಗೊಬ್ಬರ ನಿಯಂತ್ರಣ ಆದೇಶ 1985ರ ಉಲ್ಲಂಘನೆಗಾಗಿ ಇವರ ರಸಗೊಬ್ಬರ ಮಾರಾಟ ಪರವಾನಿಗೆ ರದ್ದುಗೊಳಿಸಲಾಗಿರುತ್ತದೆ ಎಂದು ತಿಳಿಸಿದ್ದಾರೆ. ರೈತರು ರಸಗೊಬ್ಬರ ಖರೀದಿಸುವ ಸಮಯದಲ್ಲಿ ಮಾರಾಟಗಾರರು ಖರೀದಿ ಬಿಲ್ ನೀಡದೇ ಇದ್ದಲ್ಲಿ ಅಥವಾ ಕೃಷಿ ಪರಿಕರ ಹೆಚ್ಚಿನ ದರದಲ್ಲಿ ಮಾರಾಟ ಮಾಡುವುದು ಕಂಡುಬಂದಲ್ಲಿ ಅಥವಾ ಕಳಪೆ ಗುಣಮಟ್ಟದ ರಸಗೊಬ್ಬರ ಕಂಡುಬಂದಲ್ಲಿ ಕೃಷಿ ಅಧಿಕಾರಿ ಅಥವಾ ಸಹಾಯಕ ಕೃಷಿ ನಿರ್ದೇಶಕರು ಕೊಪ್ಪಳ ಮೊಬೈಲ್ ಸಂಖ್ಯೆ: 8277932117 ಇಲ್ಲಿಗೆ ಸಂಪರ್ಕಿಸಿ ಮಾಹಿತಿ ನೀಡಬಹುದು.

ಹುಸೇನಿ ಆಲಂ ದರ್ಗಾ ಹುಂಡಿ ಎಣಿಕೆ

ಮುದಗಲ್: ಪಟ್ಟಣದ ಹಜರತ್ ಹುಸೇನಿ ಆಲಂ ದರ್ಗಾದಲ್ಲಿ ಮೊಹರಂ ಭಕ್ತರು ಹುಂಡಿಯಲ್ಲಿ 12,23,158 ರುಗಳು ಕಾಣಿಕೆಯನ್ನು ಭಕ್ತರು ಸಮರ್ಪಿಸಿದ್ದಾರೆ. ಭಕ್ತರು ದೇವರಿಗೆ ಹರಕೆ ಸಲ್ಲಿಸಿದ ದೇವರ ದಟ್ಟಿ ರು.58,000, ಬೆಳ್ಳಿ 1ಕೆ.ಜಿ 160ಗ್ರಾಂ, ದೇವರ ಬಾವಿಯಲ್ಲಿ ದೇವರು ತೊಳಿಸಲು ಬಂದಿರುವ ಭಕ್ತರು ಸಮರ್ಪಿಸಿದ 91,000 ರು. ಹಣ ಎಣಿಕೆ ಮಾಡಿ ಆರ್‌ಡಿಸಿಸಿ ಬ್ಯಾಂಕ ಖಾತೆಗೆ ಹಣ ಜಮಾ ಮಾಡಲಾಯಿತು. ಈ ವೇಳೆ ರಾಯಚೂರು ವಕ್ಫ್ ಸಿಬ್ಬಂದಿ ಎಂ.ಡಿ.ಇರ್ಷದ್, ದರ್ಗಾ ಕಮಿಟಿ ಅಧ್ಯಕ್ಷ ಅಮೀರ್ ಬೇಗ ಉಸ್ತಾದ, ಉಪಾಧ್ಯಕ್ಷ ಮಸೂಮ್ ಶರೀಫ್, ಕಾರ್ಯಧರ್ಶಿ ಸಾಧಿಕ ಅಲಿ, ಖಜಾಂಚಿ ಗಾಯಾಸುದ್ದಿನ್, ಮಿರು ಷಾ, ಖಾಜಾ ಮಂಡಿ, ಶಂಶಾಲಂ, ರಹೇಮನ್ ಅರಬ್, ಸೇರಿದಂತೆ ಇತರರಿದ್ದರು.

500 ಕೋಟಿ ಶಕ್ತಿ ಟಿಕೆಟ್ ಸಂಭ್ರಮ

ಹೊಸಪೇಟೆ ಬಸ್ ನಿಲ್ದಾಣದಲ್ಲಿ ಸಂಭ್ರಮಾಚರಣೆ | ಶಾಸಕ ಗವಿಯಪ್ಪ ಭಾಗಿ

ಹೊಸಪೇಟೆ: ಶಕ್ತಿ ಯೋಜನೆಯಡಿ ರಾಜ್ಯಾದ್ಯಾಂತ 500 ಕೋಟಿ ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಿರುವುದು ಸ್ತ್ರೀಸ್ವಾವಲಂಬಿ ಕನಸುಗಳನ್ನು ನನಸಾಗಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎಂದು ಶಾಸಕ ಎಚ್.ಆರ್.ಗವಿಯಪ್ಪ ಹೇಳಿದರು.

ನಗರದ ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಶಕ್ತಿ ಯೋಜನೆಯಡಿಯಲ್ಲಿ 500 ಕೋಟಿ ಉಚಿತ ಟಿಕೆಟ್‌ಗಳನ್ನು ವಿತರಿಸಿದ ಸಂಭ್ರಮಾಚಾರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪಂಚ ಗ್ಯಾರಂಟಿ ಯೋಜನೆಯಲ್ಲಿ ಪ್ರಮುಖವಾಗಿ ಮಹಿಳೆಯರನ್ನು ಕೇಂದ್ರವಾಗಿಸಿ ಉಚಿತವಾಗಿ ಕರ್ನಾಟಕ ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ನೀಡಿದ್ದ ಭರವಸೆ ಎರಡು ವರ್ಷಗಳ ಕಾಲ ಯಶಸ್ವಿಯಾಗಿ ನಡೆಯುತ್ತ ಬಂದಿದೆ.

ರಾಜ್ಯದಲ್ಲಿ ಎರಡು ವರ್ಷಗಳಲ್ಲಿ ಒಟ್ಟು 500 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದು, ಪ್ರಯಾಣದ ಒಟ್ಟು ಮೊತ್ತ 12,669 ಕೋಟಿ ರುಗಳು ಶಕ್ತಿ ಯೋಜನೆಗೆ ಈವರೆಗೆ ವಿನಿಯೋಗಿಸಲಾಗಿದೆ. ಶಕ್ತಿ ಯೋಜನೆ ಸಮರ್ಪಕವಾಗಿ ಬಳಕೆಯಾಗಿದೆ.

ಸಾರಿಗೆ ಇಲಾಖೆಗೆ ಪರೋಕ್ಷವಾಗಿ ಶಕ್ತಿ ನೀಡಿದ ಯೋಜನೆ ಇದಾಗಿದೆ ಎಂದರು. ವಿಜಯನಗರ ಜಿಲ್ಲೆಯಲ್ಲಿ ಒಟ್ಟು 7.28 ಕೋಟಿ ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ರಾಜ್ಯ ಸರಕಾರದಿಂದ ಸಾರಿಗೆ ಇಲಾಖೆಗೆ ಶುಲ್ಕ ಭರಿಸುವ ಮೂಲಕ ಯೋಜನೆಯನ್ನು ಸಕ್ರಿಯವಾಗಿಸಿದೆ ಎಂದು ಹೇಳಿದರು.

ನಗರದ ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಶಕ್ತಿ ಯೋಜನೆಯಡಿಯಲ್ಲಿ 500 ಕೋಟಿ ಉಚಿತ ಪ್ರಯಾಣ.

> **ಕರ್ನಾಟಕ ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಯಲ್ಲಿ ಶಕ್ತಿ ಯೋಜನೆ ಮುಖ್ಯವಾಗಿದೆ. ಯೋಜನೆಯು ಎರಡು ವರ್ಷಗಳ ಪೂರೈಸಿ ಮಹಿಳೆಯರು ಉಚಿತವಾಗಿ 500 ಕೋಟಿ ದರದಲ್ಲಿ ಪ್ರಯಾಣಿಸಿ ಲಾಭವನ್ನು ಪಡೆದುಕೊಂಡಿದ್ದಾರೆ.**
> -ಕುರಿ ಶಿವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ

ಹಾಗಾಗೀ ಜಿಲ್ಲಾ ಕೇಂದ್ರ ಸೇರಿದಂತೆ ಎಲ್ಲಾ ಘಟಕಗಳಲ್ಲಿ ಬಸ್‌ಗಳನ್ನು ಸಿಂಗರಿಸುವ ಮೂಲಕ ಪರಸ್ಪರ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಯಿತು. ಗ್ಯಾರಂಟಿಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಸೇರಿದಂತೆ ರಾಜ್ಯದ ಎಲ್ಲಾ ಸಚಿವರು ಶ್ರಮಿಸಿದ್ದಾರೆ.

ಈ ವೇಳೆ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಎಫ್.ಇಮಾಮ್ ನಿಯಾಜಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಹೊಸಪೇಟೆ ವಿಭಾಗದ ನಿಯಾಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ, ವಿಭಾಗೀಯ ತಾಂತ್ರಿಕ ಅಧಿಕಾರಿ ಜಿ.ನಾಗರಾಜ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಶಕ್ತಿ ಯೋಜನೆ ಕಾಂಗ್ರೆಸ್ ಸರಕಾರದ ಐತಿಹಾಸಿಕ ಸಾಧನೆ

ಕೊಪ್ಪಳ: ರಾಜ್ಯ ಸರಕಾರ ಜಾರಿ ಮಾಡಿರುವ ಶಕ್ತಿ ಯೋಜನೆಯಡಿ ರಾಜ್ಯಾದ್ಯಂತ 500 ಕೋಟಿ ಬಸ್ ಟಿಕೆಟ್ ಉಚಿತ ವಿತರಿಸಲಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಮಹಿಳೆಯರು ಬಸ್ ಪ್ರಯಾಣದ ಸೌಲಭ್ಯ ಪಡೆದಿರುವುದು ಐತಿಹಾಸಿಕ ಸಾಧನೆ ಎಂದು ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ನಗರದ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶಕ್ತಿ ಯೋಜನೆಯಡಿ 500 ಕೋಟಿ ಉಚಿತ್ ಟಿಕೆಟ್ ವಿತರಣೆ ಹಿನ್ನೆಲೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದಿಂದ ಬಸ್‌ಗೆ ಪೂಜೆ ಸಲ್ಲಿಸಿ, ಪ್ರಯಾಣಿಕರಿಗೆ ಸಿಹಿ ಹಂಚುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ರಾಜ್ಯ ಸರಕಾರ ಯಶಸ್ವಿಯಾಗಿ 2 ವರ್ಷ ಪೂರ್ಣಗೊಳಿಸಿದ್ದು, ರಾಜ್ಯದಲ್ಲಿ 500 ಕೋಟಿ ಮಹಿಳೆಯರು ಉಚಿತ ಬಸ್ ಪ್ರಾಯಾಣ ಟಿಕೇಟ್ ಪಡೆದಿದ್ದಾರೆ. ಮಹಿಳೆಯರಿಗೆ ಸ್ವಂತ ಶಕ್ತಿ ಮೇಲೆ ಕುಟುಂಬ ನಡೆಸಲು ಗೃಹಲಕ್ಷ್ಮೀ ಯೋಜನೆಯಡಿ ಮಾಸಿಕ 2 ಸಾವಿರ ರು. ಸಹಾಯಧನ ಮತ್ತು ಉಚಿತ ಬಸ್ ಪ್ರಯಾಣದ ಸೌಲಭ್ಯ ನಮ್ಮ ಸರಕಾರ ಮಾಡಿಕೊಟ್ಟಿದೆ. ಕೊಪ್ಪಳ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್‌ಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಯಾಣಿಕರಿಗೆ ಸಿಹಿ ಹಂಚಿಕೆ ಮಾಡಲಾಯಿತು. ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ಕಾರ್ಮಿಕ ಕಲ್ಯಾಣಾಧಿಕಾರಿ ಸತ್ಯನಾರಾಣ, ಘಟಕ ವ್ಯವಸ್ಥಾಪಕ ರಮೇಶ ಚಿಣಗಿ ಇದ್ದರು.

ಕೊಪ್ಪಳದ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶಕ್ತಿ ಯೋಜನೆಯಡಿ 500 ಕೋಟಿ ಉಚಿತ್ ಟಿಕೆಟ್ ವಿತರಣೆ ಹಿನ್ನೆಲೆ ಬಸ್ ಗೆ ಪೂಜೆ ಸಲ್ಲಿಸಿ ಪ್ರಯಾಣಿಕರಿಗೆ ಸಿಹಿ ಹಂಚಲಾಯಿತು.

ಲೋಕ್-ಅದಾಲತ್ ಯಶಸ್ವಿ: ನ್ಯಾ.ರಾಜೇಶ್

ಬಳ್ಳಾರಿ: ಜಿಲ್ಲೆಯ 31 ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್ ಯಶಸ್ವಿಯಾಗಿ ನಡೆದಿವೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್.ಎನ್ ಹೊಸಮನೆ ತಿಳಿಸಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರ ಮಾರ್ಗದರ್ಶನ ಹಾಗೂ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ನ್ಯಾಯಾಧೀಶರ, ವಕೀಲರ, ಕಕ್ಷಿದಾರರ, ಸಾರ್ವಜನಿಕರ ಮತ್ತು ಸರಕಾರಿ ಅಧಿಕಾರಿಗಳ ಸಹಯೋಗದಲ್ಲಿ ಲೋಕ್-ಅದಾಲತ್ ಯಶಸ್ವಿಯಾಗಿ ನಡೆದಿವೆ.

ಲೋಕ್-ಅದಾಲತ್‌ನಲ್ಲಿ ರಾಜಿ ಆಗಬಹುದಾದ ಕ್ರಿಮಿನಲ್ ಪ್ರಕರಣಗಳು, ಬ್ಯಾಂಕ್ ದಾವೆಗಳು, ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ ದಾವೆಗಳು, ಮೋಟರ್ ಅಪಘಾತ ಪರಿಹಾರ ಪ್ರಕರಣಗಳು, ನೌಕರರ ಪರಿಹಾರ ಪ್ರಕರಣಗಳು, ವಿದ್ಯುತ್ ಶಕ್ತಿ ಕಾಯ್ದೆಯ ಪ್ರಕರಣಗಳು, ಪಾಲು ವಿಭಾಗ ದಾವೆಗಳು, ವೈವಾಹಿಕ ಅಥವಾ ಕೌಟುಂಬಿಕ ಪ್ರಕರಣಗಳು, ಮೋಟಾರ್ ವಾಹನ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಪರಸ್ಪರ ಒಪ್ಪಿಗೆಯ ಮೇರೆಗೆ ರಾಜಿ ಸಂಧಾನದ ಮೂಲಕ ತೀರ್ಮಾನಿಸಲಾಗಿದೆ.

ಕೌಟುಂಬಿಕ ಸಮಸ್ಯೆಯ ಪ್ರಕರಣಗಳಲ್ಲಿ 11 ಜೋಡಿಗಳು ರಾಜಿ ಸಂದಾನದ ಮೂಲಕ ಗಂಡ-ಹೆಂಡತಿ ಒಂದಾಗಿದ್ದಾರೆ.

ಲೋಕ್-ಅದಾಲತ್ ಕುರಿತು ಸಾರ್ವಜನಿಕರು ಹೆಚ್ಚಿನ ಅರಿವು ಹೊಂದಿ, ತಮ್ಮ ವ್ಯಾಜ್ಯಗಳಿದ್ದಲ್ಲಿ ಸಕಾಲದಲ್ಲಿ ಬಗೆಹರಿಸಿಕೊಳ್ಳಲು ರಾಷ್ಟ್ರೀಯ ಲೋಕ್-ಅದಾಲತ್ ಸಹಕಾರಿಯಾಗಿದೆ ಹಾಗೂ ಪ್ರದಿನ ಎಲ್ಲಾ ನ್ಯಾಯಾಲಯಗಳಲ್ಲಿ ರಾಜಿ ಸಂಧಾನ ಮಾಡುವ ಸಲುವಾಗಿ ಬೈಠಕ್‌ಗಳು ನಡೆಯುತ್ತವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕ್-ಅದಾಲತ್ ಪ್ರಕರಣಗಳಲ್ಲಿ 11 ಜೋಡಿ ರಾಜಿ ಸಂದಾನದ ಮೂಲಕ ಒಂದಾಗಿದ್ದಾರೆ.

> **ರಾಷ್ಟ್ರೀಯ ಲೋಕ್ ಅದಾಲತ್‌ನ ವರದಿ**
> **ಜು.12 ರಂದು ನಡೆದ ಲೋಕ್-ಅದಾಲತ್‌ನಲ್ಲಿ 16,424 ಬಾಕಿ ಪ್ರಕರಣಗಳು ಮುಕ್ತಾಯಗೊಳಿಸಲಾಗಿದ್ದು, ಒಟ್ಟು ರು.34,31,97,228 ಪರಿಹಾರವಾಗಿ ಮೊತ್ತವನ್ನು ಕೊಡಲಾಗಿರುತ್ತದೆ. ಹಾಗೂ 8,59,362 ವಾಜ್ಯಪೂರ್ವ ಪ್ರಕರಣಗಳು ಮುಕ್ತಾಯಗೊಂಡಿದ್ದು, ಅವುಗಳಿಂದ ರು.31,33,76,853 ಬ್ಯಾಂಕ್ ಮತ್ತು ಸರಕಾರಿ ಇಲಾಖೆಯ ಖಾಜನೆಗೆ ಪರಿಹಾರದ ಮೊತ್ತ ಜಮೆ ಆಗಿರುತ್ತದೆ.**

ತಹಸೀಲ್ದಾರ್ ಕಚೇರಿಗೆ ಸ್ಥಳಾಂತರಕ್ಕೆ ಮನವಿ

ಲಿಂಗಸೂಗೂರು: ಮಿನಿ ವಿಧಾನ ಸೌಧದಲ್ಲಿರುವ ತಹಸೀಲ್ದಾರ್ ಕಚೇರಿಯನ್ನು ಪ್ರವಾಸಿ ಮಂದಿರ ಅಥವಾ ಸಹಾಯಕ ಆಯುಕ್ತರ ಕಚೇರಿಯಲ್ಲಿರುವ ಕಟ್ಟಡಕ್ಕೆ ಸ್ಥಳಾಂತರ ಹಾಗೂ ಹಲವು ಕಚೇರಿಗಳು ಖಾಸಗಿ ಕಟ್ಟಡದಲ್ಲಿ ಬಾಡಿಗೆ ಕೊಟ್ಟು ನಡೆಸುತ್ತಿದ್ದು, ಸರಕಾರದ ಹಣ ಪೋಲಾಗುತ್ತಿದೆ. ಖಾಲಿ ಇರುವ ಸರಕಾರಿ ಕಟ್ಟಡಗಳಲ್ಲಿ ಇಲಾಖೆಗಳನ್ನು ಸ್ಥಳಾಂತರ ಮಾಡಬೇಕು ಎಂದು ನಮ್ಮ ಕರ್ನಾಟಕ ಸೇನೆ ವತಿಯಿಂದ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಮಿನಿ ವಿಧಾನಸೌಧ ಪಟ್ಟಣದ ಹೊರವಲಯದಲ್ಲಿದ್ದು, ಗ್ರಾಮೀಣ ಭಾಗದ ಬಡ ಜನರು ಮಿನಿ ವಿಧಾನಸೌಧಕ್ಕೆ ಹೋಗಿ ತಹಸೀಲ್ದಾರರ ಕಾರ್ಯಾಲಯದಲ್ಲಿ ದಾಖಲಾತಿಗಳ ಪಡೆಯಲು ಹರಸಾಹಸ ಪಡಬೇಕಾಗಿದೆ. ಗ್ರಾಮೀಣ ಬಡಜನರು 100 ರಿಂದ 200 ರು.ಗಳನ್ನು ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಮೂಲ ಭೂತ ಸೌಲಭ್ಯಗಳು ಇಲ್ಲ. ಒಂದು ಝುರಾಕ್ಸ ಮಾಡಿಸಿಕೊಳ್ಳಬೇಕಾದರೆ ಪುನಃ ಲಿಂಗಸುಗೂರು ಪಟ್ಟಣಕ್ಕೆ ಬರಬೇಕಾಗಿದೆ.



ನಮ್ಮ ಕರ್ನಾಟಕ ಸೇನೆ ವತಿಯಿಂದ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಇದರಿಂದಾಗಿ ಸಾರ್ವಜನಿಕರು ತುಂಬ ತೊಂದರೆ ಅನುಭವಿಸುತ್ತಿದ್ದಾರೆ. ಪಟ್ಟಣದಲ್ಲಿ ಹಲವು ಕಚೇರಿಗಳು ಖಾಸಗಿ ಕಟ್ಟಡದಲ್ಲಿ ಬಾಡಿಗೆ ಇದ್ದು, ಇದರಿಂದ ಸರಕಾರದ ಹಣ ಪೋಲಾಗುತ್ತಿದೆ. ಸಹಾಯಕ ಆಯುಕ್ತರ ಕಚೇರಿ ಪಕ್ಕದಲ್ಲಿ ಹಾಗೂ ತಾಪಂ ಯಲ್ಲಿ ಖಾಲಿ ಇರುವ ಕಟ್ಟಡಗಳಿಗೆ ಸ್ಥಳಾಂತರ ಮಾಡಬೇಕು. ಹಣ ಪೋಲಾಗುವುದನ್ನು ತಪ್ಪಿಸಬೇಕೆಂದು ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಶಿವರಾಜ ನಾಯ್ಕ, ಪ್ರಧಾನ ಕಾರ್ಯದರ್ಶಿ ನಿರುಪಾದಿ ಹಿರೇಮಠ, ಚಂದ್ರಕಾಂತ ಭೋವಿ, ರಮೇಶಭೋವಿ, ಚಂದ್ರುನಾಯಕ, ದೇವೇಂದ್ರನಾಯಕ, ಮಹಾಂತಯ್ಯ ಸ್ವಾಮಿ, ಬಸವರಾಜ ನಾಯಕ, ಚಂದ್ರು ಅಲಬನೂರು, ಕಿರಣನಾಯಕ, ಲಕ್ಷ್ಮಣ ಭೋವಿ ಸೇರಿದಂತೆ ಇತರರು ಇದ್ದರು.

ಬಲ್ದೋಟ ವಿರೋಧಿ ಹೋರಾಟಗಾರರ ಆಗ್ರಹ | ಆ.4ರ ವರೆಗೆ ಸಿಎಂಗೆ ಗಡುವು

ದೇವನಹಳ್ಳಿ ಮಾದರಿ ಕೊಪ್ಪಳಕ್ಕೆ ಮುಕ್ತಿ ನೀಡಿ

ಕೊಪ್ಪಳ: ರಾಜ್ಯ ರಾಜಧಾನಿ ಸಮೀಪದ ದೇವನಹಳ್ಳಿ ಭೂ ಸ್ವಾಧೀನ ಪ್ರಕ್ರಿಯೆ ರಾಜ್ಯ ಸರಕಾರ ಕೈ ಬಿಟ್ಟ ಹಿನ್ನೆಲೆ, ನಗರದ ಅಶೋಕ ವೃತ್ತದಲ್ಲಿ ಬಲ್ದೋಟ ಕಾರ್ಖಾನೆ ವಿರೋಧಿ ಹೋರಾಟಗಾರರು ಮಂಗಳವಾರ ವಿಜಯೋತ್ಸವ ಆಚರಿಸಿದರು.

ವೃತ್ತದಲ್ಲಿ ಜಮಾಯಿಸಿದ್ದ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಹಾಗೂ ಪರಿಸರ ಹಿತ ರಕ್ಷಣಾ ವೇದಿಕೆ ಸದಸ್ಯರು ಸಿಹಿ ಹಂಚಿ ಸಂಭ್ರಮಿಸಿದರು.

ಜಿಲ್ಲಾ ಬಚಾವೋ ಆಂದೋಲನ ಸಮಿತಿ ಪ್ರಧಾನ ಸಂಚಾಲಕ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಸುಮಾರು 1198 ದಿನಗಳ ಸುಧೀರ್ಘ ಹೋರಾಟದ ನಂತರ ಭೂ ಸ್ವಾಧೀನ ಪ್ರಕ್ರಿಯೆ ರದ್ದು ಮಾಡಲಾಗಿದೆ. ಈ ಮೂಲಕ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ರೈತಪರ ಎಂಬ ಸಂದೇಶ ನೀಡಿದೆ. ಸುಮಾರು 1777 ಎಕರೆ ಭೂಮಿಯ ಸ್ವಾಧೀನ ಕೈಬಿಟ್ಟಿರುವುದು ಸ್ವಾಗತಾರ್ಹ. ಅದರಂತೆ ಕೊಪ್ಪಳ ಸೇರಿ ರಾಜ್ಯಾದ್ಯಂತ ನಾನಾ ಕಡೆಯಲ್ಲಿ ಕಾರ್ಖಾನೆ, ಅಭಿವೃದ್ಧಿ ಹೆಸರಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿರುವದು ಸಹ ಕೈಬಿಡಬೇಕು. ಕೃಷಿ ಭೂಮಿ ಉಳಿಯಬೇಕು. ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ತೆಗೆದು ಹಾಕಬೇಕು. ದೇವನಹಳ್ಳಿ ಮಾದರಿಯಲ್ಲಿ ಕೊಪ್ಪಳ ನಗರಕ್ಕೆ ಹೊಂದಿಕೊಂಡು ವಿಸ್ತರಣೆ ಆಗುತ್ತಿರುವ ಬಲ್ದೋಟ ಕಾರ್ಖಾನೆ ವಿಸ್ತರಣೆ ತಡೆಯಬೇಕು. ಇದೀಗ ಕಾರ್ಖಾನೆ ಮೋಸದಿಂದ ಹೆಸರು ಬದಲಿಸಿಕೊಂಡು ಬಂದಿರುವ ಬಲ್ದೋಟಾದ ಬಿಎಸ್‌ಪಿಎಲ್ ಕಾರ್ಖಾನೆ ಸೇರಿ ಜನರಿಗೆ ಮಾರಕವಾಗಿರುವ ಎಲ್ಲ ಕಂಪನಿ ಕೊಪ್ಪಳ ಬಿಟ್ಟು ತೊಲಗಿಸಬೇಕು ಎಂದು ಮನವಿ ಮಾಡಿದರು.

ಸಂಘಟಕರಾದ ಕೆ. ಬಿ. ಗೋನಾಳ, ಮಹಾಂತೇಶ ಕೊತಬಾಳ, ಶರಣು ಗಡ್ಡಿ, ಭೀಮಸೇನ ಕಲಕೇರಿ, ತಿಪ್ಪಯ್ಯಸ್ವಾಮಿ ಹೊಲಗೇರಿ, ಕನಕಪ್ಪ ಪೂಜಾರ, ಬಂದೇನವಾಜ್ ಮಣಿಯಾರ, ಗಾಳೆಪ್ಪ ಮುಂಗೋಲಿ, ಕಾಶಿಮ ಸರ್ದಾರ, ನಾಗರಾಜ. ಜಿ., ಮಕ್ಬೂಲ್ ರಾಯಚೂರು, ಪರಶುರಾಮ ವಣಗೇರಿ ಇಂದರಗಿ, ಮುತ್ತುರಾಜ್ ಹಡಪದ, ಗವಿಸಿದ್ದಪ್ಪ ಹಲಿಗಿ ಕುಣಿಕೇರಿ, ರಮೇಶ ಬೂದಗುಂಪಿ, ಮುದುಕಪ್ಪ ಹೊಸಮನಿ, ಆನಂದ ಗೊಂಡಬಾಳ, ಗವಿಸಿದ್ದಪ್ಪ ಹಂಡಿ ಇದ್ದರು.

> **ಆ.4 ರಂದು ಕೊಪ್ಪಳಕ್ಕೆ ಸಿಎಂ ಸಿದ್ದರಾಮಯ್ಯ ಆಗಮಿಸುತ್ತಿದ್ದು, ಆ ದಿನ ಬಲ್ದೋಟಾ ಹಾಗೂ ಕಿರ್ಲೋಸ್ಕರ್ ವಿಸ್ತರಣೆಗೆ ನೀಡಿರುವ ಅನುಮತಿ ರದ್ದುಗೊಳಿಸಿ ಆದೇಶ ನೀಡಬೇಕು. ಆಗ ಮಾತ್ರ ಸಿಎಂ ಜನ್ಮದಿನ ಇಲ್ಲಿನ ಜನರೇ ದೊಡ್ಡಮಟ್ಟದಲ್ಲಿ ಅತ್ಯಂತ ಸಡಗರದಿಂದ ಆಚರಿಸುತ್ತಾರೆ. ದೇವನಹಳ್ಳಿ ರೈತರ ಹೋರಾಟ ರಾಜ್ಯಕ್ಕೆ ಮಾದರಿಯಾಗಿದೆ. ಸುಮಾರು 12 ವರ್ಷ ಕೊಪ್ಪಳ ನಗರದ ಮೇಲೆ ಇಲ್ಲದ ಕಾಳಜಿ ಮತ್ತು ಪ್ರೀತಿ ಕಾರ್ಖಾನೆಗೆ ಈಗ ಉಕ್ಕಿ ಹರಿಯುತ್ತಿದೆ. ಅವರ ಆಸೆ ಆಮಿಷಗಳಿಗೆ ಜನ ಬಲಿಯಾಗುವುದಿಲ್ಲ. ಅವರ ವಿರುದ್ದ ಹೋರಾಟ ಇನ್ನಷ್ಟು ತೀವ್ರಗೊಳ್ಳುತ್ತದೆ. ಕಾರ್ಖಾನೆಗಳ ಕಪಟ ಪರಿಸರ ಪ್ರೇಮ ನಮಗೆ ಗೊತ್ತಿದೆ.**
> -ಮಂಜುನಾಥ ಜಿ.ಗೊಂಡಬಾಳ, ಮುಖಂಡ

> **ಸಿಎಂ ಸಿದ್ದರಾಮಯ್ಯ ಅವರು, ದೇವನಹಳ್ಳಿ ರೈತರಿಗೆ ಅವರ ಭೂಮಿ ಬಿಡುವ ನಿರ್ಣಯ ಸ್ವಾಗತಿಸುತ್ತೇವೆ. ಅದೇ ರೀತಿ ಕೊಪ್ಪಳದಲ್ಲೂ ಆಗಬೇಕು. ಕಾರ್ಖಾನೆ ವಿರೋಧಿ ಹೋರಾಟಗಾರರ ಮನವಿ ಆಲಿಸಿ, ಕೊಪ್ಪಳಕ್ಕೆ ಬರುವ ಮುನ್ನವೇ ಕಾರ್ಖಾನೆ ರದ್ದುಗೊಳಿಸಿ ಆದೇಶ ನೀಡಬೇಕು.**
> -ಬಸವರಾಜ ಶೀಲವಂತರ, ಮುಖಂಡ

ಕೊಪ್ಪಳದ ಅಶೋಕ ವೃತ್ತದಲ್ಲಿ ರಾಜ್ಯ ಸರಕಾರ ದೇವನಹಳ್ಳಿ ಭೂ ಸ್ವಾಧೀನ ಪ್ರಕ್ರಿಯೆ ಕೈ ಬಿಟ್ಟ ಆದೇಶದ ಹಿನ್ನೆಲೆ ಬಲ್ದೋಟ ಕಾರ್ಖಾನೆ ವಿರೋಧಿ ಹೋರಾಟಗಾರರು ವಿಜಯೋತ್ಸವ ಆಚರಿಸಿದರು.

ಸಚಿವರಿಂದ ರಾಘವೇಂದ್ರ ಸ್ವಾಮಿ ದರ್ಶನ

ರಾಯಚೂರ: ಕರ್ನಾಟಕ ರಾಜ್ಯದಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಭಕ್ತರ ಅನುಕೂಲಕ್ಕಾಗಿ ಮಂತ್ರಾಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಸತಿ ಗೃಹಗಳ ವ್ಯವಸ್ಥೆಗೆ ಕ್ರಮವಹಿಸುವುದಾಗಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದರು.

ಮಂತ್ರಾಲಯಕ್ಕೆ ಭೇಟಿ ನೀಡಿ ಶ್ರೀ ರಾಘವೇಂದ್ರ ಸ್ವಾಮಿ ಅವರ ದರ್ಶನದ ಪಡೆದು, ಪೀಠಾಧಿಪತಿ ಸುಬುಧೇಂದ್ರ ತೀರ್ಥರ ಆಶೀರ್ವಾದ ಪಡೆದರು. ಮಂತ್ರಾಲಯದ ಕರ್ನಾಟಕ ಛತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ ನಿರ್ಮಾಣ ಮಾಡಿರುವ ನೂತನ ಹಾಗೂ ಹಳೆ ಕಟ್ಟಡಗಳ ಪರಿಶೀಲನೆ ನಡೆಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಮಂತ್ರಾಲಯಕ್ಕೆ ಪ್ರತಿ ದಿನ ಅಂದಾಜು 200 ಬಸ್‌ಗಳು ರಾಜ್ಯದ ಬೇರೆ ಬೇರೆ ಭಾಗಗಳಿಂದ ಬರುತ್ತವೆ. ರೈಲಿನ ಮೂಲಕವು ಜನರು ಮಂತ್ರಾಲಯಕ್ಕೆ ಬರುತ್ತಾರೆ. ಆಂಧ್ರಕ್ಕೆ ಹೋಲಿಸಿದರೆ ಶೇ.60ರಷ್ಟು ಜನರು ಕರ್ನಾಟಕ ರಾಜ್ಯದಿಂದಲೇ ಮಂತ್ರಾಲಯಕ್ಕೆ ಆಗಮಿಸುತ್ತಾರೆ. ಈ ಬಗ್ಗೆ ಮಂತ್ರಾಲಯದ ಸ್ವಾಮೀಜಿ ಅವರೊಂದಿಗೆ ಚರ್ಚಿಸಿದಾಗ, ಕರ್ನಾಟಕದಿಂದ ಬರುವ ಭಕ್ತರ ಅನುಕೂಲಕ್ಕಾಗಿ ಮಂತ್ರಾಲಯದಲ್ಲಿ ವಸತಿ ಗೃಹಗಳ ನಿರ್ಮಾಣಕ್ಕೆ ಸೂಕ್ತವಾದ ಜಾಗದ ವ್ಯವಸ್ಥೆ ಮಾಡಿಕೊಡುವುದಾಗಿ ಸ್ವಾಮೀಜಿ ಅವರು ಮಾತುಕೊಟ್ಟಿದ್ದಾರೆ ಎಂದು ಸಚಿವರು ತಿಳಿಸಿದರು.

ಮಂತ್ರಾಲಯದಲ್ಲಿ ಈಗಿರುವ ಕರ್ನಾಟಕ ರಾಜ್ಯ ವಸತಿ ಗೃಹ ಕಟ್ಟಡದ ಕಳಪೆ ಕಾಮಗಾರಿಯ ಬಗ್ಗೆ ಲೋಕಾಯುಕ್ತಕ್ಕೆ ದೂರು ಸಲ್ಲಿಕೆಯಾಗಿದೆ. ಕಳಪೆ ಕಾಮಗಾರಿ ನಡೆದಿದೆ ಎಂದು ಲೋಕಾಯುಕ್ತರಿಂದ ಸಾಬೀತಾದಲ್ಲಿ ಸಂಬಂಧಿಸಿದ ಗುತ್ತಿಗೆದಾರರಿಂದಲೇ ಕಟ್ಟಡದ ದುರಸ್ತಿ ಮಾಡಿಸಲಾಗುವುದು. ಇಲ್ಲವಾದಲ್ಲಿ ಕಟ್ಟಡದಲ್ಲಿನ ನ್ಯೂನ್ಯತೆಗಳ ಬಗ್ಗೆ ಪರಿಶೀಲಿಸಿ ಮಾಸ್ಟರ್ ಪ್ಲಾನ್ ರೂಪಿಸಿ ಕಟ್ಟಡವನ್ನು ಸರಿಪಡಿಸಲಾಗುವುದು ಎಂದು ಸಚಿವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಪ್ರವಾಸೋದ್ಯಮ ಇಲಾಖೆಯ ಆಯುಕ್ತ ವೆಂಕಟೇಶ್, ಜಿಲ್ಲಾಧಿಕಾರಿ ನಿತೀಶ್ ಕೆ, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯ ಕಿಶೋರ್ ಕುಮಾರ ಪಾಟೀಲ,ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಶಾವಂತಗೇರಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಎಸ್. ಚಂದ್ರಶೇಖರ, ಕರ್ನಾಟಕ ವಸತಿ ಗೃಹ ಕಟ್ಟಡದ ಅಧಿಕಾರಿ ಆಂಜನೇಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಘವೇಂದ್ರ ಸ್ವಾಮಿ ದರ್ಶನದ ಪಡೆದು, ಪೀಠಾಧಿಪತಿ ಸುಬುಧೇಂದ್ರ ತೀರ್ಥರ ಆಶೀರ್ವಾದ ಪಡೆದರು.

> **ಆನ್‌ಲೈನ್ ವ್ಯವಸ್ಥೆಗೆ ಕ್ರಮ**
> **ಧಾರ್ಮಿಕ ದತ್ತಿ ಇಲಾಖೆಯಿಂದ ಮಂತ್ರಾಲಯದಲ್ಲಿ ನಿರ್ಮಾಣ ಮಾಡಿರುವ ಕರ್ನಾಟಕ ರಾಜ್ಯದ ವಸತಿ ಗೃಹದಲ್ಲಿ ಒಟ್ಟು 50 ಕೋಣೆಗಳಿವೆ. ಇವುಗಳನ್ನು ಕರ್ನಾಟಕದಿಂದ ಬರುವ ಭಕ್ತರಿಗೆ ಮೀಸಲಿರಿಸಿದೆ. ತಲಾ ನಾಲ್ಕು ಜನರು 12 ಗಂಟೆ ಸಮಯ ವಾಸ್ತವ್ಯ ಮಾಡಲು 500 ರು. ದರ ನಿಗದಿಪಡಿಸಲಾಗಿದೆ. 12 ಗಂಟೆ ಮೀರಿದಾಗ 1000 ದರ ನಿಗದಿಪಡಿಸಲಾಗುತ್ತದೆ. ಒಟ್ಟು 50 ರೂಮ್‌ಗಳ ಪೈಕಿ 30 ರೂಮ್‌ಗಳನ್ನು ಆನಲೈನ್ ಮೂಲಕ ಹಾಗೂ ಇನ್ನುಳಿದ 20 ರೂಮ್‌ಗಳನ್ನು ನೇರವಾಗಿ ಹಣ ಪಾವತಿಸಿ ಬುಕ್ಕಿಂಗ್ ಮಾಡುವ ವ್ಯವಸ್ಥೆಗೆ ಕ್ರಮ ವಹಿಸುವುದಾಗಿ ಸಚಿವರು ತಿಳಿಸಿದರು.**

ರೈತರ ಆತ್ಮಹತ್ಯೆಗೆ ರಾಜಕಾರಣಿಗಳೇ ಕಾರಣ

ನಗರದ ಪತ್ರಿಕಾ ಭವನದಲ್ಲಿ ಶರಣಪ್ಪ ಮುರಳಿ ಅವರು ಮಾತನಾಡಿದರು.

ಸಿಂಧನೂರು: ರಾಷ್ಟ್ರ ಹಾಗೂ ರಾಜ್ಯ ರಾಜಕಾರಣಿಗಳು ಬಾಯಿ ಮಾತಿನ ಮೂಲಕ ಮಣ್ಣಿನ ಮಕ್ಕಳು ಎಂದು ಹೇಳುವ ಮೂಲಕ ರೈತರ ಆತ್ಮಹತ್ಯೆಗೆ ಕಾರಣರಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣಪ್ಪ ಮುರಳಿ ಜನ ಪ್ರತಿನಿಧಿಗಳ ವಿರುದ್ಧ ಆಕ್ರೋಶ ಹೊರ ಹಾಕಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಪ್ರಸ್ತುತ ತುಂಗಭದ್ರಾ ಜಲಾಶಯ ತುಂಬಿದ್ದು ಎಡದಂಡೆ ಕಾಲುವೆಗೆ ನೀರು ಬಿಡಲು ತೊಂದರೆ ಏನು? ಯಾಕೆ ಬಿಡುತ್ತಿಲ್ಲ. ಮುಂದಿನ ತಿಂಗಳು ನೀರು ಬಿಟ್ಟರೆ ಒಂದೇ ಸಮಯಕ್ಕೆ ರೈತರೆಲ್ಲಾ ಸಸಿ ಹಚ್ಚುವ ಕೆಲಸಕ್ಕೆ ಮುಂದಾಗಿ, ಸಸಿ ಹಚ್ಚುವವರಿಗೆ, ಟ್ರಾಕ್ಟರ್‌ಗಳಿಗೆ ಹೆಚ್ಚಿನ ಹಣ ಪಾವತಿಸಬೇಕು. ಭತ್ತ ಕಟಾವು ಸಮಯದಲ್ಲಿ ಕೂಡ ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಇದರಿಂದ ಮಾಡಿದ ಸಾಲ ಪಾವತಿಸಲಾಗದೆ ರೈತರು ಆತ್ಮಹತ್ಯೆ ಮುಂದಾಗುತ್ತಿದ್ದಾರೆ. ದೇಶದಲ್ಲಿಗ ಅರ್ಧ ಗಂಟೆಗೊಬ್ಬ ರೈತರ ಆತ್ಮಹತ್ಯೆ ಆಗುತ್ತಿದೆ. ರೈತರ ಆತ್ಮಹತ್ಯೆಯಲ್ಲಿ ಮಹಾರಾಷ್ಟ್ರ ಪ್ರಥಮವಾದರೆ, ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ತುಂಗಭದ್ರಾ ಕ್ರಸ್ಟ್ ಗೇಟ್ ಕೂಡಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ರಾಜಕಾರಣ ಮಾಡುತ್ತಿವೆ. 2019 ರಲ್ಲಿ ಪ್ರಧಾನಿ ಮೋದಿ ಸರಕಾರ ರೈತ ವಿರೋಧಿ ಕಾನೂನುಗಳನ್ನು ಜಾರಿಗೆ ತಂದಿತು. ಅದನ್ನು ಯಡಿಯೂರಪ್ಪ ಸರಕಾರ ಅಂಗಿಕಾರ ಮಾಡಿತು ಇದಕ್ಕೆ ಎಚ್.ಡಿ ಕುಮಾರಸ್ವಾಮಿ ಕೂಡ ಬೆಂಬಲಿಸಿದರು. ಗೊಬ್ಬರ ಅಂಗಡಿಗಳಲ್ಲಿ ಸ್ಟಾಕ್ ಹಾಗೂ ದರ ನಿಗದಿ ನಾಮ ಫಲಕ ಕಡ್ಡಾಯವಾಗಿ ಹಾಕಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಟಿಯಲ್ಲಿ ರಾಮಯ್ಯ ಜವಳಗೇರಾ, ನಾಗಪ್ಪ ಬೂದಿಹಾಳ ,ಯಂಕಪ್ಪ ರತ್ನಾಪುರ ಹಟ್ಟಿ, ಪರಯ್ಯ ಸ್ವಾಮಿ,ವೀರರಾಜು ಇತರರು ಉಪಸ್ಥಿತರಿದ್ದರು.

ಶಕ್ತಿ ಯೋಜನೆ ಸಂಭ್ರಮಾಚರಣೆ

ಲಿಂಗಸೂಗೂರು: ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆ 500 ಕೋಟಿ ಮಹಿಳೆಯರ ಪ್ರಯಾಣ ಯಶಸ್ವಿಯಾಗಿದ್ದು, ಪಟ್ಟಣದ ಬಸ್ ನಿಲ್ದಾಣದಲ್ಲಿ ತಾಲೂಕ ಗ್ಯಾರಂಟಿ ಯೋಜನೆ ಸಮಿತಿ ಹಾಗೂ ಕಾಂಗ್ರೆಸ್ ತಾಲೂಕ ಸಮಿತಿ ವತಿಯಿಂದ ಬಸ್‌ಗೆ ಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನಮ್ಮ ಸರಕಾರದಿಂದ 2023 ಜೂನ್ 06 ರಿಂದ ಜಾರಿಗೆ ಬಂದ ಶಕ್ತಿ ಯೋಜನೆ ಅಡಿಯಲ್ಲಿ ರಾಜ್ಯದ ಎಲ್ಲಾ ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ರವರೆಗೆ 187 ಲಕ್ಷ ಮಹಿಳಾ ಪ್ರಯಾಣಿಕರು ರು.72.90 ಕೋಟಿ ವೆಚ್ಚದಲ್ಲಿ ಪ್ರಯಾಣಿಸಿ ಯೋಜನೆಯನ್ನು ಪಡೆದಿರುತಾರೆ. ಸದರಿ ಯೋಜನೆ ಪ್ರತಿ ದಿನಾ ಸರಾಸರಿ 24600 ಮಹಿಳೆಯರು ಉಚಿತವಾಗಿ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಪ್ರತಿದಿನ 9.56 ಲಕ್ಷ ಆದಾಯ ಗಳಿಸಲಾಗುತ್ತಿದೆ.

ಈ ಯೋಜನೆ ಪೂರ್ವದಲ್ಲಿ 118 ಅನುಸೂಚಿಗಳು ಇದ್ದು. ಈ ಯೋಜನೆ ಅನುಷ್ಠಾನದ ನಂತರ 131 ಅನುಸೂಚಿಗಳು ಆಗಿ ಒಟ್ಟು 13 ಅನುಸೂಚಿಗಳು ಹೆಚ್ಚಾಗಿರುತ್ತದೆ. ಯೋಜನೆ ಪೂರ್ವದಲ್ಲಿ 569 ಟ್ರಿಪ್‌ಗಳು ಇದ್ದು. ಯೋಜನೆ ಅನುಷ್ಠಾನದ ನಂತರ 703 ಟ್ರಿಪ್‌ಗಳು ಆಗಿ ಒಟ್ಟು 134 ಟ್ರಿಪ್‌ಗಳು ಹೆಚ್ಚಾಗಿರುತ್ತವೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವೆಂಕಟೇಶ ಗುತ್ತೇದಾರ ಹೇಳಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಕೆಪಿಸಿಸಿ ಪದವೀಧರ ಜಿಲ್ಲಾಧ್ಯಕ್ಷ ಸಂಜೀವಪ್ಪ ಚಲವಾದಿ, ಗ್ಯಾರಂಟಿ ಯೋಜನೆಯ ಸದಸ್ಯರಾದ ಗದ್ದೆನಗೌಡ ಪಾಟೀಲ್, ಮಲ್ಲಿಕಾರ್ಜುನ ಪಾಟೀಲ ಭೂಪುರ, ನ್ಯಾಮತುಲ್ಲಾ ಖಾದ್ರಿ, ಶಾಂತಮ್ಮ ಹಣಿಗಿ, ಲಕ್ಷ್ಮಿದೇವಿ, ಸೇರಿದಂತೆ ಪಕ್ಷದ ಮುಖಂಡರು, ಪ್ರಯಾಣಿಕರು ಭಾಗವಹಿಸಿದ್ದರು.

ಪಟ್ಟಣದ ಬಸ್ ನಿಲ್ದಾಣದಲ್ಲಿ ತಾಲೂಕ ಗ್ಯಾರಂಟಿ ಯೋಜನೆ ಸಮಿತಿ ಬಸ್ ಗೆ ಪೂಜೆ ಕಾರ್ಯಕ್ರಮವನ್ನು ನಡೆಸಿದರು.

ಗ್ರಾಮೀಣದಲ್ಲಿ ಸಾಹಿತ್ಯ ಸಂಸ್ಕೃತಿ ಉಳಿಸಿ

ಬಳ್ಳಾರಿ: ನಾಡಿನ ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಗ್ರಾಮೀಣ ಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅವಶ್ಯಕತೆಯಿದೆ ಎಂದು ಹಿರಿಯ ರಂಗಭೂಮಿ ಕಲಾವಿದೆ ಬಿ. ವೀಣಾ ಕುಮಾರಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮಸಾಗರ ಸಂಯುಕ್ತಾಶ್ರಯದಲ್ಲಿ ಕಂಪ್ಲಿ ತಾಲೂಕಿನ ರಾಮಸಾಗರ ಸ.ಹಿ.ಪ್ರಾ.ಶಾಲೆ ಆವರಣದಲ್ಲಿ ಏರ್ಪಡಿಸಿದ್ದ 'ಸೌರಭ ಸಾಂಸ್ಕೃತಿಕ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಮಕ್ಕಳು ತಮ್ಮಲ್ಲಿನ ಕಲಾ ಪ್ರತಿಭೆಗಳನ್ನು ಹೊರ ಹಾಕಬೇಕು. ಸಾಂಸ್ಕೃತಿಕವಾಗಿ ದೇಶಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ರಾಮಸಾಗರ ಗ್ರಾಪಂ ಅಧ್ಯಕ್ಷರಾದ ಎಮ್. ಆಶಾ ಮಾತನಾಡಿ, ರಾಮಸಾಗರದಲ್ಲಿ ಅನೇಕ ಜಾನಪದ ಕಲಾವಿದರು ಮತ್ತು ವಿದ್ವಾಂಸರನ್ನು ಹೊಂದಿದ್ದು, ನಾಡಿಗೆ ಅನನ್ಯ ಕೂಡುಗೆಯನ್ನು ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ರಾಮಸಾಗರ ಆರ್.ಎಂ ರಾಮಯ್ಯ, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ ಅಧ್ಯಕ್ಷರಾದ ಎಂ. ಪ್ರಶಾಂತ್, ರಂಗಭೂಮಿ ಕಲಾವಿದೆ ಎ.ವರಲಕ್ಷ್ಮೀ, ಹಿರಿಯ ನೃತ್ಯ ಕಲಾವಿದರಾದ ವನಮಾಲ ಕುಲಕರ್ಣಿ, ಸೀತಾ ಚಪ್ಪರ್ ಸೇರಿದಂತೆ ಶಾಲಾ ಶಿಕ್ಷಕರು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

> **ಕರ್ನಾಟಕವು ರಂಗ ಕಲೆಯ ಶ್ರೀಮಂತ ನೆಲೆಯಾಗಿದ್ದು, ಇದಕ್ಕೆ ಪ್ರಾಚೀನ ಇತಿಹಾಸವಿದೆ. ಗ್ರಾಮೀಣ ಭಾಗದ ಎಲ್ಲಾ ಕಲಾವಿದರು ಇಂತಹ ಕಾರ್ಯಕ್ರಮಗಳ ವೇದಿಕೆಯನ್ನು ಸದುಪಯೋಗ ಪಡೆಸಿಕೊಂಡು ತಮ್ಮಲ್ಲಿರುವ ಕಲೆಯನ್ನು ಹೊರಹಾಕಬೇಕು.**
> -ಬಿ.ನಾಗರಾಜ, ಕನ್ನಡ,ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ



ಕ್ವಾಂಟಮ್ ಕಣಿವೆಯತ್ತ ಆಂಧ್ರ ದಾಪುಗಾಲು

ವಿಜ್ಞಾನ-ತಂತ್ರಜ್ಞಾನ ಕ್ಷೇತ್ರ ಅಗಾಧವಾಗಿ ಬೆಳೆಯುತ್ತಿದೆ. ಕಲ್ಪನೆಗೂ ಎಟುಕದ ರೀತಿಯಲ್ಲಿ ತಂತ್ರಜ್ಞಾನದಲ್ಲಿ ಮುನ್ನುಗ್ಗುತ್ತಿದೆ. ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನ ಚಾಟ್‌ಜಿಪಿಟಿ ಪಾರಮ್ಯ ಮೆರೆಯುತ್ತಿದೆ. ಸದ್ಯ ಜಗತ್ತಿನ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಅಪಾರ ಕುತೂಹಲ ಹುಟ್ಟಿಸಿರುವ 'ಕ್ವಾಂಟಮ್ ಕಂಪ್ಯೂಟರ್'ನಲ್ಲಿ ಅಧಿಪತ್ಯ ಸಾಧಿಸಲು ಚೀನಾ, ಅಮೆರಿಕ, ಜಪಾನ್, ಭಾರತ ಸೇರಿ ಹಲವು ರಾಷ್ಟ್ರಗಳು ಅವಿರತ ಆವಿಷ್ಕಾರ ಕೈಗೊಂಡಿವೆ. ಗಗನ ಕುಸುಮ ಕ್ವಾಂಟಮ್ ಕಂಪ್ಯೂಟರ್ ಕೈಗೆ ಎಟಕಿದರೆ ಜಗತ್ತನ್ನೇ ಗೆದ್ದಂತೆ ಎನ್ನಲಾಗುತ್ತಿದೆ. ಏನಿದು ಕ್ವಾಂಟಮ್ ಕಂಪ್ಯೂಟಿಂಗ್? ಸಾಧಕ-ಬಾಧಕಗಳೇನು? ಮೈಕ್ರೋಸಾಫ್ಟ್, ಗೂಗಲ್, ಐಬಿಎಂನಂತಹ ಬೃಹತ್ ಕಂಪನಿಗಳು ಕ್ವಾಂಟಮ್ ಕಂಪ್ಯೂಟಿಂಗ್ ಅಭಿವೃದ್ಧಿಗೆ ಯಾಕೆ ಉತ್ತೇಜನ ನೀಡುತ್ತಿವೆ ಎನ್ನುವುದನ್ನು ತಿಳಿಯೋಣ.

ಕರಿಯಪ್ಪ ಹೆಗ್ಗಡದಿನ್ನಿ

ಕ್ವಾಂಟಮ್ ಸಿದ್ಧಾಂತ ಹೊಸದೇನು ಅಲ್ಲ. ಫಿಸಿಕ್ಸ್, ಕೆಮಿಸ್ಟ್ರಿ ಮ್ಯಾಥ್ಸ್, ಬಯಾಲಜಿ ಎಲ್ಲ ಕ್ಷೇತ್ರಗಳಲ್ಲೂ ಈಗಾಗಲೇ ಕ್ವಾಂಟಮ್ ತನ್ನ ಛಾಪನ್ನು ಮೂಡಿಸಿದೆ. ಹೈಟೆಕ್ ಆಸ್ಪತ್ರೆಗಳ ಎಮ್ ಆರ್‌ಐ ಸ್ಕ್ಯಾನಿಂಗ್ ಯಂತ್ರ, ನಮ್ಮ ಮೊಬೈಲ್‌ನಲ್ಲಿರುವ ಟ್ರಾನ್ಸಿಸ್ಟರ್‌ಗಳು, ಜಿಪಿಎಸ್ ಸಾಧನ ಮತ್ತು ಗುಪ್ತಕೀಲಿಗಳು ಕ್ವಾಂಟಮ್ ತತ್ವಗಳನ್ನೇ ಆಧರಿಸಿದೆ. ಆದರೆ ಇವೆಲ್ಲ ಕ್ವಾಂಟಮ್‌ನ ಬೆರಳೆಣಿಕೆ ಸಾಧನೆ ಅಷ್ಟೆ. ಈಗಾಗಲೇ ಕ್ವಾಂಟಮ್ ಕಂಪ್ಯೂಟರ್ ಮೇಲೆ ಅಧಿಪತ್ಯ ಸಾಧಿಸಲು ಟೆಕ್ ಜಗತ್ತಿನ ದೈತ್ಯ ಎಮ್‌ಎನ್‌ಸಿ ಕಂಪನಿಗಳು ಭಾರೀ ಪೈಪೋಟಿ ನಡೆಸಿವೆ. ಈ ಕ್ಷೇತ್ರದಲ್ಲಿ ಶತಕೋಟಿ ಡಾಲರ್‌ಗಟ್ಟಲೇ ಬಂಡವಾಳ ಹೂಡಿಕೆ ಮಾಡಲಾಗಿದೆ. ಖಾಸಗಿ ಕಂಪನಿಯ ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲೂ ಕ್ವಾಂಟಮ್ ಪಾರ್ಕ್ ನಿರ್ಮಾಣ ಮಾಡಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಈ ಮೂಲಕ ಬೆಂಗಳೂರನ್ನು ಕ್ವಾಂಟಮ್ ಹಬ್ ಮಾಡುವ ಗುರಿ ಇದೆ. ಈ ನಿಟ್ಟಿನಲ್ಲಿ ಜುಲೈ 31 ರಂದು ಬೆಂಗಳೂರಿನಲ್ಲಿ ಕ್ವಾಂಟಮ್ ಇಂಡಿಯಾ ಸಮಾವೇಶ ನಡೆಯಲಿದೆ.

ಕಂಪ್ಯೂಟರ್ ಬೆಳೆದು ಬಂದ ಪರಿ

ನಾವೆಲ್ಲ 4 ತಲೆಮಾರು ದಾಟಿ 5ನೇ ತಲೆಮಾರಿನ ಎಐ ಆಧಾರಿತ ಸೂಪರ್ ಕಂಪ್ಯೂಟರ್‌ಗಳನ್ನು ಬಳಕೆ ಮಾಡುತಿದ್ದೇವೆ. ಸದ್ಯ ನಾವು ಬಳಕೆ ಮಾಡುತ್ತಿರುವ ಡೆಸ್ಕ್‌ಟಾಪ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಸ್ಮಾರ್ಟ್ ಫೋನ್ ಸಾಧನಗಳು 5ನೇ ತಲೆಮಾರಿನ ತಂತ್ರಜ್ಞಾನ ಆಧಾರಿತ ಆಗಿವೆ. ನಮ್ಮ ಆಫೀಸ್ ಹಾಗೂ ಮನೆಗಳಲ್ಲಿ ವೈಯಕ್ತಿಕ ಕೆಲಸಗಳಿಗೆ 4ನೇ ತಲೆಮಾರಿನ ಮೈಕ್ರೋ ಕಂಪ್ಯೂಟರ್‌ಗಳನ್ನೇ ಬಳಕೆ ಮಾಡುತ್ತಿದ್ದೇವೆ.

5ನೇ ತಲೆಮಾರಿನ ಸೂಪರ್ ಕಂಪ್ಯೂಟರ್‌ಗಳನ್ನು ಖಗೋಳ ಶಾಸ್ತ್ರ, ದತ್ತಾಂಶ ವಿಶ್ಲೇಷಣೆ, ರೋಬೋಟ್ ವಿನ್ಯಾಸ, ಹವಾಮಾನ ಮುನ್ಸೂಚನೆ, ದತ್ತಾಂಶ ಲೆಕ್ಕಾಚಾರ ಹಾಗೂ ಗೂಗಲ್, ಮೈಕ್ರೋಸಾಫ್ಟ್‌ನಲ್ಲಿ ಟ್ರಾನಿಸ್ಟರ್‌ಗಳ ನಿರ್ವಹಣೆಗೆ ಮಾತ್ರ ಬಳಕೆ ಮಾಡಲಾಗುತ್ತಿದೆ. ಸೂಪರ್‌ಕಂಪ್ಯೂಟರ್‌ಗಳು ವಿಶ್ವದ ಅತ್ಯಂತ ಶಕ್ತಿಶಾಲಿ, ಗಾತ್ರದಲ್ಲಿ ಬಹಳ ದೊಡ್ಡ ಮತ್ತು ಅತ್ಯಂತ ದುಬಾರಿ ಕಂಪ್ಯೂಟರ್‌ಗಳಾಗಿವೆ. ಅತಿ ಹೆಚ್ಚಿನ ಸಂಗ್ರಹ ಸಾಮರ್ಥ್ಯವನ್ನು ಹೊಂದಿದ್ದು, ಮೈಕ್ರೋ ಕಂಪ್ಯೂಟರ್‌ಗಿಂತ ಸಾವಿರಾರು ಪಟ್ಟು ಹೆಚ್ಚು ಡೇಟಾವನ್ನು ಸಂಗ್ರಹಿಸಬಹುದು. ಮುಂಬರುವ ವರ್ಷಗಳಲ್ಲಿ ಅತ್ಯಾಧುನಿಕ ಕ್ವಾಂಟಮ್ ಕಂಪ್ಯೂಟರ್‌ಗಳದ್ದೇ ಜಾಯಮಾನ. ಆದರೆ ಸದ್ಯ ಆವಿಷ್ಕಾರ ಹಂತದಲ್ಲಿರುವ ಕ್ವಾಂಟಮ್ ಕಂಪ್ಯೂಟರ್‌ಗಳು, ಸೂಪರ್ ಕಂಪ್ಯೂಟರ್‌ಗಳಿಗಿಂತ 2 ಸಾವಿರ ಪಟ್ಟು ವೇಗದಲ್ಲಿ ಕಾರ್ಯನಿರ್ವಹಿಸಲಿವೆ. ಅದಕ್ಕಾಗಿಯೇ ಕ್ವಾಂಟಮ್ ಕಂಪ್ಯೂಟರ್‌ಗಳ ಆವಿಷ್ಕಾರಕ್ಕೆ ಭಾರೀ ಪೈಪೋಟಿ ಏರ್ಪಟ್ಟು, ಈ ಕ್ಷೇತ್ರದಲ್ಲಿ ಶತಕೋಟಿ ಡಾಲರ್ ಹೂಡಿಕೆ ಮಾಡಲಾಗಿದೆ.

ಮಾಡುತ್ತಿದ್ದೇವೆ. ಆದರೆ ಅವುಗಳೆಲ್ಲ ಒಂದೇ ಸಿದ್ಧಾಂತ, ಒಂದೇ ಮೆಕಾನಿಸಮ್ ಮೇಲೆ ಕಾರ್ಯನಿರ್ವಹಿಸುತ್ತಿವೆ. ಸಾಂಪ್ರದಾಯಿಕ ಕಂಪ್ಯೂಟರ್‌ಗಳು (5ನೇ ತಲೆಮಾರಿನ ಕಂಪ್ಯೂಟರ್‌ಗಳು) ಬಿಟ್ ಸಿದ್ಧಾಂತದಲ್ಲಿ ಕಾರ್ಯನಿರ್ವಹಿಸುತ್ತವೆ. ಕ್ವಾಂಟಮ್ ಕಂಪ್ಯೂಟರ್ ಕ್ವಿಟ್ ಮೆಕಾನಿಸಮ್ ಮೇಲೆ ಕಾರ್ಯನಿರ್ವಹಿಸುತ್ತದೆ. ಬಿಟ್ ಆಧಾರಿತ ಸಾಂಪ್ರದಾಯಿಕ ಕಂಪ್ಯೂಟರ್ ಸಂಭವನೀಯತೆಯನ್ನು ನಿಖರವಾಗಿ ಹೇಳಿದರೆ, ಕ್ವಾಂಟಮ್ ಸಿದ್ಧಾಂತ ಆಧಾರಿತ ಕಂಪ್ಯೂಟರ್ ಇದರ ಇನ್ನೊಂದು ಆಯಾಮವನ್ನೂ ತೆರೆದಿಡುವಷ್ಟು ಸಮರ್ಥವಾಗಿದೆ. ಖಗೋಳ ಕ್ಷೇತ್ರ, ವೈದ್ಯಕೀಯ ಕ್ಷೇತ್ರ, ಹವಾಮಾನ ವೈಪರೀತ್ಯ, ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಲ್ಲಿ ಈಗಿರುವ ಆವಿಷ್ಕಾರಗಳ ಹೊರತಾಗಿ ಇನ್ನೂ ಹೆಚ್ಚಿನದ್ದು ಏನನ್ನೋ ಆವಿಷ್ಕರಿಸಬಹುದು ಎನ್ನುವ ಸಂಭವನೀಯತೆ ಆಧಾರದ ಮೇಲೆ ಕ್ವಾಂಟಮ್ ಕಂಪ್ಯೂಟರ್ ಅನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಒಂದು ಸೂಪರ್ ಕಂಪ್ಯೂಟರ್ ಮಾಡುವ ಕೆಲಸವನ್ನು ಕ್ವಾಂಟಮ್ ಕಂಪ್ಯೂಟರ್ 2 ಸಾವಿರ ಪಟ್ಟು ಹೆಚ್ಚು ವೇಗದಲ್ಲಿ ಮಾಡಲಿದೆ ಎಂದರೆ ಅದರ ವೇಗವನ್ನು ಊಹಿಸಬಹುದು.

ಹೇಗಿದೆ ಕ್ವಾಂಟಮ್ ಕಂಪ್ಯೂಟರ್?

ಐಷಾರಾಮಿ ಬಂಗಲೆಗಳಲ್ಲಿ, ರೆಸ್ಟೋರೆಂಟ್‌ಗಳಲ್ಲಿ, ಚರ್ಚ್‌ಗಳಲ್ಲಿ ಟೆರೆಸ್‌ನಿಂದ ತೂಗು ಬಿಟ್ಟಿರುವ ಬಲೆ ಬಾಳುವ ಗಾಜಿನ ದೀಪವನ್ನೇ ಹೋಲುವ ಯಂತ್ರಾಗಾರದ ಆಕಾರದಲ್ಲಿದೆ ಸೂಪರ್ ಕಂಪ್ಯೂಟರ್. ಆದರೆ ಇಲ್ಲಿ ಗಾಜಿನ ಬದಲು ಚಿನ್ನ, ಟೈಟಾನಿಯಂ, ನಿಯೋಬಿಯಂ, ರುಬೀಡಿಯಂ, ಟಂಟಾಲಮ್ ಮುಂತಾದ ಭಾರೀ ಬೆಲೆಬಾಳುವ ಲೋಹಗಳ ಗೊಂಚಲು, ಜತೆಗೆ ಆಪ್ಟಿಕಲ್ ಫೈಬರ್‌ನ ಬೆಳ್ಳಿಯ ದಾರಗಳನ್ನು ನೋಡಬಹುದು. ಇಲ್ಲಿ ಮೇಲಿನ ಸ್ತರದಲ್ಲಿ ಸಾಮಾನ್ಯ ಉಷ್ಣತೆ ಇದ್ದರೆ ಕೆಳಕ್ಕೆ ಬಂದಂತೆ ಹೀಲಿಯಂ ದ್ರವದಲ್ಲಿ ಶಾಖ ಕಡಿಮೆ ಆಗುತ್ತ ಬರುತ್ತದೆ. ಕೆಳಗಿನ ತುತ್ತ ತುದಿಯ ಮೂತಿಯಲ್ಲಿ ನಿಖರ ಶೂನ್ಯದ ಅತಿಘೋರ ಚಳಿಯಲ್ಲಿ (ಮೈನಸ್ 273.14 ಡಿಗ್ರಿ ಸೆ) ಕ್ವಾಂಟಮ್ ಕಣಗಳು ನರ್ತಿಸುತ್ತವೆ. ಅವುಗಳನ್ನು ಕ್ಯೂಬಿಟ್‌ಗಳಾಗಿ ಪರಿವರ್ತಿಸಿ ಕ್ವಾಮಟ್ ಕಂಪ್ಯೂಟರ್ ಮೆಕಾನಿಸಮ್‌ಗೆ ಬದಲಾಯಿಸಲಾಗುತ್ತದೆ. ಇಂತಹ ಮಹಾಕ್ರಾಂತಿಯಲ್ಲಿ ಆರಂಭದ ಹೆಜ್ಜೆಗಳನ್ನಿಡಲು ಭಾರತ, ಅಮೆರಿಕ, ಚೀನಾ, ಜರ್ಮನಿ, ಜಪಾನ್, ಕೆನಡಾ ಸೇರಿ ಹಲವು ದೇಶಗಳು ಹವಣಿಸುತ್ತಿವೆ. ಐಬಿಎಮ್, ಗೂಗಲ್, ಮೈಕ್ರೊಸಾಫ್ಟ್ ಮುಂತಾದ ಕಂಪನಿಗಳು ಸಹ ತಮ್ಮ ಮುದ್ರೆ ಹೊತ್ತಲು ಅವಿರತ ಪ್ರಯತ್ನ ನಡೆಸಿವೆ. ಅಮೆರಿಕ ಮತ್ತು ಚೀನಾದ ದಾಪುಗಾಲು ಗಮನಿಸಿದರೆ ಭಾರತ ಈ ಕ್ಷೇತ್ರದಲ್ಲಿ ಇನ್ನೂ ಅಂಬೆಗಾಲಿಡುತ್ತಿದೆ.

ಇದರಿಂದ ಏನು ಉಪಯೋಗ?

ವೈದ್ಯಕೀಯ ಕ್ಷೇತ್ರ

ಕ್ಯಾನ್ಸರ್ ರೋಗಕ್ಕೆ ನಿರ್ದಿಷ್ಟ ಔಷಧಿ ಕಂಡು ಹಿಡಿಯುವುದು ವೈದ್ಯಕೀಯ ಕ್ಷೇತ್ರಕ್ಕೆ ಇಂದಿಗೂ ಕಗ್ಗಂಟಾಗಿದೆ. ಕ್ಯಾನ್ಸರ್ ರೋಗಕ್ಕೆ, ಮರೆಗುಳಿ ಕಾಯಿಲೆಗೆ ಖಚಿತ ಔಷಧ ಕಂಡು ಹಿಡಿಯಲು ಕ್ವಾಂಟಮ್ ಕಂಪ್ಯೂಟರ್ ಸಹಾಯಕ ಆಗಲಿದೆ.

ಮಿಲಿಟರಿ ಕ್ಷೇತ್ರ

ಮಿಲಿಟರಿ ಕ್ಷೇತ್ರ ಸಾಕಷ್ಟು ಅಭಿವೃದ್ಧಿಯಾದರೂ ಒಂದು ದೇಶಗಳಿಂದ ಇನ್ನೊಂದು ದೇಶಕ್ಕೆ ರವಾನೆ ಆಗುವ ಗುಪ್ತ ಸಂದೇಶಗಳನ್ನು ಪತ್ತೆ ಮಾಡಲು ಆಗುತ್ತಿಲ್ಲ. ಕ್ವಾಂಟಮ್ ಕಂಪ್ಯೂಟರ್‌ನಿಂದ ಗುಪ್ತ ಸಂದೇಶಗಳನ್ನು ಪತ್ತೆ ಮಾಡಬಹುದು.

ಹವಾಮಾನ ವೈಪರಿತ್ಯ

ಭೂಕಂಪ, ಸುನಾಮಿ, ಪ್ರಳಯ, ಜಾಗತಿಕ ತಾಪಮಾನ ಏರಿಕೆಯನ್ನು ತಡೆಗಟ್ಟುವ ಉಪಾಯವನ್ನೂ ಈ ಕಂಪ್ಯೂಟರ್ ಮೊದಲೆ ತಿಳಿಸಲಿದೆ.

ಕೃಷಿಯಲ್ಲಿ ಭಾರೀ ಅಭಿವೃದ್ಧಿ

ಮುಂದಿನ ಸುಮಾರು 100 ವರ್ಷಗಳಲ್ಲಿ ಭೂಮಿ ಹೇಗೆ ಬದಲಾಗಬಹುದು. ವಾತಾವರಣ ಹೇಗಿರಬಹುದುದು ಎಂಬುದನ್ನು ನಿಖರವಾಗಿ ಅದಕ್ಕೆ ಹೊಂದಿಕೆ ಆಗುವ ಬೆಳೆ-ತಳಿಗಳನ್ನು ಅಭಿವೃದ್ಧಿ ಮಾಡಲು ಕ್ವಾಂಟಮ್ ಕಂಪ್ಯೂಟರ್ ಸಹಾಯ ಮಾಡುತ್ತದೆ. ಅಲ್ಲದೇ ಈಗಿರುವ ಅತ್ಯಾಧುನಿಕ ನ್ಯಾನೋ ಗೊಬ್ಬರಕ್ಕೆ ಪರ್ಯಾಯ ರಾಸಾಯನಿಕ ಬಳಸಿ ಕ್ವಾಂಟಮ್ ಗೊಬ್ಬರವನ್ನು ತಯಾರು ಮಾಡಬಹುದು.

ಎಐಗೆ ಇನ್ನಷ್ಟು ಬಲ

ಜಗತ್ತನ್ನು ತನ್ನ ಮುಷ್ಠಿಗೆ ತೆಗೆದುಕೊಳ್ಳುತ್ತಿರುವ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ದೈತ್ಯನಿಗೆ ಕ್ವಾಂಟಮ್ ಕಂಪ್ಯೂಟರ್ ಇನ್ನಷ್ಟು ಶಕ್ತಿ ಆಗಲಿದೆ. ಮುಂದಿನ ದಿನಗಳಲ್ಲಿ ಎಐ ಹೇಗೆ ಚಿಂತನೆ ನಡೆಸಬೇಕು ಎಂಬುದನ್ನು ಇದು ಕರಾರುವಕ್ಕಾಗಿ ತಿಳಿಸುವುದರಿಂದ ಪ್ರಪಂಚವನ್ನು ಆಳ್ವಿಕೆ ಮಾಡಲು ಎಐಗೆ ಸಹಾಯ ಮಾಡಲಿದೆ.



ಏನಿದು ಕ್ವಾಂಟಮ್ ಚಿಪ್ ಅಳವಡಿಸಿದ ಕಂಪ್ಯೂಟರ್?

ಪ್ರತಿ ವಸ್ತು ಅಣುಗಳಿಂದ ನಿರ್ಮಾಣವಾಗಿದೆ. ಈ ಅಣುಗಳು ಪ್ರೋಟಾನ್, ನ್ಯೂಟ್ರಾನ್ ಮತ್ತು ಇವು ಗಳ ಸುತ್ತ ವೇಗವಾಗಿ ಸುತ್ತುತ್ತಿರುವ ಎಲೆಕ್ಟ್ರಾನ್‌ಗಳಿವೆ. ಈ ಎಲೆಕ್ಟ್ರಾನ್‌ಗಳು ಒಂದು ಶಕ್ತಿಯನ್ನು ಹೊಂದಿರು ತ್ತವೆ. ಇದನ್ನೇ ಕ್ವಾಂಟಂ ಎನ್ನುತ್ತಾರೆ. ಇದನ್ನು ಆಧರಿಸಿ ಈ ಕಂಪ್ಯೂಟರ್‌ಗಳು ಕೆಲಸ ಮಾಡುವುದರಿಂದ ಶಕ್ತಿ ಶಾಲಿ ಎನಿಸಿವೆ. ಸಾಮಾನ್ಯ ಕಂಪ್ಯೂಟರ್‌ನಂತೆ ಬಿಟ್‌ಗಳ (0 ಮತ್ತು 1 ಬಳಕೆ) ಬದಲಿಗೆ ಇದು ಕ್ಯೂಬಿಟ್ ಗಳನ್ನು ಬಳಸು ತ್ತದೆ. ಬಿಟ್‌ಗಳು ನಿರ್ದಿಷ್ಟವಾಗಿ 0 ಅಥವಾ 1 ಮಾತ್ರ ಆಗಿರುತ್ತವೆ. ಆದರೆ, ಕ್ಯೂಬಿಟ್‌ಗಳು ಒಂದೇ ಸಮಯದಲ್ಲಿ0 ಮತ್ತು 1 ಎರಡೂ ಆಗಿರುತ್ತವೆ. ಇದು ಕ್ವಾಂಟಂನ ಸೂಪರ್ ಪೊಸಿಷ ನಿಂಗ್‌ನಿಂದ ಸಾಧ್ಯವಾಗುತ್ತದೆ. ಎಲೆಕ್ಟ್ರಾನ್ ಚಲನೆಯ ವೇಗ ಎಷ್ಟಿರುತ್ತದೆ ಎಂದರೆ ಮಧ್ಯದಲ್ಲಿ ಖಾಲಿ ಜಾಗ ಮುಟ್ಟುವುದು ಸಾಧ್ಯವೇ ಇಲ್ಲ. ಕ್ಯೂಬಿಟ್ ಗಳನ್ನು ಇದರಿಂದ ತಯಾರಿಸುವು ದರಿಂದ ಇದು ಏಕಕಾಲದಲ್ಲಿ0 ಮತ್ತು 1 ಆಗುತ್ತದೆ. ಹೀಗಾಗಿ ಕ್ವಾಂಟಮ್ ಚಿಪ್ ಅಳವಡಿಸಿದ ಕಂಪ್ಯೂಟರ್ ಅತ್ಯಂತ ವೇಗವಾಗಿ ಯೋಚಿಸಬಲ್ಲದು.

ಹೇಗಿದೆ ಕ್ವಾಂಟಮ್ ಕಂಪ್ಯೂಟರಿಂಗ್ ಸಿದ್ಧಾಂತ?

ಫೆಸ್‌ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಮ್‌ಗಳನ್ನು ಮೇಟಾ ತಂತ್ರಜ್ಞಾನ ಆಧರಿಸಿ ರಚನೆ ಮಾಡಲಾಗಿದೆ. ಈ ಮೆಟಾ ತಂತ್ರಜ್ಞಾನದಿಂದಲೇ ದತ್ತಾಂಶ ಸಂಗ್ರಹಣೆ, ಫೋಟೊ, ವಿಡಿಯೊ, ಸಂದೇಶಗಳನ್ನು ಕಳಿಸಬಹುದು. ಮೊಬೈಲ್‌ಗಳನ್ನು ಆ್ಯಂಡ್ರಾಯ್ಡ್ ಸಿದ್ಧಾಂತದ ಮೇಲೆ ರಚನೆ ಮಾಡಲಾಗಿದೆ. ನಾನಾ ಕಂಪನಿಗಳ ಸ್ಮಾರ್ಟ್‌ಫೋನ್‌ಗಳನ್ನು ಬಳಕೆ



ಕ್ವಾಂಟಮ್ ವ್ಯಾಲಿಯಾಗಲಿದೆ ಅಮರಾವತಿ

ಬೆಂಗಳೂರು ಭಾರತದ ಸಿಲಿಕ್ಯಾನ್ ವ್ಯಾಲಿ ಬಿರುದು ಪಡೆದ ಹಾಗೆ ಆಂಧ್ರಪ್ರದೇಶದ ಅಮರಾವತಿ ಕ್ವಾಂಟಮ್ ವ್ಯಾಲಿಯಾಗಿ ರೂಪುಗೊಳ್ಳುತ್ತಿದೆ. ಅಲ್ಲಿ ಐಬಿಎಮ್, ಟಿಸಿಐ ಮತ್ತು ಎಲ್‌ಎಂಡ್‌ಟಿ ಕಂಪನಿಗಳು ಜಂಟಿಯಾಗಿ ಕ್ವಾಂಟಮ್ ಕಂಪ್ಯೂಟರ್ ಸಂಕೀರ್ಣವನ್ನು ನಿರ್ಮಿಸುತ್ತಿವೆ. ಶತಕೋಟಿ ಡಾಲರ್ ಬಂಡವಾಳದಲ್ಲಿ ಅಲ್ಲಿ ಈ ರಂಗದ ಸಂಶೋಧನೆ, ತರಬೇತಿ ಮತ್ತು ಶಿಕ್ಷಣ ವ್ಯವಸ್ಥೆ ಅಸ್ತಿತ್ವಕ್ಕೆ ಬರುತ್ತಿದೆ. ಕ್ವಾಂಟಮ್ ವ್ಯವಸ್ಥೆಗೆ ಬೇಕಾದ ವಿಶೇಷ ಬಗೆಯ ಚಿಪ್ ಮತ್ತು ಸೈಬರ್ ಜಾಲವೂ ಅಲ್ಲಿ ಸೃಷ್ಟಿಯಾಗಲಿವೆ. ಆರಂಭದಲ್ಲಿ ಇಪ್ಪತ್ತು ನವೋದ್ಯಮ ಕಂಪನಿಗಳು ಈ ಕ್ವಾಂಟಮ್ ಕಣಿವೆಯಲ್ಲಿ ಕಾಲೂರಲಿವೆ. ಕ್ರಮೇಣ ನೂರು ಕಂಪನಿಗಳಿಗೆ ಜಾಗ ಸಿಗಲಿದೆ. 2026ರಿಂದ ಪ್ರತಿವರ್ಷವೂ ಅಲ್ಲಿ ಜಾಗತಿಕ ಕ್ವಾಂಟಮ್ ಎಕ್ಸ್‌ಪೋ ನಡೆಯಲಿದ್ದು, 2035ರ ಹೊತ್ತಿಗೆ ಅಮರಾವತಿ ಕ್ವಾಂಟಮ್ ಕ್ಯಾಪಿಟಲ್ ಎನ್ನಿಸಿಕೊಳ್ಳಲಿದೆ. ಚಂದ್ರಬಾಬು ನಾಯ್ಡು ಅವರ ಈ ಮಹಾಕನಸಿಗೆ ಕೇಂದ್ರ ಸರಕಾರವೂ ನೀರೆರೆಯುತ್ತಿದ್ದು, ಇದಕ್ಕೆಂದು ಅನೇಕ ರಾಷ್ಟ್ರಗಳಿಂದ ಬಂಡವಾಳ ಹರಿದು ಬರಲಿದೆ. ಕರ್ನಾಟಕ ಸರಕಾರ ಚುರುಕಾಗಿ ಯೋಜನೆಯನ್ನು ರೂಪಿಸಿದ್ದಿದ್ದರೆ ಸಿಲಿಕಾನ್ ಸಿಟಿ ಮಾದರಿಯಲ್ಲಿ ಕ್ವಾಂಟಮ್ ಸಿಟಿಯಾಗಿಯೂ ಮೆರೆಯಬಹುದಿತ್ತು. ಇದೇ 31 ರಂದು ಕ್ವಾಂಟಮ್ ಸಮ್ಮೇಳನ ನಮ್ಮ ಬೆಂಗಳೂರಿನಲ್ಲಿ ನಡೆಯುತ್ತಿದೆ. ಇದು ಯಶಸ್ವಾಗಲಿ ಎಂದು ಆಶಿಸೋಣ.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಮಕ್ಕಳ ರಕ್ಷಣೆ, ಮಾಲೀಕರ ವಿರುದ್ಧ ಪ್ರಕರಣ ದಾಖಲು

ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ಇನ್ನೂ ಜೀವಂತ

ಜಿಲ್ಲಾ ನೋಟ

ಚನ್ನಬಸವ ಮೋಕ್ತೆದಾರ

ಬೀದರ: ಜಿಲ್ಲೆಯಲ್ಲಿ ಬಾಲಕಾರ್ಮಿಕ ನಿಷೇಧ ಕಾಯಿದೆ ಜಾರಿಯಲ್ಲಿದ್ದರೂ ಕೆಲಸಕ್ಕಾಗಿ ಮಕ್ಕಳ ಬಳಕೆ ಹೆಚ್ಚಾಗುತ್ತಿರುವ ಪ್ರಕರಣ ಬೆಳಕಿಗೆ ಬರುತ್ತಿವೆ. ಕಾರ್ಮಿಕ ಇಲಾಖೆಯು ಕೈಗೊಂಡಿರುವ ಜಾಗ್ರತಿ ಜಾಥಾ ಜನರಲ್ಲಿ ಪರಿಣಾಮಕಾರಿಯಾಗಿ ಯಾವುದೇ ಪ್ರಭಾವ ಬೀರುತ್ತಿಲ್ಲ ಎನ್ನುವ ಆರೋಪ ಕೇಳಿ ಬರುತ್ತಿದೆ. ಮಕ್ಕಳು ಶಿಕ್ಷಣ ಪಡೆಯುವ ವಯಸ್ಸಿನಲ್ಲೇ ಅಂಗಡಿಗಳು ಹಾಗೂ ಹೋಟೆಲ್. ಬೇಕರಿ. ಜ್ಯೂಸ್ ಸೆಂಟರ್ ಹಾಗೂ ಚಾರ್ಟ್ ಭಂಡಾರ ಸೇರಿದಂತೆ ಗ್ಯಾರೇಜ್ ಗಳಲ್ಲಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲಿಕರ ವಿರುದ್ಧ ಪ್ರಕರಣ ಸೇರಿದಂತೆ ದಂಡ ವಿಧಿಸಿರುವ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಇದರಿಂದ ಬೀದರ ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ಜೀವಂತ ಇರುವುದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು ನಡೆಸಿದ ಮಿಂಚಿನ ಸಂಚಾರದಿಂದ ಹಾಗೂ ಮಕ್ಕಳ ರಕ್ಷಣೆ ಮಾಡಿರುವುದು ಬೆಳಕಿಗೆ ಬಂದಿದೆ.

ಸಮಿತಿ ಸಭೆಗಳು ಪರಿಣಾಮಕಾರಿಯಾಗಿಲ್ಲ: ಜಿಲ್ಲೆಯ ಆಯಾ ತಾಲೂಕಿನಲ್ಲಿ ಬಾಲಕಾರ್ಮಿಕರನ್ನು ರಕ್ಷಿಸಲು ತಾಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಲಾಗಿದೆ. ತಹಸೀಲ್ದಾರ ಅಧ್ಯಕ್ಷತೆಯಲ್ಲಿ ತಿಂಗಳಲ್ಲಿ ಎರಡು ಸಲ ಕಡ್ಡಾಯವಾಗಿ ಸಭೆ ನಡೆಸಬೇಕು ಎಂಬ ನಿಯಮವೂ ಇದೆ. ಆದರೆ ಸಮಿತಿ ಸಭೆಗಳು ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ. ಎನ್ನುವುದಕ್ಕೆ ಜಿಲ್ಲೆಯಲ್ಲಿ ಬಾಲಕಾರ್ಮಿಕರು ಕೆಲಸ ಮಾಡುತ್ತಿರುವುದೇ ನೀದರ್ಶನವಾಗಿದೆ.

ಆಯೋಗ ಸದಸ್ಯರಿಂದ ರಕ್ಷಣೆ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯ ಶಶಿಧರ ಕೋಸಂಬೆ ಅವರು ಜಿಲ್ಲೆಯ ವಿವಿಧ ಅಂಗಡಿಗಳ ಮೇಲೆ ಅಧಿಕಾರಿಗಳ ತಂಡದೊಂದಿಗೆ ದಾಳಿ ನಡೆಸಿ ಮೂರು ಮಕ್ಕಳನ್ನು ರಕ್ಷಣೆ ಮಾಡುವ ಮೂಲಕ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರು ಪಡಿಸಿದ್ದಾರೆ.

ಕಾಯ್ದೆ ಉಲ್ಲಂಘನೆ ಪ್ರಕರಣ ದಾಖಲು: ಜನವರಿ 2025 ರಿಂದ ಜುಲೈ 14 ರ ವರೆಗೆ ಜಿಲ್ಲೆಯಲ್ಲಿ 9 ಬಾಲ ಕಾರ್ಮಿಕರು ಮತ್ತು ಕಿಶೋರ ಕಾರ್ಮಿಕರನ್ನು ಪತ್ತೆ ಹಚ್ಚಿರುವ ಪೈಕಿ 7 ಅಂಗಡಿಗಳ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ. ಪ್ರತ್ಯೇಕ ಪ್ರಕರಣಗಳಲ್ಲಿ 60 ಸಾವಿರ ರೂಪಾಯಿ ಪರಿಹಾರ ನಿಧಿಗೆ ಜಮಾ ಮಾಡಲಾಗಿದೆ. ಇನ್ನೂಳಿದ ಮೂರು ಪ್ರಕರಣಗಳಲ್ಲಿ ಪರಿಹಾರ ವಸೂಲಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ

ಜನವರಿ 2025 ರಿಂದ ಜುಲೈ 14 ರ ವರೆಗೆ 4 ಕಿಶೋರ ಕಾರ್ಮಿಕರು ಮತ್ತು 5 ಬಾಲಕಾರ್ಮಿಕ ಸೇರಿ ಒಟ್ಟು 9 ಮಕ್ಕಳನ್ನು ಈಗಾಗಲೇ ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿ ಬೀದರ ಇಲ್ಲಿಗೆ ಹಾಜರು ಪಡಿಸಲಾಗಿದೆ. ರಕ್ಷಣೆ ಮಾಡಿದ 9 ಮಕ್ಕಳ ಪೈಕಿ 7 ಪ್ರಕರಣಗಳಲ್ಲಿ ಈಗಾಗಲೇ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಇನ್ನೂಳಿದ ಎರಡು ಪ್ರಕರಣಗಳ ಕುರಿತು ದಾಖಲೆ ಪರಿಶೀಲಿಸುತ್ತಿದ್ದು. ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ಬೀದರನ ಕಾರ್ಮಿಕ ಇಲಾಖೆಯ ಉಪ ವಿಭಾಗ ಅಧಿಕಾರಿ ಮಹೇಶ ಲಕ್ಷ್ಮಣ ಕುಳಲಿ ತಿಳಿಸಿದರು.

ಬಾಲಕಾರ್ಮಿಕ ನಿಷೇಧ ಕಾಯಿದೆ ಜಾರಿಯಲ್ಲಿದ್ದರೂ ರಾಜ್ಯದಲ್ಲಿ ಕೆಲಸಕ್ಕಾಗಿ ಮಕ್ಕಳ ಬಳಕೆ ಹೆಚ್ಚಾಗುತ್ತಿರುವ ಆತಂಕಕಾರಿ ಸಂಗತಿ ಬೆಳಕಿಗೆ ಬರುತ್ತಿವೆ. ಮಕ್ಕಳನ್ನು ದುಡಿಸಿಕೊಂಡವರ ವಿರುದ್ಧ ಎಫ್ ಐಆರ್ ಆಗಿದೆ. ಕಾರ್ಮಿಕ ಇಲಾಖೆ ತಾಲೂಕು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವ ಮೂಲಕ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಜಾಗೃತಿ ಮಾಡಬೇಕು. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು.

-ಶಶಿಧರ ಕೋಸಂಬೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ಸಾರ್ವಜನಿಕರ ಸಹಕಾರ ಮುಖ್ಯ: ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲಾ ನಾಗರಿಕರ ಸಹಕಾರ ಬಹಳ ಮುಖ್ಯವಾಗಿದೆ ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಮಕ್ಕಳನ್ನು ಕೆಲಸಕ್ಕೆ ಕಳುಹಿಸದೆ ಪೋಷಕರು ಶಿಕ್ಷಣ ಕೊಡಿಸುವಲ್ಲಿ ಮುಂದಾಗಬೇಕು. ಬಾಲಕಾರ್ಮಿಕ ನಿಷೇಧ ಕಾಯ್ದೆ ಕುರಿತು ಸಾರ್ವಜನಿಕರು ಸಹಕರಿಸಬೇಕು ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಮನವಿ ಮಾಡಿದ್ದಾರೆ.

1098ಗೆ ಮಾಹಿತಿ ನೀಡಿ: ಶಿಕ್ಷಣ ಪಡೆಯುವ ವಯಸ್ಸಿನಲ್ಲಿ ಕಟ್ಟಡಗಳ ಕೆಲಸಗಳಲ್ಲಿ, ಅಂಗಡಿಗಳಲ್ಲಿ, ಗ್ಯಾರೇಜ್, ಹೋಟೆಲ್, ಕಾರ್ಖಾನೆಗಳಲ್ಲಿ, ಬೇಕರಿ ಮತ್ತಿತರ ಸ್ಥಳಗಳಲ್ಲಿ ಬಾಲಕಾರ್ಮಿಕರು ಕೆಲಸಗಳನ್ನು ಮಾಡುತ್ತಿರುವ ಪ್ರಕರಣಗಳನ್ನು ಕಂಡರೆ ತಕ್ಷಣವೇ ಸಕ್ಷಮ ಇಲಾಖೆಯ ಅಧಿಕಾರಿಗಳಿಗೆ ಅಥವಾ ಸಮೀಪದ ಪೊಲೀಸ್ ಠಾಣೆಗೆ ಅಥವಾ 1098ಗೆ ಮಾಹಿತಿ ನೀಡಿ ಸಾರ್ವಜನಿಕರು ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಬೇಕು ಎಂದು ಕಾರ್ಮಿಕ ಇಲಾಖೆಯ ಜಿಲ್ಲಾ ಕಾರ್ಮಿಕ ಇಲಾಖೆಯ ಅಧಿಕಾರಿ ಮಹೇಶ ಲಕ್ಷ್ಮಣ ಕುಳಲಿ ತಿಳಿಸಿದ್ದಾರೆ.

ಡ್ಯಾಂನಲ್ಲಿ ಒಂದೇ ದಿನ 10 ಲಕ್ಷ ಮರಿ ಬಿತ್ತನೆ, 370 ಕೆರೆಗಳಲ್ಲಿ ಮೀನು ಬಿತ್ತನೆ

2 ಕೋಟಿ ಮೀನು ಮರಿ ಬಿತ್ತನೆಯ ಗುರಿ

ಜಿಲ್ಲಾ ನೋಟ

ಗಣೇಶ್ ಕಮ್ಮಾಪುರ

ದಾವಣಗೆರೆ: ಬಡ ರೈತರ ಜೀವನೋಪಾಯ ಮತ್ತು ಆದಾಯ ಹೆಚ್ಚಿಸುವ ಪ್ರಮುಖ ಮಾರ್ಗಗಳಲ್ಲಿ ಒಂದಾದ ಮೀನು ಸಾಕಾಣಿಕೆಗೆ ಜಿಲ್ಲೆಯಲ್ಲಿ ರೈತರು ಹೆಚ್ಚಿನ ಒಲವು ತೋರುತ್ತಿದ್ದು, ಪ್ರಸ್ತುತ ವರ್ಷದಲ್ಲಿ ಮೀನುಗಾರಿಕೆ ಇಲಾಖೆಯು 2.03 ಕೋಟಿ ಮೀನು ಮರಿ ಬಿತ್ತನೆಗೆ ಗುರಿ ನಿಗದಿ ಪಡಿಸಿಕೊಂಡು, ಮರಿ ಬಿತ್ತನೆ ಕಾರ್ಯ ಈಗಾಗಲೇ ಆರಂಭಿಸಿದೆ. ಸೋಮವಾರವಷ್ಟೇ ಮೀನುಗಾರಿಕಾ ಇಲಾಖೆಯಿಂದ ಹರಿಹರ ತಾಲೂಕಿನ ದೇವರ ಬೆಳಕೆರೆ ಡ್ಯಾಂನಲ್ಲಿ 10 ಲಕ್ಷ ಮರಿಗಳನ್ನು ಬಿಡಲಾಗಿದೆ. ಜತೆಗೆ ಕೊಂಡಜ್ಜಿ ಫಾರಂನಿಂದ 1 ಲಕ್ಷ ಮರಿಗಳನ್ನು ಬಿತ್ತನೆ ಮಾಡಲು ರೈತರಿಗೆ ವಿತರಣೆ ಮಾಡಲಾಗಿದೆ. ಮೀನುಗಾರಿಕೆ ಇಲಾಖೆಯ 94 ಕೆರೆಗಳಲ್ಲಿ 1.25 ಕೋಟಿ ಹಾಗೂ ಗ್ರಾಪಂಯ 276 ಕೆರೆಗಳಲ್ಲಿ 78 ಲಕ್ಷ ಮೀನು ಸೇರಿ ಜಿಲ್ಲೆಯಲ್ಲಿ ಒಟ್ಟಾರೆ 370 ಕೆರೆಗಳಲ್ಲಿ 2.03 ಮೀನು ಮರಿ ಬಿತ್ತನೆ ಮಾಡಲಾಗುತ್ತಿದೆ. ಜತೆಗೆ, ಪ್ರಸಕ್ತ ವರ್ಷದಲ್ಲಿ ಬರುತ್ತಿರುವ ಉತ್ತಮ ಮಳೆ ಮೀನುಗಾರರ ಮೊಗದಲ್ಲಿ ಮತ್ತಷ್ಟು ಹರ್ಷ ಮೂಡಿಸಿದೆ.

ಟೆಂಡರ್ ಪ್ರಕ್ರಿಯೆ

ನಲವತ್ತು ಹೆಕ್ಟರ್‌ಗಿಂದ ಹೆಚ್ಚಿನ ವಿಸ್ತೀರ್ಣವಿರುವ ಕೆರೆಗಳನ್ನಷ್ಟೇ ಮೀನುಗಾರಿಕೆ ಇಲಾಖೆ ನಿರ್ವಹಿಸುತ್ತಿದ್ದು, ಈ ಪೈಕಿ 94 ಕೆರೆಗಳ ಪೈಕಿ 41 ಕೆರೆಗಳ ಟೆಂಡರ್ ನವೀಕರಿಸಿ 7 ಕೆರೆಗಳಿಗೆ ಟೆಂಡರ್ ಕರೆಯಲಾಗಿದೆ. ಉಳಿದ 35 ಕೆರೆಗಳ ಟೆಂಡರ್ ಪ್ರಕ್ರಿಯೆ ಸಹ ನಡೆಯುತ್ತಿದೆ. ಅಲ್ಲದೇ, 40 ಹೆಕ್ಟರ್ ಪ್ರದೇಶಕ್ಕಿಂತ ಕಡಿಮೆ ಇರುವ ಕೆರೆಗಳು ಗ್ರಾಪಂ ಸುಪರ್ದಿಗೆ ಸೇರಿದ್ದು ಆಯಾ ವ್ಯಾಪ್ತಿಗಳ ಕೆರೆಗಳಿಗೆ ಆಯಾ ಗ್ರಾಮ ಪಂಚಾಯಿತಿಗಳೇ ಟೆಂಡರ್ ನಡೆಸುತ್ತವೆ.

ವಾತಾವರಣಕ್ಕೆ ಹೊಂದಿಕೆ

ಆಯಾ ಪ್ರದೇಶ, ವಾತಾವರಣಕ್ಕೆ ಹೊಂದುವ, ಅಭಿವೃದ್ಧಿಯಾಗುವ ಮೀನು ಮರಿಗಳ ಉತ್ಪಾದನೆಗಷ್ಟೇ ಆದ್ಯತೆ ನೀಡಲಾಗಿದ್ದು, ಸರಕಾರದ ಪಾಲನಾ ಕೇಂದ್ರಗಳಾದ ಹರಿಹರ ತಾಲೂಕಿನ ಕೊಂಡಜ್ಜಿ, ಚನ್ನಗಿರಿ ತಾಲೂಕಿನ ಸೂಳೆಕೆರೆ, ಜಗಳೂರು ಮತ್ತು ಹೊನ್ನಾಳಿಯ ಮೀನು ಮರಿ ಉತ್ಪಾದನಾ ಕೇಂದ್ರಗಳಲ್ಲಿ ಈಗಾಗಲೇ ಒಂದು ತಿಂಗಳಿಂದ ಗೌರಿ, ಕಾಟ್ಲಾ, ರೋಹೂ ಸೇರಿದಂತೆ ನಾನಾ ತಳಿಗಳ ಮರಿ ಉತ್ಪಾದನೆ ನಡೆಸಿ, ಬಿತ್ತನೆ ಕಾರ್ಯ ಆರಂಭಿಸಿದೆ.

ಖಾಸಗಿಯವರಿಂದಲೂ ಖರೀದಿ

ಜಿಲ್ಲೆಯಲ್ಲಿರುವ ಕೆರೆಗಳಲ್ಲಿ ಮೀನು ಮರಿಗಳ ಬಿತ್ತನೆ ಕಾರ್ಯ ನಾಲ್ಕು ಕೇಂದ್ರಗಳಲ್ಲಿ ಉತ್ಪಾದನೆಯಾಗುವ ಮರಿಗಳು ಬಿತ್ತನೆಗೆ ಸಾಲದಿದ್ದರೆ, ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯದ ಪಾಲನಾ ಕೇಂದ್ರ, ಶಿವಮೊಗ್ಗ ಸೇರಿದಂತೆ ವಿವಿಧೆಡೆಯ ಖಾಸಗಿ ಮೀನುಮರಿ ಪಾಲನಾದಾರರಿಂದ ಮರಿಗಳನ್ನು ತರಿಸಿಕೊಳ್ಳಲಾಗುವುದು.

ಪ್ರಸ್ತುತ ಚನ್ನಗಿರಿ, ದಾವಣಗೆರೆ ಭಾಗದಿಂದ ಅತೀ ಹೆಚ್ಚಿನ ಬೇಡಿಕೆ ಇದೆ ಎಂದು ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಡಿ.ಅಣ್ಣಪ್ಪಸ್ವಾಮಿ ಹೇಳಿದರು.

27,200 ಟನ್ ಉತ್ಪಾದನೆ ನಿರೀಕ್ಷೆ

ಮೀನುಗಾರಿಕೆ ಇಲಾಖೆಯ 2024-25 ಸಾಲಿನಲ್ಲಿ 94 ಕೆರೆಗಳಲ್ಲಿ 1,12,28,000 ಮರಿ ಹಾಗೂ ಗ್ರಾಪಂಗಳ 276 ಕೆರೆಗಳಲ್ಲಿ 70,94,000 ಮೀನಿನ ಮರಿಗಳು ಸೇರಿ ಒಟ್ಟು 1,83,18,000 ಮೀನು ಮರಿ ಬಿತ್ತನೆ ಮಾಡಿ, 46,300 ಟನ್ ಮೀನು ಉತ್ಪಾದನೆ ನಿರೀಕ್ಷಿಸಿತ್ತು. ಆದರೆ, 25,720 ಟನ್ ಮಾತ್ರ ಉತ್ಪಾದನೆಯಾಗಿತ್ತು. 2025-26ರಲ್ಲಿ 27,200 ಟನ್ ಮೀನು ಉತ್ಪಾದನೆ ನಿರೀಕ್ಷಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆ ಉಪನಿರ್ದೇಶಕರು ವಿಶ್ವವಾಣಿ ಗೆ ಮಾಹಿತಿ ನೀಡಿದರು.

ಹೆಚ್ಚಿದ ಮತ್ಸ್ಯ ಸೇವನೆ ಪ್ರಿಯರು

ಮೀನು ಪ್ರಾಣಿ ಪ್ರೋಟೀನ್, ಅಮೈನೋ ಆಮ್ಲಗಳು ಮತ್ತು ಕೊಬ್ಬಿನಾಮ್ಲಗಳ ಅತ್ಯಂತ ಕಡಿಮೆ ಬೆಲೆಯ ಮೂಲವಾಗಿರುವುದರಿಂದ ದಿನೇ ದಿನೇ ಮತ್ಸ್ಯ ಸೇವನೆ ಪ್ರಿಯರು ಹೆಚ್ಚಾಗುತ್ತಿದ್ದಾರೆ. ಸಹಜವಾಗಿ ಮೀನು ಸಾಕಾಣಿಕೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಡಿಮಾಂಡ್ ಹಾಗೂ ಸಾಕಣೆಯಿಂದ ಖಚಿತ ಲಾಭವಿರುವುದರಿಂದ ರೈತರು, ವಿಶೇಷವಾಗಿ ಸಣ್ಣ, ಅತೀಸಣ್ಣ ರೈತರು ಮೀನು ಸಾಕಣೆಯತ್ತ ಆಸಕ್ತಿ ತೋರುತ್ತಿದ್ದಾರೆ.

ಈ ಬಾರಿ ಮಳೆ ಚೆನ್ನಾಗಿ ಬರುತ್ತಿರುವುದರಿಂದ ಜಿಲ್ಲೆಯ ಎಲ್ಲ ಕೆರೆಗಳಿಗೆ ಹೆಚ್ಚಿನ ನೀರು ಬರುತ್ತಿದ್ದು, ಶೀಘ್ರ ಭರ್ತಿಯಾಗುವ ಲಕ್ಷಣಗಳಿವೆ. ಈಗಾಗಲೇ ಮೀನು ಮರಿ ಉತ್ಪಾದನೆ ಕಾರ್ಯ ಮುಗಿದಿದ್ದು ಕಳೆದ ವಾರದಿಂದ ಕೆರೆಗಳಲ್ಲಿ ಬಿತ್ತನೆ ಮಾಡುವ ಕಾರ್ಯ ಆರಂಭಿಸಿದೆ. ದೇವರ ಬೆಳಕೆರೆ ಪಿಕಪ್ ಡ್ಯಾಂನಲ್ಲಿ ಒಂದೇ ದಿನ 10 ಲಕ್ಷ ಮರಿ ಬಿಡಲಾಗಿದೆ.

-ಡಿ.ಅಣ್ಣಪ್ಪಸ್ವಾಮಿ, ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ

ಜಿಲ್ಲೆಯಲ್ಲಿ 3500 ಕುಟುಂಬ

ಜಿಲ್ಲೆಯಲ್ಲಿ ಮೀನುಗಾರಿಕೆಯನ್ನೇ ನಂಬಿ 3500 ಕುಟುಂಬಗಳು ಜೀವನ ನಡೆಸುತ್ತಿದ್ದು, ಚನ್ನಗಿರಿ ತಾಲೂಕಿನ ಸೂಳೆಕೆರೆ ಜಲಾಶಯ ಸುತ್ತ 13 ಗ್ರಾಮಗಳಲ್ಲೇ 350 ಕುಟುಂಬಗಳಿವೆ. ಒಳನಾಡು ಮೀನುಗಾರಿಕೆ ನೆಚ್ಚಿಕೊಂಡು ಅಂದಾಜು 20 ಸಾವಿರಕ್ಕೂ ಹೆಚ್ಚು ಜನರು ಜೀವನ ಸಾಗಿಸುತ್ತಿದ್ದಾರೆ. ಜತಗೆ, ಪ್ರಸ್ತುತ ವರ್ಷ ಮಳೆರಾಯ ಕೃಪೆ ತೋರಿರುವುದರಿಂದ ಕೆರೆಗಳನ್ನು ಟೆಂಡರ್ ಪಡೆಯುವ ಗುತ್ತಿಗೆದಾರರು ಹಾಗೂ ಮೀನುಗಾರರ ಕುಟುಂಬಗಳು ಉತ್ತಮ ಲಾಭದ ನಿರೀಕ್ಷೆಯಲ್ಲಿದ್ದಾರೆ.

ಚಿತ್ತವಿಹಾರ

ಅನುಭವವೆಂಬ ಪಾಠಶಾಲೆ

• ವಿದ್ಯಾಶಂಕರ ಶರ್ಮ

ಜೀವನವೆಂದರೆ ಅನುಭವಗಳ ಒಟ್ಟೂ ಮೊತ್ತ. ದಿನ ದಿನವೂ ಹೊಸ ಅನುಭವ ನಮ್ಮ ಬದುಕಿನ ಕೈಚೀಲಕ್ಕೆ ಸೇರುತ್ತದೆ. ಅನುಭವಗಳು ಸಂತಸವನ್ನು ಅಥವಾ ನೋವನ್ನು ತರಬಲ್ಲವು. ನಮ್ಮ ಅನುಭವಗಳಿಗೆ ಕಾರಣವೇನೇ ಇರಲಿ, ಅವುಗಳಿಂದ ನಾವು ಕಲಿಯುವ ಪಾಠ ಅಮೂಲ್ಯ. ಒಂದೊಂದು ಪರಿಸ್ಥಿತಿಯಿಂದಲೂ ಹೊಸದೊಂದು ಸಂದೇಶ, ನೀತಿ ಇದ್ದೇ ಇರುತ್ತದೆ . ನಮಗಾಗುವ ಅನುಭವಗಳು ಬದುಕಿನ ನೈಜತೆಯ ಭಾಗ. ನಾವು ಅದಕ್ಕೆ ಸಹಜ ಮತ್ತು ಅಸಹಜ ಎಂಬ ಹಣೆಪಟ್ಟಿಯನ್ನು ಕೊಡಬಹುದು. ಅದು ನಮ್ಮ ಯೋಚನೆಯ ಮಿತಿಯ ದೌರ್ಬಲ್ಯ. ನಮ್ಮ ದೃಷ್ಟಿಯಿಂದ ನೋಡಿ ಅದರ ಮಾಪನವನ್ನು ಮಾಡುತ್ತೇವೆ. ಆದರೆ ನಮಗಾಗುವ ಎಲ್ಲ ಅನುಭವಗಳೂ ಜೀವನದ ಪಯಣದಲ್ಲಿ ಆಗುವ ಸಹಜ ಘಟನೆಗಳೇ ಆಗಿರುತ್ತವೆ. ಆಗಿರುವ ಅನುಭವಕ್ಕೆ ನಾವೇ ಹೊಣೆಗಾರರಾದ ಮೇಲೆ ಅದರಲ್ಲಿ ಅಸಹಜ ಎನ್ನುವುದು ಏನೇನೂ ಇಲ್ಲ. ನಮ್ಮ ವಿವೇಕರಹಿತ ಮತ್ತು ಅವಿವೇಕಯುತ ನಡೆಯಿಂದ ಪರಿಣಾಮಗಳು ಉಂಟಾಗಿರುತ್ತವೆ.

ನಮಗಾದ ಅನುಭವಗಳನ್ನು ದೂಷಿಸುವ ಬದಲು, ಅದರಿಂದ ಪಾಠವನ್ನು ಕಲಿತರೆ ಮುಂದಾಗುವ ಪರಿಸ್ಥಿತಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅನುಕೂಲಕರವಾಗಿ ಮಾಡಿಕೊಳ್ಳಬಹುದು. ಅದು ನಮ್ಮ ಸ್ವಂತ ಅನುಭವಗಳಿಗಷ್ಟೇ ಸೀಮಿತವಲ್ಲ. ಕೆಲವನ್ನು ನೋಡಿ ಕಲಿ, ಕೆಲವನ್ನು ಕೇಳಿ ತಿಳಿ ಎನ್ನುವಂತೆ ಬೇರೆಯವರ ಅನುಭವಗಳೂ ಸಹ ನಮ್ಮ ಕಣ್ಣು ತೆರೆಸಬೇಕು. ಮಾನವ ಸಹಜ ಚಿಂತನೆಯೊಂದಿದೆ–ಯಾರಿಗೋ ಒದಗಿ ಬಂದ ಬದುಕಿನ ಪರಿ ನಮಗಾಗದು, ಇದು ಬಹಳ ದೋಷಪೂರಿತ ಯೋಚನಾ ಲಹರಿ. ಜಗತ್ತಿನ ಎಲ್ಲ ಘಟನೆಗಳೂ ನಮಗೆ ದಿಕ್ಸೂಚಿಯಂತೆ ಸೂಕ್ಷ್ಮವಾಗಿ ಗ್ರಹಿಸುವ ಮನಸ್ಸಿನ ಶಕ್ತಿಯನ್ನು ಬಲಗೊಳಿಸಿದಾಗ ನಮ್ಮ ಯೋಚನೆಯ ಪರಿಮಿತಿ ವಿಸ್ತಾರಗೊಳ್ಳುತ್ತದೆ. ಆದ ಅನುಭವಗಳು ನಮ್ಮನ್ನು ಮಾಗಿಸುತ್ತ, ಅಂತಃಶಕ್ತಿಯನ್ನು ಪ್ರಬಲಗೊಳಿಸುತ್ತ, ಬದುಕಿಗೆ ಒಂದು ಹೊಸ ದಿಶೆಯನ್ನು ತೋರುತ್ತವೆ. ಬದುಕಿನಲ್ಲಿ ಏನೇ ಸಂಭವಿಸಿದರೂ ಅದು ಬದುಕಿನ ಕಲಿಕೆಯ ಭಾಗವಾಗಿ ನೋಡುವ ದೃಷ್ಟಿಯು ನಮ್ಮನ್ನು ಪ್ರಶಾಂತ ಮನಸ್ಥಿತಿಯೆಡೆಗೆ ಕರೆದೊಯ್ಯುತ್ತದೆ.

ಹನಿ ಮಳೆ

ನಿರ್ಭೀತಿ

ನನಗಿಲ್ಲ ಹೃದಯಾಘಾತದ ಭಯ
ನೀಡಿದ್ದೇನೆ ಹೃದಯ ಅವಳಿಗೆ
ಉಂಟು ಅದರ ರಕ್ಷಣೆಗೆ
ಪ್ರೀತಿ-ಸ್ನೇಹದ ಮದ್ದು
ಸುಳಿಯುವುದಿಲ್ಲ ಆಘಾತ ಅದರ ಬಳಿಗೆ

• ಮಹಾಂತೇಶ ಮಾಗನೂರ

ಶಾರೀರಿಕ ಪುನಶ್ಚೇತನ: ವಿಶ್ರಾಂತಿಯೇ ಮೆಟ್ಟಿಲು

• ಡಾ. ಸೌಮ್ಯ ಕೆ.ವಿ ಯಲ್ಲಾಪುರ

ಮಾನವನ ಸಂಪೂರ್ಣ ಪುನಶ್ಚೇತನಕ್ಕೆ ಏಳು ವಿಧದ ವಿಶ್ರಾಂತಿಗಳು ಅಗತ್ಯ ಎಂದು ಅಮೆರಿಕದ ವೈದ್ಯರಾದ ಡಾ. ಸೌಂಡ್ರಾ ಡಾಲ್ಟನ್ ಸ್ಮಿತ್ ಅಭಿಪ್ರಾಯ ಪಡುತ್ತಾರೆ. ಅವುಗಳು ಏನೇನೆಂದು ಈ ಲೇಖನದಲ್ಲಿ ತಿಳಿಯೋಣ.

ಶಾರೀರಿಕ ವಿಶ್ರಾಂತಿ: ಸುಸ್ಥಿತಿಯಲ್ಲಿ ವಿರಾಮ ಪಡೆಯುವುದು, ಒತ್ತಡಭರಿತ ಚಟುವಟಿಕೆಗಳಿಂದ ದೂರವಿರುವುದು ಶಾರೀರಿಕ ವಿಶ್ರಾಂತಿಯ ಅರ್ಥವಾಗಿದೆ. ಇದರಲ್ಲಿ ಎರಡು ವಿಧಗಳಿವೆ, ಒಂದು ಸಕ್ರಿಯ ವಿಶ್ರಾಂತಿ, ಉದಾಹರಣೆಗೆ ಮಸಾಜ್, ಯೋಗ, ಸರಳ ರಿಲ್ಯಾಕ್ಸಿಂಗ್ ವ್ಯಾಯಾಮಗಳು ಇತ್ಯಾದಿ. ಇನ್ನೊಂದು ನಿಷ್ಕ್ರಿಯ ವಿಶ್ರಾಂತಿ ಅಂದರೆ ನಿದ್ರಿಸುವುದು, ಸುಮ್ಮನೆ ಹಾಸಿಗೆಯಲ್ಲಿ ಮಲಗುವುದು. ಇವೆರಡೂ ಶರೀರದ ದಣಿವನ್ನು ಕಡಿಮೆ ಮಾಡಲು ಶಾರೀರಿಕ ವಿಶ್ರಾಂತಿ ಸಹಾಯ ಮಾಡುತ್ತದೆ.

ಶರೀರ, ಮನಸ್ಸು, ಭಾವನೆ, ಸಂವೇದನೆ, ಸಂಬಂಧಗಳು, ಆತ್ಮದ ಅನುಭಾವ, ಸೃಜನಶೀಲತೆ ಹೀಗೆ ಎಲ್ಲದರಲ್ಲೂ ಸಮತೋಲನ ಸಾಧಿಸುವ ಮೂಲಕ ಏಳು ವಿಧದ ವಿಶ್ರಾಂತಿಗಳನ್ನು ದಿನಚರಿಯಲ್ಲಿ ಜೋಡಿಸಿಕೊಂಡು ನಾವು ಮತ್ತಷ್ಟು ಚುರುಕಾದ, ಉಲ್ಲಾಸದಿಂದ ಕೂಡಿದ, ಸಮೃದ್ಧ ಜೀವನವನ್ನು ನಡೆಸಲು ಯತ್ನಿಸಬಹುದಾಗಿದೆ.

ಮಾನಸಿಕ ವಿಶ್ರಾಂತಿ: ಆಧುನಿಕ ಯುಗದ ವೃತ್ತಿ ಜೀವನವು ರೇಸಿನಲ್ಲಿ ಓಡುತ್ತಿರುವ ಭಾವವನ್ನು ಮೂಡಿಸುತ್ತಿದೆ. ಸದಾ ಸ್ಪರ್ಧಾಭಾವ, ಇನ್ನಷ್ಟು ಮತ್ತಷ್ಟು ಸಾಧಿಸಬೇಕಾದ ಅನಿವಾರ್ಯತೆ ಮಾನಸಿಕವಾಗಿ ತೀವ್ರವಾದ ದಣಿವನ್ನು ಹುಟ್ಟು ಹಾಕುತ್ತದೆ. ಸುಮ್ಮನೆ ಕೂತಿದ್ದಂತೆ ತೋರಿದರೂ ಮಿದುಳು ಮಾಡಬೇಕಾದ ಕೆಲಸಗಳನ್ನು ಲೆಕ್ಕ ಹಾಕುತ್ತ, ಆ ಬಗ್ಗೆ ಚಿಂತಿಸುತ್ತಾ ಇರುವುದರಿಂದ ಮಾನಸಿಕ ದಣಿವು ನಮ್ಮನ್ನು ಬಾಧಿಸುತ್ತದೆ. ವಿಶೇಷವಾಗಿ, ಉದ್ಯೋಗಸ್ಥ ಮಹಿಳೆಯರು ಎಲ್ಲವನ್ನು ನಿಭಾಯಿಸುವ ಒತ್ತಡದಲ್ಲಿ ಸದಾ ಪ್ಲ್ಯಾನ್ ಮಾಡುತ್ತಲೇ ಇದ್ದರೆ ಮಾತ್ರ, ಅವರ ಎಲ್ಲ ಕೆಲಸಗಳು ಸುಸೂತ್ರವಾಗಿ ನೆರವೇರುತ್ತವೆಯಾದರೂ, ಆ ನಿರಂತರ ಕಾರ್ಯಗಳು ಅವರಿಗೆ ಮಾನಸಿಕ ದಣಿವು ಮಾತ್ರವಲ್ಲ ದೇಹಕ್ಕೂ ಆಯಾಸವನ್ನುಂಟುಮಾಡಬಲ್ಲದು. ಮಾನಸಿಕ ವಿಶ್ರಾಂತಿಗಾಗಿ ಮನಃಪೂರ್ವಕವಾಗಿ ಜೀವಿಸುವುದನ್ನು ರೂಢಿಸಿಕೊಳ್ಳಬೇಕು. ಪ್ರಾಣಾಯಾಮ, ಧ್ಯಾನ ಮತ್ತಿತರ ರಿಲ್ಯಾಕ್ಸೇಶನ್ ತಂತ್ರಗಳನ್ನು ರೂಢಿಸಿಕೊಳ್ಳಬೇಕು. ಸಂಗೀತ ಕೇಳುವುದು, ನಿಸರ್ಗದ ಮಡಿಲಲ್ಲಿ ವಿಶ್ರಮಿಸುವುದು, ದಿನಚರಿ ಬರೆಯುವುದು ಮುಂತಾದವು ಮಾನಸಿಕವಾಗಿ ನಮ್ಮನ್ನು ನಿರಾಳಗೊಳಿಸುತ್ತದೆ.

ಭಾವನಾತ್ಮಕ ವಿಶ್ರಾಂತಿ: ಮುಖವಾಡಗಳನ್ನು ಧರಿಸಿ ಬದುಕುವುದು ಈ ಕಾಲದ ಅನಿವಾರ್ಯತೆ ಆಗುತ್ತಿದ್ದು, ಅದುಮಿಟ್ಟ ಭಾವನೆಗಳು ನಮ್ಮನ್ನು ದಣಿವಾಗುವಂತೆ ಮಾಡಬಲ್ಲವು. ಆತ್ಮೀಯರೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುವುದು, ನಿಜವಾದ ಸ್ನೇಹಿತರೊಂದಿಗೆ ಸಮಯ ಕಳೆಯುವುದು, ಸಾಮಾಜಿಕ ಜಾಲತಾಣಗಳ ಬದಲು ನಿಜವಾದ ಸಂಪರ್ಕ ಹೊಂದಲು ಸಮಯ ವ್ಯಯಿಸುವುದು ಮುಂತಾದವು ನಮಗೆ ಭಾವನಾತ್ಮಕ ವಿಶ್ರಾಂತಿಯನ್ನು ಹೊಂದಲು ಸಹಕಾರಿಯಾಗಬಲ್ಲವು.

ಸಂವೇದನೆಗಳ ವಿಶ್ರಾಂತಿ: ಮೊಬೈಲ್, ಟಿವಿ, ಕಂಪ್ಯೂಟರ್, ಬೆಳಕು, ಶಬ್ದ ಹೀಗೆ ನಿರಂತರವಾಗಿ ಇಂದ್ರಿಯಗಳನ್ನು ಸಂವೇದನೆಗಳಿಗೆ ಒಳಪಡಿಸುವ ಆಧುನಿಕ ಯುಗದ ಗ್ಯಾಜೆಟ್‌ಗಳು ನಮ್ಮನ್ನು ಒತ್ತಡಕ್ಕೆ ತಳ್ಳಬಲ್ಲವು, ಹೀಗಾಗಿ ಈ ನಿರಂತರ ಪ್ರಚೋದನೆಯಿಂದ ದೂರವಿರುವ ಮೂಲಕ ಸಂವೇದನೆಗಳ ವಿಶ್ರಾಂತಿಯನ್ನು ಪಡೆಯಬಲ್ಲೆವು.

ಸಾಮಾಜಿಕ ವಿಶ್ರಾಂತಿ: ನಿರಂತರವಾಗಿ ಜನರ ಸಂಪರ್ಕದಲ್ಲಿ ಇರುವವರಿಗೆ ಒಮ್ಮೊಮ್ಮೆ ಏಕಾಂತವು ಪ್ರಿಯವೆನ್ನಿಸಬಹುದು. ಹೀಗೆ ಏಕಾಂತದಲ್ಲಿ ತಮಗೆ ಬೇಕಾದ ರೀತಿಯಲ್ಲಿ ಸಮಯ ಕಳೆಯುವುದು ವಿಶ್ರಾಂತಿಯನ್ನು ನೀಡಬಲ್ಲದು. ತಮ್ಮ ಹವ್ಯಾಸದಲ್ಲಿ ತೊಡಗಿಕೊಳ್ಳಲು ಇದು ಉತ್ತಮ ಅವಕಾಶವಾಗಿದೆ.

ಸೃಜನಾತ್ಮಕ ವಿಶ್ರಾಂತಿ: ನಿತ್ಯದ ಸಮಸ್ಯೆಗಳನ್ನು ಬಗೆಹರಿಸಲು ಅಥವಾ ಹೊಸ ಚಿಂತನೆಗಳನ್ನು ರೂಪಿಸಲು ಸೃಜನಶೀಲತೆಯನ್ನು ಉಪಯೋಗ ಮಾಡುತ್ತೇವೆ. ಆದರೆ ಅತಿಯಾದ ಸೃಜನಶೀಲತೆಯ ಉಪಯೋಗವೂ ನಮ್ಮನ್ನು ದಣಿವಾಗುವಂತೆ ಮಾಡಬಲ್ಲದು. ಸದಾ ಹೊಸತನ್ನು ಸೃಷ್ಟಿಸುವ ತುಡಿತ ಒಳ್ಳೆಯದೇ ಆದರೂ ಕೆಲವೊಮ್ಮೆ ಅದರಿಂದಲೂ ವಿರಾಮ ಬೇಕಲ್ಲವೇ? ಯಾವ ನಿರೀಕ್ಷೆಗಳಿಲ್ಲದೇ ಸಂಗೀತ, ಕಲೆ, ಪುಸ್ತಕಗಳೊಂದಿಗೆ ಸಮಯ ಕಳೆಯುವುದು ಸದಾ ಸಾಧಿಸುವ ಒತ್ತಡದಿಂದ ನಮ್ಮನ್ನು ಹೊರತಂದೀತು.

ಆಧ್ಯಾತ್ಮಿಕ ವಿಶ್ರಾಂತಿ: ಭಾರತೀಯ ಪರಂಪರೆಯ ಉನ್ನತ ವಿಚಾರಗಳು ಆಂತರಿಕ ಶಾಂತಿ, ಸಮಾಧಾನ, ನೆಮ್ಮದಿಯೇ ಜೀವಿತದ ಪರಮಗುರಿ ಎಂದು ಸಾರಿವೆ. ಇಹ ಲೋಕದ ಭೋಗಗಳು ಎಷ್ಟೇ ಆಕರ್ಷಕವಾಗಿದ್ದರೂ ಅಂತಿಮವಾಗಿ ನಮಗೆ ನಿರಾಳತೆಯನ್ನು ನೀಡುವುದು ಪ್ರಾರ್ಥನೆ, ಧ್ಯಾನ, ಭಜನೆ, ಧಾರ್ಮಿಕ ಪುಸ್ತಕಗಳು, ಉಪನ್ಯಾಸಗಳು, ಸೇವಾ ಚಟುವಟಿಕೆಗಳೇ ಆಗಿವೆ. ಹೀಗಾಗಿ ಆಧ್ಯಾತ್ಮದತ್ತ ಚಿತ್ತವನ್ನು ಹೊರಳಿಸುವುದೂ ವಿಶ್ರಾಂತಿಯ ದಾರಿಯೇ ಆಗಿದೆ.

ದೈನಂದಿನ ವಿಶ್ರಾಂತಿ: ಸಾಮಾನ್ಯ ಅಭಿಪ್ರಾಯ

ದಿನನಿತ್ಯದ ಒತ್ತಡ, ಮಾಹಿತಿ ಪ್ರವಾಹ, ಭಾವನಾತ್ಮಕ ಏರುಪೇರು ಮತ್ತು ಸಾಮಾಜಿಕ ಅಸ್ಥಿರತೆಗಳ ನಡುವೆ ನಾವು ಸಂಪೂರ್ಣವಾಗಿ ವಿಶ್ರಾಂತಿಯನ್ನು ಪಡೆಯುತ್ತಿಲ್ಲ ಎಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ವಿಶ್ರಾಂತಿ ಎಂದರೆ ನಿದ್ರಿಸುವುದಷ್ಟೇ ಎಂಬ ಅಭಿಪ್ರಾಯ ಎಲ್ಲರಲ್ಲಿ ಇರುವಂತಹದ್ದಾಗಿದೆ.

ಖಾಲಿಯಾದ ಜಂಭದ ಚೀಲ

• ಬೇಲೂರು ರಾಮಮೂರ್ತಿ

ಒಬ್ಬ ಜಂಭದ ವ್ಯಕ್ತಿ ಒಂದು ದಿನ ಅತ್ಯಂತ ಬೆಲೆಬಾಳುವ ವಸ್ತ್ರಗಳನ್ನು ಧರಿಸಿ ಊರಿನ ಬೀದಿಯಲ್ಲಿ ನಡೆದು ಹೋಗುತ್ತಿದ್ದ. ಆಗ ಅವನ ಎದುರಿಗೆ ಹೆಂಗಸೊಬ್ಬಳು ತಲೆಯ ಮೇಲೆ ಒಂದು ಗಡಿಗೆ ಹೊತ್ತುಕೊಂಡು ಹೋಗುತ್ತಿದ್ದಳು. ಅವನು ಆ ಆಕೆಯ ಜೊತೆ ಬಹಳ ಗರ್ವದಿಂದ, 'ನಿನ್ನ ತಲೆ ಮೇಲೆ ಇರುವುದು ಏನು?' ಅಂತ ಕೇಳಿದ. ಅದಕ್ಕೆ ಆ ಹೆಂಗಸು, 'ತುಪ್ಪ ಮಾರಲು ಹೊರಟಿದ್ದೇನೆ' ಅಂದಳು. ಆಗ ಅವನು, 'ಎಲ್ಲಿ ತುಪ್ಪ? ತೋರಿಸು' ಅಂದ. ಆಗ ಆ ಹೆಂಗಸು ಗಡಿಗೆಯನ್ನು ತನ್ನ ತಲೆಯ ಮೇಲಿಂದ ನಿಧಾನವಾಗಿ ತೆಗೆಯುವಾಗ ಸ್ವಲ್ಪ ತುಪ್ಪ ಆ ವ್ಯಕ್ತಿಯ ಬಟ್ಟೆಯ ಮೇಲೆ ಚೆಲ್ಲಿತು.

ತಕ್ಷಣ ಜಂಭದ ವ್ಯಕ್ತಿ ಕೋಪದಿಂದ, 'ನನ್ನ ದುಬಾರಿ ವಸ್ತ್ರಗಳ ಮೇಲೆ ತುಪ್ಪ ಚೆಲ್ಲಿ ಇದನ್ನು ನೀನು ಹಾಳು ಮಾಡಿದ್ದೀಯ. ಇದೇ ತರಹದ ಇನ್ನೊಂದು ವಸ್ತ್ರವನ್ನು ಕೊಳ್ಳುವಷ್ಟು ಹಣವನ್ನು ನೀನು ನನಗೆ ಕೊಡಬೇಕು' ಎಂದು ಒತ್ತಾಯ ಮಾಡಿದ. ತುಪ್ಪ ಮಾರುವ ಹೆಂಗಸಿಗೆ ಬಹಳ ಗಾಬರಿಯಾಗಿ ಅವನಲ್ಲಿ ಕ್ಷಮೆಯಾಚಿಸಿ, 'ಇಷ್ಟು ಬೆಲೆಬಾ ಳುವ ವಸ್ತ್ರವನ್ನು ಕೊಳ್ಳುವಷ್ಟು ಹಣ ನನ್ನಲ್ಲಿ ಇಲ್ಲ' ಎಂದು ತನ್ನ ಅಸಹಾಯಕತೆಯನ್ನು ತೋರಿದಳು. ಅವರಿಬ್ಬರ ನಡುವೆ ಗಲಾಟೆ ಶುರುವಾಯಿತು. ಗಲಾಟೆ ನಡೆಯುತ್ತಿರು ವಾಗ ಅಲ್ಲೇ ನಡೆದುಹೋಗುತ್ತಿದ್ದ ಯುವಕನೊಬ್ಬ ಏನೆಂದು ವಿಚಾರಿಸಿದ. ಆಗ ಆ ಹೆಂಗಸು ನಡೆದ್ದನ್ನೆಲ್ಲಾ ತಿಳಿಸಿದಳು. ಆಗ ಆ ಯುವಕ, 'ಅಷ್ಟೇ ತಾನೇ? ನಾನು ಆ ದುಬಾರಿ ವಸ್ತ್ರ ಕೊಳ್ಳುವಷ್ಟು ಹಣವನ್ನು ಈಗಲೇ ಕೊಡುತ್ತೇನೆ, ಆದರೆ ನೀನು ಆ ವಸ್ತ್ರವನ್ನು ನನಗೆ ಈಗಿಂದೀಗಲೇ ಬಿಚ್ಚಿ ಕೊಡಬೇಕು' ಎಂದು ಹಣ ಕೊಟ್ಟ.

ಹಣ ತೆಗೆದುಕೊಂಡ ಜಂಬದ ವ್ಯಕ್ತಿ, 'ನಾನೇಕೆ ಈ ವಸ್ತ್ರವನ್ನು ನಿನಗೆ ಕೊಡಬೇಕು?' ಅಂತ ಕೇಳಿದ. 'ನಾನು ಆ ವಸ್ತ್ರಕ್ಕೆ ಹಣ ಕೊಟ್ಟ ಮೇಲೆ ಆ ವಸ್ತ್ರ ನನ್ನದಾಗುತ್ತಲ್ಲವೇ? ಎಂದ ಯುವಕ. ಆಗ ಜಂಭದ ವ್ಯಕ್ತಿ, 'ಏನು, ನೀನು ನನ್ನನ್ನು ಅವಮಾನ ಮಾಡ ಬೇಕು ಅಂದುಕೊಂಡಿದ್ದೀಯಾ?' ಅಂತ ಕೇಳಿದ. 'ಇದು ಸಹಜವಲ್ಲವೇ?' ಅಂದ ಯುವಕ. ಆಗಲೂ ಜಂಭದ ವ್ಯಕ್ತಿ ತನ್ನ ವಸ್ತ್ರವನ್ನು ಬಿಚ್ಚಿ ಕೊಡಲು ಸಿದ್ಧನಿಲ್ಲದಾಗ ಆ ಯುವಕ, 'ಹಾಗಿದ್ದರೆ ನಾನು ಕೊಟ್ಟ ಹಣದ ದುಪ್ಪಟ್ಟು ಹಣವನ್ನು ನನಗೆ ನೀನು ಕೊಡಬೇಕು' ಎಂದ. ಆಗ ಜಂಬದ ವ್ಯಕ್ತಿ ಇದೇಕೋ 'ಬಹಳ ಅತಿಯಾಯಿತು' ಎಂದ. ಅದಕ್ಕೆ ಯುವಕ ಹಾಗಿದ್ದರೆ 'ಆ ವಸ್ತ್ರವನ್ನು ನನಗೆ ಕೊಟ್ಟುಬಿಡು' ಅಂದ.

ಆಗ ಜಂಭದ ವ್ಯಕ್ತಿಗೆ ವಿಪರೀತ ಸಿಟ್ಟು ಬಂದು 'ನನ್ನ ವಸ್ತ್ರಕ್ಕೆ ಆದ ಮಲೀನತೆಗೆ ನಾನು ಹಣ ಕೇಳಿದರೆ ನೀನು ಏನೇನೋ ಮಾತಾಡಿ ನನಗೆ ಅನ್ಯಾಯ ಮಾಡುತ್ತಿದ್ದೀಯ' ಅಂದ. ಯುವಕ ನಕ್ಕು ವಾಸ್ತವವಾಗಿ, 'ನೀನು ಆ ಹೆಂಗಸಿಗೆ ಮಾಡುತ್ತಿರುವುದು ಅನ್ಯಾಯ. ಒಂದೆರಡು ಕಡೆ ತುಪ್ಪದ ಕಲೆ ಆಯಿತು ಅಂದಾಕ್ಷಣ ಅವಳಿಂದ ಅಷ್ಟೊಂದು ಹಣಕ್ಕೆ ಒತ್ತಾಯ ಮಾಡುವುದೇ? ಅದೂ ಹಣ ಇಲ್ಲದವಳ ಬಳಿ? ಹೀಗೆ ನಡೆದುಕೊಂಡು ನೀನು ಆಕೆಗೆ ಅವಮಾನ ಮಾಡಿದ್ದೀಯ ಜೊತೆಗೆ ನಿನ್ನ ಅಹಂಕಾರ ವನ್ನೂ ಪ್ರದರ್ಶಿಸಿದ್ದೀಯ' ಎಂದ ಯುವಕ. ಕೆಲವು ಕ್ಷಣಗಳ ನಂತರ ಜಂಭದ ವ್ಯಕ್ತಿಗೆ ತನ್ನ ತಪ್ಪಿನ ಅರಿವಾಗಿ ಯುವಕನಿಂದ ಪಡೆದ ಹಣವನ್ನು ಆ ಯುವಕನಿಗೆ ಹಿಂದಿ ರುಗಿಸಿದ. ನಂತರ ತನ್ನ ಜೇಬಿನಿಂದ ಅಷ್ಟೇ ಹಣವನ್ನು ಆ ಹೆಂಗಸಿಗೆ ಕೊಟ್ಟು, 'ಇದು ನಾನು ನಿನಗೆ ಮಾಡಿದ ಅವಮಾನಕ್ಕೆ ನಾನೇ ಮಾಡಿಕೊಂಡ ಶಿಕ್ಷೆ ಮತ್ತು ನಿನಗೆ ಈ ಹಣ ಬಹುಮಾನ' ಎಂದ. ಆ ಹೆಂಗಸಿಗೂ ಮತ್ತು ಯುವಕನಿಗೂ ನೆಮ್ಮದಿಯಾಯಿತು.

ಈ ಕಥೆಯ ತಾತ್ಪರ್ಯ ಏನು ಎಂದರೆ ನಾವು ವಿನಕಾರಣ ಯಾರನ್ನೂ ನೋಯಿಸಬಾರದು ಮತ್ತು ಯಾರ ಬಗೆಗೂ ಅಗೌರವದಿಂದ ನಡೆದುಕೊಳ್ಳಬಾರದು ಎಂಬುದಾಗಿದೆ. ಹಾಗಾಗಿ ಎಲ್ಲರಿಗೂ ಕೃತಜ್ಞರಾಗಿ ಎಲ್ಲರೊಂದಿಗೂ ವಿಶ್ವಾಸದಿಂದ, ಕರುಣೆಯಿಂದ ನಡೆದುಕೊಳ್ಳಬೇಕು.

ಪದಬಂಧ • ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಗಂಡನ ಅಥವಾ ಹೆಂಡತಿಯ ತಂಗಿ (3)
5. ಗಟ್ಟಿಮುಟ್ಟಾದ ದೇಹವುಳ್ಳವನು (4)
6. ಒಳ್ಳೆಯ ಕೆಲಸಕ್ಕೆ ಸಿಕ್ಕಿದ ಮನ್ನಣೆ, ಆದರ (4)
9. ಮಾತನಾಡುವ ರೀತಿಯಲ್ಲಿ ಮದುವೆಯ ಗಂಡು! (3)
10. ಎಲ್ಲರಿಗೂ ತಿಳಿದಿರುವ (5)
11. ಕಾಯುವಿಕೆ (3)
15. ತೇಲಿ ಬರುವ ಸಣ್ಣ ಸುದ್ದಿ (4)
16. ಸಾಗರಕ್ಕೆ ಮತ್ತೊಂದು ಹೆಸರು ಆಗಬಲ್ಲುದು (4)
17. ಸುವಾಸನೆಯುಳ್ಳ ಒಂದು ಸಂಬಾರ ಪದಾರ್ಥ (3)

ಮೇಲಿಂದ ಕೆಳಕ್ಕೆ

1. ಮತ್ತೆ ಮತ್ತೆ ಬರುವುದು (4)
2. ನಾಕ ತೋರಿಸಿದ ಮುಖಂಡ (3)
3. ಕೆಲಸದಲ್ಲಿ ಕುಶಲನಾದವನು (3)
4. ನಂಬಿಕೆ, ವಿಶ್ವಾಸಕ್ಕೆ ಮತ್ತೊಂದು ಹೆಸರು (4)
7. ಹಂತ ಅಥವಾ ಘಟ್ಟ (3)
8. ಕಣ್ಣಿಗೆ ಹಚ್ಚುವ ಕಾಡಿಗೆ (3)
9. ಆತನ ಜಹಗೀರು (3)
11. ಖೈದಿಗಳಿರುವ ಸೆರೆಮನೆ (4)
12. ನಿರಂತರ, ಎಡೆಬಿಡದೆ (4)
13. ಸೋದರಮಾವ (3)
14. ಉರುಳುತ್ತಾ ಬಂತೇ ಹಾವು? (3)

ಸರಿಯುತ್ತರಗಳು

[illegible]

ಶ್ರೀಕೃಷ್ಣನನ್ನು ಕೆಣಕಿ, ಅವನ ರೌದ್ರರೂಪಕ್ಕೆ ಮಂಡಿಯೂರಿದ ಭೀಷ್ಮ ಪಿತಾಮಹರು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಂದು ಪಿತಾಮಹ ಭೀಷ್ಮರು ಕಾದಾಡಿದ ಪರಿ ಹೇಗಿತ್ತೆಂದರೆ ಮಹಾಭಾರತ ಯುದ್ಧ ಹತ್ತೇ ದಿನಕ್ಕೆ ಮುಗಿದು ಹೋಗಬಹುದೇನೋ ಅನಿಸತೊಡಗಿತು ಉಭಯ ಬಣಗಳಿಗೆ! ಆದರೆ ಅರ್ಜುನ ಪ್ರಯೋಗಿಸಿದ ಬಾಣಗಳಿಂದ ತಪ್ಪಿಸಿಕೊಂಡು ಅವನೊಡನೆ ಕಾದಾಡುವುದು ಭೀಷ್ಮರಿಗೆ ಕಷ್ಟವೆನಿಸತೊಡಗಿತು. ತಾನೇ ಮೊಮ್ಮಗನಿಗೆ ಹೇಳಿಕೊಟ್ಟಿದ್ದು! ಅಚ್ಚರಿಯ ವಿಷಯವೆಂದರೆ, ತಾನು ಯಾವುದೇ ಅಸ್ತ್ರವನ್ನು ಪ್ರಯೋಗಿಸಿದರೂ ಅದು ಅರ್ಜುನನನ್ನು ಘಾಸಿಗೊಳಿಸುತ್ತಿಲ್ಲ, ಭೀಷ್ಮರು ಕನಲಿದರು. ಅಜ್ಜ-ಮೊಮ್ಮಗನ ಯುದ್ಧವನ್ನು ಕಾಣುತ್ತ ನಸುನಗುತ್ತಿದ್ದ ಕೃಷ್ಣ, ಪಾರ್ಥ ಸಾರಥಿಯಾಗಿ. ಭೀಷ್ಮರಿಗೆ ತಾನು ಸೋಲುತ್ತಿರುವುದರ ಗುಟ್ಟು ತಿಳಿಯಿತು. ಓಹೋ, ಇದು ಇವನದೇ ಕೆಲಸ ಎಂದು ಕೃಷ್ಣನನ್ನೊಮ್ಮೆ ಕೆಣಕಬೇಕೆನಿಸಿತು.

ಹೇಗೋ ರಣರಂಗದಲ್ಲಿ ತಾನು ಶಸ್ತ್ರವನ್ನು ಹಿಡಿಯುವುದಿಲ್ಲವೆಂದು ಕೃಷ್ಣನ ಕೈಯ್ಯಲ್ಲಿ ಸುದರ್ಶನ ಚಕ್ರವನ್ನು ಹಿಡಿಸುತ್ತೇನೆ ಎಂಬುದಾಗಿ ಪ್ರತಿಜ್ಞೆ ಈ ಹಿಂದೆಯೇ ಮಾಡಿಯಾಗಿತ್ತು. ನಾರಾಯಣನೇ ತನಗೆ ಪಾರಿತೋಷಕವಾಗಿ ಕೊಟ್ಟ ಅಸ್ತ್ರದಿಂದಲೇ ಅವನನ್ನು ಕಂಗೆಡಿಸುವುದು, ಅವನು ಕೊಟ್ಟದ್ದನ್ನು ಅವನಿಗೇ ಹಿಂದಿರುಗಿಸುವುದು. ಹಿಂದೆ ಪರಶುರಾಮಾವತಾರದಲ್ಲಿ ನಾರಾಯಣ ರೂಪಿಯಾದ ಮಹಾವಿಷ್ಣು ತನ್ನ ಶಿಷ್ಯತ್ವಕ್ಕೆ ಮೆಚ್ಚಿ ನೀಡಿದ ಅಮಿತಾಸ್ತ್ರವನ್ನು ಅರ್ಜುನನ ರಥದಲ್ಲಿ ಸಾರಥಿಯಾಗಿ ಕುಳಿತ ಅವನಿಗೇ ಹಿಂದಿರುಗಿಸುವುದು, ಅಂದರೆ ದೈವವನ್ನೇ ಕೆಣಕುವ ಸಾಹಸ. ಭೀಷ್ಮರು ತಡ ಮಾಡಲಿಲ್ಲ, ಆ ಅಸ್ತ್ರದ ಅಧಿದೇವತೆಯಾದ ನಾರಾಯಣನ್ನು ಸ್ಮರಿಸಿ ಶ್ರೀಕೃಷ್ಣ ರೂಪಿಯಾದ ನಾರಾಯಣನ ಹಣೆಗೆ ಬಾಣವನ್ನು ಬಿಟ್ಟೇಬಿಟ್ಟರು. ಕೃಷ್ಣನ ನೊಸಲೊಡೆದು ನೆತ್ತರು ಚಿಮ್ಮಿತ್ತು.

ಪಾರ್ಥಸಾರಥಿ ಕುದುರೆಗಳ ವಾಘೆಯನ್ನು ಕೈಬಿಟ್ಟ. ನೋವಿನಿಂದ ರಥದಿಂದ ಕೆಳಕ್ಕೆ ಜಿಗಿದ. ಪಾಂಡವ, ಕೌರವ ಸೇನೆ ದಿಗ್ಭ್ರಮೆಗೊಂಡಿತು. ಮುಂದೇನಾಗಬಹುದು? ಪ್ರಳಯವೇ, ಬೆಂಕಿಯ ಮಳೆಯೇ, ಚಂಡ ಮಾರುತವೇ, ಭೂಕಂಪನವೇ? ಅದೋ ಬಂತು, ಕೃಷ್ಣನ ಕೈಗೆ ಸುದರ್ಶನಚಕ್ರ. ಅಸುರಾರಿ, ಕೃಷ್ಣ ಮುರಾರಿ ಪ್ರಳಯ ಕಾಲದ ರುದ್ರನಾದ! ಕಣ್ಣುಗಳಲ್ಲಿ ಕಿಡಿಕಾರತೊಡಗಿದ. ಮುಂದೇನಾಗುವುದೋ..? ಎಂಬ ಭೀತಿ ಎಲ್ಲರಿಗೆ.

ಒಂದು ಕ್ಷಣ ಭೀಷ್ಮರಿಗೂ ತಾನು ಮಾಡಿದ ಕೆಲಸ ಸ್ವಲ್ಪ ಹುಡುಗಾಟದ್ದಾಯ್ತು ಎನಿಸದೆ ಇರಲಿಲ್ಲ . ಭೀಷ್ಮರು ರಥದಿಂದಿಳಿದರು, ಮುನಿದು ನಿಂತ ಚಕ್ರಪಾಣಿಗೆ ಮಂಡಿಯೂರಿ 'ಶ್ರೀಮನೋಹರ ಸ್ವಾಮಿ ಪರಾಕು...' ಎಂದು ಸ್ತುತಿಸ ತೊಡಗಿದರು. ಆತ ಶ್ರೀಮನೋಹರ. ಶ್ರೀ ಎಂದರೆ ಲಕ್ಷ್ಮೀ ಎಂದರ್ಥ. ಸಮುದ್ರ ಮಥನದಲ್ಲಿ ಉದ್ಭವಿಸಿದ ಲಕ್ಷ್ಮೀ.

ದೇವಾಧಿ ದೇವತೆಗಳು ಅವಳನ್ನು ಬಯಸಿದರೂ ತನ್ನ ಮನಸ್ಸನ್ನು ಗೆದ್ದ ಮಹಾವಿಷ್ಣುವಿಗೆ ಒಲಿದದ್ದು, ಇವನೇ ಅವನು. ಆದುದರಿಂದಲೇ ಶ್ರೀಮನೋಹರ ಸ್ವಾಮಿ ಪರಾಕು ಎಂಬ ಸ್ತುತಿ. ಸ್ತುತಿಪ್ರಿಯ, 'ಸ್ತುತಿ ಪ್ರಿಯತೆ' ಭಗವಂತನಲ್ಲಿರುವ ಗುಣ . ಅವನನ್ನು ಮಂತ್ರ, ನಾದ, ಗೀತ, ನೃತ್ಯಗಳಲ್ಲಿ ಮೈಮರೆತು ಸ್ತುತಿಸಿದರೆ ಅವನೊಲಿಯದಿದ್ದರೆ ಮತ್ತೆ ಕೇಳಿ! ಈ ಗುಟ್ಟು ಭೀಷ್ಮ ಪಿತಾಮಹರಿಗೆ ಗೊತ್ತಿತ್ತು.

ನೀನು ಭಗವಂತ ಸ್ವರೂಪ ಅನ್ನುವುದರಲ್ಲಿ ಸಂಶಯವೇ ಇಲ್ಲ, ಹಾಗಾಗಿ ನನ್ನ ಈ ಮಾನಸ ಪೂಜೆಯಲ್ಲಿ ನನ್ನ ಬದುಕಲ್ಲಿ ಮಾಡಿರಬಹುದಾದ ಅಪರಾಧಗಳನ್ನು ಮನ್ನಿಸೆಂದು 'ಕರ ಚರಣ ಕೃತಂ ವಾ ಕಾಯಜಂ ಕರ್ಮಜಂ ವಾ ವಿಹಿತಂ ಅವಿಹಿತಂ ವಾ ಸರ್ವಮೇತತ್ ಕ್ಷಮಸ್ವ ಎಂಬ ಆತ್ಮನಿವೇದನೆಯನ್ನು ನಿನ್ನಲ್ಲಿ ಮಾಡಿಕೊಂಡಿದ್ದೇನೆ. ನಿನ್ನೆಲ್ಲಾ ರೂಪಗಳನ್ನು ನಾನು ಕಂಡವನು. ನಿನ್ನ ರೌದ್ರರೂಪವೊಂದನ್ನು ಕಾಣುವ ಆಸೆಯೊಂದಿತ್ತು ಅದಕ್ಕಾಗಿ ನಿನ್ನನ್ನು ಕೆಣಕಿದೆ. ತಾಯಿಯ ಹಣೆಗೆ ಮಗು ಒದ್ದರೆ ತಾಯಿ ಮಗುವನ್ನು ಅಪ್ಪಿಕೊಳ್ಳುತ್ತಾಳೆಯೇ ಹೊರತು, ಶಿಕ್ಷಿಸುವುದಕ್ಕಂತು ಸಾಧ್ಯ ಹೇಳು? ಇನ್ನು ಹೀಗೆ ಸಮಯವನ್ನು ಕಳೆಯುವುದರಲ್ಲಿ ಅರ್ಥವಿಲ್ಲ, ಶ್ರೀಕೃಷ್ಣಾ, ನನ್ನ ಕರ್ಮವನ್ನು ಮಾಡಲು ನನಗೆ ಅನುವು ಮಾಡಿಕೊಡು. ಜಯಾಪಜಯಗಳು ನನ್ನದಲ್ಲ, ಅದು ನಿನ್ನ ನಿರ್ಧಾರ ಎಂಬ ಅರಿವು ನನಗಿದೆ. ಭೀಷ್ಮರ ಈ ಆತ್ಮನಿವೇದನೆಗೆ ಕೃಷ್ಣ ತಲೆದೂಗಿದ, ಭೀಷ್ಮರು ಮತ್ತೆ ರಥಾರೂಢರಾಗಿ ಧನುಸ್ಸನ್ನು ಎದೆಗೇರಿಸಿಕೊಂಡರು.

ಸತ್ಸಂಗ ಸಂಗ್ರಹದಲ್ಲಿ ಸಿಕ್ಕ ಈ ಪ್ರಸಂಗ ಬದುಕಿನಲ್ಲಿ ಕೆಲವೊಮ್ಮೆ ನಮ್ಮಿಂದ ಅಪರಾಧಗಳಾದರೂ, ತಿದ್ದಿಕೊಳ್ಳುವುದಕ್ಕೆ ಅವಕಾಶವಿದೆ ಎಂಬುದನ್ನು ಸಾರುತ್ತದೆ. ಪಶ್ಚಾತಾಪಕ್ಕೆ ಯಾವುದೇ ವಯಸ್ಸಿನ ಮಿತಿ ಇಲ್ಲ, ಎಂದು ನಾವು ತಿದ್ದಿಕೊಂಡು ಭಗವಂತನಿಗೆ ಶರಣಾಗುತ್ತೇವೋ, ಅಂದಿನಿಂದ ನಮ್ಮ ಮುಕ್ತಿಯೆಡಗಿನ ಹೆಜ್ಜೆಗಳು ಪ್ರಾರಂಭವಾಗುತ್ತದೆ. ಸರ್ವೇ ಜನಾ ಸುಖಿನೋ ಭವಂತು..!

ಲೀಲೆಯೇಂ ಬಾಳೆಲ್ಲ ಛೀ ತಳ್ಳು ಹಾಸ್ಯವನು

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

**ಬಾಲರೇಂ ನಾವಿನ್ನುಮೆನುತ ಪಲ್ಕಿಡಿದು?
ಖೇಲನವ ಬೇಡವೆನುವರನು
ವಿಧಿರಾಯನವ–
ಹೇಳಿಪನು ಸೆರೆವಿಡಿದು–ಮಂಕುತಿಮ್ಮ**

ನಮ್ಮ ಬಾಳೆಲ್ಲವೂ ಆ ಭಗವಂತ ಆಡಿಸುವ ಆಟವೇ? ಹಾಗಾದರೆ ನಮ್ಮದೇನೂ ಪಾತ್ರವೇ ಇಲ್ಲವೇ? ಇದನ್ನೆಲ್ಲವನ್ನೂ ಕೇಳಲು ನಾವೇನು ಮಕ್ಕಳೆ? ನಾವೇನು ಮೂರ್ಖರೆ? ಎಲ್ಲವೂ ಅವನ ಆಟ ಎನ್ನುವುದೊಂದು ಹಾಸ್ಯವೇ ಆಗಿದೆ ಎಂದು ಹೇಳುವ ಮನಸ್ಥಿತಿಯವರನ್ನೂ ಸಹ ಆ ಭಗವಂತನು ಸೆರೆಹಿಡಿದು ತನ್ನ ಕಬ್ಜದಲ್ಲಿಯೇ ಇಟ್ಟುಕೊಂಡು ಅವರನ್ನೂ ಸಹ ಆಟ ಆಡಿಸುತ್ತಲೇ ಇದ್ದಾನೆ. ಆ ವಿಧಿ ಎಂಬುದು ಯಾರನ್ನೂ ಬಿಟ್ಟಿಲ್ಲ, ಎಲ್ಲರೂ ಸಹ ಈ ಬದುಕು ಎಂಬ ಗೋಳಾಟದಿಂದ ಮುಕ್ತವಾಗಿಲ್ಲ ಎಂದು ಹೇಳುತ್ತಾರೆ.

ಬದುಕಿನಲ್ಲಿ ಬರುವ ಏರು ಪೇರುಗಳು, ಏಳು ಬೀಳುಗಳನ್ನೆಲ್ಲವನ್ನೂ ಕೆಲವರು ಆ ಭಗವಂತನ ಮಹಿಮೆ ಎಂದರೆ, ಮತ್ತೆ ಕೆಲವರು ಇವೆಲ್ಲವೂ ನಮ್ಮ ಕೃತ್ಯಫಲದ ಫಲಿತಾಂಶ ಎಂದಷ್ಟೇ ನಂಬುತ್ತಾರೆ. ಆಸ್ತಿಕರು ಭಗವಂತನ ಮೇಲೆ ಭಾರ ಹಾಕಿದರೆ ನಾಸ್ತಿಕತನಾದವರು ನಮ್ಮದೇ ಈ ಕೃತ್ಯಗಳು ಎಂದುಕೊಳ್ಳುತ್ತಾರೆ. ಈ ಜಗತ್ತಿನಲ್ಲಿ ಹುಟ್ಟಿದ ಮೇಲೆ ಆ ಭಗವಂತನ ಲೀಲಾವಿನೋದ ಗಳನ್ನು ನಂಬುವುದೂ ಆ ಭಗವಂತನ ಆಟವೇ ಸರಿ. ಹಾಗೆಯೇ ನಂಬದೆ ಇರುವುದೂ ಸಹ ಆ ಭಗವಂತನ ಆಟವೇ ಹೌದು. ಯಾವುದೇ ಒಂದು ವ್ಯವಸ್ಥೆಯನ್ನು, ಈ ಪ್ರಕೃತಿಯನ್ನು, ಈ ವ್ಯವಸ್ಥೆಯನ್ನು, ಆ ಭಗವಂತನನ್ನು ನಂಬುವ ಬುದ್ಧಿ ಕೊಟ್ಟವನೂ ಆ ಭಗವಂತನೇ, ಹಾಗೆಯೇ ನಂಬದಿರುವ ಬುದ್ಧಿಯನ್ನು ಕೊಟ್ಟವನೂ ಸಹ ಆ ಭಗವಂತನೇ! ಆದುದರಿಂದ 'ಈ ಬಾಳು ಎಂಬುದು ಲೀಲೆಯೇಂ? ಎಲ್ಲವೂ ಅವನಾಡಿಸಿದಂತೆ ಆಡಬೇಕು ಎನ್ನುವುದು ಮಕ್ಕಳಾಟಿಕೆ ಎನ್ನುವ ಮನಸ್ಥಿತಿಯನ್ನೂ ಸಹ ನೀಡಿದವನೂ ಸಹ ಆ ಭಗವಂತನೆ ಆಗಿದ್ದಾನೆ. ಇಲ್ಲಿ ಆಗುವಂತಹ ಆಗುಹೋಗುಗಳನ್ನು ನಂಬಲೂ, ನಂಬದೆ ಇರಲೂ ಈ ಎರಡಕ್ಕೂ ಆ ಭಗವಂತನೇ ಕಾರಣ. ಆಸ್ತಕರಾದರೋ ಆ ಭಗವಂತನನ್ನು ನಂಬಿ ಆತನಿಗೆ ಶರಣು ಹೋಗಿ ಜೀವನ ನಡೆಸಿದರೆ, ನಾಸ್ತಿಕನು ನಂಬದೆ ಇದ್ದು ತನಗೆ ತಾನು ಅರಿವಿಲ್ಲದೆಯೇ ಆ ಪರಾಶಕ್ತಿಯಲ್ಲಿ ಲೀನವಾಗಿರುತ್ತಾನೆ, ಅಂದರೆ ಆ ಭಗವಂತನ ಲೀಲೆಗಳನ್ನು ನಂಬದಿದ್ದರೂ ಸಹ ಆ ಭಗವಂತ ಆಡಿಸುವ ನಾಟಕದಲ್ಲಿ ಈತನು ನಾಸ್ತಿಕನಾಗಿಯೋ, ನಂಬಿಕೆ ಇರದವನಾಗಿಯೋ ತನ್ನ ನಾಟಕವನ್ನು ಈ ಜಗತ್ ನಾಟಕರಂಗದಲ್ಲಿ ಪಾತ್ರ ನಿರ್ವಹಿಸುತ್ತಲಿರುತ್ತಾನೆ. ಆದುದರಿಂದ ಆ ವಿಧಿಯ ಹಿಡಿತ ಎಂಬುದು ಯಾರನ್ನೂ ಬಿಟ್ಟಿ ರುವುದಿಲ್ಲ ಎಂಬುದು ಈ ಕಗ್ಗದ ಅರ್ಥ ವಾಗಿದೆ.

ಈ ಜಗತ್ತು ಎಂಬುದು ನಮ್ಮ ಅರಿವಿಗೆ ಬಾರದ ಒಂದು ಸೂತ್ರದ ಆಣತಿಯಂತೆಯೇ ನಡೆಯುತ್ತಲಿದೆ. ಕಣ್ಣಿಗೆ ಕಾಣದ ಸೂತ್ರದ ಒಂದಕ್ಕೊಂದು ಬಿಡಿಸಲಾರದ ಬಂಧನದಿಂದ ಅಂಟಿನ ನಂಟಾಗಿ ಅದು ಗಂಟುಗಳಾಗಿ ನಡೆಯುತ್ತದೆ. ಆದರಿಂದ ನಾವು ಬೇರೆಯಾಗಲು ಸಾಧ್ಯವೇ ಇಲ್ಲ. ನಾವೂ ಸಹ ಅದರ ಪ್ರಭಾವಕ್ಕೊಳಗಾಗಿ ಒಪ್ಪುತ್ತೇವೆಯೋ, ಇಲ್ಲವೋ ಅಥವಾ ನಂಬುತ್ತೇವೆಯೋ, ಇಲ್ಲವೋ ಪರಿಣಾಮಗಳನ್ನು ಅನುಭವಿಸಲೇಬೇಕು, ಇದರಿಂದ ಯಾರೂ ಸಹ ಹೊರತಾಗಿಲ್ಲ ಎಂಬುದನ್ನು ಈ ಕಗ್ಗದಲ್ಲಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಪಘಾತ: ಓಟಗಾರ ಫೌಜಾ ಸಿಂಗ್ ಸಾವು

ಚಂಡೀಗಢ: ಅನುಭವಿ ಮ್ಯಾರಥಾನ್ ಓಟಗಾರ ಫೌಜಾ ಸಿಂಗ್ ಅವರು ಅಪರಿಚಿತ ವಾಹನ ಡಿಕ್ಕಿ ಹೊಡೆದು ಸೋಮವಾರ ಮೃತಪಟ್ಟಿದ್ದಾರೆ. ಅವರಿಗೆ 114 ವರ್ಷ ವಯಸ್ಸಾಗಿತ್ತು. ಪಂಜಾಬ್‌ನ ಜಲಂಧರ್ ಜಿಲ್ಲೆಯ ಬಿಯಾಸ್ ಗ್ರಾಮದ ರಸ್ತೆಯಲ್ಲಿ ಮಧ್ಯಾಹ್ನ 3.30ರ ಸುಮಾರಿಗೆ ನಡೆದುಕೊಂಡು ಹೋಗುತ್ತಿದ್ದಾಗ, ಭೋಗ್ಪುರ ಕಡೆಯಿಂದ ಬಂದ ಕಾರು ಡಿಕ್ಕಿ ಹೊಡೆದಿದ್ದರಿಂದ ಅವರ ತಲೆಗೆ ತೀವ್ರ ಗಾಯವಾಗಿತ್ತು. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದರೂ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ. 1911ರಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ ಸಿಂಗ್, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಮ್ಯಾರಥಾನ್‌ಗಳಲ್ಲಿ ಭಾಗವಹಿಸಿ ಅನೇಕ ದಾಖಲೆಗಳನ್ನು ಮುಡಿಗೇರಿಸಿಕೊಂಡಿದ್ದರು. ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ಪ್ರಥಮ ಶತಾಯುಷಿ ಎಂಬ ಕೀರ್ತಿಗೂ ಪಾತ್ರರಾಗಿದ್ದರು.

ಪ್ರಧಾನಿ ಮೋದಿ ಸಂತಾಪ: ಫೌಜಾ ಸಿಂಗ್ ಅವರ ನಿಧನಕ್ಕೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಂತಾಪ ಸೂಚಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಫೌಜಾ ಸಿಂಗ್ ವಿಶಿಷ್ಟ ವ್ಯಕ್ತಿತ್ವದಿಂದ ಪರಿಚಿತರು. ಭಾರತದ ಯುವಕರಿಗೆ ಫಿಟ್ನೆಸ್ ಎಂಬ ಪ್ರಮುಖ ವಿಷಯದ ಬಗ್ಗೆ ಸ್ಫೂರ್ತಿ ನೀಡಿದ ರೀತಿ ಅಸಾಧಾರಣವಾಗಿದೆ. ಅವರು ಅದ್ಭುತ ದೃಢನಿಶ್ಚಯ ಹೊಂದಿದ್ದ ಕ್ರೀಡಾಪಟುವಾಗಿದ್ದರು. ಅವರ ನಿಧನ ನೋವಿನ ಸಂಗತಿಯಾಗಿದೆ ಎಂದು ಬರೆದುಕೊಂಡಿದ್ದಾರೆ.

ಜಪಾನ್ ಓಪನ್ ಸಹೋದರಿಯರ ನಿರ್ಗಮನ

ಟೋಕಿಯೊ: ಪಾಂಡಾ ಸಹೋದರಿಯಾದ ಋತುಪರ್ಣ ಶ್ವೇತಪರ್ಣ ಅವರು ಇಲ್ಲಿ ಮಂಗಳವಾರ ಆರಂಭವಾದ ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 39ನೇ ಸ್ಥಾನದಲ್ಲಿರುವ ಭಾರತದ ಜೋಡಿಯು 1321, 721ರಿಂದ ಆತಿಥೇಯ ದೇಶದ ಕೊಕೊನಾ ಇಶಿಕಾವಾ ಮತ್ತು ಮೈಕೊ ಕವಾಜೊ ಅವರಿಗೆ ಹೆಚ್ಚಿನ ಪ್ರತಿರೋಧ ತೋರದೆ ಮಣಿಯಿತು. ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು, ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಮತ್ತು ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಬುಧವಾರ ಅಭಿಯಾನ ಆರಂಭಿಸಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಹರಾಜಿನಲ್ಲಿ 6 ತಂಡಗಳು ಭಾಗಿ | 13.20 ಲಕ್ಷ ರು. ಗರಿಷ್ಠ ಮೊತ್ತಕ್ಕೆ ಹುಬ್ಬಳ್ಳಿ ಟೈಗರ್ಸ್ ಪಾಲಾದ ದೇವದತ್ ಪಡಿಕ್ಕಲ್

ಮಹಾರಾಜ 4ನೇ ಟ್ರೋಫಿ: ಪಡಿಕ್ಕಲ್‌ಗೆ ಭಾರೀ ಮೊತ್ತ

ಬೆಂಗಳೂರು: ನಾಲ್ಕನೇ ಆವೃತ್ತಿಯ ಮಹಾರಾಜ ಕ್ರಿಕೆಟ್ ಟ್ರೋಫಿಗೆ ನಡೆದ ಹರಾಜಿನಲ್ಲಿ 13.20 ಲಕ್ಷ ರು. ಮೊತ್ತಕ್ಕೆ ಹುಬ್ಬಳ್ಳಿ ಟೈಗರ್ಸ್ ತಂಡದ ಪಾಲಾದ ಬ್ಯಾಟ್ಸ್‌ಮನ್ ದೇವದತ್ ಪಡಿಕ್ಕಲ್ ಟೂರ್ನಿಯ ಇತಿಹಾಸದಲ್ಲೇ ಗರಿಷ್ಠ ಮೊತ್ತಕ್ಕೆ ಬಿಕರಿ ಆದ ಆಟಗಾರರಾಗಿ ಹೊರಹೊಮ್ಮಿದರು.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಮಹಾ ರಾಜ ಟ್ರೋಫಿ ಆಟಗಾರರ ಹರಾಜು ಪ್ರಕ್ರಿಯೆ 4ನೇ ಆವೃತ್ತಿಯಲ್ಲಿ 6 ತಂಡಗಳು ಪಾಲ್ಗೊಂಡಿದ್ದವು.

ಅಭಿನವ್ ಮನೋಹರ್, ಅನುಭವಿ ಬ್ಯಾಟ್ಸ್‌ಮೆನ್ ಮನೀಷ್ ಪಾಂಡೆ ತಲಾ 12.20 ಲಕ್ಷ ಪಡೆದರು. ವಿದ್ವತ್ ಕಾವೇರಪ್ಪ 10.80 ಲಕ್ಷಕ್ಕೆ ಶಿವಮೊಗ್ಗ ಲಯನ್ಸ್, ವಿದ್ಯಾಧರ್ ಪಾಟೀಲ್ ಬೆಂಗಳೂರು ಬ್ಲಾಸ್ಟರ್ಸ್‌ನಿಂದ 8.40 ಲಕ್ಷಗಳನ್ನು ಪಡೆದರು.

ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರ ಪುತ್ರ ಸಮಿತ್ ದ್ರಾವಿಡ್ ಬಿಕರಿಯಾಗದೆ ನಿರಾಸೆ ಅನುಭವಿಸಿದರು. ಕಳೆದ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದ ಸಮಿತ್ ಏಳು ಪಂದ್ಯಗಳನ್ನು ಆಡಿ 11.71 ರ ಸರಾಸರಿಯಲ್ಲಿ ಕೇವಲ 82 ರನ್ ಗಳಿಸಿ ಬ್ಯಾಟಿಂಗ್ ವೈಫಲ್ಯ ಕಂಡಿದ್ದರು. ಹೀಗಾಗಿ ಅವರನ್ನು ಈ ಬಾರಿ ಯಾವುದೇ ಫ್ರಾಂಚೈಸಿ ಖರೀದಿ ಮಾಡಲು ಮನಸ್ಸು ಮಾಡಲಿಲ್ಲ.

ಶಿವಮೊಗ್ಗ ಲಯನ್ಸ್: ಕೌಶಿಕ್ ವಿ, ಹಾರ್ದಿಕ್ ರಾಜ್, ಅವಿನಾಶ್ ಬಿ, ನಿಹಾಲ್ ಉಳ್ಳಾಲ್, ವಿದ್ವತ್ ಕಾವೇರಪ್ಪ, ಅನಿರುಧಾ ಜೋಶಿ, ಅನೀಶ್ವರ್ ಗೌತಮ್, ಧ್ರುವ ಪ್ರಭಾಕರ್, ಸಂಜಯ್ ಸಿ, ಆನಂದ್ ದೊಡ್ಡಮನಿ, ಸಾಹಿಲ್ ಶರ್ಮಾ, ಭರತ್ ಧುರಿ, ದೀಪಕ್ ದೇವಾಡಿಗ, ರೋಹಿತ್ ಕುಮಾರ್ ಕೆ, ತುಷಾರ್ ಸಿಂಗ್, ದರ್ಶನ್ ಎಂ.ಬಿ., ಮರಿಬಸವ ಸಿ.ಗೌಡ, ಸಿರೀಶ್ ಬಳಗಾರ.

ಮೈಸೂರು ವಾರಿಯರ್ಸ್: ಕರುಣ್ ನಾಯರ್, ಕಾರ್ತಿಕ್ ಸಿಎ, ಪ್ರಸಿದ್ಧ್ ಕೃಷ್ಣ, ಕಾರ್ತಿಕ್ ಎಸ್‌ಯು, ಮನಿ ೀಶ್ ಪಾಂಡೆ, ಗೌತಮ್ ಕೆ, ಯಶೋವರ್ಧನ್ ಪರಂತಪ್, ವೆಂಕಟೇಶ್ ಎಂ, ಹರ್ಷಿಲ್ ಧರ್ಮಾನಿ, ಲಂಕೇಶ್ ಕೆ.ಎಸ್, ಕುಮಾರ್ ಎಲ್ ಆರ್, ಗೌತಮ್ ಮಿಶ್ರಾ, ಶಿಖರ್ ಶೆಟ್ಟಿ, ಸುಮಿತ್ ಕುಮಾರ್, ಧನುಷ್ ಗೌಡ, ಕುಶಾಲ್ ಎಂ ವಾಧ್ವಾನಿ, ಶರತ್ ಶ್ರೀನಿವಾಸ್, ಶರತ್.

ಮಂಗಳೂರು ಡ್ರಾಗನ್ಸ್: ಅಭಿಲಾಷ್ ಶೆಟ್ಟಿ, ಮ್ಯಾಕ್ನೀಲ್ ನೊರೊನ್ಹಾ, ಲೋಚನ್ ಎಸ್ ಗೌಡ, ಪಾರಸ್ ಗುರ್ಬಕ್ಸ್ ಆರ್ಯ, ಶರತ್ ಬಿಆರ್, ರೋನಿ ಮೋರ್, ಶ್ರೇಯಸ್ ಗೋಪಾಲ್, ಮೇಲು ಕ್ರಾಂತಿ ಕುಮಾರ್, ಸಚಿನ್ ಶಿಂಧೆ, ಅನೀಶ್ ಕೆವಿ, ತಿಪ್ಪಾ ರೆಡ್ಡಿ, ಆದಿತ್ಯ ನಾಯರ್, ಆದರ್ಶ್ ಪ್ರಜ್ವಲ್, ಅಭಿಷೇಕ್ ಪ್ರಭಾಕರ್, ಶಿವರಾಜ್ ಎಸ್.

ಹುಬ್ಬಳ್ಳಿ ಟೈಗರ್ಸ್: ಕೆ.ಸಿ.ಕಾರಿಯಪ್ಪ, ಶ್ರೀಜಿತ್ ಕೆ. ಎಲ್., ಕಾರ್ತಿಕೇಯ ಕೆ.ಪಿ., ಮಾನ್ವತ್ ಕುಮಾರ್ ಎಲ್., ಅಭಿನವ್ ಮನೋಹರ್, ದೇವದತ್ ಪಡಿಕ್ಕಲ್, ಮೊಹಮ್ಮದ್ ತಾಹಾ, ವಿಜಯರಾಜ್ ಬಿ, ಪ್ರಖರ್ ಚತುರ್ವೇದಿ, ಸಂಕಲ್ಪ್ ಎಸ್.ಎಸ್, ಸಮರ್ಥ್ ನಾಗರಾಜ್, ರಕ್ಷಿತ್ ಎಸ್, ನಿತಿನ್ ಎಸ್ ನಾಗರಾಜ, ಯಶ್ ರಾಜ್ ಪುಂಜಾ, ರಿತೇಶ್ ಎಲ್.

ಗುಲ್ಬರ್ಗಾ ಮಿಸ್ಟಿಕ್ಸ್: ವೈಶಾಕ್ ವಿಜಯ್‌ಕುಮಾರ್, ಲುವ್ನಿತ್ ಸಿಸೋಡಿಯಾ, ಪ್ರವಿಣ್ ದುಬೆ, ಸ್ಮರಣ್ ಆರ್, ಸಿದ್ಧತ್ ಕೆವಿ, ಮೋನಿಶ್ ರೆಡ್ಡಿ, ಹರ್ಷ ವರ್ಧನ್ ಖೂಬಾ, ಪೃಥ್ವಿರಾಜ್, ಲವಿಶ್ ಕೌಶಲ್, ಶೀತಲ್ ಕುಮಾರ್, ಜಾಸ್ಪರ್ ಇಜೆ, ಮೋಹಿತ್ ಬಿಎ, ಫೈಜಾನ್ ರೈಜ್, ಸೌರಬ್ ಎಂ ಮುತ್ತೂರ್, ಎಸ್‌ಜೆ ನಿಕಿನ್ ಬವನ್, ಯೂಸ್‌ನಿತ್ ಪವನ್, ಪ್ರಜ್ಞಿತ್.

ಬೆಂಗಳೂರು ಬ್ಲಾಸ್ಟರ್ಸ್: ಮಯಾಂಕ್ ಅಗರ್ವಾಲ್, ಶುಭಾಂಗ್ ಹೆಗ್ಡೆ, ನವೀನ್ ಎಂಜಿ, ಸೂರಜ್ ಅಹುಜಾ, ಎ ರೋಹನ್ ಪಾಟೀಲ್, ಚೇತನ್ , ಮೊಹ್ಸಿನ್ ಖಾನ್, ವಿದ್ಯಾಧರ್ ಪಾಟೀಲ್, ಸಿದ್ಧಾರ್ಥ್ ಅಖಿಲ್. ಮಾಧವ್ ಪ್ರಕಾಶ್ ಬಜಾಜ್, ರೋಹನ್ ನವೀನ್, ಕೃತಿಕ್ ಕೃಷ್ಣ, ಅದ್ವಿತ್ ಎಂ ಶೆಟ್ಟಿ, ಭುವನ್ ಮೋಹನ್ ರಾಜು, ರೋಹನ್ ಎಂ ರಾಜು, ನಿರಂಜನ್ ನಾಯಕ್, ಪ್ರತೀಕ್ ಜೈನ್, ಇಶಾನ್ ಎಸ್.

ದ್ರಾವಿಡ್ ಪುತ್ರ ಸಮಿತ್‌ಗೆ ನಿರಾಸೆ

ಟೀಮ್ ಇಂಡಿಯಾದ ದಿಗ್ಗಜ ಕ್ರಿಕೆಟಿಗ, ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರ ಪುತ್ರ ಸಮಿತ್ ದ್ರಾವಿಡ್ ಈ ಬಾರಿಯ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಹರಾಜು ಪ್ರಕ್ರಿಯೆಯಲ್ಲಿ ಅನ್‌ಸೋಲ್ಡ್ ಆಗಿದ್ದಾರೆ. ಕಳೆದ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದ ಸಮಿತ್ ಅವರನ್ನು ಹರಾಜಿಗೂ ಮುನ್ನ ತಂಡದಿಂದ ಬಿಡುಗಡೆ ಮಾಡಿತ್ತು. ಹರಾಜು ಪ್ರಕ್ರಿಯೆಯಲ್ಲಿ ಸಮಿತ್ ದ್ರಾವಿಡ್ ಹೆಸರು ಬಂದರೂ ಕೂಡ ಅವರನ್ನು ಯಾವುದೇ ಫ್ರಾಂಚೈಸಿ ಖರೀದಿ ಮಾಡಲು ಮನಸ್ಸು ಮಾಡಲಿಲ್ಲ. 2024 ರ ಋತುವಿನಲ್ಲಿ ಸಮಿತ್ ಏಳು ಪಂದ್ಯಗಳನ್ನು ಆಡಿದರು. 11.71 ರ ಸರಾಸರಿಯಲ್ಲಿ ಕೇವಲ 82 ರನ್ ಗಳಿಸಿದರು. ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ 24 ಎಸೆತಗಳಲ್ಲಿ 33 ರನ್ ಗಳಿಸಿದ್ದು ಅತ್ಯಧಿಕ ಸ್ಕೋರ್ ಆಗಿತ್ತು.

ಗರಿಷ್ಠ ಮೊತ್ತಕ್ಕೆ ಟಾಪ್-5 ಆಟಗಾರರು ಬಿಕರಿ

ಆಟಗಾರ	ತಂಡ
ದೇವದತ್ ಪಡಿಕ್ಕಲ್ 13.20 ಲಕ್ಷ	ಹುಬ್ಬಳ್ಳಿ ಟೈಗರ್ಸ್
ಅಭಿನವ್ ಮನೋಹರ್ 12.20 ಲಕ್ಷ	ಹುಬ್ಬಳ್ಳಿ ಟೈಗರ್ಸ್
ಮನೀಷ್ ಪಾಂಡೆ 12.20 ಲಕ್ಷ	ಮೈಸೂರು ವಾರಿಯರ್ಸ್
ವಿದ್ವತ್ ಕಾವೇರಪ್ಪ- 10.80 ಲಕ್ಷ	ಶಿವಮೊಗ್ಗ ಲಯನ್ಸ್
ವಿದ್ಯಾಧರ್ ಪಾಟೀಲ್ 8.40 ಲಕ್ಷ	ಬೆಂಗಳೂರು ಬ್ಲಾಸ್ಟರ್ಸ್

170 ರನ್‌ಗಳ ಅಂತರದಿಂದ ಗೆದ್ದ ಆಸ್ಟ್ರೇಲಿಯಾ | ಆರು ವಿಕೆಟ್‌ಗಳ ಕಬಳಿಸಿದ ಸ್ಟಾರ್ಕ್

27 ರನ್‌ಗಳಿಗೆ ವೆಸ್ಟ್ ಇಂಡೀಸ್ ಆಲೌಟ್

ಕಿಂಗ್‌ಸ್ಟನ್: ಆಸ್ಟ್ರೇಲಿಯಾ ವಿರುದ್ಧ ನಡೆದ ಪಿಂಕ್ ಬಾಲ್ ಟೆಸ್ಟ್‌ನ ಎರಡನೇ ಇನ್ನಿಂಗ್ಸ್‌ನಲ್ಲಿ ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ತೀರಾ ಕಳಪೆ ಆಟ ತೋರಿದೆ. 7 ಮಂದಿ ಬ್ಯಾಟ್ಸ್‌ಮನ್‌ಗಳು ಸೊನ್ನೆ ಸುತ್ತುವ ಮೂಲಕ ಕೇವಲ 27 ರನ್‌ಗಳಿಗೆ ಆಲೌಟ್ ಆಗಿದೆ. ಆಸ್ಟ್ರೇಲಿಯಾ ಈ ಪಂದ್ಯವನ್ನು 170 ರನ್‌ಗಳಿಂದ ಗೆದ್ದುಕೊಂಡಿದೆ.

ಇಲ್ಲಿನ ಸಬೀನಾ ಪಾರ್ಕ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯ ಮೂರನೇ ಪಂದ್ಯದಲ್ಲಿ ಅತಿ ಕಡಿಮೆ ಮೊತ್ತಕ್ಕೆ ವೆಸ್ಟ್ ಇಂಡೀಸ್ ಆಲೌಟ್ ಆಯಿತು. ಆಸ್ಟ್ರೇಲಿಯಾ ಪರ ಈ ಮಾದರಿಯಲ್ಲಿ 100 ಪಂದ್ಯಗಳನ್ನಾಡಿದ ಸ್ಟಾರ್ ವೇಗಿ ಮಿಚೆಲ್ ಸ್ಟಾರ್ಕ್ 6 ವಿಕೆಟ್ ಪಡೆದು ಸಂಭ್ರಮಿಸಿದರು. ವೆಸ್ಟ್ ಇಂಡೀಸ್‌ನ ಏಳು ಬ್ಯಾಟರ್‌ಗಳು ಶೂನ್ಯಕ್ಕೆ ಔಟಾಗಿದ್ದು ವಿಶೇಷ.

ಮೊದಲ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ 225 ರನ್ ದಾಖಲಿಸಿತ್ತು. ವಿಂಡೀಸ್ ಕೇವಲ 143 ರನ್‌ಗಳಿಗೆ ಸರ್ವಪತನವಾಗಿ 82 ರನ್‌ಗಳ ಹಿನ್ನಡೆ ಅನುಭವಿಸಿತ್ತು. ಆಸ್ಟ್ರೇಲಿಯಾ ಎರಡನೇ ಇನ್ನಿಂಗ್ಸ್‌ನಲ್ಲಿ 121 ರನ್‌ಗಳಿಗೆ ಆಲೌಟ್ ಆಗುವ ಮೂಲಕ ವಿಂಡೀಸ್‌ಗೆ 203 ರನ್‌ಗಳ ಗೆಲುವಿನ ಗುರಿ ನೀಡಿತು.

ಎರಡನೇ ಇನ್ನಿಂಗ್ಸ್ ಆರಂಭಿಸಿದ ವಿಂಡೀಸ್ ಕೇವಲ 14.3 ಓವರ್‌ಗಳಲ್ಲಿ ಆಲೌಟ್ ಆಯಿತು. ಕ್ಯಾಂಬೆಲ್, ಆ್ಯಂಡರ್ಸನ್, ಬ್ರೆಂಡನ್ ಕಿಂಗ್, ಚೇಸ್, ಶಮರ್ ಜೋಸೆಫ್, ಜೇಡನ್ ಸೀಲ್ಸ್, ವಾರಿಕನ್ ಶೂನ್ಯಕ್ಕೆ ಔಟಾದರು.

ಮಿಚೆಲ್ ಸ್ಟಾರ್ಕ್ 7.3 ಓವರ್‌ಗಳಲ್ಲಿ 9 ರನ್ ನೀಡಿ 6 ವಿಕೆಟ್ ಕಬಳಿಸಿದರು. ಸ್ಕಾಟ್ ಬೋಲ್ಯಾಂಡ್ ಹ್ಯಾಟ್ರಿಕ್ ವಿಕೆಟ್ ಪಡೆದು ಆಸ್ಟ್ರೇಲಿಯಾ ಗೆಲುವಿಗೆ ಕಾರಣರಾದರು.ಈ ಹಿಂದೆ ಟೆಸ್ಟ್‌ನಲ್ಲಿ ಕಡಿಮೆ ಮೊತ್ತಕ್ಕೆ ನ್ಯೂಜಿಲೆಂಡ್ ಆಲೌಟ್ ಆಗಿತ್ತು. ಇಂಗ್ಲೆಂಡ್ ವಿರುದ್ಧ ನ್ಯೂಜಿಲೆಂಡ್ 26 ರನ್‌ಗಳಿಗೆ ಆಲೌಟ್ ಆಗಿತ್ತು.

- **ಆಸ್ಟ್ರೇಲಿಯಾ: ಮೊದಲ ಇನ್ನಿಂಗ್ಸ್, 225-10 (70.3 ಓ) 2ನೇ ಇನ್ನಿಂಗ್ಸ್, 121-10 (37 ಓ)**
- **ವೆಸ್ಟ್ ಇಂಡೀಸ್: ಮೊದಲ ಇನ್ನಿಂಗ್ಸ್ 143-10 (52.1 ಓ) 2ನೇ ಇನ್ನಿಂಗ್ಸ್, 27-10 (14.3)**

ಭಾರತ ಕ್ರಿಕೆಟ್ ತಂಡಗಳಿಂದ ಬ್ರಿಟನ್ ದೊರೆ ಭೇಟಿ

ಲಂಡನ್: ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತದ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳ ಆಟಗಾರರು ಇಲ್ಲಿನ ಸೆಂಟ್ ಜೇಮ್ಸ್ ಅರಮನೆಯಲ್ಲಿ ಬ್ರಿಟನ್ ದೊರೆ ಮೂರನೇ ಚಾರ್ಲ್ಸ್ ಭೇಟಿ ಮಾಡಿದರು.

ಲಾರ್ಡ್ಸ್ ಟೆಸ್ಟ್ ಪಂದ್ಯ ಮುಗಿದ ಬೆನ್ನಲ್ಲೇ ಈ ಭೇಟಿ ನಡೆದಿದ್ದು, ಈ ವೇಳೆ ಬಿಸಿಸಿಐ ಅಧಿಕಾರಿಗಳು ಹಾಜರಿದ್ದರು.

ಭಾರತ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್ ಸೇರಿದಂತೆ ಎಲ್ಲರಿಗೂ ಶುಭಾಶಯ ತಿಳಿಸಿದ ಚಾರ್ಲ್ಸ್, ಆಟಗಾರರೊಂದಿಗೆ ಸ್ವಲ್ಪ ಹೊತ್ತು ಮಾತುಗಳನ್ನಾಡಿದ್ದಾರೆ, ಆ ವೇಳೆ ಕ್ರಿಕೆಟ್ ಬಗ್ಗೆಯೂ ಚರ್ಚಿಸಿದ್ದಾರೆ. ಕೊನೆಯಲ್ಲಿ ಭಾರತ ತಂಡದೊಂದಿಗೆ ಫೋಟೊಗೂ ಜತೆಯಾಗಿದ್ದಾರೆ. ಶುಭ್‌ಮನ್ ಗಿಲ್ ನೇತೃತ್ವದ ಭಾರತ ತಂಡವು ಲಾರ್ಡ್ಸ್‌ನಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 22 ರನ್‌ಗಳ ಸೋಲನು ಭವಿಸಿ, ಸರಣಿಯಲ್ಲಿ 1-2ರ ಹಿನ್ನಡೆಯಲ್ಲಿದೆ. ಮಹಿಳಾ ತಂಡವು ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯನ್ನು 3-2 ಅಂತರದಿಂದ ಗೆದ್ದಿದ್ದು, ಬುಧವಾರದಿಂದ ಮೂರು ಪಂದ್ಯಗಳ ಏಕದಿನ ಸರಣಿ ಆರಂಭವಾಗಲಿದೆ.



ಲಂಡನ್‌ನ ಸೆಂಟ್ ಜೇಮ್ಸ್ ಅರಮನೆಗೆ ತೆರಳಿ ಭಾರತದ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡದ ಆಟಗಾರರು ಬ್ರಿಟನ್ ದೊರೆ ಮೂರನೇ ಚಾರ್ಲ್ಸ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ವಿಟಾಕೀಸ್

ಸೌಮ್ಯ ಪರ ಟೈಗರ್ ನಾಗ್ ಹೋರಾಟ

ಧರ್ಮಸ್ಥಳದಲ್ಲಿ ನಿಗೂಢವಾಗಿ ಕೊಲೆಯಾದ ಸೌಜನ್ಯಾ ಪ್ರಕರಣ ರಾಜ್ಯದಲ್ಲಿ ಸಾಕಷ್ಟು ಸದ್ದು ಮಾಡಿತ್ತು. ಹೋರಾಟವೂ ನಡೆದಿತ್ತು. ಈಗ ಇದೇ ಘಟನೆಯನ್ನು ಹೋಲುವ ಕಥೆಯನ್ನು ಹೆಣೆದಿರುವ ನಿರ್ದೇಶಕ ಟೈಗರ್ ನಾಗ್ ಜಸ್ಟೀಸ್ ಫಾರ್ ಸೌಮ್ಯ ಶೀರ್ಷಿಕೆಯಲ್ಲಿ ಸಿನಿಮಾವನ್ನು ತೆರೆಗೆ ತರುತ್ತಿದ್ದಾರೆ. ಸದ್ದಿಲ್ಲದೆ ಚಿತ್ರೀಕರಣ ಮುಗಿಸಿರುವ ಜಸ್ಟೀಸ್ ಫಾರ್ ಸೌಮ್ಯ ಚಿತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿದೆ. ಈ ನಡುವೆಯೇ ಚಿತ್ರತಂಡ ತಮ್ಮ ಚಿತ್ರದ ಹಾಡನ್ನು ಬಿಡುಗಡೆ ಮಾಡಿದೆ. ಧಗ ಧಗ ಉರಿಯುತ್ತಿದೆ ಜ್ವಾಲೆ.. ಎಂಬ ಲಿರಿಕಲ್ ವಿಡಿಯೊ ಸಾಂಗ್ ಇದಾಗಿದ್ದು ನಿರ್ದೇಶಕ ಟೈಗರ್ ನಾಗ್ ಅವರೇ ಸಾಹಿತ್ಯ ಬರೆದಿದ್ದು, ಹಾಡಿಗೂ ತಾವೇ ದನಿಯಾಗಿದ್ದಾರೆ. ವಿಶೇಷ ಎಂದರೆ ಈ ಹಾಡಿನಲ್ಲಿಯೂ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಾ ಬಂದಿರುವ ನಿರ್ದೇಶಕ ಟೈಗರ್ ನಾಗ್ ಸಿನಿಮಾದಲ್ಲೂ ಹೋರಾಟದ ಕಥೆಯನ್ನು ಕಟ್ಟಿಕೊಡುತ್ತಿದ್ದಾರೆ. ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಪರ ನಿಂತು ಹೋರಾಟ ಮಾಡಿ ನ್ಯಾಯ ದೊರಕಿಸಿಕೊಡುವ ಸ್ಟೋರಿ ಚಿತ್ರದಲ್ಲಿದೆ. ಚಿತ್ರದಲ್ಲಿ ಯಾರೆಲ್ಲಾ ಅಭಿನಯಿಸಿದ್ದಾರೆ ಎಂದು ಎಲ್ಲಿಯೂ ಗುಟ್ಟು ಬಿಟ್ಟುಕೊಡದ ಟೈಗರ್ ನಾಗ್, ಸಿನಿಮಾ ಬಿಡುಗಡೆಯ ಸಮಯದಲ್ಲಿ ತಾರಾಗಣದ ಬಗ್ಗೆ ತಿಳಿಸುವುದಾಗಿ ಹೇಳಿದ್ದಾರೆ. ವಿಪಿನ್ ಛಾಯಾಗ್ರಹಣ, ಕೆ.ಮಂಜು ಕೋಟೆಕೆರೆ ಸಂಭಾಷಣೆ ಒದಗಿಸಿರುವ ಈ ಚಿತ್ರಕ್ಕೆ ಟೈಗರ್ ನಾಗ್ ಸಂಗೀತ ಸಂಯೋಜಿಸಿದ್ದಾರೆ.



ಖ್ಯಾತ ನಟ ಅನಂತ್ ನಾಗ್ ಹಾಗೂ ಲಕ್ಷ್ಮಿ ಚಂದನವನದ ಹಿಟ್ ಜೋಡಿಯಾಗಿತ್ತು. ಇವರಿಬ್ಬರು ನಾಯಕ ನಾಯಕಿಯಾಗಿ ನಟಿಸಿದ ಸಿನಿಮಾಗಳು ಸೂಪರ್ ಹಿಟ್ ಆಗಿವೆ. ಗೋಲ್ಡನ್ ಸಿನಿಮಾಗಳ ಸಾಲಿನಲ್ಲಿ ಸೇರಿವೆ. ಈಗ ಈ ಯಶಸ್ವಿ ಜೋಡಿ ಮತ್ತೆ ಒಂದಾಗಿದೆ. ಹೌದು, ರಾಜ ದ್ರೋಹಿ ಚಿತ್ರದಲ್ಲಿ ಇಬ್ಬರು ಒಟ್ಟಾಗಿ ನಟಿಸುತ್ತಿದ್ದಾರೆ. ಸಮರ್ಥ ರಾಜ್ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡುತ್ತಿರುವ ರಾಜದ್ರೋಹಿ ಚಿತ್ರದಲ್ಲಿ ನಾಯಕನ ತಂಎ ತಾಯಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಧನುಷ್ ಕಂಬೈನ್ಸ್ ಬ್ಯಾನರ್‌ನಲ್ಲಿ ಮಹದೇವಯ್ಯ ನಿರ್ಮಾಣ ಮಾಡಿರುವ ಈ ಚಿತ್ರ ಅದ್ದೂರಿಯಾಗಿ

ಮತ್ತೆ ತೆರೆಯಲ್ಲಿ ಯಶಸ್ವಿ ಜೋಡಿ

ಮೂಡಿಬರುತ್ತಿದ್ದು, ಅಭಿಜಿತ್, ಒರಟ ಪ್ರಶಾಂತ್, ನೀನಾಸಂ ಅಶ್ವಥ್, ಅಚ್ಯುತ ಕುಮಾರ್, ಕುರಿಬಾಂಡ್ ಸುನಿಲ್, ಬ್ಯಾಂಕ್ ಜನಾರ್ಧನ್, ಪತ್ರೆ ಅಜಿತ್, ಮಾನಸಿ, ಸುನಿತಾ ಶ್ರೀನಿವಾಸ್, ಲಲಿತಾ, ರಾಧಾಕೃಷ್ಣ, ಕುರಿ ಪ್ರತಾಪ್, ಶ್ರೀಲಕ್ಷ್ಮೀ ಮುಂತಾದವರು ನಟಿಸಿದ್ದಾರೆ.

ತಂದೆ ತಾಯಿಗಳು ಇರುವಾಗ ಮಕ್ಕಳಿಗೆ ಜವಾಬ್ದಾರಿಗಳು ಸಮಸ್ಯೆಗಳು ತಿಳಿದಿರುವುದಿಲ್ಲ. ಅದೇ ತಂದೆ ತಾಯಿ ಕಣ್ಮರೆಯಾದ ಮೇಲೆ ಮಕ್ಕಳು ಯಾವೆಲ್ಲಾ ಸಮಸ್ಯೆಗಳನ್ನು ಎದಿರಿಸುತ್ತಾರೆ. ಸಮಸ್ಯೆಗಳಿಗೆ ಸಿಕ್ಕಿ ಹೇಗೆ ನಲುಗುತ್ತಾರೆ ಎಂಬುದನ್ನು ಸೆಮಟಿಮೆಂಟ್ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗಿದೆ. ಅದರ ಜತೆಗೆ

ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳು ಚಿತ್ರದಲ್ಲಿವೆ. ರಘು ತುಮಕೂರು ಸಂಗೀತ ನಿರ್ದೇಶನ, ಭೂಪತಿ ಹಿನ್ನೆಲೆ ಸಂಗೀತ, ಸತೀಶ್ ಮನೋಹರ್, ವೀನಸ್ ಮೂರ್ತಿ, ನಾಗರಾಜ್ ಛಾಯಾಗ್ರಹಣ, ಕುಮಾರ್ ಕೊಟಿಕೊಪ್ಪ ಸಂಕಲನ, ಅಲ್ಟಿಮೇಟ್ ಶಿವು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರೀಕರಣ ಮುಗಿಸಿರುವ ರಾಜದ್ರೋಹಿ ಮುಂದಿನ ತಿಂಗಳು ತೆರೆಗೆ ಬರಲಿದೆ.

ಅಂತಿಮ ಹಂತದಲ್ಲಿ ಟಾಕ್ಸಿಕ್

ಕೆಜಿಎಫ್ ಬಳಿಕ ಯಶ್ ನಟಿಸುತ್ತಿರುವ ಟಾಕ್ಸಿಕ್ ಚಿತ್ರ ಸೆಟ್ಟೇರಿದಾಗಿನಿಂದಲೂ ಕುತೂಹಲ ಮೂಡಿಸಿದೆ. ಟಾಕ್ಸಿಕ್ ಚಿತ್ರದಲ್ಲಿನ ಯಶ್ ಫಸ್ಟ್ ಲುಕ್ ರಿಲೀಸ್ ಆದಾಗಲಂತೂ ಅಭಿಮಾನಿಗಳು ಖುಷಿಯಾಗಿದ್ದರು. ಟಾಕ್ಸಿಕ್ ಡ್ರಗ್ಸ್ ಮಾಫಿಯಾ ಕುರಿತ ಚಿತ್ರವಾಗಿದ್ದು, ಅಂಡರ್‌ವರ್ಲ್ಡ್ ಸ್ಟೋರಿಯೂ ಇದೆ. ಯಶ್ ಅಂಡರ್ ವರ್ಲ್ಡ್ ಡಾನ್ ಆಗಿ ಮಿಂಚಿದ್ದಾರೆ ಎನ್ನಲಾಗುತ್ತಿದೆ. ಈ ಹಿಂದೆ ಬಿಡುಗಡೆಯಾದ ಚಿತ್ರದ ಗ್ಲಿಂಪ್ಸ್ ಇದಕ್ಕೆ ಪುಷ್ಠಿ ನೀಡಿದೆ. ಮಲೆಯಾಳಂನ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ಕಥೆ ಬರೆದು ನಿರ್ದೇಶನ ಮಾಡುತ್ತಿರುವ ಈ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಚಿತ್ರಕ್ಕಾಗಿ ಬೆಂಗಳೂರಿನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಲಾಗಿತ್ತು. ಈಗ ಮುಂಬೈನಲ್ಲಿಯೂ ಬೃಹತ್ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ. ಬಹುತೇಕ ಚಿತ್ರೀಕರಣ ಮುಗಿಸಿರುವ ಟಾಕ್ಸಿಕ್ ಕೊನೆಯ ಹಂತದ ಚಿತ್ರೀಕರಣಕ್ಕೆ ಸಿದ್ಧವಾಗಿದೆ. ಈ ಹಂತದ ಚಿತ್ರೀಕರಣ ಮುಗಿಸಿದರೆ ಟಾಕ್ಸಿಕ್ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಲಿದೆ. ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ನಯನಾ ತಾರಾ ಹೀಗೆ ದಿಗ್ಗಜರ ದಂಡೇ ಚಿತ್ರದಲ್ಲಿದೆ. ಹಾಲಿವುಡ್ ತಂತ್ರಜ್ಞರು ಕೂಡ ಈ ಚಿತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗಾಗಿ ಚಿತ್ರ ಅದ್ದೂರಿಯಾಗಿ ಮೂಡಿಬರಲಿದೆ.

ಸಂಭಾವನೆಯಲ್ಲೂ ದಾಖಲೆ

ಟಾಕ್ಸಿಕ್ ಬರೋಬ್ಬರಿ ನೂರು ಕೋಟಿ ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿದೆ ಎಂಬ ಮಾತುಗಳು ಇವೆ. ಅದಕ್ಕಿಂತಲೂ ಹೆಚ್ಚಾಗಬಹುದು ಎಂಬ ನಿರೀಕ್ಷೆಯೂ ಇದೆ. ಈ ನಡುವೆ, ಚಿತ್ರಕ್ಕೆ ಖ್ಯಾತ ಸಂಗೀತ ನಿರ್ದೇಶಕ ಅನಿರುದ್ ರವಿಚಂದರ್ ಎಂಟ್ರಿಕೊಟ್ಟಿದ್ದು, ಚಿತ್ರಕ್ಕೆ ಸಂಗೀತ ಸಂಯೋಜಿಸಲು ಬರೋಬ್ಬರಿ ಹದಿನೈದು ಕೋಟಿ ರು ಸಂಭಾವನೆ ಪಡೆದಿದ್ದಾರೆ ಎನ್ನಲಾಗುತ್ತಿದೆ. ಆ ಮೂಲಕ ಅತಿ ಹೆಚ್ಚು ಸಂಭಾವನೆ ಪಡೆಯುವ ಸಂಗೀತ ನಿರ್ದೇಶಕ ಎಂಬ ಖ್ಯಾತಿ ಪಡೆದಿದ್ದಾರೆ. ಈ ಹಿಂದೆ ಜೈಲರ್ ಚಿತ್ರಕ್ಕೂ ಸಂಗೀತ ಒದಗಿಸಿದ್ದ ಅನಿರುದ್ ಆ ಚಿತ್ರಕ್ಕಾಗಿ ಹತ್ತು ಕೋಟಿ ಸಂಭಾವನೆ ಪಡೆದಿದ್ದರು. ತಮ್ಮ ಮುಂದಿನ ಚಿತ್ರಕ್ಕೆ ಹನ್ನೆರಡು ಕೋಟಿ ಸಂಭಾವನೆ ಪಡೆದುಕೊಂಡಿದ್ದರು. ಈಗ ಟಾಕ್ಸಿಕ್ ಚಿತ್ರಕ್ಕಾಗಿ ಹದಿನೈದು ಕೋಟಿಗೆ ಸಂಭಾವನೆ ಏರಿಸಿಕೊಂಡಿದ್ದಾರೆ. ಇದರಿಂದ ಟಾಕ್ಸಿಕ್ ಚಿತ್ರದ ನಿರ್ಮಾಣ ವೆಚ್ಚವೂ ಹೆಚಾಗುತ್ತಿದೆ. ಟಾಕ್ಸಿಕ್ ಸಾವಿರ ಕೋಟಿ ರು.ಗೂ ಅಧಿಕ ಗಳಿಕೆ ಕಾಣಲಿದೆ ಎಂಬ ನಿರೀಕ್ಷೆ ಚಿತ್ರತಂಡಕ್ಕಿದೆ.

ಚಂದನವಕ್ಕೆ ಮರಳಿದ ಜಿಂಕೆ ಮರಿ ಶ್ವೇತಾ

ಜಿಂಕೆ ಮರೀನಾ, ಜಿಂಕೆ ಮರೀನಾ..ಅಂತಾ ಕುಣಿದು ಪ್ರೇಕ್ಷಕರ ಮನಗೆದ್ದಿದ್ದ ನಟಿ ನಂದಿತಾ ಶ್ವೇತಾ ಮತ್ತೆ ಕನ್ನಡ ಚಿತ್ರರಂಗದತ್ತ ಮುಖ ಮಾಡಿದ್ದಾರೆ. ನಂದಾ ಲವ್ಸ್ ನಂದಿತಾ ಸಿನಿಮಾ ಮೂಲಕ ಕನ್ನಡ ಸಿನಿಪ್ರಿಯರ

ನೆಚ್ಚಿನ ನಟಿಯಾಗಿದ್ದ ಶ್ವೇತಾ, ಆ ಬಳಿಕ ತೆಲುಗು, ತಮಿಳು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದರು. ಇದೀಗ ಜಿಂಕೆ ಮರಿ ಮತ್ತೊಮ್ಮೆ ಚಂದನವನಕ್ಕೆ ಮರಳಿಬಂದಿದ್ದಾರೆ.

ಈ ಹಿಂದೆ ಹೊಂದಿಸಿ ಬರೆಯಿರಿ ಸಿನಿಮಾವನ್ನು ನಿರ್ದೇಶನ ಮಾಡಿದ್ದ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್, ಈಗ ಹೊಸ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಶ್ವೇತಾ ನಾಯಕಿಯಾಗಿ ನಟಿಸಲಿದ್ದಾರೆ. ಪೆಪೆ ಸಿನಿಮಾವನ್ನು ನಿರ್ದೇಶನ ಮಾಡಿದ್ದ ಶ್ರೀಲೇಶ್.ಎಸ್.ನಾಯರ್ ಈ ಸಿನಿಮಾಗೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಇದು ಮಹಿಳಾ ಪ್ರಧಾನ ಕಥೆಯ ಸಿನಿಮಾವಾಗಿದ್ದು, ಬೆನ್ನಿ ಶೀರ್ಷಿಕೆಯಲ್ಲಿ ಮೂಡಿಬರುತ್ತಿದೆ. ನಟಿ ಶ್ವೇತಾ ಇಲ್ಲಿ ಬೆನ್ನಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಂದೆ ಮತ್ತು ಮಗಳ ಬದುಕಿನಲ್ಲಿ ಎದಿರಾಗುವ ಘಟನೆಗಳ ವಿರುದ್ಧ ನಡೆಯುವ ಹೋರಾಟದ ಕಥೆ ತೆರೆಯಲ್ಲಿ ಸಾಗಲಿದೆ, ಪ್ರಸ್ತುತ ಕಾಲಘಟ್ಟದ ಕಥಾಹಂದರವನ್ನು ಬೆನ್ನಿ ಒಳಗೊಂಡಿದೆ. ಚಿತ್ರದ ಫಸ್ಟ್‌ಲುಕ್ ಟೀಸರ್ ರಿಲೀಸ್ ಆಗಿದ್ದು, ನಂದಿತಾ ಶ್ವೇತಾ ರಕ್ತಸಿಕ್ತ ಅವತಾರದಲ್ಲಿ ಮಿಂಚಿದ್ದಾರೆ. ಫಸ್ಟ್ ಲುಕ್ ಟೀಸರ್‌ಗೆ ಕಿಚ್ಚ ಸುದೀಪ್ ದನಿಯಾಗಿದ್ದು ಚಿತ್ರಕ್ಕೆ ಶಕ್ತಿತುಂಬಿದೆ.

ವಿಶೇಷ ಎಂದರೆ ಈ ಚಿತ್ರದಲ್ಲಿ ದಕ್ಷಿಣದ ಭಾರತದ ಪ್ರಮುಖ ನಟರು ಅಭಿನಯಿಸಿದ್ದಾರೆ. ಬೆನ್ನಿ ಕನ್ನಡ ಮಾತ್ರವಲ್ಲ ತೆಲುಗು, ತಮಿಳು ಹಾಗೂ ಮಲೆಯಾಳಂ ಭಾಷೆಯಲ್ಲಿಯೂ ಮೂಡಿಬರುತ್ತಿದೆ. ಸಂಡೇ ಸಿನಿಮಾಸ್ ಬ್ಯಾನರ್‌ನಲ್ಲಿ ರಾಮೇನಹಳ್ಳಿ ಜಗನ್ನಾಥ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಗುರುಪ್ರಸಾದ್ ನಾರ್ನಾದ್ ಛಾಯಾಗ್ರಹಣ, ಮನು ಶೇಡ್ಗಾರ್ ಹಾಗೂ ರಂಜನ್ ನರಸಿಂಹಮೂರ್ತಿ ಸಂಕಲನ ಈ ಸಿನಿಮಾಕ್ಕಿದೆ.